ಅಧ್ಯಕ್ಷರು.—ಅದು ಇನ್ನೂ ಬಂದಿಲ್ಲ. ಅದು ಏನು ಎಂಬುದನ್ನು ನೋಡುತ್ತೇನೆ.

ಶ್ರೀ ಆರ್. ಎನ್, ನಾಯಕ್.—ಸ್ವಾಮಿ. ನಾನು ಎರಡು ಕಾಲಿಂಗ್ ಅಟೆನ್‌ಷನ್ ನೋಟೀಸನ್ನು ಕಳುಹಿಸಿಕೊಟ್ಟಿದ್ದೆ. ಬುತ್ತಿ ಗ್ರಾಮದಲ್ಲಿ ಒಂದು ಚರ್ಚ್‌ನ್ನು ಒಡೆದು ನಾಶ ಮಾಡಿದ್ದಾರೆ ಅದಕ್ಕೆ ಸಂಬಂಧಪಟ್ಟಂತೆ ಇನ್ನೂ ವರ್ತಮಾನ ಬಂದಿಲ್ಲ, ಅದನ್ನು ತರಿಸಿಕೊಡುತ್ತೇನೆಂದು ಹೇಳಿದ್ದರು.

ಅಧ್ಯಕ್ಷರು.—ಅದು ಏನಾಗಿದೆ ಎಂಬುದನ್ನು ನೋಡೋಣ.

ಶ್ರೀ ಆರ್. ಎನ್. ನಾಯಕ್.—ಸ್ವಾಮಿ. ಇನ್ನೊಂದು ವಿಚಾರ ಎಂದರೆ, ಹೊಸ ನಗರದಲ್ಲಿ ಒಂದು ಲಾರಿಯನ್ನು ಬಿಟ್ಟಿದ್ದರು. ಅದರ ಬಗ್ಗೆ ಕೇಳಿದ್ದೆ. ಇನ್ನೂ ಉತ್ತರ ಬರಲಿಲ್ಲ.

ಅಧ್ಯಕ್ಷರು.—ಶ್ರೀ ಲಕ್ಷ್ಮೀಸಾಗರ್‌ರವರೇ ಇವರು ಗಮನ ಸೆಳೆಯುವ ಎರಡು ಸೂಚನೆಗಳನ್ನು ಕಳುಹಿಸಿದ್ದರಂತೆ, ಅದು ಏನು ಎಂಬುದನ್ನು ನೋಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ೩೩೪ರ ನಿಯಮದ ಕೆಳಗೆ ನೋಟೀಸನ್ನು ಕಳುಹಿಸಿ ಕೊಡಲಿ.

ಶ್ರೀ ಗೋಪಾಲ ಮುಕುಂದ ಕಾನಡೆ.—ಸ್ವಾಮಿ, ನನ್ನ ಕ್ಷೇತ್ರದಲ್ಲಿ ಕರ್ನಾಟಕ ಸೋಪ್ ಫ್ಯಾಕ್ಟರಿಯಲ್ಲಿ ೫ ಹರಿಜನರನ್ನು ಡಿಸ್‌ಮಿಸ್ ಮಾಡಿದ್ದಾರೆ. ಇದರ ಬಗ್ಗೆ ತಮಗೆ ಒಂದು ನೋಟೀಸನ್ನು ಕಳುಹಿಸಿಕೊಟ್ಟಿದ್ದೆ. ಅದಕ್ಕೆ ಇನ್ನೂ ಉತ್ತರ ಬಂದಿಲ್ಲ.

ಅಧ್ಯಕ್ಷರು.—ತಾವು ದಯಮಾಡಿಟ್ಟು ನನ್ನ ಛೇಂಬರ್‌ಗೆ ಬನ್ನಿ ಅದು ಏನು ನೋಡೋಣ.

ಶ್ರೀ ಕೆ. ರಾಮಭಟ್.—ಸ್ವಾಮಿ, ಹಿಂದೆ ಪ್ರತಿದಿನ ೩ ಗಂಟೆಗೆ ಸದಸ್ಯರನ್ನು ಚಹಾಕ್ಕೋಸ್ಕರ ಕರೆಯುತ್ತಿದ್ದೀರಿ. ಆಗ ಸದಸ್ಯರು ತಮ್ಮ ತಮ್ಮ ಕಷ್ಟಸುಖಗಳನ್ನು ಹೇಳಿಕೊಳ್ಳುತ್ತಿದ್ದರು. ಆದರೆ ಈಗ ತಾವು ನಮ್ಮನ್ನು ಕರೆಯುತ್ತಿಲ್ಲ.

ಅಧ್ಯಕ್ಷರು.—ನಾವು ಬೆಳಿಗ್ಗೆ ೯ ಗಂಟೆಯಿಂದ ಸಂಜೆ ೬ ಗಂಟೆಯವರೆಗೆ ಇಲ್ಲಿ ಕೂತುಬಿಡುತ್ತಿದ್ದೇವೆ. ಆದ್ದರಿಂದ ಸಮಯ ಸಿಕ್ಕುತ್ತಿಲ್ಲ. ಆದರೂ ನಿಮ್ಮದ್ದು ಒಳ್ಳೆಯ ಸಲಹೆ.

ಒಬ್ಬ ಮಾನ್ಯ ಸದಸ್ಯರು.—ಸ್ವಾಮಿ, ನಾನು ಮಾನ್ಯ ಆರಣ್ಯ ಸಚಿವರಿಗೆ ನಿಯಮ ೩೩೪ರ ಕೆಳಗೆ ಒಂದು ನೋಟೀಸನ್ನು ಕಳುಹಿಸಿಕೊಟ್ಟಿದ್ದೆ. ನನಗೆ ಇನ್ನೂ ಉತ್ತರ ಬಂದಿಲ್ಲ.

ಅಧ್ಯಕ್ಷರು.—ಇರಲಿ ಕೂತುಕೊಳ್ಳಿ ಅದು ಏನು ಎಂಬುದನ್ನು ನೋಡೋಣ.

FINANCIAL BUSINESS

DISCUSSION AND VOTING ON THE DEMANDS FOR GRANTS FOR THE YEAR 84-85

Demand No. 26 Transport Department. Demand No. 2 Horticulture Department. Demand No. 3 Animal Husbandary and Dairy Development.

SRI M. P. PRAKASH (Minister for State for Transport).—Sir, I beg to move :

Demand No. 26

"That a sum not exceeding Rs. 1,41,33,000 on Revenue Account and Rs. 9,50,00,000 on Capital Account be granted to the Government to defray

> the charges which will come in course of payment during the financial year ending 31st day of March 1985 in respect of Road Transport."

The question was proposed.

SRI VISWANATHA REEDY MUDANAL (Minister for Animal Husbandry and Veterinary Services and Horticulture).—Sir, on the recommendation of the Governor, I beg to move :

Demand No. 2

> "That a sum not exceeding Rs. 8,89,93,000 on Revenue Account be granted to the Government to defray the charges which will come in course of payment during the financial year ending 31st day of March 1985 in respect of Horticulture."

Demand No. 3

> "That a sum not exceeding Rs. 31,97,70,000 on Revenue Account and Rs. 1,00,00,000 on Capital Account be granted to the Government to defray the charges which will come in course of payment during the financial year ending 31st day of March 1985 in respect of Animal Husbandry and Dairy Development."

The question was proposed.

MR. SPEAKER.—All the demands are before the House for discussion. The discussion will conclude by about 4.30 P. M. today. Mr. Chikke Gowda to begin.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

† ಶ್ರೀ ಎನ್. ಚಿಕ್ಕೇಗೌಡ (ಹೊಸಕೋಟೆ).—ಮಾನ್ಯ ಅಧ್ಯಕ್ಷರೆ, ಈ ಸದನದ ಮುಂದೆ ಮಂಡಿಸಿರತಕ್ಕ ತೋಟಗಾರಿಕೆ, ಪಶುಸಂಗೋಪನೆ, ಹೈನು ಅಭಿವೃದ್ಧಿ ಮತ್ತು ಸಾರಿಗೆ ಈ ಇಲಾಖೆಗಳ ಬೇಡಿಕೆಗಳ ಬಗ್ಗೆ ಮಾತನಾಡುತ್ತಾ ಈ ಇಲಾಖೆಗಳು ಒಂದಕ್ಕೊಂದು ಸಂಬಂಧ ಇರುವಂಥ ಇಲಾಖೆಗಳಾಗಿ ಕೆಲಸ ಮಾಡಿದರೆ ಮಾತ್ರ ಸಾಧ್ಯ ಎಂದು ಹೇಳಿ ಒಂದೆರಡು ಸಲಹೆಗಳನ್ನು ಕೊಡ ಬಯಸುತ್ತೇನೆ. ಕಳೆದಸಾರಿ ಮತ್ತು ಹಿಂದಿನ ಸಾಲುಗಳಲ್ಲಿ ನಡೆದಂಥ ಕಾರ್ಯಕ್ರಮ ಮತ್ತು ಈ ಇಲಾಖೆಗಳ ಕಾರ್ಯಕ್ರಮಗಳಿಂದ ಜನರಿಗೆ ಯಾವರೀತಿಯ ಅನುಕೂಲ ಸಿಕ್ಕಿವೆ ಎಂಬುದನ್ನು ಹೇಳಬಯಸುತ್ತೇನೆ.

ಪ್ರಪ್ರಥಮವಾಗಿ ಪಶುಸಂಗೋಪನೆ ಮತ್ತು ಹೈನುಗಾರಿಕೆ ಬಗ್ಗೆ ಹೇಳುವುದಾದರೆ ನಾನು ಸುಮಾರು ನಾಲ್ಕೂವರೆ ವರ್ಷಕಾಲ ಈ ರಾಜ್ಯದಲ್ಲಿ ಪಶುಸಂಗೋಪನಾ ಮಂತ್ರಿಯಾಗಿ ಕೆಲಸ ಮಾಡತಕ್ಕ ಅವಕಾಶ ಸಿಕ್ಕಿತ್ತು. ಆ ಸಂದರ್ಭದಲ್ಲಿ ಪಶುಸಂಗೋಪನಾ ಮತ್ತು ಹೈನುಗಾರಿಕೆ ಎಂಬುದು ಹೆಸರಿಗೆ ಮಾತ್ರ ಇತ್ತು. ಈ ಇಲಾಖೆಗೋಸ್ಕರ ವಿಶ್ವ ಬ್ಯಾಂಕ್‌ನಿಂದ ತಂದಂಥ ೫೧ ಕೋಟಿ ರೂಪಾಯಿಗಳನ್ನು ಆಗಿನ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ದೇವರಾಜ್ ಅರಸುರವರು ಈ ಒಂದು ಯೋಜನೆಗೆ ನಿಯೋಜಿಸಿದರು. ಇಡೀ ಭಾರತದಲ್ಲಿ ನಮ್ಮ ಕರ್ನಾಟಕವೇ ಸೂಕ್ತ ಸ್ಥಳ ವೆಂದು ಈ ೫೧ ಕೋಟಿ ರೂ. ಗಳ ಯೋಜನೆಯನ್ನು ನಿರೂಪಿಸಿದರು. ನಮ್ಮ ರಾಜ್ಯದಲ್ಲಿರತಕ್ಕ

ಅನೇಕ ತಳಿಗಳ ಪೈಕಿ ಹಳ್ಳಿಕಾರ್ ಮತ್ತು ಅಮೃತ ಮಹಲ್ ತಳಿಗಳು ಬಹಳ ಉತ್ತಮವಾದ ತಳಿಗಳು. ಇಡೀ ಪ್ರಪಂಚದಲ್ಲೇ ಅತ್ಯಂತ ಹೆಸರುವಾಸಿಯಾದ ತಳಿಗಳು. ವ್ಯವಸಾಯಗಾರರಿಗೆ ಬೇಕಾದಂಥ ಈ ಎರಡು ತಳಿಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಬಹಳಷ್ಟು ಹಣವನ್ನು ಖರ್ಚು ಮಾಡುತ್ತಿದೆ. ಈ ಉದ್ದೇಶಕ್ಕಾಗಿ ಇರತಕ್ಕ ಇಲಾಖೆ, ಇದಕ್ಕಾಗಿ ಇರತಕ್ಕ ಜಮೀನು ಮತ್ತು ಈ ಪಶುಗಳ ಸಂಖ್ಯೆಯನ್ನು ನೋಡಿದರೆ ದಿನೇ ದಿನೇ ನಶಿಸಿ ಹೋಗುತ್ತಿದೆ. ಕಾರಣ ಈ ಪಶುಗಳನ್ನು ಸಾಕುವುದಕ್ಕೆ ಇರತಕ್ಕ ಜಮೀನನ್ನು ಅಕ್ಕಪಕ್ಕದ ರೈತರು ಒತ್ತುವರಿ ಮಾಡಿಕೊಂಡಿದ್ದಾರೆ ಈಗ ಅಮೃತ ಮಹಲ್ ಕಾವಲು ಎಷ್ಟು ಇದೆ ಎಂಬುದನ್ನು ತಾವು ನೋಡಿರಬಹುದು. ನಮ್ಮ ರೈತರು ಕೇವಲ ಮಳೆಯನ್ನೇ ಆಶ್ರಯಿಸಿಕೊಂಡು ವ್ಯವಸಾಯ ಮಾಡತಕ್ಕವರು. ಮಳೆ ಬಂದರೆ ಬೆಳೆಯನ್ನು ತೆಗೆಯುತ್ತಾರೆ, ಮಳೆ ಬಾರದೆ ಕ್ಷಾಮ ಬಂದಾಗ ಬಹಳ ತೊಂದರೆಯಾಗುತ್ತದೆ. ಅಂಥ ಸಂದರ್ಭದಲ್ಲಿ ಈ ಪಶುಸಂಗೋಪನೆ ಎಂಬುದು ಒಂದು ಸಬ್ಸಿಡಿಯರಿ ಇಂಡಸ್ಟ್ರಿಯಾಗಿದೆ ಎಂಬುದನ್ನು ಹೇಳ ಬಯಸುತ್ತೇನೆ. ಇದಕ್ಕೆ ನಮ್ಮ ರಾಜ್ಯದಲ್ಲಿ ಒಳ್ಳೆಯ ಹಿತಕರ ವಾತಾವರಣ, ಇಲ್ಲಿನ ಬೆಳೆಗಳು ಬಹಳ ಉಪಯುಕ್ತವಾಗಿವೆ. ರೇಷ್ಮೆ ಮತ್ತು ಹೈನುಗಾರಿಕೆ ಇವು ಒಂದಕ್ಕೊಂದು ಜೊತೆಜೊತೆಯಾಗಿ ಹೋಗುವಂಥಾದ್ದು. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ರೇಷ್ಮೆ ಹುಳು ತಿಂದು ಬಿಡತಕ್ಕ ಸೊಪ್ಪು ಏನಿದೆ ಇದನ್ನು ಈ ಹಸುಗಳಿಗೆ ಹಾಕಿದರೆ ಇವು ಒಂದಕ್ಕೆರಡರಷ್ಟು ಹಾಲನ್ನು ಕೊಡುತ್ತವೆ. ಇದನ್ನೆಲ್ಲಾ ನೋಡಿಯೇ ವಿಶ್ವ ಬ್ಯಾಂಕ್‌ನವರು ಇಲ್ಲಿ ಒಂದು ಯೋಜನೆಯನ್ನು ಮಾಡಿದ್ದಾರೆ ತಾವೂ ಕೂಡ ಆಪರೇಷನ್ ಫ್ಲಡ್ ಟೂ ಅನ್ನು ಮಾಡುತ್ತೇವೆಂದು ಹೇಳಿದ್ದೀರಿ. ಇಡೀ ಕರ್ನಾಟಕದಲ್ಲೇ ೭೧ ಕೋಟಿ ರೂಪಾಯಿಗಳ ಯೋಜನೆ ಇದು. ಇವತ್ತು ಈ ಪಶುಸಂಗೋಪನಾ ಇಲಾಖೆಯ ಬಗ್ಗೆ ತೃಪ್ತಿಯಿಂದ ಹೇಳುತ್ತಿದ್ದೇನೆ. ತಾವು ಈ ಇಲಾಖೆಯ ಮಂತ್ರಿಗಳಾಗಿದ್ದೀರಿ. ತಾವು ಎಷ್ಟು ಕಷ್ಟಪಟ್ಟು, ಆಸಕ್ತಿವಹಿಸಿ ಕೆಲಸ ಮಾಡುತ್ತೀರಿ ಅಷ್ಟೂ ಈ ಇಲಾಖೆ ಚೆನ್ನಾಗಿ ಅಭಿವೃದ್ಧಿಯಾಗುವುದಕ್ಕೆ ಅವಕಾಶ ಇದೆಯೆಂದು ಹೇಳಿದರೆ ತಪ್ಪಾಗಲಾರದು. ಇಲ್ಲಿಗೆ ಒಬ್ಬ ಐ.ಎ.ಎಸ್. ಅಧಿಕಾರಿಯನ್ನು ನಿರ್ದೇಶಕರನ್ನಾಗಿ ತಂದು ಇಟ್ಟಿದ್ದೀರಿ. ಈ ಯೋಜನೆಯ ಬಗ್ಗೆ ತಾಂತ್ರಿಕ ಜ್ಞಾನ ಇರುವಂಥ ಅಧಿಕಾರಿಗಳು ಯಾರೂ ಕೂಡ ಸೀನಿಯಾರಿಟಿ ಇರುವವರು ನಿಮಗೆ ಸಿಕ್ಕಲಿಲ್ಲವೆ ಎಂದು ನಾನು ಕೇಳಬೇಕಾಗಿದೆ. ಅಥವಾ ಇದು ನಿಮ್ಮ ಕೈಯಲ್ಲಿ ಆಗಲಿಲ್ಲವೆ ಎಂದು ಕೇಳಬೇಕಾಗಿದೆ. ಆದರೆ ನಾನು ಇಲ್ಲಿ ಐ. ಎ. ಎಸ್. ಅಧಿಕಾರಿಗಳ ಬಗ್ಗೆ ಏನೂ ಹೇಳುವುದಿಲ್ಲ. ಈ ಇಲಾಖೆಗೆ ಇದರ ಬಗ್ಗೆ ತಾಂತ್ರಿಕ ಜ್ಞಾನ ಇರತಕ್ಕವನ್ನು ಹಾಕಿದರೆ ಚೆನ್ನಾಗಿತ್ತು.

ಸ್ವಾಮಿ, ಇನ್ನು ತೋಟಗಾರಿಕೆ ಇಲಾಖೆಯ ಬಗ್ಗೆ ಹೇಳುವುದಾದರೆ ೧೮೫೭ ರಲ್ಲಿ ಲಾಲ್‌ಬಾಗ್‌ನಲ್ಲಿ ಈ ತೋಟಗಾರಿಕೆ ಇಲಾಖೆ ಪ್ರಾರಂಭವಾಯಿತು ಎಂದು ತಿಳಿದಿದ್ದೇನೆ. ಈ ತೋಟಗಾರಿಕೆ ಇಲಾಖೆಯಲ್ಲಿ ಇವತ್ತು ಆಗಿರತಕ್ಕ ಪ್ರಗತಿ ಬೇರೆ ಯಾವ ಇಲಾಖೆಯಲ್ಲೂ ಕೂಡ ಆಗಿಲ್ಲ. ನಮ್ಮ ರಾಜ್ಯ ತೋಟಗಾರಿಕೆ ಇಲಾಖೆಯ ಬಗ್ಗೆ ಅತ್ಯಂತ ಹೆಸರುವಾಸಿಯಾಗಿದೆ. ಇದರಲ್ಲಿ ಬೆಳೆಯತಕ್ಕ ಹಣ್ಣು ಹಂಪಲುಗಳಿಂದ ನಮ್ಮ ರಾಜ್ಯದ ಬೊಕ್ಕಸಕ್ಕೆ ೧೦೦೦ ಕೋಟಿ ರೂಪಾಯಿಗಳ ಆದಾಯ ಬರುತ್ತದೆಂದು ಮಾನ್ಯ ಮುಖ್ಯಮಂತ್ರಿಗಳೇ ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಇದನ್ನು ತಾವು ನೋಡಿರಬಹುದು. ಇಂಥ ಇಲಾಖೆಯ ನಿರ್ದೇಶಕರನ್ನು ಮಾರ್ಕೆಟಿಂಗ್ ಫೆಡರೇಷನ್‌ಗೆ ಇನ್‌ಛಾರ್ಜ್ ಎಂದು ನೇಮಕ ಮಾಡಿದ್ದೀರಿ.

ನಾನು ಈ ಇಲಾಖೆಯ ಜವಾಬ್ದಾರಿಯನ್ನು ಹೊತ್ತಂಥ ಕಾಲದಲ್ಲಿ ವ್ಯವಸಾಯ ಇಲಾಖೆಯಿಂದ ಐ.ಎ.ಎಸ್. ಆಫೀಸರ್‌ಗಳನ್ನು ತಂದು ಹಾಕಿದ್ದರಿಂದ ನಾನು ಅದನ್ನು ಬಹಳ ಖಂಡತುಂಡವಾಗಿ ಖಂಡಿಸಿದ್ದೇನೆ. ಆಗ ನಾನು ರಾಜೀನಾಮೆಯನ್ನು ಸಹ ಕೊಡತಕ್ಕಂಥ ಮಟ್ಟಕ್ಕೂ ಹೋಗಿದ್ದೆ. ತಾಂತ್ರಿಕಜ್ಞಾನ ಇರತಕ್ಕ ಅಧಿಕಾರಿಗಳನ್ನು ಕೃಷಿ ವಿಶ್ವವಿದ್ಯಾನಿಲಯದಿಂದ ಕಾಂಟ್ರಾಕ್ಟ್ ಬೇಸಿಸ್ ಮೇಲೆ ತಂದು ಪೋಸ್ಟ್ ಮಾಡಿದ್ದೆ. ಇಬ್ಬರು ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನಿಂದ ಮತ್ತು ಇಬ್ಬರು ಅನಿಮಲ್ ಹಸ್‌ಬೆಂಡರಿಯಿಂದ ಕಾಂಟ್ರಾಕ್ಟ್ ಬೇಸಿಸ್ ಮೇಲೆ ತಂದು ಅಲ್ಲಿರತಕ್ಕಂಥ ನ್ಯೂನ್ಯತೆಗಳನ್ನು ಸರಿಪಡಿಸಿದ್ದೆ. ತಾವು ಕೂಡ ಇವೊತ್ತು ಪಶುಸಂಗೋಪನಾ ಇಲಾಖೆ, ತೋಟಗಾರಿಕೆ ಇಲಾಖೆ ಮತ್ತು ಹೈನುಗಾರಿಕೆಯ ಮಂತ್ರಿಗಳಾಗಿ ಇದ್ದೀರಿ. ಆದುದರಿಂದ ತಾವು ಹೆಚ್ಚಿನ ಆಸಕ್ತಿಯನ್ನು ವಹಿಸಬೇಕಾಗಿದೆ. ಈ ರಾಜ್ಯದಲ್ಲಿ ಇಲ್ಲದಿದ್ದರೆ ಬೇರೆ ಬೇರೆ ರಾಜ್ಯಗಳಿಂದಲಾದರೂ ಅನುಭವಸ್ಥರನ್ನು ಕರೆದು ನೇಮಕ ಮಾಡಿ. ಅದರ ಬಗ್ಗೆ ನಾವು ಹೇಳುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಈ ಇಲಾಖೆಗೆ ಬರೇ ಐ. ಎ. ಎಸ್. ಆಫೀಸರ್‌ಗಳನ್ನು ಹಾಕುವ ಬದಲು ಟೆಕ್ನಿಕಲ್ ಬಗ್ಗೆ ತರಬೇತಿ ಇರತಕ್ಕಂಥವರನ್ನು, ಅರ್ಹತೆಯನ್ನು ಹೊಂದಿರತಕ್ಕಂಥವರನ್ನು ಹಾಕುವುದರಲ್ಲಿ ಲೋಪ ಮಾಡಿದ್ದೀರಿ. ತಮ್ಮ ಸರ್ಕಾರ ಬಂದಮೇಲೆ ಈ ರೀತಿ ಐ. ಎ. ಎಸ್. ಆಫೀಸರ್

ಗಳನ್ನು ತಂದು ಡೈರೆಕ್ಟರಾಗಿ ನೇಮಿಸತಕ್ಕಂಥದ್ದು ಸರಿಯಾದುದಲ್ಲವೆಂದು ಹೇಳುತ್ತೇನೆ. ಇವೊತ್ತಿನ ದಿವಸ ನಮ್ಮ ಕರ್ನಾಟಕದಲ್ಲಿ ಇರತಕ್ಕಂಥ ಪಶು ಸಂಪತ್ತು, ಕುರಿ, ಕೋಳಿ ಮತ್ತಿತರ ಪ್ರಾಣಿಗಳ ಸಂಖ್ಯೆ ಕೋಟಿಗಟ್ಟಲೆ ಇದೆ. ದನಗಳು ೧.೦೫ ಲಕ್ಷ, ಕುರಿಗಳು ೪೫ ಲಕ್ಷ, ಎಮ್ಮೆಗಳು ೩೩ ಲಕ್ಷ, ಕೋಳಿಗಳು ೯೬ ಲಕ್ಷ ಇದೆ ಎಂಬುದರ ಅಂಕಿ ಸಂಖ್ಯೆಗಳು ೧೯೮೩ರ ಲೈವ್‌ಸ್ಟಾಕ್ ರಿಜಿಸ್ಟರ್‌ನ ಮೂಲಕ ಗೊತ್ತಾಗಿದೆ. ವರ್ಲ್ಡ್ ಬ್ಯಾಂಕ್ ಪ್ರಾಜೆಕ್ಟ್‌ನ ನೆರವಿನಿಂದ ತೆಗೆದುಕೊಂಡು ಕುರಿಗಳು ಏನು ಈ ರಾಜ್ಯದಲ್ಲಿ ಇವೆ. ಇವು ಬಹಳ ಒಳ್ಳೆಯ ಪ್ರಸಿದ್ಧವಾದ ಕುರಿಗಳಾಗಿರುತ್ತವೆ. ಮಂಡ್ಯದ ಹತ್ತಿರ ಇರುವ ಬನ್ನೂರು ಕುರಿಗಳು ಅಂದರೆ ಪ್ರಪಂಚಕ್ಕೇ ಬಹಳ ಹೆಸರುವಾಸಿಯಾದ ಕುರಿಗಳಾಗಿರುತ್ತವೆ. ಬನ್ನೂರ್ ಶೀಫ್ಸ್ ಎಂದು ಹೇಳತಕ್ಕಂಥ ಕುರಿಗಳು ದನಗೂರು ಫಾರಂನಲ್ಲಿ ಇದೆ. ಅದೇರೀತಿ ಚಳ್ಳಕೆರೆ, ಕೇಂದ್ರ ಸರ್ಕಾರದಿಂದ ಬಂದಿರತಕ್ಕಂಥ ಒಂದು ದೊಡ್ಡ ಫಾರಂ ಅಲ್ಲಿ ಬನ್ನೂರು ಕುರಿ ತಳಿಗಳನ್ನು ಕೂಡ ಸಾಕುತ್ತಾರೆ. ಇದು ಪ್ರಪಂಚಕ್ಕೆ ಹೆಸರುವಾಸಿಯಾದ ತಳಿಗಳಾಗಿರುತ್ತದೆ.. ಇವರಲ್ಲಿ ಒಂದು ಕೊರತೆ ಇರುತ್ತದೆ. ಅದೇ ರೀತಿಯಲ್ಲಿ ಫಾಡ್ ಅನಿಮಲ್ ಎಂದು ಹೇಳುತ್ತೇನೆ ಅದು ತಮಗೆ ಗೊತ್ತಿದೆ. ಬೇರೆ ತಳಿಗಳನ್ನು ಕ್ರಾಸ್ ಮಾಡಿಸಿ ಉಣ್ಣೆ ಮತ್ತು ಮಾಂಸದ ಉತ್ಪಾದನೆಯಾಗುವಂತೆ ಒಳ್ಳೆಯ ತಳಿಗಳನ್ನು ಕಂಡುಹಿಡಿಯಬೇಕು. ಇದಕ್ಕೆ ಬೇಕಾದಂಥ ಹಣವನ್ನು ಸರ್ಕಾರದವರು ಕೊಡಬೇಕು.

ಈ ರೀತಿ ಮಾಡಿದರೆ ಕರ್ನಾಟಕ ರಾಜ್ಯದಿಂದ ಹೊರ ರಾಷ್ಟ್ರಗಳಿಗೆ ಕಳುಹಿಸಬಹುದು. ಅಷ್ಟರ ಮಟ್ಟಿನ ಬೇಡಿಕೆ ಇರುತ್ತದೆ. ಜಪಾನ್ ದೇಶಕ್ಕೆ ಬ್ಯಾಂಕಾಕ್ ಮತ್ತು ಸಿಂಗಪೂರ್‌ಗಳಿಂದ ಹೋಗುತ್ತಿದೆ. ಈ ಶೀಫ್ ಡೆವಲೆಪ್‌ಮೆಂಟ್‌ಗಾಗಿ ವರ್ಲ್ಡ್ ಬ್ಯಾಂಕ್‌ನಿಂದ ಸುಮಾರು ೪೦ ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿ ಪ್ರಾಜೆಕ್ಟ್‌ನ್ನು ಮಾಡಿರುತ್ತಾರೆ. ಆದರೆ ತಾವು ಈ ದಿಸೆಯಲ್ಲಿ ಏನು ಮಾಡಿದ್ದೀರಿ, ಎಂದು ಕೇಳುತ್ತೇನೆ. ತಾವು ಈ ಪ್ರಾಜೆಕ್ಟ್‌ನ್ನು ನೋಡಿದ್ದೀರೋ ಇಲ್ಲವೋ ? ತಮ್ಮನ್ನು ವೈಯಕ್ತಿಕವಾಗಿ ಕೇಳುತ್ತಿದ್ದೇನೆ. ತಾವು ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ. ನಾವು ವರ್ಲ್ಡ್ ಬ್ಯಾಂಕ್‌ನ ಅಸಿಸ್ಟೆನ್ಸ್ ತೆಗೆದುಕೊಂಡು ಬೆಂಗಳೂರು ಜಿಲ್ಲೆಯಲ್ಲಿ, ಬಿಜಾಪುರದಲ್ಲಿ ಒಂದೊಂದು. ಮತ್ತು ರಾಣಿಬೆನ್ನೂರಿನಲ್ಲಿ ಒಂದು ದೊಡ್ಡ ಶೀಪ್ ಟ್ರಾಕ್ ಮಾಡಿದ್ದೇವೆ. ಎಷ್ಟೋ ಲಕ್ಷಾಂತರ ಜನರು ಇದರಿಂದ ಕುರಿ ಸಾಕಾಣಿಕೆಯಲ್ಲಿ ತೊಡಗಿದ್ದಾರೆ. ಇನ್ನೂ ಇದರ ಬಗ್ಗೆ ಹೆಚ್ಚಿನ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ತಾವು ಇಲ್ಲಿ ಕೊಟ್ಟಿರತಕ್ಕಂಥ ೧೯೮೨–೮೩ನೇ ಪ್ರಾಜೆಕ್ಟ್ ರಿಪೋರ್ಟನ್ನು ಓದಿದೆ. ಪ್ರತಿಯೊಂದು ಫಾರಂ ರೀಜನಲ್ ಶೀಪ್ ಫಾರಂ, ಕ್ಯಾಟಲ್ ಫಾರಂ ಎಂದು ಏನು ಇದೆ ಅಲ್ಲಿ ಪ್ರಾಣಿಗಳ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಿದೆ. ಹೆಸರಿಗೆ ಮಾತ್ರ ಫಾರಮ್‌ಗಳು ಎಂದು ಇರುತ್ತದೆ. ಅಲ್ಲಿ ಅಧಿಕಾರಿಗಳೇ ಇಲ್ಲ. ಅಲ್ಲಿರುವ ಪ್ರಾಣಿಗಳ ಸಂಖ್ಯೆ ಸುಮಾರು ೪೦–೫೦–೧೦೦–೨೦೦ ಸಂಖ್ಯೆಯಲ್ಲಿ ಇರುತ್ತದೆ. ಎಲ್ಲೋ ದೊಡ್ಡ ದೊಡ್ಡ ಫಾರಗಳು ಬಿಟ್ಟರೆ ಬೇರೆ ಎಲ್ಲೂ ಸಾಕಷ್ಟು ಸಂಖ್ಯೆಯಲ್ಲಿ ಪ್ರಾಣಿಗಳು ಇಲ್ಲ 'ಚಳ್ಳಕೆರೆಯಲ್ಲಿ ಅಮೃತ ಮಹಲ್ ಫಾರಮ್ ಎಂದು ಏನಿದೆ ಇದು ಕೂಡ ನಸಿಶಿ ಹೋಗುತ್ತಿದೆ' ಅಲ್ಲಿ ಜನರು ಒತ್ತುವರಿ ಮಾಡಿಕೊಂಡಿರುತ್ತಾರೆ. ಶಾಸಕರು ಬಂದು ಆಪಾದನೆ ಮಾಡಿದರೂ ಕೂಡ ಏನು ಕ್ರಮ ತೆಗೆದುಕೊಂಡಿಲ್ಲ. ಅಲ್ಲಿಯ ಜನತೆ ಬಂದು ಕೇಳಿದರೆ ನಿಮಗೆ ಕೊಡುತ್ತೇವೆಂದು ಹೇಳತಕ್ಕಂಥದ್ದು ಇರುತ್ತದೆ.

ನಾವು ಅಧಿಕಾರದಲ್ಲಿದ್ದಾಗ ಒಂದು ಎಕರೆಯನ್ನೂ ಕೂಡ ಕೊಟ್ಟಿರಲಿಲ್ಲ. ಅಮೃತ ಮಹಲ್ ಕಾವಲ್‌ನಲ್ಲಿ ಕೊಡದೆ ಇರುವುದಕ್ಕೆ ಕಾರಣವೇನೆಂದರೆ ಇದು ಪ್ರಪಂಚದಲ್ಲೇ ಹೆಸರುವಾಸಿಯಾದ ಒಂದು ಉತ್ತಮವಾದ ತಳಿ. ತಮಗೆ ಗೊತ್ತಿದೆ ಹಳ್ಳಿಕಾರ್, ಅಮೃತ ಮಹಲ್ ಈ ತಳಿಯ ಎತ್ತುಗಳನ್ನು ಒಂದನೇ ಮಹಾ ಯುದ್ಧದಲ್ಲಿ ಭಾರೀ ಬಂದೂಕು ಮತ್ತು ಯುದ್ಧ ಸಾಮಗ್ರಿಗಳನ್ನು ಸಾಗಿಸುವುದಕ್ಕೆ ಉಪಯೋಗಿಸುತ್ತಿದ್ದರು. ಅಷ್ಟೊಂದು ಉತ್ತಮವಾದ ತಳಿಗಳು ಇವು. ಹಳ್ಳಿಕಾರ್ ತಳಿ ಎಂದರೆ ಈವತ್ತಿನ ದಿವಸ ಅತಿ ವೇಗದಿಂದ ಓಡತಕ್ಕಂಥ ಎತ್ತುಗಳಾಗಿವೆ. ದಯಮಾಡಿಟ್ಟು ಇದರ ಅಭಿವೃದ್ಧಿಗೋಸ್ಕರ ತುಮಕೂರು ಹತ್ತಿರ ಏನು ಒಂದು ಫಾರಮ್ ತೆಗೆದಿದ್ದೀರಿ ಅದನ್ನು ಉತ್ತಮಪಡಿಸಿ. ಇವೆಲ್ಲವೂ ನಾಮಕಾವಸ್ತೆ ಇರತಕ್ಕಂಥದಾಗಿರುತ್ತದೆ. ಹೆಸರಿಗೆ ಮಾತ್ರ ಇದ್ದರೆ ಸಾಲದು ಅದಕ್ಕೆ ಬೇಕಾದ ಸೌಲಭ್ಯಗಳನ್ನು ಒದಗಿಸಿಕೊಟ್ಟು ಖಾಯಂ ಕೆಲಸವಾಗುವಂತೆ ಮಾಡಿ ಕುರಿಗಳ ಅಭಿವೃದ್ಧಿಗೆ ದನಗಳ ಅಭಿವೃದ್ಧಿಗೆ ಮಿಶ್ರತಳಿಗಳ ಅಭಿವೃದ್ಧಿಗೆ ಹೆಚ್ಚಿನ ಆಸಕ್ತಿಯನ್ನು ಕೊಡಿ ಇವೊತ್ತಿನ ದಿವಸ ರೆಡ್ ಡೇನ್ ಎಂದು ಲೈವ್ ಸ್ಟಾಕ್ ಫಾರಮ್ ಇದೆ. ಅವೆಲ್ಲವನ್ನು ನೋಡಿ ನನಗೆ ಬಹಳ ದುಃಖವಾಯಿತು. ಇಷ್ಟೊಂದು ಹಣವನ್ನು ಕೊಡುವುದಕ್ಕೆ ಮುಂದೆ ಬರುತ್ತಿದ್ದರೂ ಯಾವುದೇ ಕಾರ್ಯಕ್ರಮವನ್ನು ತೆಗೆದುಕೊಳ್ಳದಿರುವುದು ನಿಜಕ್ಕೂ ಶೋಚನೀಯವಾದ ಪ್ರಸಂಗವಾಗಿರುತ್ತದೆ. ವರ್ಲ್ಡ್ ಬ್ಯಾಂಕ್

ನವರು ಮುಂದೆ ಬರುತ್ತಿದ್ದಾರೆ, ತಾವು ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ಎಂದು ಕೇಳಬೇಕಾಗಿದೆ. ತಾವು ಬಹುಶಃ ಏನೋ ಬೇಡದ ಇಲಾಖೆಯನ್ನು ಪಡೆದಿರುತ್ತೀರಿ ಎಂದು ಕಾಣುತ್ತದೆ. ತಮ್ಮನ್ನು ವೈಯಕ್ತಿಕವಾಗಿ ಟೀಕೆ ಮಾಡುತ್ತಿದ್ದೇನೆಂದು ತಿಳಿದುಕೊಳ್ಳಬಾರದು. ಯಾವುದೇ ಅನುಭವ, ಪಾಲನೆ, ಅದರ ವಾಸನೆಯೂ ತಮಗೆ ಇಲ್ಲವೆಂದು ಹೇಳಿದರೆ ತಪ್ಪಾಗಲಾರದು. ತಾವು ಅನೇಕ ಸಂದರ್ಭಗಳಲ್ಲಿ ಉತ್ತರವನ್ನು ಕೊಡತಕ್ಕಂಥದ್ದನ್ನು ನೋಡಿದರೆ ವಿವರಗಳನ್ನು ತರಿಸುತ್ತೇನೆ, ಹೇಳುತ್ತೇನೆ ಎಂದು ಹೇಳುತ್ತಿರುವುದನ್ನು ನೋಡಿದರೆ ಈ ಇಲಾಖೆಯ ಹತೋಟಿಯೇ ನಿಮ್ಮ ಕೈಯಲ್ಲಿ ಇಲ್ಲವೆಂದು ತಿಳಿದು ಕೊಳ್ಳಬೇಕಾಗುತ್ತದೆ. ವರ್ಲ್ಡ್‌ಬ್ಯಾಂಕ್‌ನವರು ನೀವು ಕೇಳಿದ ಹಾಗೆ ಕಹಣವನ್ನು ಕೊಡುತ್ತಿದ್ದಾರೆ ಕರ್ನಾಟಕ ರಾಜ್ಯದ ಇತಿಹಾಸದ ಹಿನ್ನೆಲೆಯನ್ನು ನೋಡಿದರೆ ನಮ್ಮ ರಾಜ ಮಹಾರಾಜರು ಜರ್ಸಿ ಎಂಬ ಉತ್ತಮವಾದ ತಳಿಗಳನ್ನು ಸಾಕುವುದಕ್ಕಾಗಿ ಒಂದು ಡೈರಿ ಫಾರಂ ಮಾಡಿದರು. ಅವು ಬಹಳ ಉತ್ತಮವಾದ ತಳಿಗಳು. ತಾವು ಇದನ್ನು ನೋಡಿದ್ದಿರೋ ಇಲ್ಲವೋ ಮೈಸೂರು 'ಪಕ್ಕದಲ್ಲಿಯೇ ಡೈರಿ ಮಾಡಿದ್ದಾರೆ' ರಾಜಮನೆತನದವರು ಇಂಗ್ಲೆಂಡ್‌ನಿಂದ ತಂದಂಥ ತಳಿಗಳು ಅವು. ಇದು ಬಹಳ ಹೆಸರುವಾಸಿಯಾದಂಥ ತಳಿಗಳು ಇವು ಅಧಿಕವಾಗಿ ಹಾಲನ್ನು ಕೊಡ ತಕ್ಕಂಥ ತಳಿಗಳು. ಸರ್ಕಾರದವರು ಇದನ್ನು ಡೆನ್‌ಮಾರ್ಕ್‌ನಿಂದ ಪ್ಲೈನ್‌ನಲ್ಲಿ ತರಿಸಿರುತ್ತಾರೆ. ತಾವು ಪ್ಲೈನ್‌ನಲ್ಲಿ ಚಟುವಟಿಕೆಗಳನ್ನು ನಡೆಸುವುದೇ ಇಲ್ಲ. ತಾವು ಅದನ್ನೆಲ್ಲಾ ನಿಲ್ಲಿಸಿದ್ದೇವೆಂದು ಈ ಸದನ ದಲ್ಲಿಯೇ ಪ್ರಸ್ತಾಪ ಮಾಡಿದ್ದೀರಿ.

ಇನ್ನು ತಮ್ಮ ಇಲಾಖೆಯಲ್ಲಿ ಪಶುವೈದ್ಯ ಇಲಾಖೆಯಲ್ಲಿ ಕೊಡತಕ್ಕಂಥ ಸೌಲಭ್ಯಗಳ ಬಗ್ಗೆ ಹೇಳುವುದಾದರೆ ಕೃತಕ ವೀರ್ಯ ಗರ್ಭಧಾರಣೆ ಎಂದು ಒಳ್ಳೆಯ ತಳಿಗಳಿಂದ ಉತ್ಪಾದನೆಯಾಗತಕ್ಕಂಥ ಸಿಮನ್ಸ್. ಇದರಿಂದ ಎಷ್ಟು ಅನುಕೂಲವಾಗುತ್ತದೆ. ಈವತ್ತು ಹೇಳಬೇಕಾದರೆ ಒಳ್ಳೆಯ ಬೀಜದ ಹೋರಿಯ ಸೆಮನ್ಸ್ ಅಂತರ ರಾಷ್ಟ್ರೀಯ ಮಾರ್ಕೆಟ್‌ನಲ್ಲಿ ಸುಮಾರು ೨೦೦ ರಿಂದ ೪೦೦ ಡಾಲರ್‌ಗಳ ವರೆಗೂ ಬೆಲೆ ಇದೆ. ಈವತ್ತಿನ ದಿವಸ ನಿಮ್ಮ ಎಲ್ಲ ಕೆಲಸಕಾರ್ಯಗಳ ಬಗ್ಗೆಯೂ ವಿವರವಾಗಿ ಪ್ರಸ್ತಾಪ ಮಾಡಿದ್ದೇನೆ. ಪಶುವೈದ್ಯ ಇಲಾಖೆಯಲ್ಲಿ ಲೈವ್‌ಸ್ಟಾಕ್ ಅಸಿಸ್ಟೆಂಟ್, ಡೈರೆಕ್ಟರ್ ಆಫ್ ವೆಟರ್‌ನರಿ ಎಂದು ಇರುತ್ತಾರೆ. ತಾವು ಈ ವರ್ಷದಲ್ಲಿ ಪಶುಪಾಲನಾ ಇಲಾಖೆಯಲ್ಲಿ ಹೆಚ್ಚಿಗೆ ಔಷದಿಗಳನ್ನು ಕೊಂಡುಕೊಂಡಿರುವುದಾಗಿ ತಿಳಿದುಬಂದಿರುತ್ತದೆ. ಔಷದಿಗಳನ್ನು ಕೊಂಡಿರುವ ಬಗ್ಗೆ ದೊಡ್ಡ ದಾಂಧಲೆ ಆಗಿದೆ. ಇದರ ಬಗ್ಗೆ ತಾವು ಏನು ಕ್ರಮವನ್ನೂ ತೆಗೆದುಕೊಂಡಿದ್ದೀರಿ ಎಂಬುದನ್ನು ಕೇಳಬೇಕಾಗಿದೆ. ಕಳೆದ ೧೯೮೩-೮೪ನೇ ಸಾಲಿಗೆ ಎಲ್ಲ ಅಸ್ಪತ್ರೆಗಳಿಗೂ ಔಷಧಿಗಳನ್ನು ಒದಗಿಸಿ ಕೊಟ್ಟಿರುತ್ತೇವೆಂದು ಹೇಳಿರುತ್ತೀರಿ. ಇದರೆ ಎಲ್ಲಿ ಹೋದರೂ ಯಾವ ಆಸ್ಪತ್ರೆಗಳಿಗೂ ಹೋದರೂ ಕೂಡ ಔಷಧಿಗಳು ಇಲ್ಲವೆಂದು ಹೇಳುತ್ತಾರೆ. ಬೇಕಾದಷ್ಟು ಹಣವನ್ನೇನೋ ಖರ್ಚು ಮಾಡು ತ್ತೀರಿ. ಆಸ್ಪತ್ರೆಗಳೆಲ್ಲ ಬರೆನಾಕಾವಾಸ್ತೆ ಆಸ್ಪತ್ರೆಗಳಾಗಿವೆ. ಯಾವ ಯಾವ ಔಷಧಿಗಳು ಆಸ್ಪತ್ರೆ ಯಲ್ಲಿ ಸ್ಟಾಕ್ ಇರುತ್ತದೋ ಅದನ್ನೆಲ್ಲ ನೋಟೀಸ್ ಬೋರ್ಡಿನಲ್ಲಿ ಹಾಕಿರಬೇಕು. ಯಾರಾದರೂ ರೈತರು ಯಾವುದೇ ಪ್ರಾಣಿಯನ್ನು ಕಾಯಿಲೆ ಎಂದು ತಂದರೆ ಅದಕ್ಕೆ ಉತ್ತಮವಾದ ಔಷದೋಪ ಚಾರವನ್ನು ಕೊಡುವಂಥ ವ್ಯವಸ್ಥೆ ಆಸ್ಪತ್ರೆಗಳಲ್ಲಿ ಇರಬೇಕು. ಏತಕ್ಕೆಂದರೆ ಒಂದು ಪ್ರಾಣಿಯನ್ನು ರೈತನು ಕಳೆದುಕೊಂಡರೆ ಅವನಿಗೆ ಯಾವುದೇ ವಿಧವಾದ ಕಾಂಪೆನ್‌ಸ್‌ಷನ್‌ನನ್ನು ಸರ್ಕಾರದವರು ಕೊಡುವುದಿಲ್ಲ. ಮತ್ತೆ ಅದಕ್ಕೆ ಇನ್‌ಷೂರೆನ್ಸ್ ಕೂಡ ಇರುವುದಿಲ್ಲ. ಆದ್ದರಿಂದ ಅದರ ಮಹತ್ವ ವನ್ನು ಅರಿತುಕೊಂಡು ಸರ್ಕಾರದವರು ವೈದ್ಯಕೀಯ ಸೌಲಭ್ಯವನ್ನು ಕೊಡಬೇಕು. ಯಾವುದೇ ಪ್ರಾಣಿಯನ್ನು ಸಾಯಕೊಡಕೂಡದು ಎನ್ನುವ ಮನೋಭಾವವನ್ನು ರೂಢಿ ಮಾಡಿಕೊಳ್ಳತಕ್ಕಂಥದ್ದು ಬಹಳ ಕಷ್ಟವಿರುತ್ತದೆ. ಈ ರೀತಿಯಾಗಿ ಇಲಾಖೆಯು ನಡೆಯುತ್ತಿದ್ದರೆ ಈ ಇಲಾಖೆಯು ಅಮೋಘ ವೇಗದಲ್ಲಿ ಹೋಗುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಅದೇ ರೀತಿಯಲ್ಲಿ ಡೈರಿ ಡೆವಲಪ್ ಮೆಂಟ್ ಬಗ್ಗೆ ಹೇಳುವುದಾದರೆ ಕರ್ನಾಟಕದಲ್ಲಿ ಡೈರಿ ಡೆವಲಪ್‌ಮೆಂಟ್‌ಗಾಗಿ ಕೆ. ಡಿ. ಡಿ. ಸಿ. ಎಂದು ಇರುತ್ತದೆ. ಇದಕ್ಕೆ ತಾವೇ ಅಧ್ಯಕ್ಷರಾಗಿದ್ದೀರಿ. ಪ್ರಪಂಚ ಬ್ಯಾಂಕಿನಿಂದ ಹಣ ಬಂದಿರುತ್ತದೆ. ಕೆ.ಡಿ.ಡಿ.ಸಿ.ಯ ಕೈ ಕೆಳಗೆ ಹಲವಾರು ಸಹಕಾರ ಸಂಘಗಳು ಯೂನಿಯನ್‌ಗಳು ಇರುತ್ತವೆ. ಈ ಎಲ್ಲ ಸಹಕಾರಿ ಸಂಘಗಳಿಂದ ಹಾಲಿನ ಶೇಖರಣೆಯನ್ನು ಮಾಡಿ ಸಂಸ್ಕರಣೆ ಮಾಡಿ ವಿತರಣೆಯನ್ನು ಮಾಡತಕ್ಕಂಥ ಕಾರ್ಯಕ್ರಮ ಇರುತ್ತದೆ.

ಈ ಎಲ್ಲ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡದೆ, ಇವೊತ್ತು ಪ್ರತಿಯೊಂದು ತಾಲ್ಲೂಕು ಮಟ್ಟ ದಲ್ಲಿಯಾಗಲಿ, ಹೋಬಳಿ ಮಟ್ಟದಲ್ಲಿಯಾಗಲಿ ಇರತಕ್ಕಂಥ ಪಶುವೈದ್ಯ ಇಲಾಖೆಗಳು ಅಥವಾ ಆಸ್ಪತ್ರೆ ಗಳಲ್ಲಿ ಕೃತಕ ಗರ್ಭಧಾರಣೆ ಸೌಲಭ್ಯವನ್ನು ಒದಗಿಸತಕ್ಕಂಥದ್ದರ ಬಗ್ಗೆ ಇದು ಯಾವ ರೀತಿ ಕೆಲಸ ಮಾಡುತ್ತಿದೆ ಎನ್ನುವುದರ ಬಗ್ಗೆ ಎಂದಾದರೂ ತಾವು ಅನಿರೀಕ್ಷಿತ ಭೇಟಿಯನ್ನು ಕೊಟ್ಟು ಪರೀಕ್ಷೆ

ಯನ್ನು ಮಾಡಿದ್ದೀರಾ ಎಂದು ಕೇಳಬೇಕಾಗಿದೆ. ನಾವು ಯಾವುದೇ ಪ್ರಶ್ನೆಯನ್ನು ಕೇಳಿದಗೂ ಕೂಡ ತಾವು ಕೊಡತಕ್ಕಂಥ ಉತ್ತರದಲ್ಲಿ ಮಾಹಿತಿ ತರಿಸುತ್ತೇನೆ. ಸೂಚನೆ ಕೊಡುತ್ತೇನೆಂದು ಹೇಳಿದ ಹಾಗೆ ತಾವು ಅದೇ ರೀತಿ ಮಾಡುತ್ತಿದ್ದೀರಿ ಎಂದು ತಿಳಿದುಕೊಂಡಿದ್ದೇನೆ. ಮತ್ತು ಇವತ್ತು ನಿಮ್ಮ ಆಡಳಿತದ ವ್ಯವಸ್ಥೆಯ ಬಗ್ಗೆ ಹೇಳುವುದಾದರೆ, ಹಳ್ಳಿಗಳಲ್ಲಿ ಇರತಕ್ಕಂಥ ಅನೇಕ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಮತ್ತು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರದ ಮಟ್ಟದಲ್ಲಿ ಇರತಕ್ಕಂಥ ಅಧಿಕಾರಿಗಳು, ಸಿಬ್ಬಂದಿ ವರ್ಗಕ್ಕೆ ಏನು ಕೊರತೆ ಇಲ್ಲ. ಕೆಲವು ಆಸ್ಪತ್ರೆಗಳಿಗೆ ಲೈವ್‌ಸ್ಟಾಕ್ ಇನ್‌ಸ್ಪೆಕ್ಟರನ್ನು ಕಾಂಪೌಂಡರ್ಸ್‌ಗಳನ್ನು ನೇಮಕ ಮಾಡಿರುವುದಿಲ್ಲ. ಯಾವುದು ಕೊರತೆ ಇರುತ್ತದೆ ಅದನ್ನು ತುಂಬತಕ್ಕಂಥ ವಿಚಾರ ಮಾಡುವುದಿಲ್ಲ. ಇವತ್ತು ಸರ್ಕಾರಿ ಪಶುವೈದ್ಯ ಇಲಾಖೆ ೬೦ ಇವೆ. ೨೨ ಹೊಸ ಅಧಿಕಾರಿಗಳನ್ನು ಮಂಜೂರು ಮಾಡಿದ್ದೇವೆ ಎಂದು ಬಡ್ಜೆಟ್‌ನಲ್ಲಿ ಹೇಳಿದ್ದೀರಿ. ಹೀಗಿರತಕ್ಕಂಥ ಹಾಲಿ ಆಸ್ಪತ್ರೆಗಳು ೧೨೪೬, ಇಷ್ಟು ಆಸ್ಪತ್ರೆಗಳಲ್ಲಿ ಎಲ್ಲ ಸೌಕರ್ಯಗಳನ್ನು ಹೊಂದಿರತಕ್ಕಂಥ ಆಸ್ಪತ್ರೆಗಳು ಎಷ್ಟಿವೆ ಎನ್ನುವುದು ತಾವು ಕೊಟ್ಟಿರತಕ್ಕಂಥ ವರದಿಯಲ್ಲಿ ಸೂಚಿಸಿಲ್ಲ. ಕೊನೆ ಪಕ್ಷ ತಮ್ಮ ಉತ್ತರದಲ್ಲಿಯಾದರೂ ವಿವರಗಳನ್ನು ಕೊಡುತ್ತೀರೆಂದು ನಂಬಿದ್ದೇವೆ. ಇವತ್ತು ಪಶುವೈದ್ಯ ಇಲಾಖೆಯಲ್ಲಿ ತಮಗೆ ಗೊತ್ತಿದೆ, ಯಾವರೀತಿಯಲ್ಲಿ ಕೆಲಸ ಮಾಡಬೇಕೆಂಬುದು, ತಮಗೆ ಗೊತ್ತಿದೆ ಪಶುಗಳಿಗೆ ಒಂದು ರೀತಿಯಾದ ಅಂಟು ರೋಗ ದೊಡ್ಡ ರೋಗ, ರಿಂಡರ್‌ಪೆಸ್ಟ್, ಕಾಲುಬಾಯಿ ಜ್ವರ, ಮತ್ತೆ ಕುರಿಗಳಿಗೆ ಬರತಕ್ಕಂಥ ಸಿಡಬು ರೋಗ, ದೊಡ್ಡ ರೋಗ ಇವೇ ಮುಂತಾದ ರೋಗಗಳು ಬರುತ್ತದೆ. ಬಹುಶಃ ಈ ಅಂಟು ಜಾಡ್ಯ ರಾಜ್ಯದಲ್ಲಿ ಹರಡಿದರೆ ಇದನ್ನು ಹತೋಟಿಯಲ್ಲಿಡುವುದೇ ಕಷ್ಟವಾಗುತ್ತದೆ. ಅದಕ್ಕಾಗಿ ಮುಂಜಾಗ್ರತೆಯ ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳುವುದು ಅತ್ಯಾವಶ್ಯಕವಾಗಿರುತ್ತದೆ.

ಅದಕ್ಕಾಗಿ ಚುಚ್ಚು ಮದ್ದನ್ನು ಕೊಡತಕ್ಕಂಥದ್ದು ಇರುತ್ತದೆ. ಹಸುಗಳಿಗೆ ಕಾಲುಬಾಯಿ ಜ್ವರ ಬಂದುಬಿಟ್ಟರೆ ಹಾಲು ಕೊಡತಕ್ಕಂಥದ್ದು ಕಡಿಮೆಯಾಗಿ ಹೋಗುತ್ತದೆ. ಹಾಲು ಕೊಡತಕ್ಕಂಥ ಹಸುವಿಗೆ ಈ ರೋಗ ಬಂದರೆ ಅದರ ಆರೋಗ್ಯ ಕೆಟ್ಟುಹೋಗಿ ಕೆಲವು ಸಂದರ್ಭಗಳಲ್ಲಿ ಹಾಲನ್ನು ಕೊಡುವುದೇ ನಿಂತುಹೋಗುತ್ತದೆ. ಇದಕ್ಕಾಗಿ ಕೇಂದ್ರ ಸರ್ಕಾರದವರು ನಮ್ಮ ಹೆಬ್ಬಾಳ್‌ನಲ್ಲಿ ಒಂದು ಇನ್‌ಸ್ಟಿಟ್ಯೂಟ್‌ನ್ನು ತೆಗೆದಿರುತ್ತಾರೆ. ಅದೇರೀತಿಯಲ್ಲಿ ನಮ್ಮ ಸರ್ಕಾರದ ವತಿಯಿಂದ ಸೀರಮ್ ಇನ್‌ಸ್ಟಿಟ್ಯೂಷನ್‌ನನ್ನು ತೆಗೆದಿರುತ್ತಾರೆ. ಇದಕ್ಕೆ ವರ್ಲ್ಡ್‌ಬ್ಯಾಂಕ್‌ನವರು ಸಹಾಯವನ್ನು ಕೊಡುತ್ತಿರುತ್ತಾರೆ. ಇಲ್ಲಿ ಲಸಿಕೆಯನ್ನು ತಯಾರು ಮಾಡತಕ್ಕಂಥ ಒಂದು ಕಾರ್ಯಕ್ರಮ ಇರುತ್ತದೆ. ಈ ಲಸಿಕೆಯು ಕುರಿಗಳಿಗೆ ಬಹಳ ಉಪಯುಕ್ತವಾದ ಲಸಿಕೆಯಾಗಿರುತ್ತದೆ. ಕುರಿಗಳ ಕಣ್ಣಿನಲ್ಲಿ ಒಂದು ರೀತಿಯಾದ ಹುಳುಗಳು ಬರುತ್ತಿರುತ್ತವೆ. ಇದಕ್ಕೆ ಬಹಳ ಉಪಯೋಗವಾಗುತ್ತದೆ. ಇಂಥ ಒಂದು ರೋಗವನ್ನು ತಡೆಗಟ್ಟಲು ಇಲಾಖೆಯವರೇ ಈ ರೋಗ ಎಲ್ಲಿ ಕಾಣಿಸಿಕೊಳ್ಳುತ್ತದೋ ಅಲ್ಲಿಗೆ ಹೋಗಬೇಕಾಗುತ್ತದೆ. ಏತಕ್ಕೆಂದರೆ ಈ ರೋಗ ತಟ್ಟಿದ ಕುರಿಯನ್ನೇ ಆಗಲಿ ಹಂದಿಯನ್ನೇ ಆಗಲಿ ಆಸ್ಪತ್ರೆಗೆ ತೆಗೆದುಕೊಂಡು ಬರುವುದು ಕಷ್ಟವಾಗುತ್ತದೆ. ಆದ್ದರಿಂದ ಈ ರೋಗ ಬಂದ ಮೇಲೆ ಇದನ್ನು ತಡೆಗಟ್ಟುವುದಕ್ಕೆ ಆಗುವುದೇ ಇಲ್ಲ. ಅದರ ಮೃತ್ಯುವೇ ಕೊನೆಯ ಹಂತವೆಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇದು ಯಾವ ರೀತಿ ಬರುತ್ತದೆ ಎಂದರೆ ಹೊರ ರಾಜ್ಯಗಳಿಂದ, ಅಂದರೆ ತಮಿಳುನಾಡಿನಿಂದ ಪಕ್ಕದಲ್ಲಿರತಕ್ಕಂಥ ಮಹರಾಷ್ಟ್ರದಿಂದ ದನಗಳ ಜಾತ್ರೆ ಎಂದು ನಡೆಯುತ್ತದೆ. ಆಗ ಅಲ್ಲಿಂದ ಕೊಂಡು ತರತಕ್ಕಂಥ ರಾಸುಗಳಿಂದ ಈ ರೋಗ ಹರಡುತ್ತದೆ. ಇಂಥ ಒಂದು ಸಾಂಕ್ರಾಮಿಕ ರೋಗವನ್ನು ತಡೆಗಟ್ಟಬೇಕಾದರೆ ಚೆಕ್ ಪೋಸ್ಟ್‌ಗಳನ್ನು ಅಲ್ಲಲ್ಲೇ ನಿರ್ಮಿಸಿ. ಅವುಗಳನ್ನು ಪರೀಕ್ಷೆ ಮಾಡಿ ಅಲ್ಲೇ ತಕ್ಕ ಔಷದೋಪಚಾರಗಳಿಂದ ಚಿಕಿತ್ಸೆಯನ್ನು ಕೊಡತಕ್ಕಂಥ ಕ್ರಮದಿಂದ ಇಂಥ ರೋಗಗಳು ಹರಡದಂತೆ ನೋಡಿಕೊಳ್ಳಬಹುದು. ಸರ್ಕಾರದವರು ಇದರ ಬಗ್ಗೆ ಹೆಚ್ಚಿನ ಗಮನವನ್ನು ಹರಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿ ಇರತಕ್ಕಂಥ ಕೃತಕ ವೀರ್ಯ ಗರ್ಭಧಾರಣೆಯ ಕೇಂದ್ರಕ್ಕೆ ಭೇಟಿಕೊಟ್ಟು ಅಲ್ಲಿ ನಡೆಯತಕ್ಕಂಥ ಕಾರ್ಯಾಚರಣೆಯನ್ನು ನೋಡಬೇಕು. ಕೃತಕ ವೀರ್ಯವನ್ನು ಪರೀಕ್ಷೆ ಮಾಡಲು ಅದಕ್ಕೆ ಬೇಕಾದಂಥ ಮೈಕ್ರೊಸ್ಕೋಪ್‌ನ್ನು ಕೊಟ್ಟಿರುತ್ತಾರೆ. ಅದನ್ನು ಕೊಟ್ಟಿದ್ದರೂ ಅದನ್ನು ವೈದ್ಯಾಧಿಕಾರಿಗಳು ಉಪಯೋಗ ಮಾಡುವುದೇ ಇಲ್ಲ. ಇವತ್ತಿನ ದಿವಸ ನಾನು ಮೊದಲೇ ಹೇಳಿದ ಹಾಗೆ ಕೃತಕ ವೀರ್ಯಕ್ಕೆ ಹೆಚ್ಚಿನ ಬೆಲೆ ಇರುತ್ತದೆ. ಇಂಟರ್‌ನ್ಯಾಷನಲ್ ಮಾರ್ಕೆಟ್‌ನಲ್ಲಿ ಉತ್ಕೃತ್ತಮವಾದ ಕೃತಕ ವೀರ್ಯಕ್ಕೆ ಸುಮಾರು ೨೦೦ ರಿಂದ ೪೦೦ ಡಾಲರ್ ವರೆಗೆ ಬೆಲೆ ಇರುತ್ತದೆ. ಇಷ್ಟೊಂದು ಮಹತ್ವ ಇರತಕ್ಕಂಥ ಇದನ್ನು ಸರಿಯಾಗಿ ಶೇಖರಣೆ ಮಾಡತಕ್ಕಂಥದ್ದು ಮತ್ತು ಟ್ರಾನ್ಸ್‌ಪೋರ್ಟ್ ಮಾಡತಕ್ಕಂಥದ್ದರ ಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕು. ಕೋಲ್ಡ್ ಸ್ಟೋರೇಜ್‌ನಲ್ಲಿ ಇಟ್ಟು ಇದನ್ನು ಉಪಯೋಗ ಮಾಡಬೇಕು.

ಈವತ್ತು ನಾನು ಈಗಾಗಲೇ ಹೇಳಿದ ಹಾಗೆ ಹಳ್ಳಿಕಾರ್, ಅಮೃತಮಹಲ್, ಕಿಲಾಲು ಮುರ್ರಾ, ಸೂರ್ತಿ ಎಮ್ಮೆ ತಳಿ ಇವುಗಳು ಬಹಳ ಪ್ರಸಿದ್ಧವಾದ ಜಾನುವಾರುಗಳಾಗಿರುತ್ತವೆ. ಇವುಗಳ ಪೋಷಣೆ ಮತ್ತು ಅಭಿವೃದ್ಧಿಯನ್ನು ಮಾಡತಕ್ಕಂಥ ಕಾರ್ಯಕ್ರಮದಲ್ಲಿ ತಾವು ಇನ್ನೂ ಹೆಚ್ಚಿನ ಆಸಕ್ತಿಯಿಂದ ತೀವ್ರ ಕಾರ್ಯರೂಪಕ್ಕೆ ತರತಕ್ಕಂಥ ಕೆಲಸವಾಗಬೇಕು ತಮ್ಮ ಇಲಾಖೆಯು ವತಿಯಲ್ಲಿ ಸಾವಿರಾರು ಎಕರೆ ಪ್ರಾಜೆಕ್ಟ್‌ಗಳು ಇರುತ್ತವೆ. ಅಲ್ಲಿ ರೆಡ್ ಡೇನಿಷ್, ಜರ್ಸಿ ಇವುಗಳನ್ನು ತರಿಸಿ, ಮಿಶ್ರತಳಿಗಳನ್ನು ತರಿಸಿ ಅವುಗಳ ಅಭಿವೃದ್ಧಿಯನ್ನು ಮಾಡಬೇಕು. ತಮ್ಮ ವರದಿಯಲ್ಲಿ ಹೇಳಿದ್ದೀರಿ. ಆಸ್ಟ್ರೇಲಿಯಾ ಸರ್ಕಾರದವರು ಕೊಟ್ಟಿರತಕ್ಕಂಥ ಯೋಜನೆಯಲ್ಲಿ ಒಂದು ಫಾರಮ್ ಪ್ರಾರಂಭ ಮಾಡುತ್ತೇವೆಂದು. ಅದು ಎಷ್ಟರಮಟ್ಟಿಗೆ ಪ್ರಗತಿಯಾಗುತ್ತದೊ ಗೊತ್ತಿಲ್ಲ. ಅಜ್ಜಂಪುರದಲ್ಲಿ ಒಂದು ಕ್ಯಾಟಲ್ ಫಾರಮ್ ಇರುತ್ತದೆ. ಇಲ್ಲಿ ೯,೯೨೦ ಎಕರೆ ಅಮೃತಮಹಲ್ ಫಾರಮ್ ಇರುತ್ತದೆ. ಇಲ್ಲಿ ಎಷ್ಟೋ ಎಕರೆಗಳಷ್ಟು ಜಮೀನನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ. ಸರ್ವೆ ಮಾಡಿ ಮುಗಿದಿರಬಹುದು ಎಂದು ಕಾಣುತ್ತದೆ. ಸರ್ವೆ ಅಂಡ್ ಸೆಟಲ್‌ಮೆಂಟ್ ಡಿಪಾರ್ಟ ಮೆಂಟ್‌ನವರು ಹೋಗಿ ಎಲ್ಲೆಲ್ಲಿ ಒತ್ತುವರಿ ಮಾಡಿಕೊಂಡಿರುತ್ತಾರೆ ಅಂಥವರನ್ನು ಬಿಡಿಸಬೇಕು. ಯಾರ ಒತ್ತಡಕ್ಕೂ ಮಣಿಯಬಾರದು. ಏತಕ್ಕೆಂದರೆ ದನಗಳ ಸಂಪತ್ತನ್ನು ಉಳಿಸಿಕೊಳ್ಳಬೇಕೆಂದರೆ ಇಂಥ ಅಮೃತಮಹಲ್ ಕಾವಲ್‌ಗಳು ಅಭಿವೃದ್ಧಿಯಾಗಬೇಕು. ಇದರಿಂದ ರೈತರಿಗೂ ಅನುಕೂಲವಾಗುತ್ತದೆ. ಇವತ್ತಿನ ದಿವಸ ಒಂದು ಜೊತೆ ಕೆಲಸಕ್ಕೆ ಬರತಕ್ಕಂಥ ಹೋರಿಗಳನ್ನು ತೆಗೆಯಬೇಕೆಂದರೆ ಅದರ ಬೆಲೆ ನಾಲ್ಕು ಸಾವಿರದಿಂದ ಹಿಡಿದು ೧೫ ಸಾವಿರ ರೂಪಾಯಿಗಳವರೆಗೂ ಇರುತ್ತದೆ. ಬಡವರು ಎಲ್ಲರೂ ಟ್ರಾಕ್ಟರುಗಳನ್ನು ಇಟ್ಟುಕೊಂಡು ವ್ಯವಸಾಯ ಮಾಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಸಣ್ಣ ರೈತರಿಗೆ, ಹಿಂದುಳಿದವರ್ಗದವರಿಗೆ ಪಶುಸಂಪತ್ತು ಬಹಳ ಮುಖ್ಯವಾಗಿರುತ್ತದೆ. ಇದರಿಂದಲೇ ವ್ಯವಸಾಯ ಮಾಡಬೇಕಾಗಿರುತ್ತದೆ. ಆದ್ದರಿಂದ ಎಷ್ಟು ಬೇಡಿಕೆ ಇರುತ್ತದೆ ಅಷ್ಟನ್ನು ಪೂರೈಸಲು ಸರ್ಕಾರದವರು ಕ್ರಮ ಕೈಗೊಳ್ಳಬೇಕು. ಅಷ್ಟೇ ಸರ್ಕಾರಕ್ಕೆ ಉತ್ಪತ್ತಿಯೂ ಕೂಡ ಇರುತ್ತದೆ. ಆದೇ ರೀತಿ ಪಶುಸಂಗೋಪನೆಗೆ ಮುಖ್ಯವಾಗಿ ಬೇಕಾದಂಥ ಫಾಡರ್ ಬ್ಯಾಂಕ್ ಮಾಡಿ ಉತ್ತಮವಾದ ಉಲ್ಲನ್ನು ಬೆಳೆಸಿ ಸಕಾಲದಲ್ಲಿ ಕೊಯ್ದು ಶೇಖರಣೆಯ ಕಾರ್ಯವನ್ನು

೧೨-೦೦ ಅಪರಾಹ್ನ

ಮಾಡಬೇಕು. ಇನ್ನು ನಾನು ಹೈನುಗಾರಿಕೆ ಅಭಿವೃದ್ಧಿ ಬಗ್ಗೆ ಪ್ರಸ್ತಾಪ ಮಾಡುವುದಾದರೆ ನಮ್ಮ ಸರ್ಕಾರದವರು ಸುಮಾರು ೫ ಡೈರಿಗಳನ್ನು ಗುಲ್ಬರ್ಗ, ಮಂಗಳೂರು, ಶಿವಮೊಗ್ಗ ಮುಂತಾದ ಕಡೆಗಳಲ್ಲಿ ಸ್ಥಾಪನೆ ಮಾಡಿದ್ದರೂ, ಕೂಡ ನಾವು ಪ್ರತಿ ವರ್ಷನೋಡುತ್ತಲೇ ಬಂದಿದ್ದೇವೆ, ಈ ಡೈರಿಗಳಲ್ಲಿ ಸಾಕಷ್ಟು ಪ್ರಗತಿದಾಯಕ ಸೂಚನೆಗಳು ಕಂಡು ಬರುತ್ತಿಲ್ಲ. ಹಳ್ಳಿಗಳಲ್ಲಿ ಇವರು ಹಾಲು ಶೇಖರಣೆ ಮಾಡಿ ಮಾರಾಟ ಮಾಡತಕ್ಕಂಥದ್ದು, ಏನಿದೆ ಇದರಲ್ಲಿ ಇವರು ಅವರ ಕೆಪ್ಯಾಸಿಟಿಗೆ ಮೀರಿ ಕೆಲಸ ಮಾಡಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಸಹಕಾರ ಸಂಘಗಳು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತು ಕೆ.ಡಿ.ಡಿ.ಸಿ.ಯವರು ಇವರಿಗೆ ಎಲ್ಲಾ ರೀತಿಯ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆಂದು ಸಹ ನಾನು ಕೇಳಿಕೊಳ್ಳುತ್ತೇನೆ. ಸ್ವಾಮಿ ಹಳ್ಳಿಗಳಲ್ಲಿ ಹಾಲು ಖರೀದಿ ಮಾಡುವಾಗ ಆ ಹಾಲನ್ನು ಸರಿಯಾಗಿ ಪರೀಕ್ಷೆ ಮಾಡಿ ತೆಗೆದುಕೊಳ್ಳಬೇಕಾಗುತ್ತದೆ. ಇನ್ನು ತಾವು ಗುಲ್ಬರ್ಗದಲ್ಲಿ ಒಂದು ಹಾಲಿನ ಡೈರಿಯನ್ನು ತೆಗೆದಿದ್ದೀರಿ. ಅದು ಸರಿಯಾಗಿ ಕೆಲಸ ಮಾಡುತ್ತಿದೆಯೋ ಎಂದು ನಾನು ಈ ಸಂದರ್ಭದಲ್ಲಿ ಕೇಳಬೇಕಾಗುತ್ತದೆ. ಮತ್ತೆ ಧಾರವಾಡದಲ್ಲಿ ಕೂಡ ಈ ಮಿಲ್ಕ್ ಡೈರಿ ನಡೆಯುವುದು ಬಹಳ ಕಷ್ಟದಲ್ಲಿ ಇತ್ತು. ಆ ಡೈರಿಯ ಪರಿಸ್ಥಿತಿ ಏನಾಗಿದೆ ಎಂದು ಮಾನ್ಯ ಮಂತ್ರಿಗಳು ತಿಳಿಸಬೇಕು. ಇಡೀ ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು ೧೭೩.೬೮ ಲಕ್ಷ ಲೀಟರ್ ಹಾಲನ್ನು ಸಂಗ್ರಹಣೆ ಮಾಡಿ ಅಷ್ಟು ಹಾಲನ್ನು ಇವರು ವಿತರಣೆ ಮಾಡುತ್ತಾರೆ. ಆದರೆ ನಮ್ಮ ಡೈರಿಯವರು ಹಾಲಿಗೆ ನೀರು ಹಾಕಿ ಮಾರಾಟ ಮಾಡುವುದಿಲ್ಲವೆಂದು ಕಾಣುತ್ತದೆ. ಸ್ವಾಮಿ ಇವತ್ತು ಬೆಂಗಳೂರು ಡೈರಿಯಲ್ಲಿ ಸುಮಾರು ಒಂದು ಲಕ್ಷ ೭೫ ಸಾವಿರ ಲೀಟರ್ ಹಾಲನ್ನು ವಿತರಣೆ ಮಾಡುತ್ತಿದ್ದಾರೆ. ಮತ್ತೆ ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಮಾನ್ಯಮಂತ್ರಿಗಳಲ್ಲಿ ಕೇಳಬೇಕಾಗುತ್ತದೆ. ಸ್ವಾಮಿ ಈ ಕೆ.ಡಿ.ಡಿ.ಸಿ. ಕಚೇರಿಯು ಮೊದಲು ಶಿವಾಜಿ ಟಾಕೀಸ್‌ನ ಪಕ್ಕದಲ್ಲಿತ್ತು. ಅದರೆ ಈ ಕೆ.ಡಿ.ಡಿ.ಸಿ. ಕಚೇರಿಯನ್ನು ಎಂ. ಜಿ. ರಸ್ತೆಗೆ ವರ್ಗಾವಣೆ ಮಾಡಿದ್ದಾರೆ. ಸ್ವಾಮಿ ಈ ಕೆ.ಡಿ.ಡಿ.ಸಿ ಕಚೇರಿಗೆ ಒಂದು ತಿಂಗಳಿಗೆ ಸುಮಾರು ೪೦ ಸಾವಿರ ರೂಪಾಯಿಗಳ ಬಾಡಿಗೆಯನ್ನು ಕೊಡುತ್ತಿದ್ದಾರೆ. ಸ್ವಾಮಿ ಅಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳು ಯಾವಾಗಲೂ ಏರ್ ಕಂಡೀಷನ್‌ನಲ್ಲಿ ಇರಬೇಕು. ಒಂದು ತಿಂಗಳಿಗೆ ೪೦ ಸಾವಿರ ರೂಪಾಯಿಗಳು ಬಾಡಿಗೆಯನ್ನು ಕೊಟ್ಟರೆ ಒಂದು ವರ್ಷದಲ್ಲಿ

ಎಷ್ಟು ಹಣ ನಾವು ಸರ್ಕಾರದಿಂದ ಕೊಡಬೇಕಾಗುತ್ತದೆ ಎಂಬುದನ್ನು ತಾವೇ ಸ್ವಲ್ಪ ಯೋಚನೆ ಮಾಡಿ. ಇನ್ನು ಇಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ವರ್ಗದವರಿಗೆ ಒಂದು ವರ್ಷಕ್ಕೆ ಸುಮಾರು ೫೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಸ್ವಾಮಿ ಇವರು ಇಟ್ಟಿರ ತಕ್ಕಂಥ ಬಡ್ಜೆಟ್‌ನಲ್ಲಿ ಕೇವಲ ಎರಡನೇ ಒಂದು ಭಾಗದ ಹಣವನ್ನು ಈ ಸಿಬ್ಬಂದಿ ವರ್ಗಕ್ಕೆ ಖರ್ಚು ಮಾಡುತ್ತಿದ್ದಾರೆ. ಆದರೆ ಇನ್ನು ರೈತರ ಕಷ್ಟಸುಖಗಳನ್ನು ಇವರು ಯಾವ ರೀತಿಯಲ್ಲಿ ನೋಡುತ್ತಾರೆ ? ಮತ್ತು ಯಾವ ರೀತಿಯಲ್ಲಿ ಇವರು ಹೈನುಗಾರಿಕೆಯ ಅಭಿವೃದ್ಧಿಯನ್ನು ಮಾಡುತ್ತಾರೆ? ಸ್ವಾಮಿ ಇದು ವಿಶ್ವಬ್ಯಾಂಕಿನ ಒಂದು ಯೋಜನೆ. ತಾವು ಖರ್ಚು ಮಾಡುತ್ತಿರುವ ರೀತಿ ನೀತಿಗಳನ್ನು ಯಾರಾದರೂ ನೋಡಿ ಸೂಕ್ಷ್ಮವಾಗಿ ವಿಶ್ವಬ್ಯಾಂಕಿನವರಿಗೆ ತಿಳಿಸಿದರೆ ಅವರು ನಿಮಗೆ ಈ ಯೋಜನೆಗೆ ಇನ್ನು ಮುಂದೆ ಹಣವನ್ನು ಕೊಡುವುದು ಸಣ್ಣ ನಿಲ್ಲಿಸುತ್ತಾರೆ. ಆದ್ದರಿಂದ ತಾವು ಸ್ವಲ್ಪ ಇತಿಮಿತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಇನ್ನು ತಾವು ಮದರ್ ಡೈರಿ ಎಂದು ಮಾಡಿದ್ದೀರಿ. ಇದರಲ್ಲಿ ಸುಮಾರು ಎರಡೂಕಾಲು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಮತ್ತೆ ತಾವು ಪ್ರತಿಯೊಂದು ಸಾರಿ ಕೂಡ ಹಾಲಿನ ಬೆಲೆಯನ್ನು ಜಾಸ್ತಿ ಮಾಡುತ್ತೀರಿ. ಅದೇ ರೀತಿಯಲ್ಲಿ ನಮ್ಮ ಸಾರಿಗೆ ಮಂತ್ರಿಗಳು ಕೂಡ ಬಸ್ಸಿನ ದರವನ್ನು ಜಾಸ್ತಿ ಮಾಡಿದ್ದಾರೆ. ಆಮೇಲೆ ಕೆಲವು ದಿವಸಗಳ ನಂತರ ಒಂದು ಹತ್ತು ಪೈಸೆಯನ್ನು ಕಡಿಮೆ ಮಾಡಿದ್ದೇವೆಂದು ಹೇಳಿದರು. ಮತ್ತೆ ತಾವು ದನಗಳಿಗೆ ಬೂಸವನ್ನು ಒದಗಿಸಿಕೊಡುವುದರಲ್ಲಿ ಕೂಡ ಸ್ವಲ್ಪ ಬೆಲೆ ಜಾಸ್ತಿ ಮಾಡಿದ್ದೀರಿ ? ಸ್ವಾಮಿ ತಾವು ಬೂಸವನ್ನು ಸಹಕಾರ ಸಂಘಗಳ ಮುಖಾಂತರವಾಗಿ ಕಡಿಮೆ ಬೆಲೆಯಲ್ಲಿ ರೈತರಿಗೆ ಬೂಸವನ್ನು ಒದಗಿಸಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇವತ್ತು ಒಂದು ಮೂಟೆ ಬೂಸದ ಬೆಲೆ ಸುಮಾರು ೬೦–೭೦ ರೂಪಾಯಿಗಳು ಇದೆ. ಒಳ್ಳೆಯ ಆಹಾರವನ್ನು ದನಗಳಿಗೆ ಕೊಟ್ಟರೆ ನಮಗೆ ಹೆಚ್ಚು ಹಾಲು ದೊರೆಯುತ್ತದೆ, ಇಲ್ಲದಿದ್ದರೆ ಇಲ್ಲ. ದನಗಳಿಗೆ ಒಳ್ಳೆಯ ಆಹಾರ ಕೊಡದೆ ಬರೀ ದನಗಳ ಕೆಚ್ಚಲು ಕೊಯ್ದರೆ ಏನು ಪ್ರಯೋಜನ ? ಒಂದು ವೇಳೆ ನಾವು ಅಥವಾ ನೀವು ಹಾಲಿನ ಬೆಲೆಯನ್ನು ಜಾಸ್ತಿ ಮಾಡಿದರೆ ನಮ್ಮ ಬೆಂಗಳೂರು ನಗರದ ಶಾಸಕರು ಎಲ್ಲಾ ಒಂದು ಕಡೆ ಸೇರಿಕೊಂಡು ಹಾಲಿನ ಬೆಲೆ ಜಾಸ್ತಿ ಮಾಡಿದ್ದೀರಿ ಎಂದು ಗಲಾಟೆ ಮಾಡುತ್ತಾರೆ. ನಾನು ಮಂತ್ರಿಯಾಗಿದ್ದಾಗ ಕೂಡ ಅದೇ ರೀತಿ ನಡೆದಿತ್ತು. ಇದಕ್ಕೆ ತಾವು ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ ಪಟ್ಟಣದ ಗ್ರಾಹಕರಿಗೆ ಹಾಲಿನ ಬೆಲೆ ಜಾಸ್ತಿಯಾಗದ ಹಾಗೆ ತಾವು ಹೇಳಿದ ರೀತಿಯಲ್ಲಿ ಬೂಸವನ್ನು ಕಡಿಮೆ ಬೆಲೆಗೆ ಒದಗಿಸಿ ಕೊಡುವುದಕ್ಕೆ ಮಾನ್ಯಮಂತ್ರಿಗಳು ಪ್ರಯತ್ನ ಮಾಡಬಹುದು.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಅಧ್ಯಕ್ಷರೇ......

ಶ್ರೀ ವೈ. ರಾಮಕೃಷ್ಣ.—ಸ್ವಾಮಿ ಒಂದು ಕೆ.ಜಿ. ಫಾಡರ್ ಬೆಲೆಯ ಮೇಲೆ ಈಗ ೧೦ ಪೈಸೆ ಜಾಸ್ತಿ ಮಾಡಿದ್ದಾರೆ. ಕಡಿಮೆ ಮಾಡುವ ಬದಲು ಜಾಸ್ತಿ ಮಾಡಿದ್ದಾರೆ.

ಶ್ರೀ ಎನ್. ಚಿಕ್ಕೇಗೌಡ.—ನಾನು ಫಾಡರ್ ಬಗ್ಗೆ ಬೇರೆ ಮಾತನಾಡುತ್ತೇನೆ. ಇವರು ಸರಿಯಾಗಿ ಫಾಡರ್‌ನ್ನು ರೈತರಿಗೆ ಸಪ್ಲೈ ಮಾಡಿದ್ದಾರೆಯೇ ? ಇವತ್ತು ನಮ್ಮ ರಾಜ್ಯದಲ್ಲಿ ಸುಮಾರು ಒಂದು ಲಕ್ಷ ೪೦ ಸಾವಿರ ದನಗಳು ಇವೆ. ಜಿರ್ಸಿ ಸ್ವಿಡೆನ್ ಮುಂತಾದ ಜಾತಿಯ ಹಸುಗಳು ನಮ್ಮಲ್ಲಿ ಇವೆ. ಈ ಹಸುಗಳಲ್ಲಿ ಸುಮಾರು ೪೦–೫೦ ಪೌಂಡ್ ಹಾಲು ನಮಗೆ ದೊರೆಯುತ್ತದೆ. ಒಂದು ಸೊಸೈಟಿಗೂ ಮತ್ತೊಂದು ಸೊಸೈಟಿಗೂ ಒಂದು ಮೈಲಿ ಅಂತರವಿರಬೇಕು. ಎರಡು ಫರ್ಲಾಂಗ್ ಇರಬೇಕೆಂದು ಹೇಳುವುದು ಸರಿಯಲ್ಲ. ಎಲ್ಲೆಲ್ಲಿ ಹೆಚ್ಚು ಹಾಲಿನ ಉತ್ಪಾದನೆ ಇದೆ ಅಲ್ಲೆಲ್ಲಾ ಸೊಸೈಟಿಗಳು ಇರಬೇಕು. ಬ್ಯಾಂಕ್‌ನವರು ಸಣ್ಣ ಮತ್ತು ಅತಿಸಣ್ಣ ರೈತರಿಗೆ ಸಾಲ ಕೊಡುತ್ತಾರೆ. ಹರಿಜನ ಗಿರಿಜನರಿಗೆ ಸಾಲ ಕೊಡುವಾಗ ಅವರಿಗೆ ಸಬ್ಸಿಡಿ ಸಿಗುತ್ತದೆ. ಎಲ್ಲಿ ಹಾಲಿನ ಉತ್ಪಾದನೆ ಜಾಸ್ತಿಯಿದೆ ಅಂತಹ ಕಡೆ ಸೊಸೈಟಿಗಳು ಇಲ್ಲದಿದ್ದರೆ ಸಾಲ ತೆಗೆದುಕೊಂಡಿರುವವರು ಸಾಲವನ್ನು ಮರುಪಾವತಿ ಮಾಡುವುದು ಹೇಗೆ? ಎಲ್ಲೆಲ್ಲಿ ಹಾಲಿನ ಉತ್ಪಾದನೆ ಜಾಸ್ತಿಯಿದೆ ಅಂತಹ ಕಡೆ ಸೊಸೈಟಿಗಳನ್ನು ಮಾಡಬೇಕೆಂದು ನಾನು ಸಲಹೆ ಕೊಡುತ್ತೇನೆ. ಹಾಲಿನ ಸೊಸೈಟಿಗಳು ಇಲ್ಲದಿದ್ದರೆ ರೈತರು ಸಾಲ ಮರುಪಾವತಿ ಮಾಡುವುದಕ್ಕೆ ಆಗುವುದಿಲ್ಲ. ಹಾಲನ್ನು ಉತ್ಪಾದನೆ ಮಾಡತಕ್ಕವರು ಹಾಲನ್ನು ಮಾರಿ ಹಣ ಪಡೆಯುವುದಕ್ಕೆ ತುಂಬಾ ತೊಂದರೆಯಾಗಿದೆ. ತಾವು ರಿಜಿಡ್ ರೂಲ್ಸ್‌ಗಳನ್ನು ಮಾಡಬೇಡಿ. ತಾವು ಇದರ ಬಗ್ಗೆ ಒಂದು ಖಚಿತವಾದ ನಿಲುವು ತೆಗೆದುಕೊಳ್ಳಬೇಕು. ನನ್ನ ಕ್ಷೇತ್ರವಾದ ಹೊಸಕೋಟೆಯಲ್ಲಿ ಸವಿಶ್ರುತಳಿ ರಾಸುಗಳನ್ನು ರೈತರು ಸಾಕುತ್ತಿದ್ದಾರೆ. ಅಲ್ಲೊಂದು ಫೀಡ್ ಪ್ಲಾಂಟ್ ಹಾಕಿ. ಜನರಿಗೆ ಅನುಕೂಲವಾಗುವ ರೀತಿಯಲ್ಲಿ

ಕ್ಯಾಟಲ್ ಫೀಡ್ ಸೆಂಟರ್ ಮಾಡಬೇಕು. ಪ್ರತಿ ದಿವಸ ಎಷ್ಟು ಹಾಲು ಉತ್ಪಾದನೆಯಾಗುತ್ತಿದೆ ಎನ್ನುವ ಅಂಕಿಸಂಖ್ಯೆಯನ್ನು ತಾವು ಕೊಟ್ಟಿಲ್ಲ. ಹೆಚ್ಚು ಹಾಲು ಉತ್ಪಾದನೆ ಮಾಡುವುದಕ್ಕೆ ಏರ್ಪಾಡು ಮಾಡಬೇಕು. ತುಮಕೂರು, ಹಾಸನ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಸಮಿಶ್ರ ತಳಿಯ ರಾಸುಗಳನ್ನು ರೈತರು ಸಾಕುತ್ತಿದ್ದು ಹೆಚ್ಚು ಹಾಲು ಉತ್ಪತ್ತಿಯಾಗುತ್ತಿದೆ. ಇಂತಹ ಕಡೆ ಕ್ಯಾಟಲ್ ಫೀಡ್ ಸೆಂಟರ್ ಪ್ರಾರಂಭ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತಿನ ದಿವಸ ಪಶುಸಂಪತ್ತನ್ನು ಹೈನುಗಾರಿಕೆಯನ್ನು ಅಭಿವೃದ್ಧಿ ಮಾಡುವ ಕಡೆಗೆ ಮಾನ್ಯ ಮಂತ್ರಿಗಳು ತೀವ್ರ ಗಮನ ಹರಿಸಿ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಕೋಳಿಯ ಬಗ್ಗೆ ಹೇಳುವುದಾದರೆ, ಮಾನ್ಯ ಮಂತ್ರಿಗಳು ಕೋಳಿ ತಿನ್ನುವುದಿಲ್ಲವೆಂದು ಕಾಣುತ್ತದೆ. ಕೋಳಿಯನ್ನು ಸಾಕತಕ್ಕದ್ದು ಎಗ್ ಪರ್‌ಪಸ್‌ಗೋಸ್ಕರ ಮತ್ತು ಅದರ ಮಾಂಸಕ್ಕೋಸ್ಕರ. ಅದು ನಾನಾ ರೀತಿಯ ಉಪಯೋಗಕ್ಕೆ ಬರುತ್ತಿರುವುದರಿಂದ ಕೋಳಿ ಸಾಕುವುದರಲ್ಲಿ ಪ್ರಗತಿಯಾಗಬೇಕಾಗಿದೆ. ಎರಡು ಮೂರು ತಿಂಗಳುಗಳಲ್ಲಿ ಎರಡು–ಎರಡೂವರೆ ಕೆ.ಜಿ. ತೂಕ ಬರತಕ್ಕ ಕೋಳಿ ತಳಿಗಳು ಬಂದಿವೆ. ನಮ್ಮ ವಿಶ್ವವಿದ್ಯಾನಿಲಯದಲ್ಲಿ ಕೋಳಿ ತಳಿಯನ್ನು ಅಭಿವೃದ್ಧಿ ಮಾಡಲಿಕ್ಕೋಸ್ಕರ ಪರಿಶೋಧನೆ ನಡೆಯುತ್ತಿದೆ. ಹೆಸರಘಟ್ಟ ಫಾರಂನಲ್ಲಿ ಈಗಾಗಲೇ ಪರಿಶೋಧನೆ ನಡೆದು ವೈಟ್‌ಲೆಗ್ ಎಂಬ ತಳಿಯನ್ನು ಕಂಡು ಹಿಡಿದು ಅದು ೨೭೦ ರಿಂದ ೨೯೦ ಮೊಟ್ಟೆಗಳನ್ನು ಕೊಡುತ್ತಿದೆ. ಅಂತಹ ತಳಿಯನ್ನು ಕಂಡುಹಿಡಿಯಲಾಗಿದೆ. ವೈಟ್‌ಲೆಗ್ ತಳಿಗೆ ಆಲ್ ಇಂಡಿಯಾ ರೆಕಗ್ನಿಷನ್ ಸಿಕ್ಕಿದೆ. ಹೆಸರಘಟ್ಟದಲ್ಲಿರತಕ್ಕ ಕೇಂದ್ರದಿಂದ ವೈಟ್‌ಲೆಗ್ ತಳಿ ಅಭಿವೃದ್ಧಿ ಮಾಡಲಿಕ್ಕೋಸ್ಕರ ೨೦ ಲಕ್ಷದ ೧೪ ಸಾವಿರದ ೪೬೬ ಕೋಳಿ ಮರಿಗಳನ್ನು ಉತ್ಪಾದನೆ ಮಾಡಿ ರೈತರಿಗೆ ಸಾಕುವುದಕ್ಕೆ ಕೊಟ್ಟಿದ್ದಾರೆ. ಇದು ಸಾಲದು ಇನ್ನೂ ಹೆಚ್ಚಿನ ರೀತಿಯಲ್ಲಿ ಆಗಬೇಕು. ಖಾಸಗಿಯವರು ರೈತರನ್ನು ಶೋಷಣೆ ಮಾಡುತ್ತಿದ್ದಾರೆ. ಖಾಸಗಿಯವರು ಇದು ಒಳ್ಳೆಯ ತಳಿ, ಮೊಟ್ಟೆ ಇಳುವರಿ ಜಾಸ್ತಿ ಬರುತ್ತದೆ ಎಂದು ಹೇಳಿ ರೈತರಿಗೆ ಕೋಳಿ ಮರಿಗಳನ್ನು ಹಂಚಿರುತ್ತಾರೆ. ರೈತರು ಹೆಚ್ಚು ಉತ್ಪಾದನೆ ಬರುತ್ತದೆಂದು ಸಾಕಿದರೆ ಆ ಕೋಳಿಗಳು ಮೊಟ್ಟೆಯನ್ನೇ ಇಡುವುದಿಲ್ಲ. ಆ ಕೋಳಿಗಳು ಮೇವನ್ನು ಚೆನ್ನಾಗಿ ತಿಂದು ರೈತನಿಗೆ ಲಾಸ್ ಆಗುತ್ತದೆ. ಕೋಳಿ ಫಾರಂ ಇಟ್ಟಂತಹ ರೈತರಿಗೆ ಈ ತರಹ ಖಾಸಗಿಯವರು ಮೋಸ ಮಾಡುವುದರಿಂದ ಬಹಳಷ್ಟು ನಷ್ಟವುಂಟಾಗುತ್ತದೆ. ಕೋಳಿ ಮರಿಗಳನ್ನು ಸಪ್ಲೈ ಮಾಡುವಾಗ ಒಳ್ಳೆಯ ತಳಿ ಮರಿಗಳನ್ನು ಕೋಳಿ ಫಾರಂ ಇಡುವವರಿಗೆ ಸಪ್ಲೈ ಮಾಡಬೇಕು. ಜೊತೆಗೆ ಸರಿಯಾದ ಗುಣಮಟ್ಟ ಇರತಕ್ಕ ಕೋಳಿಮೇವು ಒದಗಿಸುವುದಕ್ಕೆ ಏರ್ಪಾಡು ಮಾಡಬೇಕು. ಗುಣಮಟ್ಟ ಕಡಿಮೆಯಿರತಕ್ಕ ಕೋಳಿಮರಿಗಳನ್ನು ಯಾರು ಸಪ್ಲೈ ಮಾಡಿರುತ್ತಾರೆ ಅಂತಹವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು.

ಇನ್ನು ಕುರಿ ಮತ್ತು ಉಣ್ಣೆಯ ಬಗ್ಗೆ ಹೇಳುವುದಾದರೆ, ಬನ್ನೂರು ತಳಿ ಪ್ರಪಂಚದಲ್ಲಿಯೇ ಪ್ರಸಿದ್ಧಿ ಪಡೆದಿದೆ. ಬನ್ನೂರು ತಳಿ ಉಣ್ಣೆ ಮತ್ತು ಮಾಂಸದಲ್ಲಿ ಅಭಿವೃದ್ಧಿಯಾಗುವಂತೆ ಬಹಳ ವೇಗದಲ್ಲಿ ಮಾಡಿದರೆ ಪಾಶ್ಚಿಮಾತ್ಯ ದೇಶಗಳಿಗೆ ಕೋಟ್ಯಾಂತರ ರೂಪಾಯಿ ಮಾಂಸವನ್ನು ಮಾರಾಟ ಮಾಡುವುದಕ್ಕೆ ಅನುಕೂಲವಾಗುತ್ತದೆ. ಚಳ್ಳಕೆರೆ ಶೀಪ್ ಫಾರಂನಲ್ಲಿ ಬನ್ನೂರು ಮತ್ತು ಇತರೆ ತಳಿ ಮಿಶ್ರಮಾಡಿ ಹೆಚ್ಚು ಉಣ್ಣೆ ಮತ್ತು ಮಾಂಸ ಪಡೆಯುವುದಕ್ಕೆ ಪ್ರಯತ್ನಮಾಡಬೇಕು. ಚಳ್ಳಕೆರೆ ಫಾರಂನಲ್ಲಿ ಮೊದಲು ೯೬೭೦ ಕುರಿಗಳು ಇದ್ದು, ಈಗ ೪೭೫೦ ಕುರಿಗಳು ಇವೆ. ಕುರಿಗಳ ಸಂಖ್ಯೆ ಬಹಳ ಕಡಿಮೆಯಾಗಿದೆ. ಫಾರಂನಲ್ಲಿ ಮೇವು ಬೆಳಸಲಿಕ್ಕೆ ಬೋರ್‌ವೆಲ್ ಹಾಕಿ ಕೆಲಸ ಮಾಡುತ್ತಿದ್ದಾರೆ. ನೀರು ಸಿಗದೆ ಬಹಳ ತೊಂದರೆಯಾಗಿದೆ ಎಂದು ಗೊತ್ತಾಗಿದೆ. ದನಗೂರು ಮತ್ತು ಬಂಡೂರು ಫಾರಂಗಳಲ್ಲಿ ಸರ್ಕಾರಿ ಜಮೀನು ಪಡೆದು ಹುಲ್ಲುಗಾವಲು ಹೆಚ್ಚಿಸಿಕೊಂಡು, ಮೇವು ಬೆಳಸಲಿಕ್ಕೆ ಏರ್ಪಾಡು ಮಾಡಬೇಕು. ದನಗೂರಿನ ೪೦೦ ಎಕರೆ ಫಾರಂನಲ್ಲಿ ೭೫೦ ಕುರಿಗಳು ಇವೆ; ಕುರಿಗಳ ಸಂಖ್ಯೆ ಬಹಳ ಕಡಿಮೆಯಾಯಿತು. ನೀವು ಯೋಜನೆಗಳನ್ನು ಹಾಕಿಕೊಂಡರೆ ಆದಕ್ಕೆ ವಿಶ್ವಬ್ಯಾಂಕಿನ ನೆರವು ಸಿಗುತ್ತದೆ. ಲೋಕಲ್ ತಳಿ ಮತ್ತು ಉತ್ತಮ ತಳಿ ಕ್ರಾಸ್‌ಮಾಡಿ ತಳಿ ಅಭಿವೃದ್ಧಿ ಮಾಡಲಿಕ್ಕೆ ಪ್ರಯತ್ನಮಾಡಿ. ರಾಣೆಬೆನ್ನೂರು, ಬಿಜಾಪುರ, ತುಮಕೂರು, ಕೋಲಾರ, ಚಿತ್ರದುರ್ಗ ಜಿಲ್ಲೆಗಳಲ್ಲಿ ಲಕ್ಷಾಂತರ ಕುರಿಗಳನ್ನು ಸಾಕುವುದಕ್ಕೆ ಸಹಾಯಮಾಡಿ. ಕೇಂದ್ರ ಸರ್ಕಾರದ ಮೂಲಕ ನೀವು ವಿಶ್ವಬ್ಯಾಂಕಿನಿಂದ ಸಹಾಯ ಪಡೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಫಾಡರ್ ಡೆವಲಪ್‌ಮೆಂಟ್‌ಗೋಸ್ಕರ ೨೪ ಲಕ್ಷ ರೂಪಾಯಿ ಖರ್ಚುಮಾಡಿ ೩ ಸಾವಿರ ಕ್ವಿಂಟಾಲ್ ಮೇವಿನ ಬೀಜಗಳನ್ನು ಹಂಚಿದ್ದೀರಿ. ಆಸ್ಟ್ರೇಲಿಯಾದಿಂದ ಬಂದಿರತಕ್ಕ ಹೊಸತಳಿ ತೀವ್ರರೀತಿಯಲ್ಲಿ ಹಂಚಿಕೆಯಾಗಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಿಶ್ರತಳಿ ಕರುಗಳನ್ನು ಸಣ್ಣ ರೈತರಿಗೆ ಪರಿಶಿಷ್ಟ ವರ್ಗದವರಿಗೆ ಕೊಡಲಿಕ್ಕೋಸ್ಕರ ೭೦ ಲಕ್ಷ ರೂಪಾಯಿಗಳನ್ನು ಕೊಟ್ಟಿ

ದ್ದಾರೆ. ನೀವು ಅದರಲ್ಲಿ ಎಷ್ಟು ಖರ್ಚು ಮಾಡಿದ್ದೀರಿ ಎಂಬುದನ್ನು ಹೇಳಿಲ್ಲ. ಸ್ಪೆಷಲ್ ಕಾಂಪೊನೆಂಟ್ ಸ್ಕೀಮ್, ಡ್ರಾಟ್ ಪ್ರೊನ್ ಏರಿಯಾ ಪ್ರೋಗ್ರಾಮ್, ಕಾಡಾ ಡೆವಲಪ್‌ಮೆಂಟ್ ಈ ಎಲ್ಲಾ ಯೋಜನೆಗಳನ್ನು ತೆಗೆದುಕೊಂಡರೂ ನೀವು ಹೆಚ್ಚು ಹಣವನ್ನು ಪ್ರಾವಿಜನ್ ಮಾಡಿ, ಹೆಚ್ಚು ಹಣ ಒದಗಿಸಿ ಪರಿಶಿಷ್ಟ ವರ್ಗದವರಗೆ ಹಸುಗಳು, ಎಮ್ಮೆಗಳು ಮತ್ತು ಇತರೆ ಪ್ರಾಣಿಗಳನ್ನು ಸಾಕುವುದಕ್ಕೆ ಅನುಕೂಲ ಮಾಡಿಕೊಡಬೇಕು. ಹೆಸರುಘಟ್ಟದ ರೆಡೇನ್ ತಳಿ ಅಭಿವೃದ್ಧಿ ಮಾಡಲು ಮುನಿರಾಬಾದ್, ಧಾರವಾಡ, ಮತ್ತಿತರ ಕಡೆ ಕೇಂದ್ರಗಳನ್ನು ಮಾಡಿದ್ದಾರೆ, ರೆಡೇನ್ ತಳಿಯನ್ನು ಕ್ರಾಸ್‌ಮಾಡಿ ಹೆಚ್ಚು ಹಾಲು ಉತ್ಪಾದನೆ ಮಾಡಲಿಕ್ಕೆ ತಳಿ ಅಭಿವೃದ್ಧಿ ಮಾಡಲಾಗುತ್ತಿದೆ. ಇವೆಲ್ಲಾ ಹೆಚ್ಚು ಪರಿಣಾಮಕಾರಿಯಾಗುವ ರೀತಿಯಲ್ಲಿ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಬೆಳಿಗ್ಗೆ ಮಾನ್ಯ ಸದಸ್ಯರು ಕಸಾಯಿಖಾನೆ ಬಗ್ಗೆ ಹೇಳುತ್ತಿದ್ದರು. ಬೆಂಗಳೂರು ನಗರದ ಕೋರ ಮಂಗಲದ ಹತ್ತಿರ ೧೯೭೪–೭೫ರಲ್ಲಿ ನಾನು ಮಂತ್ರಿಯಾಗಿದ್ದಾಗ ೧೩೭ ಎಕರೆ ಭೂಮಿಯನ್ನು ಮಾದರಿ ಕಸಾಯಿಖಾನೆ ಮಾಡುವುದಕ್ಕೆ ತೆಗೆದುಕೊಳ್ಳಲಾಗಿದೆ. ಕಳೆದ ಸಾರಿ ನಾನು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ೧೯೭೫ರಿಂದ ೧೯೪೪ರವರೆಗೆ ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡಲಿಲ್ಲ. ಕಳೆದ ಸಲ ೧೧ ಕೋಟಿ ರೂಪಾಯಿ ಆಗುತ್ತದೆಂದು ಹೇಳಿದ್ದರು. ೩೦ ಲಕ್ಷ ರೂಪಾಯಿ ಷೇರು ಬಂಡವಾಳ ಇರತಕ್ಕದ್ದು, ಮಾದರಿ ಕಸಾಯಿಖಾನೆ ಮಾಡಲಿಕ್ಕೆ ೧೧ ಕೋಟಿ ರೂಪಾಯಿಗಳು ವೆಚ್ಚವಾಗುವುದರಿಂದ ಇದು ಬಹಳ ಕಾಸ್ಟಬಲ್ ಪ್ರಾಜೆಕ್ಟ್‌ಯೆಂದು ಕೈಬಿಟ್ಟಿದ್ದರು. ೧೯೮೩ ರಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್‌ರವರು ೩ ಕೋಟಿ ೭೫ ಲಕ್ಷ ರೂಪಾಯಿಗಳ ಪ್ರಾಜೆಕ್ಟ್ ಒಂದನ್ನು ತಯಾರು ಮಾಡಿ ನಬಾರ್ಡ್‌ನ ಕ್ಲಿಯರೆನ್ಸ್‌ಗೆ ಕಳುಹಿಸಿದ್ದಾರೆ ಅದು ಬರುತ್ತದೆ. ೧೩೭ ಎಕರೆ ಜಮೀನು ಬಹಳ ಬೆಲೆ ಬಾಳತಕ್ಕ ಜಮೀನು. ನಾವು ಕಾರ್ಪೊರೇಷನ್ ಅವರಿಂದ ಪಡೆದುಕೊಂಡಿರುತ್ತೇವೆ. ನೀವು ಮಾದರಿ ಕಸಾಯಿಖಾನೆ ಮಾಡದೆ ಇರುವುದು ಬಹಳ ದುಃಖದ ವಿಚಾರ. ಏಕೆಂದರೆ ಬೆಂಗಳೂರುನಗರದಲ್ಲಿ ದನ, ಕುರಿ, ಮೇಕೆ ಮತ್ತು ಇತರೆ ಪ್ರಾಣಿಗಳನ್ನು ಕುಯ್ದು ಗ್ರಾಹಕರಿಗೆ ಒದಗಿಸುವಾಗ ಅದು ಒಳ್ಳೆಯ ಆರೋಗ್ಯಕರ ರೀತಿಯಲ್ಲಿರಬೇಕು. ಅದಕ್ಕೋಸ್ಕರ ಒಂದು ಮಾದರಿ ಕಸಾಯಿಖಾನೆಯನ್ನು ಮಾಡಿ ಸಾಧನ ಸಲಕರಣೆಗಳನ್ನು ಒದಗಿಸಿಕೊಡಬೇಕೆಂದು ಯೋಚನೆ ಮಾಡಿ ಕಾರ್ಯಕ್ರಮ ಹಾಕಿಕೊಳ್ಳಲಾಗಿತ್ತು. ಆ ಒಂದು ಕೆಲಸ ಮಂದಗತಿಯಿಂದ ನಡೆಯುತ್ತಿದೆ. ವರ್ಷೇ ವರ್ಷೇ ಪ್ರಾಜೆಕ್ಟ್‌ನ ಬೆಲೆ ಜಾಸ್ತಿಯಾಗುತ್ತದೆ. ಈ ವರ್ಷ ಮೂರು ಕೋಟಿ ಇದ್ದದ್ದು ಮುಂದಿನ ವರ್ಷ ೬ ಕೋಟಿಯಾಗುತ್ತದೆ. ಈಗಿರತಕ್ಕ ನಿಗಮದಲ್ಲಿ ಅಲ್ಲಿರತಕ್ಕ ನೌಕರರಿಗೆ ಸಂಬಳ ಕೊಟ್ಟುಕೊಂಡು ನಾಮಕಾವಸ್ತೆಗೆ ನಿಗಮ ಇದೆ. ನಿಗಮ ಕಂಟೋನ್‌ಮೆಂಟ್ ಮತ್ತು ಯಶವಂತಪುರದಲ್ಲಿರತಕ್ಕ ಕಸಾಯಿಖಾನೆಗಳಿಂದ ಶುಲ್ಕ ವಸೂಲಿ ಮಾಡಿದರೆ ಸಾಲದು. ಆದಷ್ಟು ಬೇಗ ನಬಾರ್ಡ್‌ನವರ ಜೊತೆ ಮಾತುಕತೆ ನಡೆಸಿ ಮಂಜೂರಾತಿ ಪಡೆದುಕೊಳ್ಳುವುದಕ್ಕೆ ತಕ್ಷಣ ಪ್ರಯತ್ನ ಮಾಡಬೇಕು. ಈಗಿರತಕ್ಕ ತೊಂದರೆಯನ್ನು ಪರಿಹಾರ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಒಟ್ಟಿನಲ್ಲಿ ಮಾನ್ಯ ಪಶುಪಾಲನಾ ಮಂತ್ರಿಗಳು ತೋಟಗಾರಿಕೆ ಇಲಾಖೆಯನ್ನೂ ಇಟ್ಟುಕೊಂಡಿದ್ದಾರೆ. ಈ ತೋಟಗಾರಿಕೆ ಇಲಾಖೆಯಲ್ಲಿ ನಾನು ಈಗಾಗಲೇ ಹೇಳಿದ ಹಾಗೆ ಇವತ್ತು ಬೆಂಗಳೂರು ಲಾಲ್‌ಬಾಗ್‌ನಲ್ಲಿ ಉದ್ಯಾನವನ ಪ್ರಾರಂಭಿಸಿದ್ದೇವೆ. ನಮ್ಮ ರಾಜ್ಯದಲ್ಲಿ ತೋಟಗಾರಿಕೆಗೆ ಒಳ್ಳೆಯ ಹವಾಮಾನ ಮತ್ತು ಯೋಗ್ಯ ಮಣ್ಣು ಇದೆ. ತೋಟಗಾರಿಕೆಗೆ ಸಂಬಂಧಪಟ್ಟಂತೆ ಹಣ್ಣಿನ ಬೆಳೆಗಳು ತರಕಾರಿ ಬೆಳೆಗಳು, ಪ್ಲಾಂಟೇಷನ್ ಇವುಗಳನ್ನು ಬೆಳೆಯುವುದಕ್ಕೆ ಹವಾಮಾನ ಅನುಕೂಲಕರವಾಗಿದೆ. ಇವತ್ತು ನಮ್ಮ ರಾಜ್ಯದಲ್ಲಿ ೯.೨ ಲಕ್ಷ ಹೆಕ್ಟೇರ್ ಭೂಮಿಯಲ್ಲಿ ತೋಟದ ಬೆಳೆಯು ಇದೆ ಎಂದು ತಾವು ಅಂಕಿ ಅಂಶಗಳನ್ನು ಕೊಟ್ಟಿದ್ದೀರಿ. ತರಕಾರಿ, ಹಣ್ಣು, ಹೂವು, ಪ್ಲಾಂಟೇಷನ್ ಇದರಲ್ಲಿ ಸೇರುತ್ತವೆ. ಇವತ್ತು ಈಗಾಗಲೇ ಹೇಳಿದ ಹಾಗೆ ನಮ್ಮಲ್ಲಿ ಬೆಳೆಯತಕ್ಕಂಥ ತೋಟದ ಬೆಳೆಗಳು ಅಂದರೆ ದ್ರಾಕ್ಷಿ, ಸೀಬೆ, ಮಾವು ಮತ್ತು ಕಿತ್ತಳೆ ಹೆಚ್ಚು ಬೆಳೆಯಲಾಗುತ್ತಿದೆ. ಇವಕ್ಕೆ ಬೇಕಾಗುವಂತಹ ಬಿತ್ತನೆ ಬೀಜಗಳು, ಸಸಿಗಳು ಒದಗಿಸಲು ತೀವ್ರಗತಿಯಲ್ಲಿ ವ್ಯವಸ್ಥೆ ಮಾಡಬೇಕು. ಇವತ್ತು ದ್ರಾಕ್ಷಿ ಬೆಳೆಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಮಾರ್ಕೆಟ್ಟಿನಲ್ಲಿ ದ್ರಾಕ್ಷಿಯನ್ನು ಕೇಳುವವರೇ ಇಲ್ಲ. ೧ ಕೆ.ಜಿ. ಅನಾಬ್‌ಶಾಯಿ ದ್ರಾಕ್ಷಿ ಸುಮಾರು ರೂ. ೧–೭೫ ಅಥವಾ ೨ ರೂಪಾಯಿಯೊಳಗಿದೆ. ಆದರೆ ಈ ದ್ರಾಕ್ಷಿಯನ್ನು ಬೆಳೆಯಲು ಬಿತ್ತನೆ, ಗೊಬ್ಬರ, ಔಷಧಿ ಮುಂತಾದವುಗಳಿಗೆ ಖರ್ಚು ಅಪಾರವಾಗುತ್ತಿದೆ. ಇದರಿಂದ ರೈತರಿಗೆ ಬಹಳ ಕಷ್ಟವಾಗುತ್ತಿದೆ. ಒಳ್ಳೆ ಬೆಳೆ ಬರುವಂಥಾ ಸಂದರ್ಭದಲ್ಲಿ ಮಳೆಯೇನಾದರು ಬಂದರೆ ದ್ರಾಕ್ಷಿಯೆಲ್ಲಾ ಕೊಳೆತು ಮಾರಾಟ ಮಾಡುವ ಬದಲಾಗಿ ತಿಪ್ಪೆಗೆಸೆಯುವ ಸಂದರ್ಭವೂ ಬರುತ್ತದೆ. ತಾಮ್‌ಸನ್ ಸೀಡ್‌ಲೆಸ್, ಅನಾಬ್‌ಶಾಯಿ ಮತ್ತು ಬೆಂಗಳೂರು ಬ್ಲೂ ದ್ರಾಕ್ಷಿ ಬೆಳೆಯನ್ನು ಕೋಲಾರ ಜಿಲ್ಲೆ, ತುಮಕೂರು ಜಿಲ್ಲೆ ಕಡೂರು, ಮತ್ತು ಚಿಕ್ಕಮಂಗಳೂರು

ಜಿಲ್ಲೆಗಳಲ್ಲಿ ಬೆಳೆಯುತ್ತಾರೆ. ಇಂತಹ ಕಡೆಗಳಲ್ಲಿ ಸರ್ಕಾರದವರು ದ್ರಾಕ್ಷಾರಸವನ್ನು ತೆಗೆಯುವ ಒಂದು ಫ್ಯಾಕ್ಟರಿಯನ್ನು ತೆರೆದರೆ ಬಹಳ ಅನುಕೂಲವಾಗುತ್ತದೆ. ಏಕೆಂದರೆ ಗ್ರಾಹಕರಿಗೆ ಸರಿಯಾದ ಬೆಲೆಯಲ್ಲಿ ಮಾರಾಟ ಮಾಡಲು ಬೆಳೆಗಾರರ ಮತ್ತು ಗ್ರಾಹಕರ ನಡುವೆ ಒಳ್ಳೆಯ ಸಂಪರ್ಕವಿಲ್ಲ. ಇದರಿಂದ ಮಧ್ಯವರ್ತಿಗಳಿಗೆ ಒಳ್ಳೆಯ ಲಾಭವಾಗುತ್ತಿದೆ. ಇಂತಹ ಮಧ್ಯವರ್ತಿಗಳ ಕಾಟವನ್ನು ತಪ್ಪಿಸಲು ಸರ್ಕಾರದವರು ಕೋ–ಆಪರೇಟಿವ್ ಸೊಸೈಟಿಗಳ ಮೂಲಕ ಮಳಿಗೆಗಳನ್ನು ತೆರೆದು ಗ್ರಾಹಕರಿಗೆ ಸುಲಭ ಬೆಲೆಯಲ್ಲಿ ಮತ್ತು ಬೆಳೆಗಾರರಿಗೆ ಅಧಿಕ ಬೆಲೆಯಲ್ಲಿ ಹಣ್ಣುಗಳನ್ನು ಮಾರಾಟ ಮಾಡಲು ಅನುವು ಮಾಡಿಕೊಡಬೇಕು. ಮೊನ್ನೆ ನಾನು ದ್ರಾಕ್ಷಿಯನ್ನು ಮಾರ್ಕೆಟ್ಟಿಗೆ ತೆಗೆದು ಕೊಂಡು ಹೋಗಿದ್ದೆ ಮಾರುಕಟ್ಟೆಯನ್ನು ಲಾಲ್‌ಬಾಗ್‌ನಿಂದ ಈಗ ಬೇರೆ ಯಾವುದೋ ಮೂಲೆಗೆ ವರ್ಗಾಯಿಸಿದ್ದಾರೆ. ಅಲ್ಲಿ ಸ್ಥಳವು ಬಹಳ ಇಕ್ಕಟ್ಟಾಗಿದ್ದು ವಾಹನಗಳನ್ನು ನಿಲ್ಲಿಸಲು ಜಾಗವಿಲ್ಲದೆ, ರೈತರು ಕಷ್ಟಪಟ್ಟು ಬೆಳೆದಂತಹ ಬೆಳೆಯಲ್ಲವೂ ನೆಲದ ಮೇಲೆ ಬಿದ್ದಿದೆ. ಅದು ಒಂದು ಕಿಷ್ಕಿಂದೆ ಯೆಂದು ಹೇಳಬಹುದು. ಆದುದರಿಂದ ತಾಲ್ಲೂಕು ಮಟ್ಟದಲ್ಲಿ ಕೋ–ಆಪರೇಟಿವ್ ಸೊಸೈಟಿಗಳನ್ನು ತೆರೆದು ರೈತರು ಬೆಳೆದ ಹಣ್ಣುಹಂಪಲು, ತರಕಾರಿ ಮುಂತಾದವುಗಳು ನ್ಯಾಯವಾಗಿ ಮಾರಾಟ ವಾಗಲು ವ್ಯವಸ್ಥೆ ಮಾಡಬೇಕು. ರೈತರು ಬೆಳೆದಂತಹ ಟೊಮಾಟೊ ಮತ್ತು ತರಕಾರಿಗಳನ್ನೆಲ್ಲಾ ಪ್ರತಿಯೊಂದು ತಾಲ್ಲೂಕಿನಲ್ಲೂ ಪ್ರೊಕ್ಯೂರ್‌ಮೆಂಟ್ ಸೆಂಟರ್ ಮಾಡಿ ಅದರ ಮೂಲಕ ಕೊಳ್ಳ ಬಹುದು. ಈ ರೀತಿ ಮಾಡಲು ಏನು ಕಷ್ಟವಾಗಲಾರದು. ಮಧ್ಯವರ್ತಿಗಳು ರೈತರನ್ನು ಬಹಳ ಶೋಷಣೆ ಮಾಡುತ್ತಿದ್ದಾರೆ. ಇದನ್ನು ತಪ್ಪಿಸಬೇಕು. ಒಂದು ಕೆ.ಜಿ. ತರಕಾರಿಯಿಂದ ರೈತನಿಗೆ ೧–೫೦ ರೂಪಾಯಿ ಸಿಕ್ಕಿದರೆ ಗ್ರಾಹಕನಿಗೆ ೩ ರೂಪಾಯಿಗಳು ಸಿಗುತ್ತದೆ. ಉಳಿದ ಹಣವೆಲ್ಲಾ ಮಧ್ಯವರ್ತಿಗಳಿಗೆ ಸಿಗುತ್ತದೆ. ಈ ಹೋಲ್‌ಸೇಲ್ ಏಜೆಂಟರುಗಳು ರೈತ ಮತ್ತು ಗ್ರಾಹಕರಿಗೆ ಬಹಳ ಅನ್ಯಾಯ ಮಾಡುತ್ತಿದ್ದಾರೆ ಸರ್ಕಾರದವರು ಗ್ರೇಪ್ ಗ್ರೋಯರ್ ಸೊಸೈಟಿಗಳನ್ನು ವಿಸ್ತರಿಸಿ ಅವರಿಗೆ ಜಾಗ ಕೊಟ್ಟು ಕೆ.ಎಸ್.ಆರ್.ಟಿ.ಸಿ. ರೈಲ್ವೆ ಸ್ಟೇಷನ್ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ಮಾರಾಟ ಮಳಿಗೆಗಳನ್ನು ಪ್ರಾರಂಭ ಮಾಡಿದರೆ ಅನುಕೂಲವಾಗುತ್ತದೆ. ಹಣ್ಣು ಮತ್ತು ತರಕಾರಿಗಳು ಪೆರಿಶಬಲ್ ಪದಾರ್ಥಗಳಾಗಿರುವುದರಿಂದ ಅವು ಕೆಟ್ಟು ಹೋಗುತ್ತವೆ. ಆದುದರಿಂದ ಅವುಗಳನ್ನು ಸುರಕ್ಷಿತವಾಗಿಡಲು ಸರ್ಕಾರವು ಶೈತ್ಯಾಗಾರಗಳನ್ನು ನಿರ್ಮಿಸಬೇಕು. ಬೇರೆ ಯಾವುದೋ ಹೆಸರಿಗೋಸ್ಕರ ಸ್ಪೆಷಲ್ ಪ್ರೋಗ್ರಾಂ ಸ್ಪೆಷಲ್ ಕಾಂಪೋನೆಂಟ್ ಸ್ಕೀಮ್, ನಾನ್ ಪ್ಲಾನ್ ಸ್ಕೀಮ್ ಮಾಡುವುದನ್ನು ಬಿಟ್ಟು ತರಕಾರಿ, ಹಣ್ಣು ಹಂಪಲು ಬೆಳೆಯುವುದಕ್ಕೆ ಎಲ್ಲಾ ಅನುಕೂಲಗಳನ್ನು ಕಲ್ಪಿಸಬೇಕು. ಇವತ್ತಿನ ದಿವಸ ನಮ್ಮ ರೈತರು ಬೆಳೆದಂತಹ ಟೊಮೊಟೊವನ್ನು ದೆಹಲಿಗೂ ರವಾನಿಸಬಹುದಾಗಿದೆ. ಡೆಲ್ಲಿಯಲ್ಲಿ ಟೊಮೆಟೋ ಒಂದು ಕೇಜಿಗೆ ೬ ರೂವರೆಗೂ ಮಾರಾಟವಾಗುವ ಸಂದರ್ಭವಿದೆ.

ಇನ್ನು ತೆಂಗಿನ ಬೆಳೆ ಬಗ್ಗೆ ಹೇಳಬೇಕಾದರೆ ಈಗ ತೆಂಗಿನ ಬೆಳೆಗೆ ಕಪ್ಪು ಕೀಟದಿಂದ ಬಹಳ ಹಾನಿ ಯಾಗುತ್ತಿದೆ. ಸಾವಿರಾರು ಎಕರೆಯಲ್ಲಿರತಕ್ಕ ತೋಟಗಳೆಲ್ಲಾ ಒಣಗಿ ಹೋಗುತ್ತಿದೆ. ಈ ಕಪ್ಪು ಕೀಟದ ಹಾವಳಿಯನ್ನು ತಪ್ಪಿಸಲು ತೋಟಗಾರಿಕೆ ಸಿಬ್ಬಂದಿಯವರು ಚುಚ್ಚು ಮದ್ದುಗಳನ್ನು ಕೊಡು ತ್ತಿದ್ದಾರೆ. ಇದು ಪರಿಣಾಮಕಾರಿಯಾಗಿದೆಯೆಂದು ಹೇಳುತ್ತಾರೆ. ಈ ಕೀಟಗಳಿಂದ ತೆಂಗಿನ ಮರಗಳ ಆಯಸ್ಸು ಕಡಿಮೆಯಾಗಿ ಉತ್ಪಾದನೆಯೂ ಕಡಿಮೆಯಾಗುತ್ತದೆ. ಈ ತೆಂಗಿನ ಕೀಟಗಳಿಗೆ ಪ್ಯಾರಸೈಟ್ಸ್ (ಪರೋಪ ಜೀವಿಗಳು) ಇವುಗಳನ್ನು ಕಪ್ಪು ಕೀಟಗಳನ್ನು ತಿನ್ನಲು ತೋಟಗಳಿಗೆ ಬಿಡುತ್ತಾರೆ. ಕೇವಲ ಒಂದು ತೋಟದೊಳಗೆ ಬಿಟ್ಟರೆ ಮಾತ್ರ ಸಾಲದು ಈ ಪರೋಪ ಜೀವಿಗಳನ್ನು ಸುತ್ತಮುತ್ತಲಿರುವ ಎಲ್ಲಾ ತೆಂಗಿನ ತೋಟಗಳಿಗೂ ಬಿಡಬೇಕಾಗುತ್ತದೆ. ಇಲ್ಲದೆ ಇದ್ದರೆ ಏನೂ ಪ್ರಯೋಜನವಾಗು ವುದಿಲ್ಲ. ಇದರ ಬಗ್ಗೆ ಸರ್ಕಾರವು ಗಮನ ಹರಿಸಿ ಸೂಕ್ತ ಏರ್ಪಾಟನ್ನು ಮಾಡಬೇಕಾಗುತ್ತದೆ. ಇನ್ನು ಒಳ್ಳೆಯ ತೆಂಗಿನ ಸಸಿಗಳನ್ನು ಬೆಳೆಸುವುದಕ್ಕೆ ಸರ್ಕಾರ ವ್ಯವಸ್ಥೆ ಮಾಡಬೇಕು. ರೈತರುಗಳಿಗೆ ಸರ್ಕಾರವು ಸಬ್ಸಿಡಿಗಳನ್ನು ಕೊಟ್ಟು ತೆಂಗಿನ ಬೆಳೆ ಅಭಿವೃದ್ಧಿ ಮಟ್ಟಕ್ಕೆ ತರಲು ಪ್ರಯತ್ನಪಡಬೇಕು. ಈ ಬಗ್ಗೆ ಕೆಲ ಅಧಿಕಾರಿಗಳು ಬಹಳ ಮಾಲ್ ಪ್ರಾಕ್ಟೀಸ್ ಮಾಡುತ್ತಿದ್ದಾರೆ ಎಂದು ಅನಾಮಧೇಯ ಪಿಟೀಶನ್‌ಗಳು ಕೂಡ ನನಗೆ ಬಂದಿವೆ. ತೆಂಗಿನ ಮರಗಳು ಕಲ್ಪತರುಗಳು ಇದ್ದಂತೆ ಅವುಗಳ ಅಭಿವೃದ್ಧಿಗೆ ಬೇಕಾದಂತ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ತಿಪಟೂರು ಮತ್ತು ಮಂಡ್ಯ ಪ್ರದೇಶಗಳಲ್ಲಿ ತೆಂಗಿನ ಬೆಳೆಗಳು ಜಾಸ್ತಿ ಇವೆ. ಕೆ.ಆರ್.ಎಸ್. ಮತ್ತು ತುಮಕೂರು ಜಿಲ್ಲೆಯಲ್ಲೂ ಸಂಕೀರ್ಣ ತೆಂಗಿನ ಮರಗಳನ್ನು ಬೆಳೆಯುತ್ತಾರೆ. ನಾನು ಸಹ ೭ ಎಕರೆಯಲ್ಲಿ ತೆಂಗಿನ ಮರಗಳನ್ನು ಹಾಕಿಸಿದ್ದೇನೆ. ಇವುಗಳು ಒಂದು ತರಹ ಎರಾಟಿಕ್ ಯೀಲ್ಡಿಂಗ್ ಕೊಡುತ್ತಿವೆ. ಅಂದರೆ ಒಂದು ವರ್ಷ ಒಂದು ಮರದಿಂದ ೨೦೦ ತೆಂಗಿನ ಕಾಯಿಗಳನ್ನು ಮತ್ತೊಂದು ವರ್ಷ ಕೇವಲ ೧೦ ಕಾಯಿ

ಗಳನ್ನು ಕೊಡುವುದು, ಹೀಗೆ ಆಗುವುದನ್ನು ಪರಿಶೋಧಿಸಿ ತೆಂಗಿನ ಬೆಳೆಯು ಸರಿಯಾಗಿ ಬರುವಂತೆ ಮಾಡಲು ಏರ್ಪಾಡು ಮಾಡಬೇಕು.

ಇನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಇಂಡೋ-ಬಲ್ಗೇರಿಯನ್ ಪ್ರಾಜೆಕ್ಟ್‌ನಲ್ಲಿ, ಗೋಡಂಬಿ ಪೂಸಾ ರೂಬಿ ಹಣ್ಣಿನಿಂದ ಸ್ಕ್ವಾಷ್ ಮಾಡಿ ಕಳುಹಿಸುವ ಯೋಜನೆಯ ಬಗ್ಗೆ ತಾವು ಏನು ಮಾಡಿದ್ದೀರಿ ಎಂದು ನನಗೆ ಅಂಕಿ ಅಂಶಗಳನ್ನು ಕೊಡಬೇಕು. ದಕ್ಷಿಣ ಕನ್ನಡ ಮತ್ತು ಅನೇಕ ಜಿಲ್ಲೆಗಳಲ್ಲಿ ಈಗ ಪ್ರಾರಂಭ ಮಾಡಿದ್ದಾರೆ ನಮ್ಮ ಕಾಸರಗೋಡಿನಲ್ಲಿ ಮಲ್ಟಿಪಲ್ ಕ್ರಾಪ್ ರೀತಿಯಲ್ಲಿ ಬೆಳೆಗಳನ್ನು ತೆಗೆಯಲು ಯೋಜನೆ ಹಾಕಿಕೊಂಡಿದ್ದಾರೆ, ತೆಂಗಿನ ಗಿಡ, ಕೋಕೋ, ಅನಾನಸ್ ಬೆಳೆಯನ್ನು ಹಾಕಬಹುದು. ಈ ರೀತಿ ೩ ಬೆಳೆಗಳನ್ನು ಏಕ ಕಾಲದಲ್ಲಿ ತೆಗೆಯಬಹುದು. ಅದೇ ರೀತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಬೆಳೆಯನ್ನು ಬೆಳೆಯಬಹುದು. ಈ ರೀತಿಯ ಪ್ರೊಸೆಸಿಂಗ್ ಸೆಂಟರ್ ಒಂದನ್ನು ಲಾಲ್‌ಬಾಗ್‌ನಲ್ಲಿ ಏಕೆ ಸ್ಟಾರ್ಟ್ ಮಾಡಬಾರದು ಎಂದು ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ. ಇನ್ನು ನಿಂಬೆ, ಕಿತ್ತಳೆ, ಮುಂತಾದ ಬೆಳೆಗಳಿಗೆ ೧೯೮೪-೮೫ರಲ್ಲಿ ಒಂದು ಯೋಜನೆಯನ್ನು ಹಾಕಿಕೊಂಡಿದ್ದೀರಿ. ಇದೇ ರೀತಿ ವಿಶ್ವ ಬ್ಯಾಂಕಿನಿಂದ ನೆರವನ್ನು ಪಡೆದು ಎಲ್ಲಾ ತೋಟಗಾರಿಕೆ ಬೆಳೆಗಳಿಗೂ ನೆರವು ಒದಗಿಸಲು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

೧೨-೩೦ ಪಿ.ಎಂ.

ಇನ್ನು ಸಾರಿಗೆ ಇಲಾಖೆಯ ಬೇಡಿಕೆಯ ಮೇಲೆ ಹೇಳುವುದಾದರೆ, ಇವತ್ತಿನ ದಿವಸ ಈ ಸಭೆಯಲ್ಲಿ ನಮ್ಮ ಸಾರಿಗೆ ಮಂತ್ರಿಗಳ ಮೋಟಾರ್ ವಾಹನ ಇಲಾಖೆ ಮತ್ತು ರಸ್ತೆ ಸಾರಿಗೆ ಸಂಸ್ಥೆ ಇದರ ಬಗ್ಗೆ ಬಹಳಷ್ಟು ದೂರುಗಳು ಪ್ರಸ್ತಾಪ ಆಗುತ್ತಿವೆ. ಈ ಬಸ್ಸುಗಳಲ್ಲಿ ಸಂಚಾರ ಮಾಡುವ ಎಲ್ಲರಿಗೂ ಅನುಭವ ಇದೆ. ಶಾಸಕರಿಗೂ ಕೂಡ ಅನುಭವ ಆಗಿದೆ. ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ನಡೆಸತಕ್ಕ ವೈಖರಿ ಹೇಗಿದೆಯೆಂದರೆ ಇವುಗಳು ಇಷ್ಟಬಂದ ಹಾಗೆ ನಿಂತು ಹೋಗುತ್ತವೆ ಮತ್ತು ಇಷ್ಟಬಂದ ಹಾಗೆ ಸ್ಟಾರ್ಟ್ ಆಗುತ್ತವೆ ಮತ್ತು ಇಷ್ಟಬಂದ ಹಾಗೆ ಪಾದಚಾರಿಗಳ ಮೇಲೆ ನುಗ್ಗಿಬಿಡುತ್ತವೆ. ಇದರಲ್ಲಿ ಯಾವ ಪ್ರಗತಿಯೂ ಆಗಿಲ್ಲ. ಇವತ್ತು ನಮ್ಮ ರಾಜ್ಯದಲ್ಲಿ ಮೋಟಾರ್ ವಾಹನ ಇಲಾಖೆಗೆ ಸಂಬಂಧಪಟ್ಟಂತೆ ಹೇಳುವುದಾದರೆ ೮೦ ಕೋಟಿ ರೂಪಾಯಿ ಆದಾಯ ಮೋಟಾರ್ ವೆಹಿಕಲ್ ಟ್ಯಾಕ್ಸ್‌ನಿಂದ ಬರುತ್ತದೆ. ಇದರಲ್ಲಿ ಎಷ್ಟು ಖರ್ಚು ಮಾಡುತ್ತೀರಿ? ಎಲ್ಲವೂ ಜನರಲ್ ಫಂಡ್‌ಗೆ ಹಾಕಿಬಿಡುತ್ತೀರಿ. ರಸ್ತೆಗಳು ಸರಿ ಇರುವುದಿಲ್ಲ, ರಸ್ತೆಗಳು ಸರಿಯಿಲ್ಲದೆ, ಅದರ ಮೇಲೆ ಬಸ್ಸುಗಳು ಹೋದರೆ ಅವುಗಳು ಸೀದಾ ಚರಂಡಿಗೇ ಹೋಗಿಬಿಡುತ್ತವೆ. ೮೦ ಕೋಟಿ ರೂಪಾಯಿಗಳ ವ್ಯವಹಾರ ಇದೆ, ೫,೫೬,೭೮೬ ವಾಹನಗಳು ಇವೆ. ಬರುವ ಇಷ್ಟು ಹಣದಲ್ಲಿ ರಸ್ತೆಗಳ ಮೇಲೆ ಎಷ್ಟು ಖರ್ಚು ಮಾಡುತ್ತೀರಿ? ಪಾಶ್ಚಿಮಾತ್ಯ ದೇಶಗಳಲ್ಲಿ ರಸ್ತೆ ತೆರಿಗೆಯಿಂದ ಏನು ಆದಾಯ ಬರುತ್ತದೆಯೋ, ಅದನ್ನು ರಸ್ತೆಗಾಗಿಯೇ ಖರ್ಚು ಮಾಡುತ್ತಾರೆ. ಈ ರೀತಿಯಾಗಿ ಇಲ್ಲಿ ಮಾಡುವುದಕ್ಕೆ ನಿಮಗಿರುವ ತೊಂದರೆ ಏನು? ಇಲ್ಲಿ ಬರುವ ಆದಾಯ ಬೇರೆ ಕಡೆಗೆ ಹೋಗುವುದರಿಂದ ರಸ್ತೆಗಳು ಸುಸ್ಥಿತಿಯಲ್ಲಿ ಇಲ್ಲದೆ, ಟೈರುಗಳು ಒಡೆದುಹೋಗುತ್ತವೆ. ಆದ್ದರಿಂದ ಈ ಹಣವನ್ನು ಪ್ರತ್ಯೇಕವಾಗಿ ಇಟ್ಟುಕೊಂಡು ರಸ್ತೆ ಸಾರಿಗೆ ಸೌಕರ್ಯಕ್ಕೆ ಬೇಕಾದಂತಹ ಅನುಕೂಲಗಳನ್ನು ಮತ್ತು ಒಳ್ಳೆಯ ರಸ್ತೆಗಳನ್ನು ಮಾಡಲಿಕ್ಕೆ ಉಪಯೋಗ ಮಾಡಬೇಕೆಂದು ನಾನು ಹೇಳುತ್ತೇನೆ. ಅನೇಕ ಹಳ್ಳಿ ಪ್ರದೇಶಗಳಲ್ಲಿ ಲಾರಿಗಳಲ್ಲಿ ಜೆಲ್ಲಿ ಮರಳು ಸಾಗಾಣಿಕೆ ಮಾಡುತ್ತಿದ್ದಾರೆ. ಇದರಲ್ಲಿ ಸ್ಥಳೀಯವಾಗಿ ಪೋಲೀಸ್ ಅಧಿಕಾರಿಗಳೂ ಶಾಮೀಲಾಗಿ ಸೇರಿಕೊಂಡು ವಾಹನಗಳನ್ನು ಓಡಿಸುತ್ತಿದ್ದಾರೆ. ಇವರು ಮೋಟಾರ್ ವೆಹಿಕಲ್ ಟ್ಯಾಕ್ಸ್ ಕೊಡುವುದಿಲ್ಲ. ಫಿಟ್‌ನೆಸ್ ಸರ್ಟಿಫಿಕೇಟನ್ನು ಕೂಡ ಕೊಡದೆಯೇ ಇದ್ದಾರೆ. ಇದರ ಬಗ್ಗೆ ಡಿವಿಜನಲ್ ಟ್ರಾಫಿಕ್ ಆಫೀಸ್‌ನಲ್ಲಿರತಕ್ಕ ಮೋಟಾರ್ ವೆಹಿಕಲ್ಸ್ ಇನ್ಸ್‌ಪೆಕ್ಟರ್‌ಗಳು ಹೋಗಿ ನೋಡಬೇಕು. ಹಳ್ಳಿಗಳಲ್ಲಿ ಮೊದಲೇ ರಸ್ತೆಗಳು ಚೆನ್ನಾಗಿಲ್ಲ. ಹದಿನೈದು ಟನ್ ಭಾರದ ವಾಹನಗಳು ರಸ್ತೆಯಲ್ಲಿ ಬಂದುಬಿಟ್ಟರೆ ಅವುಗಳು ಕುಸಿಯುತ್ತವೆ. ಆದ್ದರಿಂದ ರೈತರು ಮತ್ತು ಬೇರೆಯವರು ಇಂತಹ ರಸ್ತೆಗಳನ್ನು ತಮ್ಮ ಅನುಕೂಲಕ್ಕಾಗಿ ಉಪಯೋಗ ಮಾಡುವುದಕ್ಕೆ ಆಗುವುದಿಲ್ಲ. ರಸ್ತೆಗಳು ಚೆನ್ನಾಗಿಲ್ಲ ಮತ್ತು ಶ್ರೀ ದೇವೇಗೌಡರಿಗೆ ಹಣ ಇಲ್ಲ. ಅವರಾದರೂ ಏನು ಮಾಡುತ್ತಾರೆ? ಫಿಟ್‌ನೆಸ್ ಸರ್ಟಿಫಿಕೇಟ್ ಬಗ್ಗೆ ಹೇಳಬೇಕೆಂದರೆ ರೈತರು ಗೊಬ್ಬರ ತೆಗೆದುಕೊಂಡು ಬಂದರೆ, ಫಿಟ್‌ನೆಸ್ ಸರ್ಟಿಫಿಕೇಟ್ ಅವರು ತೋರಿಸಬೇಕು. ಇದನ್ನು ಎರಡು-ಮೂರು ವರ್ಷಕ್ಕೊಮ್ಮೆ ರೈತರು ಮಾಡಿಸಿದರೆ ಸಾಲದೆ? ನಿಮ್ಮ ಅಧಿಕಾರಿಗಳು ಈ ಮೋಟಾರ್ ವೆಹಿಕಲ್ಸ್ ರೂಲ್ಸ್‌ನ್ನು ಅಮೆಂಡ್‌ಮೆಂಟ್ ಮಾಡಬೇಕು. ರೈತರು ಪ್ರತಿವರ್ಷವೂ ಟ್ರ್ಯಾಕ್ಟರ್‌ಗೆ ಬಣ್ಣ ಬಳಿಯುವುದಕ್ಕೆ ಆಗುವುದಿಲ್ಲ. ಇದನ್ನು ಮಾಡದೇ ಇದ್ದರೆ

ಮೋಟಾರ್ ವೆಹಿಕಲ್ಸ್ ಇನ್ಸ್‌ಪೆಕ್ಟರ್ ಸರ್ಟಿಫಿಕೇಟ್ ಕೊಡಲು ನಿರಾಕರಿಸುತ್ತಾನೆ. ಇದಕ್ಕೆ ಅವನು ಹಣ ಕೊಡಬೇಕಾಗುತ್ತದೆ. ಟ್ರಾಕ್ಟರ್‌ಗೆ ಬಣ್ಣ ಇಲ್ಲದಿದ್ದರೆ ಏನಾಗುತ್ತದೆ? ರಸ್ತೆ ಮೇಲೆ ಅದು ಸರಿಯಾಗಿ ಓಡಾಡುವ ಹಾಗೆ ಇರಬೇಕು. ಅಷ್ಟು ಇದ್ದರೆ ಸಾಕು ಚಕ್ರ. ಸ್ಟೇರಿಂಗ್ ಇರಬೇಕು. ನಿಮ್ಮ ಕಾರು ಅಥವಾ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳಿಗೆ ಬಣ್ಣವೇ ಇಲ್ಲ. ತುಕ್ಕು ಹಿಡಿದು ತೂತು ಬಿದ್ದಿರುತ್ತದೆ. ಸರ್ಕಾರಿ ವಾಹನಗಳಾದರೆ ಯಾವ ತೊಂದರೆಯೂ ಇಲ್ಲ, ಕಣ್ಣು ಮುಚ್ಚಿಕೊಂಡು ಫಿಟ್‌ನೆಸ್ ಸರ್ಟಿಫಿಕೇಟ್ ಕೊಟ್ಟುಬಿಡುತ್ತಾರೆ. ಅದಕ್ಕೆ ಬ್ರೇಕ್ ಸರಿಯಾಗಿ ಇರುವುದಿಲ್ಲ, ಎಕ್ಸಲ್ ಮುರಿದುಹೋಗಿರುತ್ತದೆ. ಇವುಗಳು ಹೀಗೆ ಇರಬೇಕಾದರೆ ರೈತರ ವಾಹನಗಳನ್ನು ಮಾತ್ರ ಕಂಡಮ್ ಮಾಡುತ್ತಾರೆ. ಪ್ರತಿವರ್ಷವೂ ಅವರು ಸಾರಿಗೆ ಕಛೇರಿಯ ಮುಂದೆ ಗಂಟೆಗಟ್ಟಲೆ ಕ್ಯೂನಲ್ಲಿ ನಿಂತುಕೊಳ್ಳಬೇಕಾ? ಆದ್ದರಿಂದ ಈ ರೂಲ್ಸ್‌ನ್ನು ಅಮೆಂಡ್‌ಮೆಂಟ್ ಮಾಡಬೇಕೆಂದು ನಾನು ಹೇಳುತ್ತೇನೆ. ಇನ್ನೊಂದು ಮುಖ್ಯವಾದ ವಿಷಯವೆಂದರೆ ಸಾರಿಗೆ ಕಛೇರಿಯಲ್ಲಿ ಮಧ್ಯವರ್ತಿಗಳು ಇರುತ್ತಾರೆ. ಹಳ್ಳಿಯಿಂದ ಬಂದವರು ಇಲ್ಲಿ ಡ್ರೈವಿಂಗ್ ಲೈಸೆನ್ಸ್, ರಿಜಿಸ್ಟ್ರೇಷನ್‌ಗೆ ಪ್ರಯತ್ನಿಸಿದಾಗ ಅವರಿಗೆ ತುಂಬಾ ಕಷ್ಟ ಕೊಡುತ್ತಾರೆ. ಹಳ್ಳಿಯಿಂದ ಬಂದವರು, ತಿಳಿಯದೇ ಇರತಕ್ಕಂಥವರು ಯಾವ ಫಾರಂನಲ್ಲಿ ಭರ್ತಿ ಮಾಡಿಕೊಡಬೇಕೆಂದು ಅವರಿಗೆ ಗೊತ್ತಿರುವುದಿಲ್ಲ. ಈ ಮಧ್ಯವರ್ತಿಗಳು ಇಂತಹ ಸಂದರ್ಭಗಳಲ್ಲಿ ಅವರಿಗೆ ಮೋಸ ಮಾಡುತ್ತಾರೆ. ಟ್ಯಾಕ್ಸ್ ಕಲೆಕ್ಷನ್‌ಗೇ ಎಂದು ಪ್ರತ್ಯೇಕ ವ್ಯವಸ್ಥೆಯಾಗಬೇಕು. ಈ ಮಧ್ಯವರ್ತಿಗಳಿಂದ ತೊಂದರೆಯಾಗುವುದನ್ನು ತಪ್ಪಿಸಲು ಸೂಕ್ತ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ಇವತ್ತು ಇಂಟರ್‌ಸ್ಟೇಟ್ ಪರ್ಮಿಟ್ ಕೂಡ ತಕ್ಕದ್ದು ಇದರ ಬಗ್ಗೆ ಹೇಳಬೇಕೆಂದರೆ, ಒಂದು ನಿದರ್ಶನ ಈ ಸಂದರ್ಭದಲ್ಲಿ ನಾನು ಕೊಡಬಹುದು ಎಂದು ತಿಳಿದುಕೊಂಡಿದ್ದೇನೆ. ಬೆಂಗಳೂರು ಹತ್ತಿರ ತಮಿಳುನಾಡಿಗೆ ಸೇರಿದ ಹೊಸೂರು ಇದೆ. ಅತ್ತಿಬೆಲೆ ಹತ್ತಿರ ಅನಧಿಕೃತವಾಗಿ ಖಾಸಗಿ ಬಸ್ಸುಗಳು ನಿಂತುಕೊಂಡಿರುತ್ತವೆ. ಸರ್ಜಾಪುರದಲ್ಲಿಯೂ ಅಷ್ಟೆ, ಖಾಸಗಿ ವ್ಯಾನುಗಳು ಸಿಗುತ್ತವೆ. ಹೊಸೂರು ತಮಿಳುನಾಡಿಗೆ ಬಹಳ ಹತ್ತಿರ ಇರತಕ್ಕದ್ದು. ಪ್ರತಿದಿವಸ ಬೆಂಗಳೂರಿನಿಂದ ಬಹಳಷ್ಟು ಪ್ರಯಾಣಿಕರು ಅಲ್ಲಿಗೆ ಹೋಗುತ್ತಾರೆ. ಅಲ್ಲಿ ಕೈಗಾರಿಕೆಗಳು ಬಹಳಷ್ಟು ಆಗಿವೆ. ಇಂಟರ್‌ಸ್ಟೇಟ್ ಬಸ್ಸುಗಳು ಜಾಸ್ತಿಯಾಗಿವೆ. ಕಲಾಸಿಪಾಳ್ಯದಲ್ಲಿ ಮೆಜೆಸ್ಟಿಕ್‌ನಲ್ಲಿ ನಿಂತುಕೊಂಡು ಎಲ್ಲಿ ಬೇಕಾದರೂ ಅವುಗಳು ಹೋಗುತ್ತವೆ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಇದನ್ನು ಹೆಚ್ಚು ಮಾಡುವುದಕ್ಕೆ ಇಂಟರ್‌ಸ್ಟೇಟ್ ಅಗ್ರಿಮೆಂಟ್ ಆಗಬೇಕು.

ಶ್ರೀ ಎನ್. ಚಿಕ್ಕೇಗೌಡ.—ಅವರು ಒಪ್ಪಿಕೊಳ್ಳುತ್ತಾರೆ. ತಮಿಳುನಾಡಿನವರು ತಯಾರಾಗಿದ್ದಾರೆ. ನಾನು ಮೋಟಾರ್ ವೆಹಿಕಲ್ ಮಿನಿಸ್ಟರ್ ಆಗದೇ ಇದ್ದರೂ ಕೂಡ ಇಂಟರ್‌ಸ್ಟೇಟ್ ಅಗ್ರಿಮೆಂಟ್ ಬಗ್ಗೆ ನನಗೆ ಗೊತ್ತಿದೆ. ನಿಮಗೆ ಪ್ರಾಕ್ಟಿಕಲ್ ಅನುಭವ ಇಲ್ಲ ಅಷ್ಟೆ. ಆದ್ದರಿಂದ ಇವತ್ತು ಇಂಟರ್‌ಸ್ಟೇಟ್ ಅಗ್ರಿಮೆಂಟ್ ತೆಗೆದುಕೊಳ್ಳುವುದರಲ್ಲಿ ಕಷ್ಟ ಇಲ್ಲ. ಆಂಧ್ರ, ತಮಿಳುನಾಡು, ಮಹಾರಾಷ್ಟ್ರ ಎಲ್ಲಾ ಸರ್ಕಾರಗಳೂ ಇದರ ಬಗ್ಗೆ ಹೆಚ್ಚು ಕಾತರರಾಗಿದ್ದಾರೆ. ಖಾಸಗಿಯವರಿಂದ ಈ ಹಾವಳಿಯನ್ನು ತಪ್ಪಿಸುವುದಕ್ಕೆ ರಾಷ್ಟ್ರೀಕರಣದ ಯೋಚನೆ ಮಾಡಿ. ರಾಷ್ಟ್ರೀಕರಣ ಮಾಡುತ್ತೇವೆ ಎಂದು ಹೇಳಿದರೆ ಪೂರ್ತಿಯಾಗಿ ರಾಷ್ಟ್ರೀಕರಣ ಮಾಡಿ. ಇವತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ. ೧೯೬೧ರಲ್ಲಿ ಇದು ಪ್ರತ್ಯೇಕವಾಗಿ ಅಸ್ತಿತ್ವಕ್ಕೆ ಬಂದು ೧೩೮ ಕೋಟಿ ರೂಪಾಯಿಗಳನ್ನು ಅದರಬಂಡವಾಳ ಮಾಡಿಕೊಂಡು ಹದಿನಾಲ್ಕು ಕಾಲು ಕೋಟಿ ರೂಪಾಯಿ ನಷ್ಟವಾಗಿದೆ ಇದರಲ್ಲಿ ಇರತಕ್ಕದ್ದು ಸಿಬ್ಬಂದಿ ೩೭,೧೨೨ ಜನರು. ಇರತಕ್ಕಂಥ ವಾಹನಗಳು ೫೮೪೬ ಸಿಟಿಸರ್ವಿಸ್ ೪,೮೬೬ ಇವುಗಳು ಒಂದು ದಿವಸಕ್ಕೆ ಓಡತಕ್ಕ ಮೈಲುಗಳು ೧೪.೨ ಲಕ್ಷ ಕಿಲೋಮೀಟರ್‌ಗಳು ಪ್ರತಿನಿತ್ಯ ಸುಮಾರು ೩೦ ಲಕ್ಷ ಜನರು ಕರ್ನಾಟಕ ರಾಜ್ಯದಲ್ಲಿ ಬಸ್ಸುಗಳಲ್ಲಿ ಸಂಚಾರ ಮಾಡುತ್ತಿದ್ದಾರೆ. ಕೆ.ಎಸ್.ಆರ್.ಟಿ.ಸಿ. ಮತ್ತು ಬಿ.ಟಿ.ಎಸ್. ಸೇರಿ ಆಗಿರತಕ್ಕಂಥ ನಷ್ಟಕ್ಕೆ ಕಾರಣ ಕೊಟ್ಟಿರತಕ್ಕದ್ದು ನೋಡಿದರೆ, ಡೀಸಲ್ ಬೆಲೆ ಜಾಸ್ತಿಯಾಯಿತು, ಬಿಡಿಭಾಗಗಳ ಬೆಲೆ ಜಾಸ್ತಿಯಾಯಿತು, ರೆಕರಿಂಗ್ ಎಕ್ಸ್‌ಪೆಂಡಿಚೆರ್ ಜಾಸ್ತಿಯಾಯಿತು ಡಿ.ಎ. ಬೋನಸ್ ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದಾರೆ. ಅದನ್ನುಕೊಡಬೇಡಿ ಎಂದು ನಾನು ಹೇಳುವುದಿಲ್ಲ. ಆದರೆ ಈ ಸಂಸ್ಥೆಯಲ್ಲಿ ಕೆಲವು ಲೋಪದೋಷಗಳುಇವೆ. ಸೋರಿ ಹೋಗತಕ್ಕಂಥ ಹಣದ ಪ್ರಮಾಣ ಜಾಸ್ತಿಯಾಗಿದೆ. ಇದನ್ನು ಕಟ್ಟುನಿಟ್ಟಾಗಿ ಹತೋಟಿಯಲ್ಲಿಟ್ಟು ಕೊಳ್ಳಬೇಕು. ಡೀಸೆಲ್, ಟೈರು, ಟ್ಯೂಬು ಯಾವುದೇ ವಿಷಯದಲ್ಲಿ ಹಣ ಲೂಟಿ ಮಾಡುವುದು ನಡೆದಿದೆ. ಇದನ್ನು ತಡೆಗಟ್ಟಲಿಕ್ಕೆ ಒಂದು ಕಟ್ಟುನಿಟ್ಟಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಈ ಸಮಸ್ಯೆ ಎಲ್ಲಾ ಪ್ರದೇಶಗಳಲ್ಲೂ ಇದೆ. ನನ್ನ ತಾಲ್ಲೂಕಿನಲ್ಲಿಯೂ ಸಹ ಇದನ್ನು ನಾನು ಕೇಳಿದ್ದೇನೆ. ಈ ಬಗ್ಗೆ ಬೆಂಗಳೂರು ಡಿವಿಜನ್‌ನಲ್ಲಿ ಅಧಿಕಾರಿಗಳೂ ಸಹ ಮೀಟಿಂಗ್ ಮಾಡಿದ್ದನ್ನು ನಾನು ಕೇಳಿದ್ದೇನೆ. ನಾನು ಅಧಿಕಾರಿಗಳ ಗಮನಕ್ಕೂ ತಂದರೂ ಕೂಡಾ ಅಧಿಕಾರಿಗಳು ಸರಿಯಾದ ಕ್ರಮವನ್ನು ಇದುವರೆಗೂ ತೆಗೆದುಕೊಂಡಿರುವುದಿಲ್ಲ. ಕೆ.ಎಸ್.ಆರ್.ಟಿ.ಸಿ.ಯಲ್ಲಿ ಏನು ಮಾಡುತ್ತಾರೆ ಅಂದರೆ ಕಂಡಕ್ಟರ್ಸ್ ಮತ್ತು ಡ್ರೈವರ್ಸ್ ಬರತಕ್ಕಂಥ ಸಂಪಾದನೆಯಲ್ಲಿ ಇವರಿಬ್ಬರೂ ಫಿಫ್ಟಿ–ಫಿಫ್ಟಿ ಹಂಚಿಕೊಳ್ಳುತ್ತಾರೆ. ವ್ಯವಹಾರಗಳು ಕೆ.ಎಸ್.ಆರ್.ಟಿ.ಸಿ.ಯಲ್ಲಿ ನಡೆಯುತ್ತಿದೆ ಎಂದು ನಾನು ಕೇಳಿದ್ದೇನೆ. ಡೂಪ್ಲಿಕೇಟ್ ಟಿಕೇಟುಗಳನ್ನು ಮಾಡಿ ಅನೇಕರು ದುಡ್ಡು ಮಾಡುತ್ತಿದ್ದಾರೆಂದು ಸಹ ನಾನು ಕೇಳಿದ್ದೇನೆ. ಇದನ್ನು ನೀವು ಸೀಸ್ ಮಾಡಿ ವಿಚಾರಣೆ ಮಾಡುತ್ತಿದ್ದಾರೆಂದು ನಾನು ಕೇಳಿದ್ದೇನೆ. ಗ್ರಾಮಾಂತರ ಪ್ರದೇಶಗಳಿಗೆ ನೀವು ಹೆಚ್ಚು ಬಸ್ಸುಗಳನ್ನು ಕೊಡಬೇಕು. ತಾವು ಪುಕ್ಕಟೆ ಏನೂ ಕೊಡುವುದಿಲ್ಲ ಸ್ವಾಮಿ, ಪ್ರಯಾಣಿಕರಿಂದ ತಾವು ಹಣವನ್ನು ತೆಗೆದುಕೊಂಡು ಟಿಕೆಟ್ ಕೊಡುತ್ತೀರಿ. ನ್ಯಾಷನಲ್ ರೂಟ್ ಅಂತ ಹೇಳಿಕೊಂಡು ಖಾಸಗಿಯವರು ಒಂದು ಬಸ್ಸಿಗೆ ಪರ್ಮಿಟ್ ತೆಗೆದುಕೊಂಡು ನಾಲ್ಕು ಬಸ್ಸುಗಳನ್ನು ಓಡಿಸುತ್ತಾರೆ. ನಿಮಗೆ ನಡೆಸುವುದಕ್ಕೆ ಆಗುವುದಿಲ್ಲ ಅಂದರೆ ಖಾಸಗಿಯವರಿಗಾದರೂ ಕೊಡಿ. ಅವರು ನಡೆಸುತ್ತಾರೆ. ನಿಮ್ಮ ಸಂಸ್ಥೆಗೆ ಎಷ್ಟು ಹಣ ಬಂದರೂ ಸಹ ಯಾವಾಗಲೂ ನಷ್ಟವೆಂದೇ ಹೇಳುತ್ತೀರಿ. ಬೇರೆ ಯಾವ ಕಡೆಯಲ್ಲೂ ಈ ರೀತಿಯ ನಷ್ಟವಾಗುತ್ತಿಲ್ಲ. ತಮಿಳುನಾಡು ರಾಜ್ಯದಲ್ಲಿ ಚೋಳನ್ ಟ್ರಾನ್ಸ್‌ಪೋರ್ಟ್ ಎಂದಿದೆ, ಆ ಸಂಸ್ಥೆಯು ಬಹಳ ಚೆನ್ನಾಗಿ ಮ್ಯಾನೇಜ್ ಮಾಡುತ್ತಿದೆ. ತಾವು ಕೆ.ಎಸ್.ಆರ್.ಟಿ.ಸಿ.ಯನ್ನು ವಿಕೇಂದ್ರೀಕರಣ ಮಾಡುತ್ತೇವೆಂದು ಹೇಳಿದ್ದಿರಿ. ಆದರೆ ಅದನ್ನು ಜಾರಿಗೆ ಕೊಟ್ಟಿಲ್ಲ. ಹೆಚ್ಚಾಗಿ ಐದು ಕಾರ್ಪೊರೇಷನ್‌ಗಳನ್ನು ಮಾಡುತ್ತೇವೆಂದು ಹೇಳಿದಿರಿ, ಅದನ್ನು ಮಾಡಲಿಲ್ಲ. ನಾನು ಸಲಹೆ ಮಾಡುವುದೇನೆಂದರೆ ಇದು ದೊಡ್ಡ ಸಂಸ್ಥೆಯಾಗಿರುವುದರಿಂದ ಅಲ್ಲಲ್ಲಿ ಹೆಚ್ಚಾಗಿ ಡಿಪೋಗಳನ್ನು ತೆರೆದು ಒಳ್ಳೆಯ ಮ್ಯಾನೇಜರ್‌ಗಳನ್ನು ನೇಮಕ ಮಾಡಬೇಕು. ಎಲ್ಲವನ್ನೂ ಬೆಂಗಳೂರಿನಲ್ಲಿಯೇ ಇಟ್ಟುಕೊಂಡರೆ ಕೆಲಸ ಆಗುವುದಿಲ್ಲ. ಲಕ್ಸುರಿ, ಸೆಮಿ ಲಕ್ಸುರಿ, ಹಾಕಿದ್ದೀರಾ ಇವುಗಳಿಗಂತೂ ಬಾಗಿಲುಗಳೇ ಇರುವುದಿಲ್ಲ, ಸೀಟುಗಳಂತೂ ಸರಿಯಾಗಿ ಇರುವುದಿಲ್ಲ. ನಾವು ಬೆಂಗಳೂರಿನಿಂದ ಗುಲ್ಬರ್ಗಾಕ್ಕೆ ಹೋಗಬೇಕಾದರೆ ನಾವು ಊರಿಗೆ ಸೇರುತ್ತವೆಯೋ ಎಂಬ ಭಯ ಉಂಟಾಗುತ್ತದೆ ನಮ್ಮ ಊರಿಗೆ ವ್ಯವಸ್ಥಿತವಾದ ಬಸ್ಸುಗಳನ್ನು ಹಾಕಿ ಎಂದು ನಾನು ಮೂರು ತಿಂಗಳಿಂದ ಕೇಳುತ್ತಿದ್ದೇನೆ. ಮೂರು ಸಾರಿ ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ದೂರವಾಣಿ ಮಾಡಿ ಹೇಳಿದ್ದೇನೆ. ಕೊನೆಗೂ ಅವರು ನಮ್ಮ ಊರಿಗೆ ಬಸ್ಸನ್ನು ಹಾಕಲಿಲ್ಲ. ಇನ್ನು ಬಸ್ಸುಗಳನ್ನು ರಾಷ್ಟ್ರೀಕರಣ ಏಕೆ ನೀವು ಮಾಡುತ್ತೀರಿ? ನೀವು ಮಾಡುವುದರಿಂದ ಜನರಿಗೆ ಸರಿಯಾದ ವ್ಯವಸ್ಥೆಯನ್ನು ಮಾಡುವುದಿಲ್ಲ. ಬೆಲೆಗಳನ್ನು ಮಾತ್ರ ಜಾಸ್ತಿ ಮಾಡುತ್ತಿರುತ್ತೀರಿ. ತಾವು ಖಾಸಗಿಯವರಿಗಾದರೂ ಬಿಟ್ಟುಬಿಡಿ ಸ್ವಾಮಿ, ಇತ್ತೀಚೆಗೆ ತಾವು ಬಸ್ ದರವನ್ನು ಜಾಸ್ತಿ ಮಾಡಿದ್ದೀರಿ. ತುಮಕೂರಿಗೆ ಮೊದಲಿನ ರೇಟ್ ೫ ರೂ. ೫೦ ಪೈಸೆ ಇತ್ತು, ಈಗ ನೀವು ೬ ರೂ ೬೦ ಪೈಸೆ ಮಾಡಿದ್ದೀರಿ.

ಶ್ರೀ ಎಸ್. ಸೂರ್ಯನಾರಾಯಣರಾವ್.—ತಾವು ಡೀ ನ್ಯಾಷನಲೈಸ್ ಮಾಡಿ ಎಂದು ಹೇಳುತ್ತೀರಾ. ಬಸ್ಸುಗಳನ್ನು ಸರಿಯಾಗಿ ನಡೆಸಿಕೊಂಡು ಹೋಗಿ ಎಂದು ಹೇಳಿ.

ಶ್ರೀ ಎಂ.ಎಸ್. ಕೃಷ್ಣನ್.—ದಿವಂಗತ ದೇವರಾಜ ಅರಸ್ ಅವರು ಮುಖ್ಯಮಂತ್ರಿಗಳಾಗಿದ್ದಾಗ ಕಾಂಟ್ರಾಕ್ಟ್ ಕ್ಯಾರೇಜಸ್ ಬಸ್ಸುಗಳನ್ನು ಅಬಾಲಿಷ್ ಮಾಡಿದಾಗ ಮಾನ್ಯ ಚಿಕ್ಕೇಗೌಡರು ಕಾಂಗ್ರೆಸ್ ಪಕ್ಷದಲ್ಲಿದ್ದು, ಮಂತ್ರಿಗಳಾಗಿದ್ದರು. ಆಗ ಏತಕ್ಕೆ ಇವರು ಪ್ರೈವೇಟ್‌ಗೆ ಕೊಡಿ ಎಂದು ಹೇಳಲಿಲ್ಲ?

ಶ್ರೀ ಎನ್. ಚಿಕ್ಕೇಗೌಡ.—ಸ್ವಾಮಿ, ಶ್ರೀಮಾನ್ ಕೃಷ್ಣನ್‌ರವರು ತಪ್ಪು ತಿಳಿದುಕೊಂಡಿದ್ದಾರೆ. ನಾನು ಡೀ ನ್ಯಾಷನಲೈಸ್ ಮಾಡಿ ಎಂದು ಹೇಳುವುದಿಲ್ಲ. ರಾಷ್ಟ್ರೀಕರಣ ಮಾಡುವುದರಿಂದ ಅನುಕೂಲವಾಗಬೇಕು. ಅದನ್ನು ಮಾಡ ವುದಕ್ಕೆ ಆಗದೆ ಹೋದರೆ ಬಿಟ್ಟುಬಿಡಿ. ನಾನು ರಾಷ್ಟ್ರೀಕರಣಕ್ಕೆ ವಿರೋಧಿ ಅಲ್ಲ. ಸರ್ಕಾರದ ಸ್ವಾಮ್ಯದಲ್ಲಿರುವ ಏಕಸ್ವಾಮ್ಯ ಸಂಸ್ಥೆ ಜನತೆಗೆ ಸರಿಯಾದ ಸೌಲಭ್ಯಗಳನ್ನು ಒದಗಿಸದಿದ್ದರೆ ಏನಾಗುತ್ತದೆ. ಅಲ್ಲಿರತಕ್ಕಂಥ ನ್ಯೂನತೆಗಳನ್ನು ಸರಿಪಡಿಸಿ, ಜನತೆಗೆ ಹೆಚ್ಚು ಸೌಲಭ್ಯಗಳನ್ನು ಒದಗಿಸಬೇಕೆಂದು ಹೇಳುತ್ತೇನೆ. ಅಪಘಾತಗಳು ೧೦ ಪರ್ಸೆಂಟ್ ಕಡಿಮೆಯಾಗಿದೆಯೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಸರ್ಕಾರಿ ಬಸ್ಸುಗಳಲ್ಲಿ ಪ್ರಯಾಣ ಮಾಡಬೇಕಾದರೆ ಈಗ ನಾವು ಮನೆ ಸೇರುತ್ತೇವೋ ಇಲ್ಲವೋ ಎಂಬ ಗ್ಯಾರಂಟಿ ಇಲ್ಲ. ಮೊನ್ನೆಯ ದಿವಸ ಬಸ್ ಕಂಡಕ್ಟರ್‌ಗೆ ಕೇವಲ ಚಿಲ್ಲರೆ ಹಣಕ್ಕೋಸ್ಕರ ಮಚ್ಚಿನಿಂದ ಹೊಡೆದ

ಎನ್ನುವುದು ಸುಳ್ಳು, ಇದರ ಹಿನ್ನೆಲೆ ಬೇರೆ ಇದೆ. ಈ ಹಿನ್ನೆಲೆಯನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಸಾರ್ವಜನಿಕರ ಬಗ್ಗೆ ಚಾಲಕರು ಮತ್ತು ಕಂಡಕ್ಟರುಗಳು ಗೌರವದಿಂದ ನಡೆದು ಕೊಳ್ಳುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಕಳೆದ ರಾಜ್ಯೋತ್ಸವ ಸಂದರ್ಭದಲ್ಲಿ ತಾವು ವಿಶೇಷವಾದ ರಿಯಾಯಿತಿಗಳನ್ನು ಪತ್ರಕರ್ತರಿಗೆ, ವಿದ್ಯಾರ್ಥಿಗಳಿಗೆ ಹಾಗೂ ವಯಸ್ಸಾದವರಿಗೆ ನೀಡಿದ್ದೀರಿ. ಅದು ಸ್ವಾಗತಾರ್ಹವಾಗಿದೆ. ಈಗ ವಿದ್ಯಾರ್ಥಿಗಳಿಗೆ ಕೊಡತಕ್ಕಂಥ ಪಾಸ್ ಅವರು ಪ್ರತಿ ತಿಂಗಳು ಹಣ ಕೊಟ್ಟು ರಿನ್ಯೂವಲ್ ಮಾಡಿಸಬೇಕಾಗಿದೆ. ಆ ವಿದ್ಯಾರ್ಥಿಗಳು ಕ್ಯೂನಲ್ಲಿ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ನಿಂತುಕೊಂಡು ತೆಗೆದುಕೊಳ್ಳಬೇಕಾದರೆ ಅವರಿಗೆ ತೊಂದರೆಯಾಗುತ್ತದೆ. ಈ ಒಂದು ಪದ್ಧತಿಯನ್ನು ದಯುವಿಟ್ಟು ತೆಗೆದುಹಾಕಿ. ಶೈಕ್ಷಣಿಕ ವರ್ಷ ದಿಂದ ವರ್ಷಕ್ಕೆ ಒಂದು ಸಾರಿ ಪಾಸ್ ಕೊಡುವ ವ್ಯವಸ್ಥೆ ಮಾಡಬೇಕೆಂದು ಒಂದು ಪಕ್ಷ ವಿದ್ಯಾರ್ಥಿ ಗಳು ಶಾಲಾ ಕಾಲೇಜುಗಳನ್ನು ಬಿಟ್ಟರೆ ಸೀಸನ್ ಟಿಕೆಟ್ಟನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿ. ಇವೊತ್ತಿನ ದಿವಸ ಸಾರಿಗೆ ಸಂಸ್ಥೆಯವರು ನಡೆಸುತ್ತಿರುವ ಬಸ್ಸುಗಳಲ್ಲಿ ಸಾಕಷ್ಟು ಪ್ರಗತಿ ದಾಯಕವಾಗಿಲ್ಲ. ತಾವು ವ್ಯವಸ್ಥಿತ ರೀತಿಯಲ್ಲಿ ಹೆಚ್ಚು ಹೆಚ್ಚಾಗಿ ಲಕ್ಸುರಿ ಸೆಮಿಲಕ್ಸುರಿ ಹಾಗೂ ಎಕ್ಸ್‌ಪ್ರೆಸ್‌ಬಸ್ಸುಗಳನ್ನು ಬಿಡುಗಡೆ ಮಾಡಿ. ಈಗ ಎಕ್ಸ್‌ಪ್ರೆಸ್ ಬಸ್ಸುಗಳೆಂದು ಏನು ಮಾಡಿದ್ದೀರಿ. ಇದರ ಜೊತೆಗೆ ಸೆಮಿ ಎಕ್ಸ್‌ಪ್ರೆಸ್ ಎಂದು ಕೆಲವು ಬಸ್ಸುಗಳನ್ನು ಬಿಡುಗಡ ಮಾಡಿ, ಆ ರೀತಿ ಮಾಡಿದರೆ ಒಳ್ಳೆಯದು, ಕಾರಣವೇನೆಂದರೆ ಬೆಂಗಳೂರಿನಿಂದ ಕೋಲಾರಕ್ಕೆ ಹೋಗಬೇಕಾದರೆ ಮಧ್ಯದಲ್ಲಿ ಕೆಲವು ಪ್ರಾಮುಖ್ಯವಾದ ಹಳ್ಳಿಗಳಲ್ಲಿ ನಿಂತು ಹೋಗುವ ವ್ಯವಸ್ಥೆ ಮಾಡಬೇಕು. ಹೊಸಕೋಟೆಯ ಮೂಲಕ ಹೋಗುವ ಎಕ್ಸ್‌ಪ್ರೆಸ್ ಬಸ್ಸುಗಳೆಲ್ಲಾ ನಿಂತು ಹೋಗುವ ವ್ಯವಸ್ಥೆ ಮಾಡಿ ಎಂದು ನಾನು ಕೇಳಿಕೊಂಡರೂ ಕ್ರಮ ತೆಗೆದುಕೊಳ್ಳಲಿಲ್ಲ. ಅಲ್ಲಿನ ರೈತ ಸಂಘದವರು ಗಲಾಟೆ ಮಾಡಿದ ಮೇಲೆ ಈ ವ್ಯವಸ್ಥೆ ಮಾಡಿದ್ದಾರೆ. ಅಂದರೆ ಚಳುವಳಿ ಮಾಡಿದರೆ ಮಾತ್ರ ಬಸ್ಸುಗಳನ್ನು ಕೊಡುತ್ತೀರಾ? ಬೆಂಗಳೂರು, ಮೈಸೂರು, ದಾವಣಗೆರೆ ಇನ್ನಿತರ ಮುಖ್ಯವಾದ ನಗರಗಳಲ್ಲಿ ಲೋಕಲ್ ಸರ್ವೀಸಸ್ ಬಸ್ಸುಗಳನ್ನು ಓಡಿಸುತ್ತಿದ್ದಾರೆ. ಆದರೆ ಅವು ಕ್ಲುಪ್ತ ಕಾಲದಲ್ಲಿ ಓಡುವ ಹಾಗೆ ವ್ಯವಸ್ಥೆ ಮಾಡ ಬೇಕೆಂದು ಹೇಳುತ್ತೇನೆ. ಸ್ವಾಮಿ, ನಾನು ನ್ಯೂಯಾರ್ಕಿಗೆ ಹೋಗಿದ್ದೆ. ಅಲ್ಲಿ ನ್ಯೂಯಾರ್ಕಿನಿಂದ ಕ್ಯಾಲಿಫೋರ್ನಿಯಾಕ್ಕೆ ಬಸ್ಸುಗಳನ್ನು ಹಾಕಿ ಚೆನ್ನಾಗಿ ನಡೆಸುತ್ತಿದ್ದಾರೆ. ನಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ, ಟ್ರೈನಿಂಗ್ ತೆಗೆದುಕೊಂಡು ಬರುವಂಥ ವ್ಯವಸ್ಥೆ ಮಾಡಿ. ಅಲ್ಲಿ ಸಾವಿರಾರು ಮೈಲಿಗಳ ದೂರ ಪ್ರಯಾಣ ಮಾಡಿದರೂ ಏನೂ ತೊಂದರೆ ಇಲ್ಲ. ಅಷ್ಟು ವ್ಯವಸ್ಥಿತವಾಗಿ ಬಸ್ಸು ಗಳನ್ನು ಇಟ್ಟುಕೊಂಡಿದ್ದಾರೆ.

ಗ್ರಾಮ ಹ್ಯಾಂಡ್‌ನಲ್ಲಿ ಬಸ್‌ಗಳನ್ನು ಯಾವರೀತಿ ಓಡಿಸುತ್ತಿದ್ದಾರೆ ಅದೇ ರೀತಿಯಲ್ಲಿಯೂ ಇಲ್ಲಿ ಓಡಿಸುವುದಕ್ಕೆ ಪ್ರಯತ್ನ ಮಾಡಬೇಕು ಯೂರೋಪಿನಲ್ಲಿ ಇಂಥಹ ಒಂದು ವ್ಯವಸ್ಥೆ ಇದೆ. ಅವರು ಓಡಿಸುವಂತೆ ನೀವು ಓಡಿಸುವುದಕ್ಕೆ ಆಗುವುದಿಲ್ಲವೇ ? ನಾವು ನೋಡುವುದಾದರೆ ನಮ್ಮ ಬಸ್‌ಗಳಿಗೆ ಸರಿಯಾದ ಸೀಟುಗಳಿರುವುದಿಲ್ಲ, ಮತ್ತೊಂದು ಇರುವುದಿಲ್ಲ. ಹೊರದೇಶಗಳಲ್ಲಿರತಕ್ಕ ವ್ಯವಸ್ಥೆಯನ್ನು ಇಲ್ಲಿಯೂ ಮಾಡಬೇಕು. ಬಸ್‌ಗಳ ಸ್ಪೇರ್‌ಪಾರ್ಟ್ಸ್‌ಗಳ ವಿಭಾಗದಲ್ಲಿ ಹೆಚ್ಚಿನ ಹಣ ಸೋರಿ ಹೋಗುತ್ತಿದೆ. ಅದನ್ನು ತಪ್ಪಿಸಬೇಕು. ಉಪಯೋಗಕ್ಕೆ ಬಾರದ ಸಾಮಾನುಗಳನ್ನು ಇಟ್ಟುಕೊಂಡರೆ ಏನು ಪ್ರಯೋಜನ ? ಅವುಗಳನ್ನು ಡಿಸ್ಪೋಜ್ ಮಾಡತಕ್ಕದಾಗಲೀ, ರೀಕಂಡೀಷನ್ ಮಾಡುವುದಾಗಲೀ ಮಾಡಿ ಅವೆಲ್ಲವನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಸಿಬ್ಬಂದಿ ಮತ್ತು ಚಾಲಕರು ಬಸ್ಸುಗಳನ್ನು ನಮ್ಮದೆಂದು ತಿಳಿದುಕೊಂಡು ಕೆಲಸ ಮಾಡುವ ರೀತಿಯಲ್ಲಿ ಮಾಡಿದರೆ ಒಳ್ಳೆಯದು. ಇಲಾಖೆಯಲ್ಲಿ ಚಾಲಕರು ಒಂದೂ ಅಪಘಾತವನ್ನು ಮಾಡದಿದ್ದರೆ ಅಂಥವರಿಗೆ ಚಿನ್ನದ ಪದಕವನ್ನು ಕೊಡುವಂತೆ ಮಾಡಿರುವುದು ಬಹಳ ಒಳ್ಳೆಯ ಕೆಲಸ. ಅದೇ ರೀತಿ ಕಂಡಕ್ಟರಿಗೂ ಸಹ ಅವರು ಯಾವ ಕೇಸಿನಲ್ಲಿಯೂ ಸಿಕ್ಕಿಹಾಕಿಕೊಳ್ಳದೇ ಇದ್ದರೆ ಅವರಿಗೆ ಏನಾದರೂ ಇನ್‌ಸೆಂಟೀವ್ ಕೊಡುವುದು ಒಳ್ಳೆಯದು, ಅಥವಾ ಅವರ ಸೇವಾವಧಿಯನ್ನು ವಿಸ್ತರಣೆ ಮಾಡಿ ಇನ್ನು ಹೆಚ್ಚಿನ ಪ್ರೋತ್ಸಾಹ ಕೊಡುವುದು ಒಳ್ಳೆಯದು, ಇದರ ಬಗ್ಗೆ ನಮ್ಮ ಭಿನ್ನಾಭಿಪ್ರಾಯ ಇಲ್ಲ. ಇದನ್ನು ಬಿಟ್ಟು ಹಾಲುಕೊಡುವ ಹಸುವಿನ ಕೆಚ್ಚಲನ್ನು ಕೊಯ್ಯುವುದಕ್ಕೆ ಅವಕಾಶ ಮಾಡದೆ, ಕೋಳಿ ಚಿನ್ನದ ಮೊಟ್ಟೆ ಇಡುತ್ತದೆಂದು ಕೋಳಿಯನ್ನು ಕೊಯ್ಯದೆ, ಈ ಸಂಸ್ಥೆಯ ಸಂಪನ್ಮೂಲ ಗಳನ್ನು ಹೆಚ್ಚಿಸುವುದಕ್ಕೆ ಪ್ರೋತ್ಸಾಹಕರವಾದ ರೀತಿಯಲ್ಲಿ ಕೆಲಸ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದರಿಂದ ಪ್ರಯಾಣಿಕರಿಗೂ ಕೂಡ ಅನುಕೂಲವಾಗುತ್ತದೆ. ಅವರಿಗೂ

ಅನುಕೂಲವಾಗುತ್ತದೆ ಮತ್ತು ತಾವು ಈ ಸ್ಟ್ರೈಕ್ ಮಾಡುವುದನ್ನು ತಪ್ಪಿಸಬಹುದು.. ಯಾವುದೇ ಒಂದು ಸಣ್ಣ ಘಟನೆ ನಡೆದರೆ ತಕ್ಷಣ ಸಾರಿಗೆ ವ್ಯವಸ್ಥೆ ಸ್ಥಗಿತಗೊಂಡರೆ ಸಾರ್ವಜನಿಕರಿಗೆ ಬಹಳ ಅನಾನುಕೂಲವಾಗುತ್ತದೆ, ಎಷ್ಟೋ ಜನ ರೋಗಿಗಳು ಆಸ್ಪತ್ರೆಗೆ ಬರುವವರಿರುತ್ತಾರೆ, ಇವರೆಲ್ಲರಿಗೂ ತೊಂದರೆಯಾಗುತ್ತದೆ. ಯಾರಾದರೂ ವೈಯಕ್ತಿವಾಗಿ ತಪ್ಪುಮಾಡಿದರೆ ಇಡೀ ಸಂಸ್ಥೆಯವರೇ ಸ್ಟ್ರೈಕ್‌ಮಾಡಿ ಸಾರ್ವಜನಿಕರಿಗೆ ತೊಂದರೆಯಾಗುವುದನ್ನು ತಪ್ಪಿಸಬೇಕು. ಇದಕ್ಕೆ ತಾವು ಕಾಯಿದೆಯನ್ನು ಬದಲಾಯಿಸಬೇಕು. ಸಿಬ್ಬಂದಿ ವರ್ಗದವರಿಗೆ ಹೆಚ್ಚು ಸೌಲಭ್ಯಗಳನ್ನು ಕೊಡುವುದು ಒಳ್ಳೆಯದು. ಅವರಿಗೆ ಹೆಚ್ಚು ಇನ್‌ಸೆಂಟೀವ್ ಕೊಡಿ, ಅವರು ಒಳ್ಳೆಯ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ, ನಾವು ಬೇಡವೆಂದು ಹೇಳುವುದಿಲ್ಲ. ಈ ಸಾರಿಗೆ ಸಂಸ್ಥೆಯನ್ನು ಎಸೆನ್ಸಿಯಲ್ ಸರ್ವೀಸ್ ಎಂದು ಮಾಡಬೇಕೆಂದು ಹೇಳುತ್ತಾ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ದೊಡ್ಡಬೋರೇಗೌಡ (ಮಂಡ್ಯ).—ಮಾನ್ಯ ಉಪಾಧ್ಯಕ್ಷರೇ, ತೋಟಗಾರಿಕೆ ಇಲಾಖೆ ಬೇಡಿಕೆ, ಪಶುಸಂಗೋಪನಾ ಇಲಾಖೆ ಬೇಡಿಕೆ ಮತ್ತು ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯ ಬೇಡಿಕೆಗಳನ್ನು ಸಮರ್ಥಿಸುತ್ತಾ ಕೆಲವಾರು ವಿಷಯಗಳನ್ನು ಸರ್ಕಾರದ ಗಮನಕ್ಕೆ ತಮ್ಮ ಮುಖೇನ ತರುವುದಕ್ಕೆ ಬಯಸುತ್ತೇನೆ. ಪಶುಸಂಗೋಪನಾ ಇಲಾಖೆ ಗ್ರಾಮೀಣ ಜನತೆಯ ಅಭ್ಯುದಯಕ್ಕಾಗಿ ನಾವು ನಿರೀಕ್ಷಿಸಿದಷ್ಟು ಹೆಚ್ಚಿನ ರೀತಿಯಲ್ಲಿ ಬದಲಾವಣೆ ಆಗಲಿಲ್ಲ. ಈ ರಾಜ್ಯದಲ್ಲಿ ಶೇಕಡ ೮೧ ರಷ್ಟು ಗ್ರಾಮೀಣ ಜನತೆ ಈ ಪಶುಸಂಗೋಪನಾ ವ್ಯಾಪ್ತಿಯಲ್ಲಿ ಜೀವನ ಸಾಗಿಸುವಂತ ಒಂದು ವ್ಯವಸ್ಥೆ ಅನೇಕ ತಲೆಮಾರಿನಿಂದ ಬಂದಂಥ ಪದ್ಧತಿಯಾಗಿದೆ. ಆದರೆ ಇತ್ತೀಚಿನ ದಿವಮಾನಗಳಲ್ಲಿ ಇದರ ಬೆಳವಣಿಗೆ ಪೂರ್ಣವಾಗಿ ಬೆಳೆಯುವುದರಲ್ಲಿ ಮತ್ತು ಅದು ಸಾಕಷ್ಟು ಲಾಭದಾಯಕವಾದ ವೃತ್ತಿಯಾಗಿ ಅದು ಗ್ರಾಮೀಣ ಜನತೆಯಲ್ಲಿ ಪರಿಣಮಿಸಿಲ್ಲ. ಇತ್ತೀಚಿನ ಸರ್ಕಾರ ಕಾಯಿದೆ ಪ್ರಕಾರ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ನನ್ನು ಸ್ಥಾಪನೆ ಮಾಡಿದ್ದಾರೆ. ಇದರ ವ್ಯಾಪ್ತಿಯಲ್ಲಿ ಆ ಕವಾಡಿಗನಿಗೆ ಅಥವಾ ಗ್ರಾಮೀಣ ಜನಜೀವನದಲ್ಲಿ ಪಶುಸಂಗೋಪನಾ ವೃತ್ತಿಯಲ್ಲಿ ತೊಡಗಿದವರಿಗೆ ಸಾಕಾದಷ್ಟು ಸೌಲಭ್ಯಗಳು ದೊರಕದೇ ಅವರ ಭವಿಷ್ಯ ಕುಂಠಿತವಾಗಿದೆ. ಗ್ರಾಮಾಂತರದಲ್ಲಿ ನೆಲಸಿರುವಂಥ ಈ ಡೈರಿ ಸಂಘಸಂಸ್ಥೆಗಳು ಸುಮಾರು ೬೦–೭೦ ಪೈಸೆ ಲಾಭದ ಅಂತರವನ್ನು ಇಟ್ಟುಕೊಂಡು ಹಾಲನ್ನು ಮಾರಾಟ ಮಾಡುವುದರಿಂದ ಸಾಕಾದಷ್ಟು ರೈತರಿಗೆ ನಷ್ಟವಾಗಿದೆ. ಅವರ ಜೀವನ ಅಸ್ತವ್ಯಸ್ಥವಾಗಿದೆ. ರೈತನಿಂದ ಕೊಂಡಂತಹ ಹಾಲಿನ ದರಕ್ಕೂ ಸಂಘಸಂಸ್ಥೆಗಳ ಮಾರುವಂಥ ದರಕ್ಕೂ ಒಂದು ರೂಪಾಯಿ ಅಂತರ ಇದೆ. ಈಗಾಗಲೇ ನಮ್ಮ ಜಿಲ್ಲೆಯ ಹಲವಾರು ಭಾಗದಲ್ಲಿ ಈ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ಸಂಬಂಧಪಟ್ಟ ಸಂಘಸಂಸ್ಥೆಗಳ ಚುನಾವಣೆ ನಡೆದಾಗ ಕೊಲೆ ಮತ್ತು ದರೋಡೆ ನಡೆದು ಅವು ಪರ್ಯವಸಾನವಾಗಿವೆ. ಈ ಮಾತನ್ನು ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಈ ವ್ಯವಸ್ಥೆ ಗ್ರಾಮಾಂತರಗಳಲ್ಲಿ ಮುಂದುವರಿದರೆ ಇದರಲ್ಲಿ ಭಾರೀ ಪ್ರಮಾಣದ ಅವ್ಯವಹಾರ ಆಗುವುದರ ಜೊತೆಗೆ ಹಣ ಸಂಗ್ರಹಿಸಿ ಇವುಗಳ ಮುಖಾಂತರ ಹಣ ದುರುಪಯೋಗ ಮಾಡುವ ಪ್ರವೃತ್ತಿಯನ್ನು ಕೂಡ ಅಳವಡಿಸಿಕೊಂಡಿದ್ದಾರೆ. ಇದೇ ರೀತಿ ಮುಂದುವರಿದರೆ ನಿಜವಾಗಿಯೂ ಈ ಗೋಪಾಲಕನ ವೃತ್ತಿ, ಅವನ ಬಾಳು ಹಸನಾಗುವುದಿಲ್ಲ. ಅವರ ಬಾಳು ಆಶಾದಾಯಕವಾದ ರೀತಿಯಲ್ಲಿ ಇರುವಂತೆ ತಾವು ವ್ಯವಸ್ಥೆ ಮಾಡಿ ಇವಕ್ಕೆ ಸೂಕ್ತವಾದರೂಪರೆ ಷೆಗಳನ್ನು ಅಳವಡಿಸಿಕೊಳ್ಳಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ ನಿಜವಾಗಿ ಹಾಲು ಉತ್ಪಾದನೆಗೆ ಸಹಾಯಕವಾಗುವಂತಾಗಲು ಹಣ ಅವರಿಗೆ ನೇರವಾಗಿ ಸಿಗುವಂತೆ ವ್ಯವಸ್ಥೆಯನ್ನು ಮಾಡಬೇಕು. ಇವರು ಈಗ ಬಹಳ ನಷ್ಟದಲ್ಲಿದ್ದು ದುಃಖತಪ್ತರಾಗಿದ್ದಾರೆ. ಸರ್ಕಾರ ಈ ದಿಸೆಯಲ್ಲಿ ಬೇಗ ಕಾರ್ಯಕ್ರಮಗಳನ್ನು ತೆಗೆದುಕೊಂಡು, ಇದಕ್ಕಾಗಿ ಕಾಯಿದೆಗೆ ತಿದ್ದುಪಡಿಯನ್ನು ತಂದು ಅವನಿಗೆ ಸಲ್ಲತಕ್ಕ ಸವಲತ್ತುಗಳನ್ನು ಕೊಡಬೇಕು. ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ರವರ ದರದ ಅಂತರ ೬೦–೭೦ ರೂಪಾಯಿಗಳಿದ್ದು ಸಹಕಾರ ಸಂಘಗಳ ವತಿಯಿಂದ ಅವರು ಕೂಡ ೩೦–೪೦ ಪೈಸೆಗಳ ಅಂತರವನ್ನು ಅಳವಡಿಸಿ ಅವರ ಬೆಳವಣಿಗೆಗೆ ಕಂಟಕಪ್ರಾಯರಾಗಿದ್ದಾರೆ. ಬಹುತೇಕ ಹಾಲು ಉತ್ಪಾದಕರಿಗೆ ಇದರಿಂದ ತೊಂದರೆಯಾಗುವುದರ ಜೊತೆಗೆ ಕಾಲಕ್ರಮೇಣದಲ್ಲಿ ಅವರು ಈ ವೃತ್ತಿಯಿಂದ ದೂರ ಸರಿಯಬೇಕಾದಂಥ ವ್ಯವಸ್ಥೆ ಆಗಬಹುದೆಂದು ಸರ್ಕಾರಕ್ಕೆ ಈ ಸಂದರ್ಭದಲ್ಲಿ ನಾನು ಮನವಿ ಮಾಡಿ ಈ ಬಗ್ಗೆ ಹೆಚ್ಚಿನ ನೆರವನ್ನು ನೀಡುವುದರ ಜೊತೆಗೆ ಅವರಿಗೆ ಎಲ್ಲಾ ಸೌಲಭ್ಯಗಳನ್ನು ಕೊಟ್ಟು ಬ್ಯಾಂಕುಗಳ ವತಿಯಿಂದ ರಿಯಾಯಿತಿ ದರದ ಬಡ್ಡಿಯಲ್ಲಿ ಹಣವನ್ನು ಕೊಟ್ಟು ಸೂಕ್ತ ಮಾರ್ಗವನ್ನು ಕಲ್ಪಿಸಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಬಹುತೇಕವಾಗಿ ಸಿಟಿಯಲ್ಲಿ ಎಮ್ಮೆ, ದನಗಳನ್ನು ಕೊಂಡುಕೊಳ್ಳುವಂಥ ಪ್ರವೃತ್ತಿ

ಬೆಳೆದಿದೆ. ನಾನು ಈ ಬಗ್ಗೆ ಬಹಳ ವ್ಯಸನದಿಂದ ಒಂದು ವಿಷಯವನ್ನು ಹೇಳಬೇಕಾಗಿದೆ ಮಂಡ್ಯ ನಗರದಲ್ಲಿ ನಾನು ಕಳೆದ ವರ್ಷ ಒಬ್ಬ ಟೈಲರ್‌ಗೆ ೫೦೦ ರೂಪಾಯಿಗಳ ಬಟ್ಟೆಯನ್ನು ನಮ್ಮ ಮಕ್ಕಳಿಗೆ ಹೊಲಿಯಲಿಕ್ಕೆ ಕೊಟ್ಟಿದ್ದೆನು ಆತ ಆ ಬಟ್ಟೆಗಳನ್ನು ಮಾರಿಕೊಂಡು ಹಸು ಸಾಕಾಣಿಕೆ ಮಾಡುವುದಕ್ಕೆಂದು ಹೊರಟ. ಬ್ಯಾಂಕಿನವರು ಹಸುಗಳನ್ನು ಕೊಂಡು ಕೊಳ್ಳುವುದಕ್ಕೆ ಸಾಲಕೊಡುವುದಕ್ಕೆ ಸಾವಿರಕ್ಕೆ ಶೇಕಡ ೧೦೦ ರೂಪಾಯಿಗಳು ಕಮಿಷನ್ ಜಾಮೀನು ಕೊಡುವವರಿಗೆ ಶೇಕಡ ೧೦೦ ರೂಪಾಯಿಗಳು ಮತ್ತು ಹಸು ತೋರಿಸುವವರಿಗೆ ಒಂದು ಸಾವಿರಕ್ಕೆ ೨೦೦ ರೂಪಾಯಿಗಳು. ಇಷ್ಟೆಲ್ಲಾ ಹಂತಗಳಲ್ಲಿ ಅವನೂ ಹಣ ಕೊಟ್ಟು ೩೦೦೦ ರೂಪಾಯಿಗಳ ಸಾಲವನ್ನು ತೆಗೆದುಕೊಂಡರೆ, ಕೊನೆಗೆ ಅವನಿಗೆ ಉಳಿಯುವುದು ಒಂದು ಸಾವಿರ ರೂಪಾಯಿಗಳು ಮಾತ್ರ. ಬ್ಯಾಂಕ್‌ನ ಅಧಿಕಾರಿಗಳು ಮತ್ತು ವಿಲೇಜ್ ಆಫೀಸರ್‌ಗಳು ಇನ್‌ಶೂರೆನ್ಸ್ ಕಂಪನಿಯವರು, ಪಶುಸಂಗೋಪನಾ ಇಲಾಖೆಯ ಅಧಿಕಾರಿಗಳದ್ದು ಇದರಲ್ಲಿ ಪಾಲು ಇದೆ. ಕೊನೆಗೆ ಇವರೆಲ್ಲಾ ಸೇರಿಕೊಂಡು ಹಸು ಸತ್ತೋಗಿದೆ ಎಂದು ರಿಪೋರ್ಟ್ ಮಾಡಿಡುತ್ತಾರೆ ಮತ್ತು ಇಲಾಖೆಗೆ ವಂಚನೆ ಮಾಡುತ್ತಾರೆ ಇದನ್ನು ತಾವು ತಪ್ಪಿಸಬೇಕು. ಈ ಎಲ್ಲಾ ಕಾರಣಗಳಿಂದಾಗಿ ಗ್ರಾಮಗಳ ಮುಗ್ಧ ಜೀವಿಗಳು ಕಂಗಾಲಾಗಿದ್ದಾರೆ. ಈ ಸಾಲವನ್ನು ಬ್ಯಾಂಕ್‌ನವರು ಕೊಡತಕ್ಕಂಥಾದ್ದನ್ನು ಸಿಲ್ಲಿಸಿದ್ದಾರೆ. ಇದರಿಂದಾಗಿ ಈ ವೃತ್ತಿಗೆ ಇಲಾಖೆಯವರೇ ಕಂಠಕಪ್ರಾಯವಾಗಿದ್ದಾರೆ. ತೋಟಗಾರಿಕೆ ಇಲಾಖೆ ರಾಜ್ಯಾದ್ಯಂತ ಒಂದು ಮಹತ್ವವಾದ ಇಲಾಖೆಯಾಗಿದೆ.

ಶ್ರೀ ಜೆ. ಡಿ. ಸೋಮಪ್ಪ.—ನಿಮ್ಮ ಟೈಲರ್ ಮುಂದೆ ಏನು ಮಾಡಿದ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಬಿ. ದೊಡ್ಡಬೋರೆಗೌಡ.—ಅವನು ಸಕಲೇಶಪುರಕ್ಕೆ ಹೊರಟುಹೋದ. ಗೋವುಗಳನ್ನು ಸಾಕುವಂತಹ ಸಂದರ್ಭದಲ್ಲಿ ಉಪಯೋಗಿಸತಕ್ಕಂಥಾ ತಿಂಡಿ ಬೆಲೆ ಏನು ಇದೆ ಅದು ಭಾರೀ ಪ್ರಮಾಣದ ಬೆಲೆಯಾಗಿದೆ. ಒಂದು ದಿವಸಕ್ಕೆ ೧೦ ಲೀಟರ್ ಹಾಲು ಕರೆಯುತಕ್ಕ ಹಸುವಿಗೆ ಒಬ್ಬ ಗೌಳಿಗ ಎಷ್ಟು ಪ್ರಮಾಣದ ತಿಂಡಿಯನ್ನು ಹಾಕುತ್ತಿದ್ದಾನೆ, ಎಷ್ಟು ಪ್ರಮಾಣದ ಹುಲ್ಲನ್ನು ಹಾಕುತ್ತಿದ್ದಾನೆ, ಔಷದೋಪಚಾರಗಳನ್ನು ಒದಗಿಸುವುದಕ್ಕೆ ಎಷ್ಟು ವೆಚ್ಚ ಮಾಡುತ್ತಾನೆ ಎನ್ನುವುದನ್ನು ಲೆಕ್ಕಮಾಡಿ ಅವನಿಗೆ ಉತ್ಪಾದನೆಗೆ ತಕ್ಕ ಲಾಭ ಎಷ್ಟಿದೆ ಎನ್ನುವುದನ್ನು ವಿಚಾರ ಮಾಡಬೇಕು. ಬ್ಯಾಂಕಿಗೆ ಬಡ್ಡಿ ಕಟ್ಟಬೇಕು, ಇದರ ಬಗ್ಗೆ ನಿಮ್ಮ ಇಲಾಖೆಯವರು ಸರ್ವೆ ಮಾಡಿಲ್ಲ, ಪರಿಪೂರ್ಣವಾದ ಸರ್ವೆ ಮಾಡಿಲ್ಲ.

೧-೦೦ ಪಿ. ಎಂ.

ಎಲ್ಲೋ ಕೂತುಕೊಂಡಿರತಕ್ಕಂಥಾವರು ಇದರಬಗ್ಗೆ ಸರಿಯಾಗಿ ಯೋಚನೆ ಮಾಡದೇ ಮೈಸೂರು ಬೆಂಗಳೂರು ಡೈರಿಯವರು ಒಂದು ರೂಪಾಯಿ ಅಂತರ ಇಟ್ಟುಕೊಂಡಿದ್ದಾರಲ್ಲಾ ಇವರ ಅವಶ್ಯಕತೆ ಇತ್ತೇ ಎಂದು ಕೇಳುತ್ತೇನೆ. ಇದನ್ನು ತಾವು ಸ್ವಲ್ಪ ಪುನರ್ ಪರಿಶೀಲನೆ ಮಾಡಬೇಕು. ಡೈರಿ ಕಾರ್ಪೋರೇಷನ್ನಿನವರು ಹೆಚ್ಚು ನಷ್ಟ ಮಾಡಿಕೊಳ್ಳದೆ ಲಾಭದಾಯಕವಾಗಿ ಮಾಡುತ್ತಿದ್ದಾರೆ. ಹಾಗಿದ್ದರೂ ಕೂಡ ಈ ಶ್ರಮಜೀವಿಗಳ ಮೇಲೆ ಒಂದು ರೂಪಾಯಿ ಹೆಚ್ಚು ಹಾಕುವುದು ಅಷ್ಟು ಸೂಕ್ತವಾದುದಲ್ಲ. ಇದನ್ನು ಕಡಿಮೆ ಮಾಡಬೇಕೆಂದು ಹೇಳುವುದಲ್ಲದೆ ಇದಕ್ಕೆ ಎಷ್ಟು ಹಣ ಬೇಕೋ ಅಷ್ಟನ್ನು ಒದಗಿಸಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಇನ್ನು ತೋಟಗಾರಿಕೆ ಇಲಾಖೆ ಬಗ್ಗೆ ಹೇಳಬೇಕಾದರೆ ಇದೂ ಸಹ ಪ್ರಗತಿಯ ಒಂದು ಹಾದಿಯಲ್ಲಿ ಮುನ್ನಡೆದಿಲ್ಲ. ಈ ಬಗ್ಗೆ ಕಳೆದ ಸಾರಿಯೂ ಸಹ ಹೇಳಿದ್ದೇನೆ. ತಮಗೆ ಹೇಳಬೇಕಾದರೆ ಮಂಡ್ಯದಲ್ಲಿ ಈ ತೋಟಗಾರಿಕೆ ಇಲಾಖೆ ಬಹಳ ಪ್ರಬಲವಾಗಿತ್ತು. ಈಗ್ಗೆ ೧೧ತಿಂಗಳಿನ ಹಿಂದೆ ಅಲ್ಲಿ ಅಸಿಸ್ಟೆಂಟ್ ಡೈರಕ್ಟರ್‌ರವರು ಹಠಾತ್ ನಿಧನರಾದರು. ಆ ವೇಕೆನ್ಸಿಯನ್ನು ಇನ್ನೂ ಏತಕ್ಕೆ ಭರ್ತಿ ಮಾಡಲಿಲ್ಲವೋ ಗೊತ್ತಾಗಲಿಲ್ಲ. ಈಗ್ಗೆ ಒಂದು ವರ್ಷದ ಹಿಂದೆ ನಮ್ಮ ಭಾಗದಲ್ಲಿ ಬೆಳೆದಂಥಾ ಸೀಬೆ ಮತ್ತು ಸಪೋಟಾದಿಂದ ಸುಮಾರು ೪೦ ರಿಂದ ೫೦ ಸಾವಿರದವರೆಗೆ ಹಣ ಬಂದಿದೆ. ಈ ವರ್ಷ ೫೦ ರೂಪಾಯಿ ಕೂಡ ಬಂದ ಹಾಗೆ ಕಾಣಲಿಲ್ಲ. ಈ ಬಗ್ಗೆ ತಾವು ಉತ್ತರ ಹೇಳುವಾಗ ಹೇಳಬೇಕು. ಒಳ್ಳೆಯ ಫಲ ಬಿಡತಕ್ಕಂಥಾ ಹಣ್ಣು ಹಂಪಲು ಗಿಡಗಳನ್ನು ಗ್ರಾಮಾಂತರ ಪ್ರದೇಶದ ಕೃಷಿಕರಿಗೆ ಹಿಂದೆ ವಿತರಣೆ ಮಾಡುತ್ತಿದ್ದರು. ಈಗ ೧೦-೨೦ ಪೈಸೆ ಗೊತ್ತು ಮಾಡಿದ್ದಾರೆ. ಇದನ್ನು ಹಿಂದಿನ ವರ ಸೇಡು ತೀರಿಸಿಕೊಳ್ಳುವುದಕ್ಕೇನಾದರೂ ಮಾಡಿದ್ದಾರೋ ಏನೋ ಗೊತ್ತಿಲ್ಲ. ಸರ್ಕಾರದವರು ಗ್ರಾಮಾಂತರ ಪ್ರದೇಶಕ್ಕೆ ಹೆಚ್ಚು ಹಣವನ್ನು ಒದಗಿಸಿ ಹಣ್ಣು ಹಂಪಲು ಹೆಚ್ಚು ಬೆಳೆಯಲು ತಕ್ಕ

ಪ್ರೋತ್ಸಾಹ ಮಾಡಬೇಕು ಎಂದು ಹೇಳುತ್ತೇನೆ. ಇದಲ್ಲದೆ ಹಲಸಿನ ಗಿಡ, ತೆಂಗು, ಬಾಳೆ ವಗೈರೆ ಭೂಪಲಗಳಿಗೆ ಹೆಚ್ಚು ವೆಚ್ಚ ಮಾಡಿ, ಒಳ್ಳೊಳ್ಳೆಯ ಜಾತಿಯ ಸಸಿಗಳನ್ನು ಗ್ರಾಮಾಂತರ ಪ್ರದೇಶದ ಬಡ ಜನರಿಗೆ ಕೊಡುವ ಹಾಗೆ ಮಾಡಬೇಕು. ವನಸಂಪತ್ತು ಜೊತೆಗೆ ಹಣ್ಣು ಹಂಪಲುಗಳಿಗೂ ಕೂಡ ಹೆಚ್ಚು ಹಣ ಖರ್ಚು ಮಾಡಿದರೆ, ಉತ್ಪಾದನೆಯೂ ಜಾಸ್ತಿಯಾಗಿ ಜನಸಾಮಾನ್ಯರೂ ಕೂಡ ತೃಪ್ತಿಯಾಗಿ ಇರುವುದಕ್ಕೆ ಸಾಧ್ಯವಾಗುತ್ತದೆ. ಇಷ್ಟೇ ಅಲ್ಲದೆ ರಸ್ತೆಗಳ ಬದಿಯಲ್ಲಿ ಕೆಲವು ಮರಗಳನ್ನು ಬೆಳೆಸಿದರೆ, ಹೊಂಗೆಮರ, ಹುಳಸೇಮರ, ತೆಂಗಿನಮರ ಮುಂತಾದವುಗಳನ್ನು ಬೆಳೆಸಿದರೆ ಅದರಿಂದಲೂ ಕೂಡ ಬೇಕಾದಷ್ಟು ಸಂಪತ್ತು ಬರುತ್ತದೆ. ಅದು ಜನತೆಯ ಉಪಯೋಗಕ್ಕೂ ಕೂಡ ಬೇಕಾಗುತ್ತದೆ. ತಮಗೆ ಹೇಳಬೇಕಾದರೆ ನಮ್ಮದು ಒಂದು ಹುಣಿಸೆ ಮರ ಇದೆ. ಆ ಜಮೀನಿನೊಳಗೆ ಒಂದು ಕಾರು ಹೋಗಬಹುದು. ಅಂಥಾ ಮರಗಳನ್ನು ಬೆಳೆಸಿದರೆ ಉತ್ಪಾದನೆಯೂ ಕೂಡ ಜಾಸ್ತಿಯಾಗುತ್ತದೆ. ಫಲ ಕೊಡತಕ್ಕಂಥಾ ಯಾವುದೇ ವೃಕ್ಷವಾಗಲಿ ರಸ್ತೆ ಬದಿಯಲ್ಲಿ ಬೆಳೆಸುವ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಈಗ ನೋಡಿದರೆ ಇದು ನಶಿಸಿಹೋಗಿದೆ. ಅದರಿಂದ ಈವೊತ್ತಿನ ದಿವಸ ಗ್ರಾಮಾಂತರದ ಜನತೆ ನೆಮ್ಮದಿಯಿಂದ ಇಲ್ಲ. ಈಗಲಾದರೂ ಕೂಡ ತೋಟಗಾರಿಕೆ ಇಲಾಖೆಯವರು ಇದರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ಮಾಡುವಂತೆ ತಾವು ಕ್ರಮ ತೆಗೆದುಕೊಳ್ಳಬೇಕು. ಈಗ ಅವರಲ್ಲಿ ಅಷ್ಟು ಉತ್ಸಾಹ ಇದ್ದಂತೆ ಕಾಣಲಿಲ್ಲ. ಬಹುತೇಕ ಗ್ರಾಮಗಳಲ್ಲಿ ಈ ಬಗ್ಗೆ ಅವರು ಆಸಕ್ತಿ ಕೆಲಸ ಮಾಡುವುದನ್ನು ನಾನು ನೋಡಿಲ್ಲ. ಅವರನ್ನು ಹುಡುಕಿಕೊಂಡು ಹೋದರೂ ಕೂಡ ಸಿಕ್ಕುವುದಿಲ್ಲ. ಅವರು ತಮ್ಮ ಅಸಹಾಯಕತೆ ತೋರಿಸಿದ್ದಾರೆ. ಇದರ ಉದ್ದೇಶ ಏನು ಅನ್ನುವುದು ಗೊತ್ತಾಗಲಿಲ್ಲ. ಈ ಎಲ್ಲಾ ಕಾರಣಗಳಿಂದ ತಾವು ಗ್ರಾಮಾಂತರದ ವ್ಯವಸಾಯಗಾರರ ಮಕ್ಕಳಿಗೆ ಹೆಚ್ಚು ವಿದ್ಯಾವಂತರಾಗಲು, ಬುದ್ಧಿವಂತರಾಗಲು, ಪಾಂಡಿತ್ಯ ಪಡೆಯಲು ಈ ಬಗ್ಗೆ ಹೊಸದಾಗಿ ಉನ್ನತವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ಅವರ ಜೀವನದಲ್ಲಿ ಇದನ್ನು ಅಳವಡಿಸುವ ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಈವೊತ್ತಿನ ದಿವಸ ಇದರ ಬಗ್ಗೆ ಅಧಿಕಾರಿಗಳು ತಮ್ಮ ನಿಸ್ಸಹಾಯಕತೆಯನ್ನು ಏತಕ್ಕೆ ತೋರಿಸಿದ್ದಾರೋ ಗೊತ್ತಿಲ್ಲ. ತಮಗೆ ಹೇಳಬೇಕಾದರೆ ಒಬ್ಬರು ಚೇರ್ಮನ್‌ರು ಹೇಳಿದರು, ಅವರನ್ನು ಒಬ್ಬ ಅಧಿಕಾರಿ ಕೇಳಿದನಂತೆ ನಿಮ್ಮ ಸರ್ಕಾರ ಎಷ್ಟು ದಿವಸ ಇರುತ್ತದೆ ಎಂದು. ಅವರಿಗೆ ಸರ್ಕಾರದ ಬಗ್ಗೆ ಏಕೆ ಚಿಂತನೆ ಮಾಡಬೇಕು. ಅವರ ಕರ್ತವ್ಯ ಜನರ ಹಿತರಕ್ಷಣೆ ಮಾಡುವುದರ ಕಡೆಗೆ ಇರಬೇಕೇ ವಿನಾ ಆ ಶ್ರಮಜೀವಿಗಳ ಹಿತರಕ್ಷಣದ ಕಡೆಗೇ ಇರಬೇಕೇ ವಿನಾ ಇದು ಏತಕ್ಕೆ ಬೇಕು. ಯಾವ ಸರ್ಕಾರವೇ ಬರಲಿ ಆ ಸರ್ಕಾರ ಜನತೆಯ ಹಿತರಕ್ಷಣೆಯನ್ನು ಅಳವಡಿಸಿಕೊಂಡು ತಮ್ಮ ಕರ್ತವ್ಯ ಏನು ಇದೆ ಅದನ್ನು ಮಾಡಬೇಕೇ ವಿನಾ ಪಕ್ಷ ಪಾರ್ಟಿ ಕಡೆ ಅವರ ಗಮನ ಏತಕ್ಕೆ ಬೇಕು.

ಶ್ರೀ ಕೆ. ಶಿವಮೂರ್ತಿ.—ಯಾರೋ ಹೇಳಿಕೊಟ್ಟಿರಬಹುದು.

ಉಪಾಧ್ಯಕ್ಷರು.—ಮಧ್ಯೆ ತೊಂದರೆ ಮಾಡಬೇಡಿ, ಬೇಗನೆ ಮುಗಿಸಲಿ.

ಶ್ರೀ ಬಿ. ದೊಡ್ಡ ಬೋರೇಗೌಡ.—ಸ್ವಾಮಿ, ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನವರು ೭-೮ ಗ್ರಾಮಗಳನ್ನು ಸೇರಿಸಿ ಒಂದು ಸಂಘ ಮಾಡಿಕೊಂಡಿದ್ದಾರೆ. ಇದರಿಂದ ಗ್ರಾಮಾಭಿವೃದ್ಧಿಗೆ ಭಂಗವಾದಂತಾಗಿದೆ. ಯಾವ ಗ್ರಾಮಗಳಲ್ಲಿ ೧೫೦-೨೦೦ ಲೀಟರ್ ಹಾಲು ಕೊಡುತ್ತೇವೆಂದು ಹೇಳುತ್ತಾರೆ ಅಂಥ ಕಡೆಗಳಲ್ಲಿ ಸಂಘವನ್ನು ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡುವುದಕ್ಕಾಗುದಿಲ್ಲವೆಂದು ಹೇಳತಕ್ಕದ್ದು ಸಾಧುವಾದುದಲ್ಲ. ಇದರಿಂದ ಪ್ರತಿ ಗ್ರಾಮದಲ್ಲಿ ಪಾರ್ಟಿಯ ವೈಷಮ್ಯ ಜಾಸ್ತಿಯಾಗಿ ಹಾಲು ಉತ್ಪಾದನೆಗೆ ಕುಂಠಿತವಾಗುತ್ತದೆ. ಯಾವ ಗ್ರಾಮದಲ್ಲಿ ೧೫೦-೨೦೦ ಲೀಟರ್ ಹಾಲು ಕೊಡುತ್ತೇವೆಂದು ಹೇಳುತ್ತಾರೆ ಆ ಊರಿನವರು ಸಂಘ ಮಾಡಿಕೊಳ್ಳಲು ಅವಕಾಶ ಕಲ್ಪಿಸಿ ಕೊಡಬೇಕು. ಈಬಗ್ಗೆ ನಿಮ್ಮ ಅಧಿಕಾರಿಗಳು ಕುಳಿತು ಏನು ತೀರ್ಮಾನ ತೆಗೆದುಕೊಂಡಿದ್ದಾರೆ ಅದನ್ನು ಸ್ವಲ್ಪ ಸಡಿಲಿಸಿ ೧೦೦ ಲೀಟರಿಗೆ ಕಡಿಮೆ ಇಲ್ಲದಂತೆ ಹಾಲು ಉತ್ಪಾದನೆ ಮಾಡತಕ್ಕ ಗ್ರಾಮಗಳಿಗೆ ಈ ಒಂದು ಅವಕಾಶ ವನ್ನು ಕಲ್ಪಿಸಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರೇ, ನಮ್ಮ ಸಾರಿಗೆ ಬಹಳ ವಿಚಿತ್ರವಾದಂಥ ಸಾರಿಗೆ ವ್ಯವಸ್ಥೆಯಾಗಿದೆ. ನಮ್ಮ ಸಾರಿಗೆ ಮಂತ್ರಿಗಳು ಯುವಕರು, ಉತ್ಸಾಹಶಾಲಿಗಳು, ಸುಸಂಸ್ಕೃತರು. ಈ ಸಂಸ್ಥೆ ಸಾಧಾರಣೆಯಾಗಬಹುದು ಎಂದು ನಾನು ಅಂದುಕೊಂಡಿದ್ದೆ. ಆದರೆ ಅದು ದಿನೇ ದಿನೇ ಕ್ಷೀಣಿಸುತ್ತಾ ಇದೆ. ಈ ಸಂಸ್ಥೆಗೆ ೧೪೪ ಕೋಟಿ ರೂಪಾಯಿಗಳ ಬಂಡವಾಳ ಹಾಕಿದೆ. ಮಾನ್ಯ ಮಂತ್ರಿಗಳು ಭಾಷಣದಲ್ಲಿ ಬಹಳ ಸ್ವಾರಸ್ಯವಾಗಿ ಹೇಳುತ್ತಾರೆ. ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗುವುದರಿಂದ ಇಷ್ಟು

ನಷ್ಟವಾಗುತ್ತದೆ, ೬೦ ವರ್ಷದ ಮುದುಕರನ್ನು ಕರೆದುಕೊಂಡು ಹೋಗುವುದರಿಂದ ಇಷ್ಟು ನಷ್ಟವಾಗುತ್ತದೆ, ಶಾಸಕರನ್ನು ಕರೆದುಕೊಂಡು ಹೋಗುವುದರಿಂದ ಇಷ್ಟು ನಷ್ಟವಾಗುತ್ತದೆ, ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗುವುದರಿಂದ ಇಷ್ಟು ನಷ್ಟವಾಗುತ್ತದೆ ಎಂದು ಹೇಳುತ್ತಾರೆ. ಇದು ಒಪ್ಪಿಕೊಳ್ಳತಕ್ಕಂಥಾದ್ದೇ ? ಈ ರೀತಿ ಹೇಳುವುದು ಸಾಧುವಾದುದಲ್ಲ. ಇದು ನಿಮ್ಮ ಇಲಾಖೆಗೆ ಭೂಷಣವಲ್ಲ ನಮ್ಮ ಊರಿನಲ್ಲಿ ೨-೩ ಜನ ಬಸ್ ಮಾಲೀಕರು ಇದ್ದಾರೆ. ಅವರ ಹತ್ತಿರ ಇರುವ ಬಸ್ಸುಗಳು ೧೯೩೨ನೇ ಇಸವಿಯ ಮಾಡಲ್ ಇರಬಹುದು. ಎರಡೇ ಎರಡು ಬಸ್ಸುಗಳನ್ನು ಇಟ್ಟಿದ್ದಾರೆ. ಅವರು ಎಂ. ಪಿ. ಕೂಡ ಆಗಿದ್ದರು. ಅವರ ಆಸ್ತಿ ಪಾಸ್ತಿ ಎರಡು ಬಸ್ಸುಗಳಿಂದ ಒಂದು ಕೋಟಿ ರೂಪಾಯಿ ಹತ್ತಿರ ಇದೆ. ಆದರೆ ಸಾರಿಗೆ ಸಂಸ್ಥೆಯವರು ಆಧುನಿಕ ರೀತಿಯ ಬಸ್ಸಿನ ಚಾಸಿಗಳನ್ನು ಕೊಂಡು ವ್ಯವಸ್ಥಿತರಾದಂಥ ತಜ್ಞರನ್ನು ಆಳವಡಿಸಿಕೊಂಡು, ಅವರದೇ ಆದಂತಹ ವರ್ಕ್‌ಷಾಪನ್ನು ಸ್ಥಾಪನೆ ಮಾಡಿ, ರಾಜ್ಯದಲ್ಲಿ ತಜ್ಞ ಇಂಜಿನಿಯರುಗಳನ್ನು ಇಟ್ಟುಕೊಂಡು, ಪೆಟ್ರೋಲ್ ಬಂಕ್‌ಗಳನ್ನು ಮಾಡಿ ಇವರದೇ ಆದಂತಹ ಮನಾಪಲಿ ರೂಟ್‌ಗಳನ್ನು ಮಾಡಿ, ಸಿಮೆಂಟ್, ಟಾರ್‌ನಿಂದ ಆದಂತಹ ರೋಡ್‌ಗಳಲ್ಲಿ ಬಸ್ಸುಗಳನ್ನು ಓಡಿಸುತ್ತಿದ್ದಾರೆ. ಆದರೆ ಅವರು ಮಣ್ಣು ರೋಡುಗಳಲ್ಲಿ ಬಸ್ಸುಗಳನ್ನು ಓಡಿಸುತ್ತಾರೆ. ಖಾಸಗಿಯವರಿಗೆ ರೂ. ೩-೬೦ಪೈಸೆಯ ಹಾಗೆ ಡೀಸಲ್ ಕೊಟ್ಟರೆ, ಇವರಿಗೆ ರೂ. ೩-೧೫ ಪೈಸೆಗೆ ಡೀಸಲ್ ಸಿಗುತ್ತದೆ. ೪೫ ಪೈಸೆ ಡೀಸಲ್‌ನಲ್ಲಿ ಕಡಿಮೆಯಾಗುತ್ತದೆ. ಇವರಿಗೆ ಟೈರು, ಟ್ಯೂಬಿಗೆ ರಿಯಾಯಿತಿ ಇದೆ. ಹೋಲ್‌ಸೇಲ್ ರೇಟ್‌ನಲ್ಲಿ ನೇರವಾಗಿ ಬರುತ್ತದೆ. ಚಾಸಿಸ್‌ನಲ್ಲಿ ೧೯ ಸಾವಿರ ಕಡಿಮೆಯಾಗುತ್ತದೆ. ಖಾಸಗಿಯವರು ಕೊಂಡುಕೊಂಡರೆ ಜಾಸ್ತಿಯಾಗುತ್ತದೆ. ಇವರಿಗೆ ಇವರದೇ ಆದಂಥ ರೂಟ್‌ಗಳ ವ್ಯವಸ್ಥೆ ಇವೆ. ಮಾನ್ಯ ಚಿಕ್ಕೇಗೌಡರು ಅವಿದ್ಯಾವಂತರಿಂದ ಆರ್.ಟಿ.ಓ. ಆಫೀಸಿನಲ್ಲಿ ಲೂಟಿ ಹೊಡೆಯುತ್ತಾರೆಂದು ಹೇಳಿದರು. ಮಾನ್ಯ ಚಿಕ್ಕೇಗೌಡರು ಆ ಪದವನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈ ದೇಶದಲ್ಲಿ ಮಾನ್ಯ ಚಿಕ್ಕೇಗೌಡರಂಥ ಬುದ್ಧಿಜೀವಿಗಳು ಆರ್.ಟಿ.ಓ. ಆಫೀಸಿನಲ್ಲಿ ಮಾಮೂಲು ಕೊಡುತ್ತಿದ್ದಾರೆ. ಈ ದೇಶದಲ್ಲಿ ಇದು ಎದ್ದು ಕಾಣತಕ್ಕ ಸಂಪ್ರದಾಯ.

ಶ್ರೀ ಎನ್. ಚಿಕ್ಕೇಗೌಡ —ನಾನು ಯಾರಿಗೂ ಮಾಮೂಲು ಕೊಟ್ಟಿಲ್ಲ, ಈ ಉದ್ದಿಮೆ ನನಗೆ ಗೊತ್ತಿಲ್ಲ.

ಶ್ರೀ ಬಿ. ದೊಡ್ಡ ಬೋರೇಗೌಡ.—ತಾವು ತಮ್ಮ ಭಾಷಣದಲ್ಲಿ ಅವಿದ್ಯಾವಂತರಿಂದ ಆರ್.ಟಿ.ಓ. ಆಫೀಸಿನಲ್ಲಿ ಲೂಟಿ ಹೊಡೆಯುತ್ತಾರೆಂದು ಹೇಳಿದಿರಿ. ಅವಿದ್ಯಾವಂತರಿಗಾಗಿ ಕಾದು ಕುಳಿತಿರುತ್ತಾರೆ ಎಂದು ಹೇಳಿದಿರಿ.

ಶ್ರೀ ಎನ್. ಚಿಕ್ಕೇಗೌಡ.—ಒಂದು ನಿಮಿಷ ಈಲ್ಡ್ ಆದರೆ, ನಾನು ಹೇಳಿದ್ದನ್ನು ಹೇಳುತ್ತೇನೆ. ಅವಿದ್ಯಾವಂತರು ಆರ್.ಟಿ.ಓ. ಆಫೀಸಿಗೆ ಹೋದಾಗ ಫಾರಂಗಳನ್ನು ಭರ್ತಿ ಮಾಡುವುದಕ್ಕೆ ಬರುವುದಿಲ್ಲ. ಅವರ ಹತ್ತಿರ ದಳ್ಳಾಳಿಗಳು ಹಣ ಹೊಡೆಯುತ್ತಾರೆಂದು ಹೇಳಿದ್ದು. ಅವಿದ್ಯಾವಂತರಿಂದ ಲಂಚ ಹೊಡೆಯುತ್ತಾರೆಂದು ಹೇಳಿಲ್ಲ.

ಶ್ರೀ ಬಿ. ದೊಡ್ಡ ಬೋರೇಗೌಡ.—ಮಾನ್ಯ ಸದಸ್ಯರಾದ ಚಿಕ್ಕೇಗೌಡರು ಟ್ರಾಕ್ಟರ್ ಇಟ್ಟಿದ್ದಾರೆ, ಅಧಿಕಾರಿಗಳು ಮನೆಯ ಹತ್ತಿರ ಬಂದು ಮಾಮೂಲು ತೆಗೆದುಕೊಂಡು ರಿಜಿಸ್ಟರ್ ಮಾಡಿಕೊಟ್ಟು ಹೋಗುತ್ತಾರೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಮಂತ್ರಿಗಳು ಹೇಗೆ ಉತ್ತರ ಕೊಡುತ್ತಾರೋ ಅದೇರೀತಿ ಇವರು ಉತ್ತರ ಕೊಡುತ್ತಿದ್ದಾರೆ. ಶ್ರೀ ಚಿಕ್ಕೇಗೌಡರು ಏನ ಹೇಳಿದ್ದಾರೆ ಅದಕ್ಕೆ ಮಂತ್ರಿಗಳು ಹೇಳುವುದನ್ನು ದೊಡ್ಡ ಬೋರೇಗೌಡರು ಹೇಳುತ್ತಿದ್ದಾರೆ.

ಶ್ರೀ ಬಿ. ದೊಡ್ಡ ಬೋರೇಗೌಡ.—ಸ್ವಾಮಿ, ಹಿರಿಯ ಶಾಸಕರಾದ ಮಾನ್ಯ ಶ್ರೀಕಂಠಯ್ಯನವರು ನಿರಾಶಾ ಮನೋಭಾವನೆ ಹೊಂದುವುದು ಬೇಡ. ಮಾನ್ಯ ಚಿಕ್ಕೇಗೌಡರು ಅವಿದ್ಯಾವಂತರು, ನಮ್ಮಂಥವರ ಮೇಲೆ ಆರೋಪಣೆ ಮಾಡಿದರು. ನಮ್ಮಂಥ ದೇಶದಲ್ಲಿ ಲಂಚ ಪಡೆಯುತ್ತಾರೆಂದು ಹೇಳಿದರು. ಅವಿದ್ಯಾವಂತರ ಹತ್ತಿರ ರೊಕ್ಕ ಇಲ್ಲ, ಎಲ್ಲಿಂದ ತಂದುಕೊಡುತ್ತಾರೆ. ನೀವು ಮಾಡಿದ ಪಾಪಕ್ಕೆ ಪಶ್ಚಾತ್ತಾಪ ಪಡುತ್ತಿದ್ದೀರಿ. ಇದನ್ನು ಇನ್ನು ಮುಂದುವರಿಸಬೇಡಿ. ಈ ಸಾರಿಗೆ ಸಂಸ್ಥೆಯವರದಿಯನ್ನು ನೋಡಿದಾಗ, ೧೭, ೧೮, ೨೦ ಕೋಟಿ ರೂಪಾಯಿಗಳು ನಷ್ಟವಾಗುತ್ತಿದೆ. ಹೀಗಿರುವಾಗ ಏತಕ್ಕಾಗಿ ಈ ಉದ್ಯಮ ಮುಂದುವರಿಸಬೇಕು, ಯಾರ ಹಿತಕ್ಕಾಗಿ ಇದನ್ನು ಮುಂದುವರಿಸಬೇಕು. ಇವತ್ತಿನ ದಿವಸ ನಿರುದ್ಯೋಗ ಸಮಸ್ಯೆ ಭೂತಾಕಾರವಾಗಿರುವ ಈ ರಾಜ್ಯದಲ್ಲಿ ಸಹಸ್ರಾರು

ಜನರಿಗೆ ಉದ್ಯೋಗ ಕೊಡುವಂಥ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬೇಕು. ಎಲ್ಲಾ ಬಸ್ಸುಗಳನ್ನು ಖಾಸಗಿಯವರಿಗೆ ಕೊಟ್ಟಾಗ, ನಾವು ತೊಡಗಿಸಿರುವಂಥ ೧೪೫ ಕೋಟಿ ರೂಪಾಯಿಗಳಿಗೆ ಕರ್ನಾಟಕ ಫೈನಾನ್ಸ್ ಕಾರ್ಪೊರೇಷನ್‌ನವರು ೧೪ ಕೋಟಿ ರೂಪಾಯಿ ಬಡ್ಡಿ ಎನು ಕೊಡುತ್ತಾರೆ, ಈ ಬಡ್ಡಿ ವ್ಯಾಪ್ತಿಯಲ್ಲಿ ೨೪ ಕೋಟಿ ರೂಪಾಯಿಗಳು ಲಾಭದ ರೂಪದಲ್ಲಿ ಬರುತ್ತದೆ. ಸರ್ಕಾರದವರು ಒಂದು ಕಡೆ ನಿರುದ್ಯೋಗ ನಿವಾರಣೆ ಮಾಡುತ್ತೇವೆಂದು ಹೇಳುತ್ತಾರೆ......

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ದೊಡ್ಡ ಬೋರೇಗೌಡರು ಬಹಳ ಗಹನವಾದ ವಿಷಯ ವನ್ನು ಹೇಳಿದ್ದಾರೆ. ಕೆ.ಎಸ್.ಆರ್.ಟಿ.ಸಿ. ಯವರು ಎಲ್ಲಾ ಸಾರ್ವಜನಿಕ ಕ್ಷೇತ್ರಗಳಲ್ಲಿ ಕೊಟ್ಟಿದ್ದರೆ ನಷ್ಟವಾಗುತ್ತಿರಲಿಲ್ಲ, ಸಾರ್ವಜನಿಕರಿಗೆ ಅನುಕೂಲವಾಗುತ್ತದೆಂದು ಹೇಳುತ್ತಿದ್ದಾರೆ. ಅವರು ಹೇಳುತ್ತಾ ಹೋಗುತ್ತಿರುವುದು ತಮ್ಮ ಅಭಿಪ್ರಾಯವೋ ಅಥವಾ ಜನತಾ ಪಕ್ಷದ ಅಭಿಪ್ರಾಯವೋ ಎಂದು ಗೊತ್ತಾಗಲಿಲ್ಲ. ಅದನ್ನು ಸ್ವಲ್ಪ ಕ್ಲಾರಿಫೈ ಮಾಡಿದರೆ ಒಳ್ಳೆಯದು.

ಉಪಾಧ್ಯಕ್ಷರು.—ಅವರ ಸ್ವಂತ ಅಭಿಪ್ರಾಯ ಇರಬಹುದು.

ಶ್ರೀ ಆರ್. ಎನ್. ನಾಯಕ್.—ಮಾನ್ಯ ದೊಡ್ಡ ಬೋರೇಗೌಡರಿಗೆ ನೆನ್ನೆ ರೈತ ಸಂಘದ ನೋಟೀಸ್ ಬಂದಿರಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಅವರು ಹೇಳಿದರು, ಯಾರೋ ಎರಡು ಬಸ್ಸುಗಳನ್ನು ಇಟ್ಟಿದ್ದರು ಒಂದು ಕೋಟಿ ರೂಪಾಯಿ ಮಾಡಿಕೊಂಡು ಬಿಟ್ಟರು. ಆದರೆ ಇವರದೆಲ್ಲಾ ನಷ್ಟವಾಗುತ್ತಿದೆಂದು ಹೇಳಿದ್ದಾರೆ. ಒಂದು ಕೋಟಿ ರೂಪಾಯಿ ಮಾಡಿಕೊಂಡಿರುವ ಜನ, ಸಿಬ್ಬಂದಿಗೆ ಎಷ್ಟು ಸಂಬಳ ಕೊಡುತ್ತಾರೆ, ಎಷ್ಟು ಟೈಂ ಕೆಲಸ ಮಾಡಿಸುತ್ತಾರೆ, ಓವರ್ ಟೈಂ ಇದೆಯೇ ಓವರ್‌ಲೋಡ್ ಎಷ್ಟು ಹಾಕಿಕೊಂಡು ಹೋಗುತ್ತಾರೆ, ಎಷ್ಟು ಜನರಿಗೆ ಮಾಮೂಲು ಕೊಡುತ್ತಾರೆ ಇದನ್ನೆಲ್ಲಾ ಹೇಳಲಿ......

ಶ್ರೀ ಬಿ. ದೊಡ್ಡ ಬೋರೇಗೌಡ.—ಸನ್ಮಾನ್ಯ ಅಧ್ಯಕ್ಷರೇ, ಖಾಸಗಿ ಬಸ್ ಮಾಲಿಕರಿಗೂ, ಸರ್ಕಾರಿ ಬಸ್ಸಿನ ವ್ಯವಸ್ಥೆಗೂ ಅಜಗಜಾಂತರ ವ್ಯತ್ಯಾಸ ಇದೆ. ಆರ್.ಟಿ.ಓ. ಇಲಾಖೆ ಮತ್ತು ಮೋಟಾರ್ ವೆಹಿಕಲ್ ಇಲಾಖೆ ಎಂದು ಪ್ರತ್ಯೇಕವಾದ ಇಲಾಖೆಯನ್ನಾಗಿ ಮಾಡಿದ್ದೇವೆ. ಮತ್ತು ರಾಜ್ಯದಲ್ಲಿ ಪೋಲೀಸ್ ಇಲಾಖೆ ಇದೆ.

ಶ್ರೀ ಬಿ. ಭೈರಪ್ಪಾಜಿ.—ಮಾನ್ಯ ಎಂ. ಎಸ್. ಕೃಷ್ಣನ್ ಅವರು ಕೇಳಿದಂತಹ ಪ್ರಶ್ನೆಗೆ ಮಾನ್ಯ ದೊಡ್ಡ ಬೋರೇಗೌಡರು ಉತ್ತರ ಹೇಳಲಿಲ್ಲ.

ಉಪಾಧ್ಯಕ್ಷರು.—ಅವರೇನು ಮಂತ್ರಿಗಳೇ ?

ಶ್ರೀ ಬಿ. ಭೈರಪ್ಪಾಜಿ.—ಅದು ಅವರ ಅಭಿಪ್ರಾಯವೋ ಅಥವಾ ಅವರ ಪಕ್ಷದ ಅಭಿಪ್ರಾಯವೋ ಎನ್ನುವುದನ್ನು ಸ್ಪಷ್ಟಪಡಿಸಬೇಕು.

ಉಪಾಧ್ಯಕ್ಷರು.—ದೊಡ್ಡಬೋರೇಗೌಡರೇ, ನೀವು ಆದಷ್ಟು ಬೇಗ ಭಾಷಣವನ್ನು ಮುಗಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಅವರು ಹೇಳಿದರು, ಮೂರು ಸಾವಿರ ವರ್ಷದ ಒಂದು ಹುಣಸೇಗಿಡ ಇದೆ, ಅದಕ್ಕೆ ಇನ್ನೂ ಮುಪ್ಪಾಗಿಲ್ಲ ಎಂದು. ಅದಕ್ಕೂ ಮುಪ್ಪಾಗಿಲ್ಲ ಇವರಿಗೂ ಮುಪ್ಪಾಗಿಲ್ಲ.

ಶ್ರೀ ಜೆ. ಡಿ. ಸೋಮಪ್ಪ.—ಆದಷ್ಟು ಬೇಗ ಮಾನ್ಯ ದೊಡ್ಡಬೋರೇಗೌಡರಿಗೆ, ಮಿನಿಸ್ಟರ್ ವಿಥೌಟ್ ಪೋರ್ಟ್‌ಫೋಲಿಯೋ ಮಾಡಿದರೆ ಬಹಳ ಚೆನ್ನಾಗಿರುತ್ತದೆ.

ಉಪಾಧ್ಯಕ್ಷರು.—ಶ್ರೀ ದೊಡ್ಡಬೋರೇಗೌಡರೇ ಬೇಗ ತಮ್ಮ ಭಾಷಣವನ್ನು ಪೂರ್ಣಮಾಡಿ.

ಶ್ರೀ ಬಿ. ದೊಡ್ಡಬೋರೇಗೌಡ.—ಸನ್ಮಾನ್ಯ ಅಧ್ಯಕ್ಷರೇ ನಾನು ಯಾವ ಉದ್ದೇಶದಿಂದ ಹೇಳುತ್ತಿದ್ದೇನೆ ಎಂದರೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ನಿರುದ್ಯೋಗ ನಿವಾರಣೆ ಯಾಗುವುದಿಲ್ಲ. ಇನ್ನಷ್ಟು ಉಲ್ಬಣವಾಗುತ್ತದೆ. ಇವರು ಒಂದು ಬಸ್ಸಿನಲ್ಲಿ ಇಬ್ಬರನ್ನು ಮಾತ್ರ ಇಟ್ಟಿದ್ದಾರೆ. ಕೆಲವು ಬಸ್‌ನಲ್ಲಿ ಒಬ್ಬರೇ ಒಬ್ಬರನ್ನು ಇಟ್ಟಿದ್ದಾರೆ. ಇವರು ಇಡತಕ್ಕಂಥ ನೌಕರರು

ಒಂದು ಬಸ್ಸಿಗೆ ಒಬ್ಬನನ್ನೇ ಹಾಕಿಕೊಳ್ಳುವುದು. ಇಲ್ಲ ಎಂದರೆ ಎರಡು, ಎರಡೂವರೆ ಜನ ಇರುತ್ತಾರೆ. ಆದರೆ ಖಾಸಗಿ ಬಸ್ಸಿನ ಮಾಲೀಕರು ಒಂದು ಬಸ್ಸಿಗೆ ಐದು ಜನ ನೌಕರರನ್ನು ಇಡುತ್ತಾರೆ.

ಶ್ರೀ ಎಂ. ಮಹಾದೇವ್.—ಎರಡೂವರೆ ಜನ ಎಂದು ಹೇಳಿದರು. ಈ ಅರ್ಧ ಜನ ಹೇಗಿದ್ದಾರೆ? ಅರ್ಧ ಜನ ಯಾರು ಎನ್ನುವುದನ್ನು ಕ್ಲಾರಿಫೈ ಮಾಡಿ.

(ಗೊಂದಲ)

ಶ್ರೀ ಬಿ. ದೊಡ್ಡಬೋರೇಗೌಡ.—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಸ್ನೇಹಿತರಲ್ಲಿ ತಾಳ್ಮೆ ಇಲ್ಲ. ವಿಚಾರ ಮಾಡತಕ್ಕಂಥ ಶಕ್ತಿಯನ್ನು ಇವರು ಕಳೆದುಕೊಂಡು ಬಿಟ್ಟಿದ್ದಾರೆ. ಸ್ವಲ್ಪ ತಾಳಿ ಹೇಳುತ್ತೇನೆ. ಖಾಸಗಿ ಬಸ್ ಮಾಲೀಕರು, ಪ್ರತಿ ಮೂರು ತಿಂಗಳಿಗೆ ಒಂದು ಸಲ ಆರ್.ಟಿ.ಒ. ಆಫೀಸ್‌ನಲ್ಲಿ ಇಂತಿಷ್ಟು ಎಂದು ಧನಸಹಾಯ ಕೊಡಲೇಬೇಕು.

ಶ್ರೀ ಬಿ. ಬೈರಪ್ಪಾಜಿ.—ಅಧ್ಯಕ್ಷರೇ ನಾನು ಒಂದು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುತ್ತೇನೆ.

(ಗೊಂದಲ)

ಶ್ರೀ ಬಿ. ದೊಡ್ಡಬೋರೇಗೌಡ.—ಭೈರಪ್ಪಾಜಿಯವರೇ, ಪಾಯಿಂಟೂ ಇಲ್ಲ, ಆರ್ಡರ್ರೂ ಇಲ್ಲ, ಕುಳಿತುಕೊಳ್ಳಿ ಸ್ವಾಮಿ.

ಶ್ರೀ ಪಿ. ರಾಮದೇವ್.—ಮಾನ್ಯ ಅಧ್ಯಕ್ಷರೇ, ದೊಡ್ಡಬೋರೆಗೌಡರು ಮಾತನಾಡುವಾಗ ಇವರು ಅಡ್ಡಬರುವುದು ಎಂದರೇನು. ಅವರು ಮಾತನಾಡುವುದೇ ಅಪರೂಪ.

ಶ್ರೀ ಬಿ. ಬೈರಪ್ಪಾಜಿ.—ಜನತಾ ಸರಕಾರ ಬಂದಮೇಲೆ ಲಂಚ ಕಡಿಮೆಯಾಗುತ್ತಿದೆ ಎಂದು ಹೇಳುತ್ತಿದ್ದಾರೆ, ಆದರೆ ಇವರು ಪದೇ ಪದೇ ಲಂಚದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ.

ಶ್ರೀ ಬಿ. ದೊಡ್ಡಬೋರೇಗೌಡ.—ಅಧ್ಯಕ್ಷರೇ. ಗ್ರಾಮಾಂತರ ಪ್ರದೇಶದಿಂದ ಬಂದ, ಅವಿದ್ಯಾವಂತನಾದ, ನನ್ನಂಥ ಒಬ್ಬ ಶಾಸಕನಿಗೆ, ಬುದ್ಧಿಜೀವಿ ಸಹೋದ್ಯೋಗಿ ಶಾಸಕರು ಮಾಡತಕ್ಕ ಕಿರುಕುಳ ಸರಿಯಲ್ಲ. ಇದು ಪ್ರಜಾಪ್ರಭುತ್ವಕ್ಕೆ ಭೂಷಣ ಅಲ್ಲ. ಇವತ್ತು ದೇಶದಲ್ಲಿ ಯಾವ ರೀತಿಯಾಗಿ ಲಂಚ ತಾಂಡವವಾಡುತ್ತಿದೆ, ಆ ಪಾಪದ ಶಿಶುವನ್ನು ನೀವೇ ಸೃಷ್ಟಿಮಾಡಿದ್ದು. ಅದನ್ನು ಹೋಗಲಾಡಿಸಲು, ನಿಮ್ಮ ಸಹಕಾರದ ಜೊತೆಗೆ, ನಾವೂ ಶ್ರಮ ಪಡುತ್ತಿದ್ದೇವೆ ಎಂಬುದನ್ನು ತಾವು ಮರೆಯಬಾರದು. ಲಂಚ ಎನ್ನುವುದು ಬಹಳ ಕೆಟ್ಟದ್ದು. ಅದನ್ನು ತೆಗೆದುಕೊಳ್ಳುವವನೂ ಕೆಟ್ಟವನು, ಕೊಡುವಂಥವನೂ ಕೆಟ್ಟವನು. ಖಾಸಗಿ ಬಸ್ ಮಾಲೀಕರಿಗೆ ಈಗಲೂ ಅನೇಕ ಕಿರುಕುಳ ಇದೆ. ಈ ಕಿರುಕುಳ ಇದ್ದಾಗ್ಯೂ ಸಹ ಅವರು ೭೦–೮೦ ಸಾವಿರ ಖರ್ಚು ಮಾಡಿ ಮದುವೆ ಮಾಡುತ್ತಾರೆ, ಸೈಟ್ ಕೊಂಡು ಕೊಳ್ಳುತ್ತಾರೆ, ಮನೆ ಕಟ್ಟಿಸಿಕೊಳ್ಳುತ್ತಾರೆ. ಆದರೆ ನಮ್ಮ ಈ ಇಲಾಖೆ ಪ್ರತಿ ವರ್ಷ ೧೭ ಕೋಟಿ ರೂಪಾಯಿಗಳ ತಿಲಾಂಜಲಿಯನ್ನು ಇಡುತ್ತಿದ್ದಾರೆ. ನಾನು ಮೈಸೂರಿಗೂ, ಬೆಂಗಳೂರಿಗೂ ಕಳೆದ ೨೦ ವರ್ಷದಿಂದ ಪ್ರಯಾಣ ಮಾಡುತ್ತಿದ್ದೇನೆ. ಆ ಬಸ್‌ಗಳಲ್ಲಿ ನೋಡಿದರೆ ಜನ ಜಾತ್ರೆ ಇದ್ದಹಾಗೆ ಇರುತ್ತದೆ. ಸೀಟೇ ಸಿಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಮೊನ್ನೆ ಮಹದೇಶ್ವರ ಟೆಂಪಲ್‌ಗೆ ಹೋಗಿದ್ದರು. ಮಾನ್ಯ ಗಂಗಾಧರ್ ಅವರು ಅದಕ್ಕೆ ಅಧ್ಯಕ್ಷರು. ಅಲ್ಲಿ ಜಾತ್ರೆಗೆ ೧೬ ಲಕ್ಷ ಜನ ಸೇರಿದ್ದರು. ಅಲ್ಲಿ ಸಹಸ್ರಾರು ಜನ ಬಸ್ಸಿಗೆ ಕ್ಯೂ ನಿಂತರು. ಇಷ್ಟೆಲ್ಲಾ ಕ್ಯೂ ಇದ್ದಾಗ್ಯೂ ಕೂಡಾ ನೂರಾರು ಜನ ಸೀಟ್ ಸಿಗದೆ ನಿಂತುಕೊಂಡೇ ಹೋದರೂ ಕೂಡಾ ಇವತ್ತು ನಮ್ಮ ಈ ಸಂಸ್ಥೆಗೆ ನಷ್ಟವಾಗುತ್ತಿದೆ. ಆ ಬಸ್ಸಿನ ಬಣ್ಣವನ್ನಾದರೂ ನಮ್ಮ ಮಂತ್ರಿಗಳು ಬದಲಾಯಿಸಲಿ ಎಂದು ನನ್ನ ಮನವಿ. ಕೆಂಪು ಡೇಂಜರ್ ಬಣ್ಣ. ಆ ಕೆಂಪು ಬಸ್ಸಿಗೆ, ಹಸಿರು ಬಣ್ಣ ಹಾಕಿದರೆ, ಹಳದಿ ಬಣ್ಣ ಹಾಕಿದರೆ, ಲಾಭ ಸಿಗಬಹುದು ಎಂದು ನನ್ನ ಅನಿಸಿಕೆ. ಬಣ್ಣ ಬದಲಾಯಿಸಿದರೂ, ಆ ಬಸ್ಸುಗಳ ಕಂಡಕ್ಟರಾಗಲೀ, ಡ್ರೈವರ್‌ಗಳಾಗಲೀ, ಅಧಿಕಾರವರ್ಗದವರಾಗಲೀ ಮಾನವೀಯತೆಯಿಂದ ಬಹುದೂರ ಸರಿದಿದ್ದಾರೆ. ದನಗಳನ್ನೂ ಕೂಡಾ ಯಾರೂ ಆ ರೀತಿ ಮಾತನಾಡಿಸುವುದಿಲ್ಲ. ಆ ರೀತಿ ಇವರು ಪ್ರಯಾಣಿಕರನ್ನು ಮಾತನಾಡಿಸುತ್ತಾರೆ. ಪ್ರಯಾಣಿಕರ ಜೊತೆ ವಿಶ್ವಾಸ ಇಲ್ಲ. ಸಲುಗೆ ಇಲ್ಲ, ದನಗಳನ್ನು ಅದಲಿಸುವಂತೆ ಅದಲಿಸುತ್ತಾರೆ. ನೂರಾರು ದನಗಳನ್ನು ನಾವು ದೊಣ್ಣೆ ತೆಗೆದುಕೊಂಡು ಹೊಡೆದು ಓಡಿಸುತ್ತೇವಲ್ಲ ಹಾಗೆ ಮಾಡು

ತ್ತಾರೆ. ಮಂತ್ರಿಗಳು ಇದರ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ, ಇವರಿಗೆ ಒಂದು ಪಾಠಶಾಲೆಯನ್ನು ವ್ಯವಸ್ಥೆ ಮಾಡಿ, ಸರಳ ಮನೋಭಾವ, ದೇಶಪ್ರೇಮ, ಪ್ರಯಾಣಿಕರ ಜೊತೆ ಪ್ರೀತಿ ವಿಶ್ವಾಸದಿಂದ ನಡೆದುಕೊಳ್ಳುವುದನ್ನು ಕಲಿಸಬೇಕು. ಇದಷ್ಟು ಬೇಗ ಈಗಿರುವ ವ್ಯವಸ್ಥೆ ಬದಲಾವಣೆ ಆಗುವಂತೆ ಒಂದು ಪಾಠಶಾಲೆಯನ್ನು ವ್ಯವಸ್ಥೆ ಮಾಡಿ ಇವರಿಗೆ ತರಬೇತಿ ಕೊಡಿ ಎಂದು ತಮ್ಮ ಮೂಲಕ ಸಲಹೆ ನೀಡುತ್ತೇನೆ.

ಉಪಾಧ್ಯಕ್ಷರು.—ಬೇಗ ತಮ್ಮ ಭಾಷಣವನ್ನು ಪೂರ್ಣ ಮಾಡಿ.

ಎಂ. ಮಹಾದೇವ್.—ಅಧ್ಯಕ್ಷರೇ. ಮಾತನಾಡಲಿ, ನಾವು ಮಾಡುವಂಥ ಕೆಲಸ ಅವರು ಮಾಡುತ್ತಿದ್ದಾರೆ. ಮಾತನಾಡಲಿ ಬಿಡಿ. ನಮ್ಮ ಸಮಯ ಅವರಿಗೆ ಕೊಡುತ್ತೇವೆ.

ಉಪಾಧ್ಯಕ್ಷರು.—ನಿಮ್ಮ ಹೆಸರುಗಳನ್ನು ಕರೆಯುತ್ತೇನೆ. ಆಗ ನೀವು ಮಾತನಾಡದೇ ಅವರಿಗೆ ಅವಕಾಶ ಕೊಡಿ.

ಶ್ರೀ ಬಿ. ದೊಡ್ಡಬೋರೇಗೌಡ.—ಅಧ್ಯಕ್ಷರೇ, ಮಹಾದೇವ್ ಅವರದ್ದು ಸೋಮಪ್ಪನವರದ್ದು ಸಮಯ ನನಗೇ ಕೊಡಿ, ಅವರಿಬ್ಬರೂ ನನ್ನ ಪರಮ ಮಿತ್ರರು. ಇನ್ನು ಬಸ್ ನಿಲ್ದಾಣಗಳಲ್ಲಿ ಸೌಕರ್ಯವನ್ನು, ಸೌಲಭ್ಯವನ್ನು, ನೈರ್ಮಲ್ಯವನ್ನು ನೋಡಿ ಎಷ್ಟೋ ವರ್ಷಗಳು ಆಗಿರಬೇಕೆಂದು ನನಗನ್ನಿಸುತ್ತದೆ. ನಮ್ಮ ಊರಿನವರೊಬ್ಬರು ಅದಕ್ಕೆ ಅಧ್ಯಕ್ಷರಾಗಿದ್ದರು. ಅವರ ಕಾಲದಲ್ಲಿ ಕಮಿಷನ್‌ಗೋಸ್ಕರ, ರಸ್ತೆ ರಸ್ತೆಗಳಲ್ಲಿ ಶೆಡ್‌ಗಳನ್ನು ಹಾಕಿದರು. ರಾಜ್ಯದಲ್ಲಿ ಅವು ಈಗ ಒಂದೂ ಕಾಣುತ್ತಿಲ್ಲ. ಎಲ್ಲಾ ಊರು ಬಿಟ್ಟು ಹೊರಟು ಹೋದವು. ಒಂದು ವ್ಯವಸ್ಥೆಯನ್ನು ಅಳವಡಿಸಿ ಸಮಾಜವಾದ ತಂದ ಮೇಲೆ, ಈ ರಾಜ್ಯದಲ್ಲಿ ನಾವು ಜನಗಳ ಮೇಲೆ ತೆರಿಗೆ ಹಾಕಿ, ಅವರ ಹುಣ್ಣಿನ ಮೇಲೆ ಬರೆ ಹಾಕುವ ವ್ಯವಸ್ಥೆ ಅಳವಡಿಸುವುದು ಸರಿಯಲ್ಲ. ಕೆ.ಎಸ್.ಆರ್.ಟಿ.ಸಿ. ಬಸ್ ವ್ಯವಸ್ಥೆ ಈ ರೀತಿ ಇದೆ. ನಮ್ಮ ಸಾರಿಗೆ ಮಂತ್ರಿಗಳು ಯುವಕರು ಉತ್ಸಾಹ ಶಾಲಿಗಳು ಸರಳ ಮನೋಭಾವ ಉಳ್ಳಂಥವರಾಗಿದ್ದಾರೆ. ಅವರು ಮುಂದಿನ ವರ್ಷದ ಆಯವ್ಯಯ ಪಟ್ಟಿಯ ಕೆಳಗಾದರೂ, ಈ ಮನೆಯ ಎಲ್ಲಾ ಸದಸ್ಯರ ಪ್ರಶಸ್ತಿ ಪಡೆಯಲಿ ಎಂದು ನಿಮ್ಮ ಮೂಲಕ ಭಿನ್ನವಿಸುತ್ತೇನೆ. ನಮ್ಮ ಚಾಲಕ ವರ್ಗದವರಲ್ಲಿ ಮತ್ತು ಅಲ್ಲಿರತಕ್ಕಂಥ ಅಧಿಕಾರವರ್ಗದವರಲ್ಲಿ ಪ್ರಾಮಾಣಿಕತನದಲ್ಲಿ ದೇಶವನ್ನು ಗಣನೆಗೆ ತೆಗೆದುಕೊಂಡು, ಇಷ್ಟು ಸಾರೀ ಪ್ರಮಾಣದಲ್ಲಿ ಬಂಡವಾಳ ತೊಡಗಿಸಿರುವ ಇಲಾಖೆ ಎಂದು ತಿಳಿದುಕೊಂಡು, ಕಾರ್ಯೋನ್ಮುಖರಾಗಿ, ಶಿಸ್ತಿನ ಸಿಪಾಯಿಗಳಂತೆ ಕೆಲಸ ಮಾಡತಕ್ಕ ಉತ್ಸಾಹ, ಹುಮಸ್ಸು ಅವರ ಹೃದಯದಲ್ಲಿ ಮೂಡಲಿ. ರಾಜ್ಯದ ಜನತೆ ಬಗ್ಗೆ ಅನುಕಂಪ ಬರಲಿ ಎಂದು ಹೇಳಿ, ಇಷ್ಟು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

೧-೩೦ ಪಿ.ಎಂ.

† ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ).—ಸನ್ಮಾನ್ಯ ಅಧ್ಯಕ್ಷರೇ, ಈ ದಿನ ಸಾರಿಗೆ ಇಲಾಖೆ ತೋಟಗಾರಿಕೆ ಇಲಾಖೆ ಹಾಗೂ ಹೈನುಗಾರಿಕೆ ಇಲಾಖೆಗೆ ಸಂಬಂಧಪಟ್ಟಂತ ಬೇಡಿಕೆಗಳನ್ನು ಮಾನ್ಯ ಸಚಿವರುಗಳು ಸಭೆಯ ಮುಂದಿಟ್ಟಿದ್ದಾರೆ. ಭಿನ್ನಭಿನ್ನವಾದ ಇಲಾಖೆಗಳಿಗೆ ಸೇರಿದಂಥ ಬೇಡಿಕೆಗಳನ್ನು ಇಟ್ಟಿರುವುದರಿಂದ ಇಮಾಮಂ ಸಾಹೇಬರ ಮನೆಯಲ್ಲಿ ಗೋಕುಲಾಷ್ಟಮಿಯನ್ನು ಮಾಡಿದಹಾಗೆ ಆಗುತ್ತದೆ. ಪ್ರತಿಯೊಂದು ಬೇಡಿಕೆಗಳ ಮೇಲೂ ಪ್ರತ್ಯೇಕವಾಗಿ ಚರ್ಚೆಮಾಡತಕ್ಕ ಅವಕಾಶ ಇರಬೇಕು. ಸಾರಿಗೆ ಸಂಸ್ಥೆಯ ಬಗ್ಗೆ ಅನೇಕ ಮಿತ್ರರು ಎರಡೂ ಕಡೆಯಿಂದ ಮಾತನಾಡಿದ್ದಾರೆ. ಅನೇಕ ಲೋಪದೋಷಗಳನ್ನು ಕೂಡ ಪ್ರಸ್ತಾಪ ಮಾಡಿದ್ದಾರೆ. ಯಾವುದೇ ಒಂದು ಸರ್ಕಾರದ ಕರ್ತವ್ಯ ನಡೆಯಬೇಕಾದರೆ ಸೈದ್ಧಾಂತಿಕ ಆಧಾರ ಇರಬೇಕು. ರಾಷ್ಟ್ರೀಕರಣ ಮಾಡಿದಮೇಲೆ ಅದರಿಂದ ಜನತೆಗೆ ಉಪಕಾರವಾಗತಕ್ಕ ವ್ಯವಸ್ಥೆಯಿರಬೇಕು. ಸಾರ್ವಜನಿಕರಿಗೆ ಸಾರ್ವಜನಿಕ ಸಂಸ್ಥೆಗಳು ಉಪಕಾರ ಮಾಡಬೇಕು. ಆದರೆ, ಇವತ್ತು ಸಾರ್ವಜನಿಕ ಸಂಸ್ಥೆಗಳು ಹಿಂಸೆಗೆ ಶೋಷಣೆಗೆ ಒಳಗಾಗಿವೆ. ಇವತ್ತು ಸಾರ್ವಜನಿಕ ಸಂಸ್ಥೆಗಳು ಸಾರ್ವಜನಿಕರಿಗೆ ಉಪಯುಕ್ತವಾದಂಥ ಕೆಲಸವನ್ನು ಮಾಡುವಂಥ ವ್ಯವಹಾರದಲ್ಲಿ ಕೈಹಚ್ಚಬೇಕಾಗಿದೆ. ಸಾರ್ವಜನಿಕ ಸಂಸ್ಥೆಗಳು ಇಂಥ ಕೆಲಸವನ್ನು ಮಾಡುವುದರಲ್ಲಿ ವಿಫಲವಾದಾಗ, ಅದರಲ್ಲಿ ಶೋಷಣೆ ದೋಷಗಳು ಇದ್ದಾಗ ಸರ್ಕಾರ ಪ್ರವೇಶ ಮಾಡಬೇಕಾಗುತ್ತದೆ. ಇದು ರಾಷ್ಟ್ರೀಕರಣ ತತ್ವದ ಆಧಾರ. ಇವತ್ತು ಕರ್ನಾಟಕ ಸಾರಿಗೆ ಸಂಸ್ಥೆ ಸಂಪೂರ್ಣವಾಗಿ ರಾಷ್ಟ್ರೀಕರಣವಾದ ಸಂಸ್ಥೆಯಲ್ಲ ಅಥವಾ ಸರ್ಕಾರಕ್ಕೆ ಸಾರ್ವಜನಿಕರಿಗೆ ಉಪಯುಕ್ತವಾದಂಥ

ಲಾಭದಾಯಕವಾದಂಥ ಕೆಲಸ ಮಾಡತಕ್ಕ ವ್ಯವಸ್ಥೆಯಲ್ಲೂ ಇಲ್ಲ. ಇದರ ಬಗ್ಗೆ ದೋಷಗಳನ್ನು ಅನೇಕ ಮಿತ್ರರು ಹೇಳಿದ್ದಾರೆ. ರಾಷ್ಟ್ರೀಕರಣ ಎನ್ನತಕ್ಕ ಪದ ಭಾರತಕ್ಕೆ ಯುಕ್ತವಾದುದಲ್ಲ ಎಂದು ಅರ್ಥ ಶಾಸ್ತ್ರಜ್ಞರಾದ ಜೆ. ಸಿ. ಕುಮಾರಪ್ಪನ್‌ರವರು ಹೇಳಿದ್ದಾರೆ. ರಾಷ್ಟ್ರೀಕರಣ ಎನ್ನತಕ್ಕದ್ದು ಔಟ್‌ಡೇಟೆಡ್ ಸಿದ್ಧಾಂತ, ಎಲ್ಲಾ ರಾಷ್ಟ್ರಗಳಲ್ಲಿ ಆಗಿರತಕ್ಕ ಅಂಕಿಸಂಖ್ಯೆಗಳ ಆಧಾರದ ಮೇಲೆ ಇದನ್ನು ಇಡಲಾಗಿದೆ. ರಾಷ್ಟ್ರೀಕರಣ ಮಾಡಿದರೆ ಸಂಪೂರ್ಣವಾಗಿ ರಾಷ್ಟ್ರೀಕರಣ ಮಾಡಿ, ಜನಹಿತ ಸಾಧನೆ ಮಾಡುವಂಥ ಸಾಮರ್ಥ್ಯ ಕೊಡಬೇಕೆಂದು ಅಂಥ ವ್ಯಕ್ತಿಗಳನ್ನು ನಿರ್ಮಾಣಮಾಡುವ ಕಡೆಗೆ ಸಮಾಜ ನಿರ್ಮಾಣ ಮಾಡುವ ಕಡೆಗೆ ಗಮನಹರಿಸಬೇಕು. ಒಂದು ಕೈಹಚ್ಚಿದ್ದಾರೆ, ಇವತ್ತು ನಮ್ಮಲ್ಲಿರತಕ್ಕ ಅಂಧಾನು ಕರಣೆಯನ್ನು ಹೋಗಲಾಡಿಸಬೇಕಾಗಿದೆ. ಬಹಳ ಕಾಲದಿಂದ ದಾಸ್ಯದಲ್ಲಿ ಬಿದ್ದಿದ್ದ ಕಾರಣ ಔಷಧಿಗೆ ಕೈ ಒಡ್ಡುವುದು, ಗೊಬ್ಬರಕ್ಕೆ ಕೈ ಒಡ್ಡುವುದು, ತಲೆಬೋಳಿಸತಕ್ಕ ಬ್ಲೇಡುಗಳಿಗೆ ಕೈ ಒಡು ವಂಥಾದ್ದು ಬೆಳೆದು ಬಂದಿದೆ. ಇದು ಹೋಗದ ಹೊರತು ಯಾವ ದೇಶವೂ ಬದುಕುವುದಕ್ಕೆ ಸಾಧ್ಯವಾಗುವುದಿಲ್ಲ, ಬುದ್ಧಿವಂತಿಕೆಯನ್ನು ಅನುಕರಣೆ ಮಾಡತಕ್ಕಂಥ ಪ್ರವೃತ್ತಿ ನಮ್ಮಲ್ಲಿ ಏನು ಬೆಳೆದು ಬಂದಿದೆ, ಇದು ಹೋಗದ ಹೊರತು ನಮ್ಮ ದೇಶ ಖಂಡಿತವಾಗಿಯೂ ಪ್ರಗತಿ ಸಾಧಿಸುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ರಾಷ್ಟ್ರೀಕರಣ ಮಾಡಿ ಆದಾಯ ಹೆಚ್ಚು ಮಾಡಲಿಕ್ಕೆ ಆಗುವುದಿಲ್ಲ. ಜನರಿಗೆ ಉಪಯುಕ್ತವಾದ ರೀತಿಯಲ್ಲಿ ಸೌಕರ್ಯ ಸೌಲಭ್ಯಗಳನ್ನು ಒದಗಿಸಬೇಕಾಗುತ್ತದೆ. ಇದರಲ್ಲಿ ದೋಷ ಎಲ್ಲಿದೆ? ಸಿದ್ಧಾಂತದಲ್ಲಿ ದೋಷ ಇದೆಯೇ? ಅಥವಾ ಹಳೆಯ ಕಂದಾಚಾರ ಪದ್ಧತಿ ಯನ್ನು ಅಳವಡಿಸಿರುವುದರಿಂದ ದೋಷ ಇದೆಯೆ? ಈ ದೃಷ್ಟಿಯಲ್ಲಿ ಆಲೋಚನೆ ಮಾಡಿ, ಬದ ಲಾವಣೆ ಮಾಡತಕ್ಕಂಥಾದ್ದು ಅವಶ್ಯಕ ಇದೆ ಇವತ್ತು ಸಾರಿಗೆ ಸಂಸ್ಥೆಯಲ್ಲಿ ೧೩೧ ಕೋಟಿ ರೂಪಾಯಿಗಳ ಬಂಡವಾಳ ಹಾಕಿ, ೧೪೧ ಕೋಟಿ ರೂಪಾಯಿಗಳ ವೆಚ್ಚ ಮಾಡುವುದನ್ನು ವರದಿಯಲ್ಲಿ ತೋರಿಸಿದ್ದೀರಿ. ಆದರೂ ಪ್ರತಿವರ್ಷ ಸುಮಾರು ೧೦ ಕೋಟಿ ರೂಪಾಯಿಗಳ ನಷ್ಟವನ್ನು ಅನು ಭವಿಸುತ್ತಿದೆ. ಇಲ್ಲಿ ಒಂದು ಅಂಶವನ್ನು ತಾವು ಗಮನಿಸಬೇಕು. ಸಾರಿಗೆ ಸಂಸ್ಥೆಯವರು ೪೦೦೦ ಬಸ್ಸುಗಳನ್ನು ಇಟ್ಟುಕೊಂಡು ಸರ್ಕಾರಕ್ಕೆ ಸುಮಾರು ೨೨ ಕೋಟಿ ರೂಪಾಯಿಗಳನ್ನು ತೆರಿಗೆ ರೂಪ ದಲ್ಲಿ ಕಟ್ಟುತ್ತಿದ್ದಾರೆ. ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ, ವಿದ್ಯಾರ್ಥಿಗಳಿಗೆ ಹಾಗೂ ವೃದ್ಧ ರಿಗೆ ಕೊಟ್ಟಿರತಕ್ಕ ರಿಯಾಯಿತಿಯಿಂದ ಸುಮಾರು ೧೦ ಕೋಟಿ ರೂಪಾಯಿಗಳು ಹೋಗುತ್ತದೆ. ರಾಜ್ಯದಲ್ಲಿ ಸುಮಾರು ೫೫ ಲಕ್ಷ ವಾಹನಗಳು ಓಡುತ್ತಿದ್ದು ಅವುಗಳಿಂದ ಸುಮಾರು ೫೫ ಕೋಟಿ ರೂಪಾಯಿಗಳ ತೆರಿಗೆ ಹಣ ಸರ್ಕಾರಕ್ಕೆ ಬರಬೇಕಾಗಿದೆ. ಈ ಹಣವನ್ನು ವಸೂಲು ಮಾಡುವ ದಿಸೆಯಲ್ಲಿ ಸಾರಿಗೆ ಪ್ರಾಧಿಕಾರ ಏನು ಕೆಲಸ ಮಾಡಿದ್ದಾರೆ? ಎಷ್ಟರ ಮಟ್ಟಿಗೆ ವಸೂಲು ಮಾಡುತ್ತಿ ದ್ದಾರೆ? ತೆರಿಗೆ ರೂಪದಲ್ಲಿ ಬರತಕ್ಕ ಹಣ ಎಲ್ಲಾ ವಸೂಲಾಗಿದೆಯೆ? ಈ ಹಣವನ್ನು ಸಂಪೂರ್ಣ ವಾಗಿ ವಸೂಲು ಮಾಡಿದರೆ ದೇಶದ ಆರ್ಥಿಕ ಸಂಪತ್ತನ್ನು ಅಭಿವೃದ್ಧಿಗೊಳಿಸುವುದಕ್ಕೆ ಸಾಧ್ಯವಾಗು ತ್ತಿತ್ತು. ಇವತ್ತು ಸಾರಿಗೆ ಸಂಸ್ಥೆ ನಷ್ಟಅನುಭವಿಸುವುದಕ್ಕೆ ಕಾರಣ ಏನು ಎಂಬುದನ್ನು ಕಂಡು ಹಿಡಿಯಬೇಕಾಗಿದೆ. ಇದನ್ನು ಮಂತ್ರಿಗಳು ಒಬ್ಬರೇ ಮಾಡುವುದಕ್ಕಾಗುವುದಿಲ್ಲ. ಈ ಸದನದ ಕರ್ತವ್ಯವೂ ಇದೆ. ನನ್ನ ಆಲೋಚನೆಯನ್ನು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ನೆಪೋಲಿಯನ್ ಹಿಂದೆ ಒಂದು ಮಾತು ಹೇಳಿದ್ದರು. ''ಜಗತ್ತಿನಲ್ಲಿ ಮನುಷ್ಯನಿಗೆ ಕಷ್ಟ ಬರುವು ದಾದರೆ ಅದರ ಉದ್ಭವ ಸ್ಥಾನ ಲಂಡನ್ ನಗರ'' ಎಂದ ಹಾಗೆ ಸಾರಿಗೆ ಸಂಸ್ಥೆ ನಷ್ಟಕ್ಕೆ ಒಳಗಾಗು ವುದಕ್ಕೆ ಕಾರಣ ಅಲ್ಲಿ ರಚಿಸಿರತಕ್ಕಂಥ ಬೋರ್ಡು. ಉತ್ಪಾದನೆಗೆ ಮತ್ತು ನಷ್ಟಕ್ಕೆ ಉಗಮ ಸ್ಥಾನ ಬೋರ್ಡು. ಬೋರ್ಡಿನಲ್ಲಿ ಎಲ್ಲಾ ಸರ್ಕಾರೀ ಅಧಿಕಾರಿಗಳನ್ನು ನೇಮಿಸಿಕೊಂಡಿದ್ದಾರೆ. ಎಷ್ಟು ಜನ ಅಧಿಕಾರಿಗಳಿಗೆ ಬಸ್ಸುಗಳ ಬಗ್ಗೆ ಮಾಹಿತಿ ಇದೆ. ಕಮರ್ಷಿಯಲ್ ಬಗ್ಗೆ ಮನೋಧರ್ಮ ಇರತಕ್ಕ ಅಧಿಕಾರಿಗಳು ಎಷ್ಟು ಜನ ಇದ್ದಾರೆ? ಇದನ್ನು ಲಾಭದಾಯಕವಾಗಿ ತೆಗೆದುಕೊಂಡು ಹೋಗಬೇಕೆಂಬ ಇಚ್ಛೆ ಮನಸ್ಸು ಎಷ್ಟು ಜನ ಅಧಿಕಾರಿಗಳಲ್ಲಿ ಇದೆ. ಅಲ್ಲಿಗೆ ಡೈರೆಕ್ಟರುಗಳನ್ನು ಬರೀ ಐ.ಎ.ಎಸ್. ಅಧಿಕಾರಿಗಳನ್ನು ಹಾಕಿದರೆ ಅವರಿಂದ ಆಗತಕ್ಕ ಕೆಲಸವಾದರೂ ಏನು? ಅವರಿಗೆ ಬರೀ ರೆಕಾರ್ಡುಗಳನ್ನು ನೋಡತಕ್ಕಂಥಾದ್ದು ಗೊತ್ತಿದೆಯೇ ಹೊರತು ಬೇರೇನೂ ಗೊತ್ತಿರು ವುದಿಲ್ಲ. ಬಸ್ಸುಗಳನ್ನು ನಡೆಸಿ ಲಾಭ ಮಾಡತಕ್ಕಂಥ ಜನರನ್ನು ಏತಕ್ಕೆ ಬೋರ್ಡಿನಲ್ಲಿ ಹಾಕಿಲ್ಲ, ಬಸ್ಸುಗಳ ವಿಚಾರದಲ್ಲಿ ಟೆಕ್ನಿಕಲ್ ಆಗಿ ಗೊತ್ತಿರತಕ್ಕ ಎಷ್ಟು ಜನರನ್ನು ಬೋರ್ಡಿನಲ್ಲಿ ಹಾಕಿದ್ದೀರಿ. ತಾವು ಬಬ್ಬರಿಗೂ ಅಂಥ ಅವಕಾಶವನ್ನು ಕೊಟ್ಟಿಲ್ಲ. ಬಸ್ಸುಗಳ ವಿಚಾರದಲ್ಲಿ ಸಾಕಷ್ಟು ಗೊತ್ತಿರತಕ್ಕ ವ್ಯಕ್ತಿಗಳನ್ನು ಹಾಕಿದರೆ ಲಾಭದಾಯಕವಾಗಿ ಸಂಸ್ಥೆ ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಈ ವಿಚಾರವನ್ನು ಮಾನ್ಯ ಸಭೆಯು ಕೂಡ ತೀವ್ರವಾಗಿ ವಿಚಾರ ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಮಂತ್ರಿಯವರು ತೀವ್ರವಾಗಿ ಇದರ ಕಡೆಗೆ ಗಮನವನ್ನು ಕೊಡಬೇಕು, ಬೋರ್ಡು ರಚನೆಗೆ ಮಾಡಿರತಕ್ಕ ಕಾನೂನಿನಲ್ಲಿ ಯಾರೂ ಕೂಡ ಹೊರಗಿನವರು ಬರದಂತೆ ಮಾಡಿದ್ದಾರೆ.

ಸುತ್ತಿ ಸುತ್ತಿ ಅವರೇ ಬರುವಂತ ಕಾನೂನುಗಳನ್ನು ಮಾಡಿಕೊಂಡಿದ್ದಾರೆ, ಈಗ ಇರತಕ್ಕ ವ್ಯವಸ್ಥೆ ಮುಂದುವರೆದರೆ, ಜನತೆಗೆ ಸೌಕರ್ಯಗಳನ್ನಾಗಲೀ, ಆಗುತ್ತಿರುವ ನಷ್ಟವನ್ನಾಗಲೀ ತಪ್ಪಿಸುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಇವತ್ತು ಚಾಸಿಗಳನ್ನು ಕೊಳ್ಳುವುದರಲ್ಲಿ ಮೋಸ ಮಾಡುತ್ತಿದ್ದಾರೆ, ಹಳೇ ಚಾಸಿಗಳಿಗೆ ಬಣ್ಣ ಹಾಕಿ ಸಂಸ್ಥೆಗೆ ಕೊಟ್ಟಂತ ನಿದರ್ಶನಗಳು ಇವೆ. ಇಲಾಖೆಯಲ್ಲಿ ಕೊಂಡು ಹಾಕಿರತಕ್ಕಂಥ ಸ್ಟಾಕ್ ಏನಿದೆ ಅದು ಇಂದು ನಿರುಪಯುಕ್ತವಾಗಿ ಬಿದ್ದಿದೆ. ಉಪಯೋಗಕ್ಕೆ ಬಾರದೆ ಇರುವಂಥ ಕೋಟ್ಯಾಂತರ ರೂಪಾಯಿ ಸಾಮಾನು ಬಿದ್ದಿದೆ. ರಿಟ್ರೇಡಿಂಗ್ ಮಾಡಿದಂಥ ಟೈರುಗಳನ್ನು ಕೊಂಡುಹಾಕಿರುವಂಥ ನಿದರ್ಶನಗಳು ಇವೆ. ಈ ಒಂದು ವ್ಯವಸ್ಥೆಯಿಂದ ನಷ್ಟವಾಗುತ್ತಿದೆಯೆ ಎಂಬುದನ್ನು ತಾವು ನೋಡಬೇಕು.

ಸಾಮಾನ್ಯವಾಗಿ ನಮ್ಮಲ್ಲಿ ಏನೊಂದು ಭಾವನೆ ಬಂದಿದೆ ಎಂದರೆ ಕಂಡಕ್ಟರ್‌ಗಳು ಮತ್ತು ಡ್ರೈವರ್‌ಗಳು ದುಡ್ಡು ಹೊಡೆಯುತ್ತಾರೆ ಎಂದು ಹೇಳುತ್ತಾರೆ. ಇದರಿಂದ ನಷ್ಟವಾಗುತ್ತಿದೆ ಎನ್ನುವ ಭಾವನೆ ಇದೆ. ಆದರೆ ಎಷ್ಟೇ ಅವರು ದುಡ್ಡು ಹೊಡೆದರೂ ಕೂಡ ಅವರು ಆವರೇಜ್ ಕಟ್ಟಿರುತ್ತಾರೆ. ಆದರೆ ಇದಕ್ಕೆ ಮುಖ್ಯವಾಗಿ ಕಾರಣವಿರತಕ್ಕದ್ದು ಎಂದರೆ ಆಡಳಿತ ವ್ಯವಸ್ಥೆಯಲ್ಲಿರತಕ್ಕ ದೋಷದಿಂದ ಇವತ್ತಿನ ದಿವಸ ಕೆ.ಎಸ್.ಆರ್.ಟಿ.ಸಿ. ಮತ್ತು ಬಿ.ಟಿ.ಎಸ್. ನಷ್ಟದಲ್ಲಿದೆ. ಇದರ ಬಗ್ಗೆ ಸರ್ಕಾರದವರು ತೀವ್ರವಾದ ಗಮನವನ್ನು ಹರಿಸಬೇಕಾಗಿದೆ. ಇವತ್ತಿನ ದಿವಸ ಅವಶ್ಯಕತೆಗಿಂತ ಹೆಚ್ಚಾಗಿ ಉನ್ನತ ಮಟ್ಟದ ಅಧಿಕಾರಿಗಳನ್ನು ನೀವು ನೇಮಕ ಮಾಡಿದ್ದೀರಿ. ಅದೇ ಕೆಳಗಿನ ಮಟ್ಟದಲ್ಲಿರತಕ್ಕ ಕಂಡಕ್ಟರ್‌ಗಳು, ಡ್ರೈವರ್‌ಗಳು, ಕ್ಲೀನರ್ಸ್‌ಗಳನ್ನು ನೀವು ನೇಮಕ ಮಾಡಿಲ್ಲ. ಇದರಿಂದ ಏನಾಗಿದೆ ಎಂದರೆ ಯಾವುದಾದರೂ ಬಸ್‌ಗೆ ಡ್ರೈವರ್ ಇಲ್ಲ ಕಳುಹಿಸಿಕೊಡಿ ಎಂದರೆ ಡ್ರೈವರ್‌ಗಳು ಇಲ್ಲ, ಕಂಡಕ್ಟರ್‌ಗಳು ಇಲ್ಲವೆಂದು ಹೇಳುತ್ತಾರೆ. ಬರೀ ಹೈಯರ್ ಸ್ಯಾಲರಿ ತೆಗೆದುಕೊಳ್ಳತಕ್ಕ ಅಧಿಕಾರಿಗಳನ್ನು ನೇಮಕ ಮಾಡಿದ್ದೀರೇ ಹೊರತು ಬೆವರು ಸುರಿಸಿ ಕೆಲಸ ಮಾಡತಕ್ಕ ಕೆಲಸಗಾರರನ್ನು ಹೆಚ್ಚಾಗಿ ನೇಮಿಸಿಕೊಂಡಿಲ್ಲ. ಈ ಕಾರಣದಿಂದ ನಿಮ್ಮ ಸಂಸ್ಥೆ ನಷ್ಟವನ್ನು ಅನುಭವಿಸುತ್ತಿದೆ. ನಿಮ್ಮ ಈ ಒಂದು ನೀತಿಯನ್ನು ಬದಲಾವಣೆ ಮಾಡದೇ ಹೋದರೆ ಈಗ ಏನು ೧೮ ಕೋಟಿ ರೂಪಾಯಿಗಳನ್ನು ನಷ್ಟವನ್ನು ಅನುಭವಿಸುತ್ತಿದ್ದೀರಿ, ಅದು ಇನ್ನೂ ಹೆಚ್ಚಾಗಬಹುದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಇನ್ನು ಬಸ್ ಆ್ಯಕ್ಸಿಡೆಂಟ್ ಆದಂಥವುಗಳಿಗೆ ಪರಿಹಾರವನ್ನು ಕೊಟ್ಟಿರುವ ಬಗ್ಗೆ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದೀರಿ. ಆದರೆ ಇದಕ್ಕೆ ತಾವು ಇನ್‌ಶ್ಯೂರೆನ್ಸ್ ಡಿಪಾರ್ಟ್‌ಮೆಂಟಿನವರಿಂದ ಹಣವನ್ನು ಸಾಕಷ್ಟು ಪಡೆದುಕೊಂಡಿದ್ದೀರಾ? ಅಥವಾ ಈ ಅಘಘಾತಕ್ಕೆ ಕಾರಣರಾಗಿ ಜನರನ್ನು ಕೊಲ್ಲುವುದರ ಜೊತೆಗೆ ನಿಮ್ಮ ಇಲಾಖೆಗೆ ನಷ್ಟವನ್ನು ಉಂಟುಮಾಡಿ ಅಜಾಗರೂಕತೆಯಿಂದ ಬಸ್ಸನ್ನು ಓಡಿಸಿದಂಥ ಡ್ರೈವರ್‌ಗಳ ಮೇಲೆ ಏನು ಕ್ರಮವನ್ನು ಕೈಗೊಂಡಿದ್ದೀರಿ? ಎನ್ನುವುದರ ಬಗ್ಗೆ ಇದರಲ್ಲಿ ಹೇಳಿಲ್ಲ. ಇದರ ಬಗ್ಗೆ ತೀವ್ರವಾದ ಕ್ರಮವನ್ನು ಕೈಗೊಳ್ಳತಕ್ಕದ್ದು ಅವಶ್ಯಕತೆ ಇದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಅಧ್ಯಕ್ಷರೇ, ಅನೇಕ ರಾಜ್ಯಗಳವರು ಇದೇ ರೀತಿಯಾಗಿ ಬಸ್‌ಗಳನ್ನು ನಡೆಸುತ್ತಿದ್ದಾರೆ, ಪಕ್ಕದಲ್ಲಿರತಕ್ಕ ತಮಿಳುನಾಡಿನವರು ಮತ್ತು ಮಹಾರಾಷ್ಟ್ರದವರು ಲಾಭದಾಯಕವಾಗಿ ಈ ಇಲಾಖೆಯನ್ನು ನಡೆಸುತ್ತಿದ್ದಾರೆ. ಕೇರಳದಲ್ಲಿ ಸಹ ಲಾಭದಾಯಕವಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ತಮಿಳುನಾಡಿನಲ್ಲಿ ಒಂದು ಕಾರ್ಪೊರೇಷನ್ ಮಾಡಿದ್ದಾರೆ ಅಲ್ಲಿ ಲಾಭ ಬರುತ್ತಿದೆ ಎನ್ನತಕ್ಕದ್ದು ಸಾಮಾನ್ಯ ತಿಳುವಳಿಕೆ ಇದೆ. ನಾನು ಸಹ ಹಿಂದೆ ಕಮಿಟಿಯ ಸದಸ್ಯನಾಗಿದ್ದಾಗ ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಅಲ್ಲಿ ಮೊದಲು ೫ ವರ್ಷಗಳ ಕಾಲ ಲಾಭದಿಂದ ನಡೆಯುತ್ತಿತ್ತು. ಆದರೆ ಈಗ ಅಲ್ಲೂ ಸಹ ನಷ್ಟದಲ್ಲಿಯೇ ನಡೆಯುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಇಡೀ ಭಾರತದಲ್ಲಿ ಯಾವ ಕಾರ್ಪೊರೇಷನ್ ಸಹ ಲಾಭ ಮಾಡುತ್ತಿಲ್ಲ.

ಶ್ರೀ ಜಿ. ಎಚ್. ಗಂಗಾಧರನ್.—ದೆಹಲಿ ನಗರದೊಳಗೂ ಸಹ ೨೦೦ ಕೋಟಿ ರೂ.ಗಳು ನಷ್ಟ ಉಂಟಾಗಿದೆಯೆಂದು ಗೊತ್ತಾಗಿದೆ. ಆದರೆ ತಮಿಳುನಾಡು ಮಾತ್ರ ಲಾಭದಾಯಕವಾಗಿದೆ ಎನ್ನತಕ್ಕದ್ದು ಗೊತ್ತಾಗಿದೆ. ಅಲ್ಲಿ ಡಿವಿಜನ್ ಮಾಡಿರುವುದರಿಂದ ಲಾಭದಾಯಕವಾಗಿದೆಂದು ಕೇಳಿದ್ದೇನೆ. ಇದಕ್ಕೆ ಒಂದು ಸಮಿತಿಯನ್ನು ನೇಮಕ ಮಾಡಿದ್ದರು, ಶ್ರೀ ಅರುಮುಗಂರವರೇ ಅದಕ್ಕೆ ಛೇರ್ಮನ್ ಆಗಿದ್ದರು,

ಅವರ ವರದಿ ಏನಾಯಿತೋ ಗೊತ್ತಾಗಲಿಲ್ಲ. ಆದುದರಿಂದ ನಾವು ಈ ನಷ್ಟವನ್ನು ತಪ್ಪಿಸುವುದಕ್ಕಾಗಿ ಆಲೋಚನೆ ಮಾಡಬೇಕಾಗಿದೆ. ಈ ರೀತಿಯಾಗಿ ನಷ್ಟವಾಗುತ್ತಿದ್ದರೆ, ಈ ನಷ್ಟವಾಗುವುದು ಯಾರಿಗೆ? ಆದುದರಿಂದ ಇದರ ಬಗ್ಗೆ ತೀವ್ರವಾಗಿ ಆಲೋಚನೆ ಮಾಡದೇ ಹೋದರೆ ಇದರ ಹೊರೆ ಶ್ರೀಸಾಮಾನ್ಯನ ಮೇಲೆ ಬೀಳುತ್ತಿದೆ. ಇದರ ಜೊತೆಗೆ ತೆರಿಗೆಗಳನ್ನು ಹೇರಿ, ಅವನನ್ನು ಶೋಷಣೆ ಮಾಡಿ ನಿಮ್ಮ ಈ ಸಂಸ್ಥೆಯನ್ನು ನಡೆಸುವುದಾದರೂ ಏತಕ್ಕಾಗಿ? ನಷ್ಟವಿಲ್ಲದೇ ಮಾಡುವುದಕ್ಕೆ ನಿಮಗೆ ಬುದ್ಧಿ ಶಕ್ತಿ ಇಲ್ಲವೇ, ಲಾಭದಾಯಕವಾಗಿ ಮಾಡತಕ್ಕ ವಿವೇಚನಾ ಶಕ್ತಿ ನಿಮ್ಮಲ್ಲಿ ಇಲ್ಲವೇ? ಯಾವ ಕಾರಣದಿಂದ ನಷ್ಟ ಹೊಂದುತ್ತಿದೆ ಎಂಬುದನ್ನು ಕಂಡು ಹಿಡಿದು ಅದನ್ನು ಸರಿಪಡಿಸುವ ಬಗ್ಗೆ ನೀವು ಆಲೋಚನೆ ಮಾಡಬೇಕಾಗಿದೆ. ಇದನ್ನು ನೀವು ಸರಿಪಡಿಸದೇ ಹೋದರೆ ಇದರ ಹೊರೆ ಸಾಮಾನ್ಯ ಜನರಿಗೆ, ರೈತರ ತಲೆಯ ಮೇಲೆ ಹೊರೆ ಬೀಳುತ್ತದೆ. ಇದಕ್ಕೆ ನಾನೊಂದು ಸಲಹೆ ಕೊಡುವುದೇನೆಂದರೆ ಈ ರೀತಿಯಾಗಿ ನಷ್ಟವಾಗುತ್ತಿರುವುದನ್ನು ತಪ್ಪಿಸಬೇಕಾಗಿದ್ದರೆ ಜಾಯಿಂಟ್ ಸೆಕ್ಟರ್ ಕಂಪನಿಯ ತರಹ ಜನಗಳಿಂದ ಸಹ ಶೇರ್ ಬಂಡವಾಳವನ್ನು ಕಲೆಕ್ಟ್ ಮಾಡಿ, ಅವರಿಂದ ಚುನಾವಣೆ ನಡೆಸಿ ಆರಿಸಿ ಬರತಕ್ಕ ಡೈರೆಕ್ಟರ್‌ಗಳನ್ನು ನಿಮ್ಮ ಬೋರ್ಡ್‌ನಲ್ಲಿ ಹಾಕಿ. ಈ ಸಂಸ್ಥೆ ಹೆಚ್ಚಿನ ಲಾಭದಾಯಕವಾಗಿ ನಡೆಯುವ ರೀತಿಯಲ್ಲಿ ಏತಕ್ಕೆ ವ್ಯವಸ್ಥೆ ಮಾಡಬಾರದು? ಇಷ್ಟು ವಿಷಯವನ್ನು ಸಾರಿಗೆ ಸಂಸ್ಥೆಯ ಇಲಾಖೆಯ ಬಗ್ಗೆ ನನ್ನ ಅನಿಸಿಕೆಗಳನ್ನು ಹೆಚ್ಚಿದ್ದೇನೆ. ಇನ್ನು ತೋಟಗಾರಿಕೆ ಇಲಾಖೆಯ ಬಗ್ಗೆ ಕೆಲವು ಮಾತುಗಳನ್ನು ಮಾತ್ರ ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಇನ್ನೂ ತಜ್ಞರ ಅಭಿಪ್ರಾಯದ ಪ್ರಕಾರವಾಗಿ ೯೮ ಪರ್ಸೆಂಟ್ ಅಂಡರ್‌ಗ್ರೌಂಡ್ ವಾಟರ್ ಇದೆ, ಅದನ್ನು ನಾವು ಸರಿಯಾಗಿ ಉಪಯೋಗಿಸಿ ಕೊಳ್ಳುತ್ತಿಲ್ಲ. ನಮ್ಮ ರಾಜ್ಯದಲ್ಲಿ ೬೦ ಲಕ್ಷ ಭಾವಿಗಳನ್ನು ತೋಡುವುದಕ್ಕೆ ಅವಕಾಶವಿದೆ ಎನ್ನತಕ್ಕ ಮಾತನ್ನು ನಿಮ್ಮ ವರದಿಯಲ್ಲಿ ಹೇಳಿದ್ದೀರಿ. ಆ ರೀತಿಯಾಗಿ ನೀರನ್ನು ಉಪಯೋಗ ಮಾಡಿಕೊಂಡು ತೋಟಗಾರಿಕೆಯನ್ನು ಅಭಿವೃದ್ಧಿ ಮಾಡುವ ಕಡೆಗೆ ತಾವು ಗಮನವನ್ನು ಹರಿಸಬೇಕಾಗಿದೆ. ಇನ್ನು ಐ.ಎಂ.ಎಫ್‌ನಿಂದ ಸಾಲ ತೆಗೆದುಕೊಂಡಿದುದರ ಬಗ್ಗೆ ಒಬ್ಬ ತಜ್ಞರು ಒಂದು ಮಾತನ್ನು ಹೇಳಿದ್ದಾರೆ. ಅದು ಏನೆಂದರೆ ನಮ್ಮ ದೇಶದಲ್ಲಿ ಒಬ್ಬೊಬ್ಬ ವ್ಯಕ್ತಿ ಕೂಡ ತನ್ನ ಜೀವನದಲ್ಲಿ ಒಂದೊಂದು ಮರ, ಅದು ತೆಂಗಿನ ಮರ, ಹುಣಸೇ ಮರ, ಮಾವಿನ ಮರ ಯಾವುದೇ ಇರಲಿ ಒಂದು ಮರವನ್ನು ಬೆಳೆಸಿದರೆ ೫ ವರ್ಷದೊಳಗೆ ಆ ಸಾಲವನ್ನೆಲ್ಲಾ ತೀರಿಸುವುದಕ್ಕೆ ಸಾಧ್ಯವೆನ್ನತಕ್ಕ ಮಾತನ್ನು ಹೇಳಿದ್ದಾರೆ. ಆದುದರಿಂದ ನಮ್ಮ ರಾಜ್ಯದಲ್ಲಿರತಕ್ಕ ಅಧಿಕಾರಿ ಇರಲಿ, ನೌಕರನಿರಲಿ, ಪ್ರತಿಯೊಬ್ಬರೂ ಸಹ ಅವರು ನಿವೃತ್ತರಾಗುವುದರೊಳಗಾಗಿ ಒಂದೊಂದು ತೆಂಗಿನ ಮರವನ್ನು ಹಾಕಿ ಬೆಳೆಸಿದರೆ ನಮ್ಮ ರಾಜ್ಯದ ಸಾಲವನ್ನಾದರೂ ತೀರಿಸುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಸರ್ಕಾರದವರು ಉಚಿತವಾಗಿ ಗಿಡಗಳನ್ನು ಒದಗಿಸತಕ್ಕ ವ್ಯವಸ್ಥೆ ಮಾಡಿದ್ದೀರಿ ಸಂತೋಷ. ಆದರೆ ನೀಲಗಿರಿ ಮರಗಳನ್ನು ಬೆಳೆಯುವುದರಿಂದ ಮಳೆ ನೀರು ಕಡಿಮೆ ಯಾಗುತ್ತದೆ ಎನ್ನತಕ್ಕದ್ದು ತಜ್ಞರ ಅಭಿಪ್ರಾಯವಿದೆ. ಈ ನೀಲಗಿರಿ ಮರವನ್ನು ಬೆಳೆಸುವುದರಿಂದ ಜಲಾಂಶ ಕಡಿಮೆಯಾಗುತ್ತದೆ ಎನ್ನತಕ್ಕ ಭಾವನೆ ಬರುತ್ತದೆ. ಆದುದರಿಂದ ನೀಲಗಿರಿ ಮರದ ಬದಲು ತೆಂಗಿನ ಮರ, ಅಥವಾ ಮಾವಿನ ಮರಗಳನ್ನು ಬೆಳೆಸುವುದಕ್ಕೆ ಹೆಚ್ಚಿನ ಆಸಕ್ತಿ ವಹಿಸ ಬೇಕೆಂದು ಹೇಳಬಯಸುತ್ತೇನೆ. ಇನ್ನು ತೋಟಗಾರಿಕೆ ಇಲಾಖೆಯವರು ಒಂದು ಲೆಕ್ಕವನ್ನು ಕೊಟ್ಟಿದ್ದಾರೆ. ನಮ್ಮ ದೇಶದಲ್ಲಿ ೧೦ ಲಕ್ಷ ಟನ್ ಬಾಳೆಹಣ್ಣನ್ನು ಉತ್ಪತ್ತಿ ಮಾಡುತ್ತೇವೆಂದು, ಇದನ್ನು ಯಾವ ರೀತಿಯಾಗಿ ತೂಕ ಮಾಡಿದರೋ ನನಗಂತೂ ಆಶ್ಚರ್ಯವಾಗುತ್ತಿದೆ. ನಂಜನಗೂಡು ಬಾಳೆಹಣ್ಣಿಗೆ ಬಹಳ ಪ್ರಸಿದ್ಧಿಯಾಗಿದೆ, ಆದರೆ ನಂಜನಗೂಡಿನ ಬಾಳೆಹಣ್ಣೆಲ್ಲಾ ಕೆಟ್ಟು ಹಾಳಾಗಿ ಹೋಗುತ್ತಿದೆ. ಇನ್ನು ಹಡಗಲಿಯಲ್ಲಿ ಉತ್ಪತ್ತಿ ಮಾಡತಕ್ಕ ಬಾಳೆಹಣ್ಣೆಲ್ಲಾ ಇಂಗ್ಲೆಂಡ್‌ಗೆ ಹೋಗುತ್ತಿದೆ. ಇವತ್ತು ನಂಜನಗೂಡಿನಲ್ಲಿ ಬಾಳೆಹಣ್ಣಿಗೆ ಎಂಥಾದ್ದೋ ರೋಗ ತಗಲಿರುವುದರಿಂದ ಅದರ ಬಗ್ಗೆ ನಿಮ್ಮ ಇಲಾಖೆಯವರು ಸರಿಯಾದ ಸಂಶೋಧನಾ ಕೆಲಸವನ್ನು ಮಾಡುತ್ತಿಲ್ಲ, ಆ ಕಡೆಗೆ ಗಮನ ಹರಿಸಬೇಕೆಂದು ಹೇಳಬಯಸುತ್ತೇನೆ. ಈ ವರದಿಯಲ್ಲಿ ನೋಡಿದರೆ ೯೭೨ ಮಿಲಿಯನ್ ಟನ್ ತೆಂಗು ಉತ್ಪಾದನೆಯಾಗಿದೆ ಎಂದು ಹೇಳಿದ್ದಾರೆ. ತೆಂಗಿನಕಾಯಿಗಳನ್ನು ಹೇಗೆ ಲೆಕ್ಕ ಹಾಕಿದರೋ ಗೊತ್ತಿಲ್ಲ. ಇನ್ನೊಂದು ಆಶ್ಚರ್ಯದ ಸಂಗತಿ ಎಂದರೆ ೮೩ ಸಾವಿರದ ೨೭೦ ಮಿಲಿಯನ್ ವೀಳ್ಯದೆಲೆ ಎಂದು ಹೇಳಿದ್ದಾರೆ. ಹೀಗೆ ವರದಿಯಲ್ಲಿ ಕೊಟ್ಟಿದ್ದಾರಲ್ಲ, ಯಾವ ಯಾವ ತೋಟದಲ್ಲಿ ಹೋಗಿ ಲೆಕ್ಕ ಮಾಡಿದರು?

ಶ್ರೀ ಜಿ. ಡಿ. ಸೋಮಪ್ಪ.—ಆಕಾಶದಲ್ಲಿ ನಕ್ಷತ್ರಗಳನ್ನು ಲೆಕ್ಕ ಹಾಕಿದ ಹಾಗೆ.

ಶ್ರೀ ಹೆಚ್. ಗಂಗಾಧರನ್.—ತೋಟಗಾರಿಕೆ ಇಲಾಖೆಯಲ್ಲಿ ತೀವ್ರವಾಗಿ ಗಮನ ಕೊಡಬೇಕಾದುದು ಅಂದರೆ ವೀಳ್ಯದೆಲೆ, ಅಡಿಕೆ ಮತ್ತು ತೆಂಗು. ಇವು ಕಮರ್ಷಿಯಲ್ ಕ್ರಾಪ್ಸ್. ರೈತರ ಸಮಸ್ಯೆಯ ಪರಿಹಾರಕ್ಕೆ ಕೇವಲ ಊಟಕ್ಕಾಗಿ ಬಳಸುವ ಅಕ್ಕಿ, ರಾಗಿ, ಜೋಳ ಮುಂತಾದ ಪದಾರ್ಥಗಳನ್ನು ಬೆಳೆಯುವುದಕ್ಕೆ ರೈತರಿಗೆ ಎಷ್ಟೇ ಸಹಕಾರ ಕೊಟ್ಟರೂ ೪೦-೫೦ ಕೋಟಿಗಟ್ಟಲೆ ಹಣ ಕೊಟ್ಟರೂ ರೈತರ ಸಮಸ್ಯೆ ಬಗೆಹರಿದಿಲ್ಲ. ಇನ್ನು ೧೦೦ ಕೋಟಿ ಕೊಟ್ಟರೂ ಬಗೆಹರಿಯುವುದಿಲ್ಲ. ಆದುದರಿಂದ ತೋಟಗಾರಿಕೆ ಇಲಾಖೆಯಲ್ಲಿ ವಾಣಿಜ್ಯ ಬೆಳೆಗಳನ್ನು ಅಭ್ಯುದಯಗೊಳಿಸತಕ್ಕ ಮಾರ್ಗಗಳನ್ನು ಕಂಡುಹಿಡಿಯಬೇಕಾಗಿದೆ. ತೆಂಗು, ಹಣ್ಣು, ವೀಳ್ಯದೆಲೆ, ಅಡಿಕೆ ಮುಂತಾದ ವಾಣಿಜ್ಯ ಬೆಳೆಗಳನ್ನು ಬೆಳೆಯುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕಾಗಿದೆ. ಅದಕ್ಕೆ ಸಾಕಷ್ಟು ಸಹಾಯ ದೊರಕಿಸಿಕೊಡಬೇಕಾಗಿದೆ. ಅಲ್ಲದೆ, ಸಾಕಷ್ಟು ತಜ್ಞರ ಮಾರ್ಗದರ್ಶನವನ್ನು ಒದಗಿಸಿಕೊಡತಕ್ಕ ಅವಶ್ಯಕತೆ ಇದೆ. ಈ ವರದಿಯಲ್ಲಿ ಅಲೂಗಡ್ಡೆ, ಟೊಮ್ಯಾಟೊ, ಬದನೇಕಾಯಿ ಮುಂತಾದ ತರಕಾರಿಗಳ ಉತ್ಪಾದನೆಯ ಬಗ್ಗೆ ಹೇಳಿದ್ದೀರಿ. ಇವತ್ತಿನ ಪರಿಸ್ಥಿತಿ ಏನಾಗಿದೆಯೆಂದರೆ, ಇವು ಸಕಾಲಿಕವಾದಂಥ ಬೆಳೆಗಳು. ಕಾಲಕ್ಕನುಸಾರವಾಗಿ ಬೆಳೆಯತಕ್ಕ ಬೆಳೆಗಳು. ಬದನೆಕಾಯಿ ಬೆಳೆಯುವ ಕಾಲದಲ್ಲಿ ಅಧಿಕವಾಗಿ ಅದನ್ನು ಬೆಳೆಯುತ್ತಾರೆ. ಆಗ ಬೆಳೆದವರಿಗೆ ಬೆಲೆ ಇರುವುದಿಲ್ಲ. ಟೊಮ್ಯಾಟೊ ಬೆಳೆಯುವ ಕಾಲದಲ್ಲಿ ಟೊಮ್ಯಾಟೊ ಬೆಳೆಯುತ್ತಾರೆ. ಆಗ ಟೊಮ್ಯಾಟೊಗೆ ಬೆಲೆ ಇರುವುದಿಲ್ಲ. ರೈತ ಬೆಳೆದಂಥ ಬೆಳೆಯನ್ನು ಮಾರುಕಟ್ಟೆಗೆ ತರುವಾಗ ಅಲ್ಲಿ ಬೆಲೆ ಇರುವುದಿಲ್ಲ. ಕಳೆದ ವರ್ಷ ಮಾರ್ಕೆಟ್‌ನಲ್ಲಿ ಟೊಮ್ಯಾಟೊ ೮ ರೂಪಾಯಿಯಿಂದ ೧೬ ರೂಪಾಯಿವರೆಗೆ ಮಾರಾಟವಾಗಿರುವುದು ಇದೆ. ಬೆಲೆ ಇಷ್ಟು ಹೆಚ್ಚಾದರೂ ಅದು ಬೆಳೆದವರಿಗೆ ಸಿಕ್ಕುವುದಿಲ್ಲ. ಟೊಮ್ಯಾಟೊವನ್ನು ಒಂದು ಕೆ. ಜಿ.ಗೆ ೧೬ ರೂಪಾಯಿ ಕೊಟ್ಟು ತಿನ್ನತಕ್ಕ ಕಾಲವಿತ್ತು. ಇದಕ್ಕೆ ಕಾರಣವೇನೆಂದರೆ, ಇವತ್ತು ರೈತ ಬೆಳೆದು ತಂದಂಥ ಕಾಲದಲ್ಲಿ ಅದನ್ನು ಸಂರಕ್ಷಣೆ ಮಾಡತಕ್ಕ ಶೀತಾಗಾರಗಳ ಕೊರತೆ ಇದೆ. ಈ ಬಗ್ಗೆ ಸತತವಾಗಿ ವ್ಯವಸ್ಥೆ ಮಾಡುತ್ತೇವೆಂದು ಹೇಳುತ್ತಾ ಇದ್ದಾರೆ. ಆದರೆ ಸಾಕಷ್ಟು ಪ್ರಮಾಣದಲ್ಲಿ ನಡೆದಿಲ್ಲ ಎಂದು ಹೇಳಬೇಕಾಗಿದೆ. ನಾವು ಬೆಳೆಯತಕ್ಕ ತರಕಾರಿಗಳನ್ನು ಸಂರಕ್ಷಣೆ ಮಾಡತಕ್ಕ ಹೊಸ ಹೊಸ ವಿಧಾನಗಳು ಬಂದಿವೆ. ತರಕಾರಿಗಳನ್ನು ಬಹಳ ದಿವಸ ಪ್ರಿಸರ್ವ್ ಮಾಡತಕ್ಕ ವ್ಯವಸ್ಥೆ ಇದೆ. ಆದುದರಿಂದ ರೈತ ಬೆಳೆದ ಪದಾರ್ಥಗಳು ಮಾರುಕಟ್ಟೆಯಲ್ಲಿ ಮಾರಾಟವಾಗದೇಹೋದರೆ ಅದನ್ನು ಸಂರಕ್ಷಣೆ ಮಾಡತಕ್ಕ ಶೀತಾಗಾರಗಳನ್ನು ಅಧಿಕವಾಗಿ ಸ್ಥಾಪನೆ ಮಾಡತಕ್ಕದ್ದು ತೋಟಗಾರಿಕೆ ಇಲಾಖೆಯ ಜವಾಬ್ದಾರಿ ಇದೆ. ಮತ್ತೆ ತೋಟಗಾರಿಕೆ ಇಲಾಖೆಯಲ್ಲಿ ಬೆಳೆದಂಥ ಬೆಳೆಗೆ ನಮ್ಮ ದೇಶದ ಹೊರಗೆ ಮಾರ್ಕೆಟಿಂಗ್ ವ್ಯವಸ್ಥೆಯನ್ನು ಕಂಡುಹಿಡಿಯತಕ್ಕ ಪ್ರಯತ್ನ ಮಾಡಿಲ್ಲ. ಈ ಒಂದು ಮಾರ್ಕೆಟಿಂಗ್ ವ್ಯವಸ್ಥೆಯನ್ನು ಕಂಡುಹಿಡಿಯತಕ್ಕ ಕೆಲಸವನ್ನು ತೋಟಗಾರಿಕೆ ಇಲಾಖೆ ವಹಿಸಿಕೊಳ್ಳಬೇಕಾಗಿದೆ. ಅಡಿಕೆಯನ್ನು ವೀಳ್ಯದೆಲೆಯ ಜೊತೆಯಲ್ಲಿ ತಿನ್ನತಕ್ಕದ್ದು ಒಂದೇ ಅಲ್ಲ, ಬಣ್ಣಕ್ಕಾಗಿಯೂ ಕೂಡ ಉಪಯೋಗಿಸುತ್ತಾರೆ. ಅಡಿಕೆಯನ್ನು ತಮಿಳುನಾಡಿನಲ್ಲಿ, ಬಿಸಿಲು ಹೆಚ್ಚಾದ ಪ್ರದೇಶದಲ್ಲಿ ಹೆಚ್ಚಾಗಿ ಉಪಯೋಗಿಸುತ್ತಾರೆ. ಬಾಯಾರಿಕೆ ಕಡಿಮೆಯಾಗುತ್ತದೆಂದು ಅಡಿಕೆಯನ್ನು ಉಪಯೋಗಿಸುತ್ತಾರೆ. ಇದೇ ಅಡಿಕೆಯನ್ನು ಸರಿಯಾಗಿ ಮಾಡಿ ಗಲ್ಫ್ ಕಂಟ್ರೀಸ್‌ನಲ್ಲಿ ಪ್ರಚಾರ ಮಾಡತಕ್ಕಂಥ ಕಾರ್ಯಮಾಡಿದರೆ ನಮ್ಮ ದೇಶದಲ್ಲಿ ಬೆಳೆದಂಥ ಅಡಿಕೆಗೆ ಹೆಚ್ಚು ಬೆಲೆ ಸಿಗುತ್ತಿತ್ತು. ಹೊರದೇಶಗಳಲ್ಲಿ ಅಡಿಕೆಯನ್ನು ವಿವಿಧ ರೀತಿಯಲ್ಲಿ ಉಪಯೋಗ ಮಾಡತಕ್ಕ ವ್ಯವಸ್ಥೆಯನ್ನು ಮಾಡಬೇಕಾಗಿತ್ತು. ಪ್ರಮುಖವಾಗಿ ನಮ್ಮ ರಾಜ್ಯದಲ್ಲಿ ಗಮನಿಸಬೇಕಾದ ಅಂಶವೆಂದರೆ, ಅನಾನಸು, ಹಲಸಿನ ಹಣ್ಣುಗಳನ್ನು ಕೇವಲ ತಿನ್ನುವುದರಿಂದಲೇ ಮುಗಿಸುವುದಕ್ಕೆ ಆಗಿಲ್ಲ. ಕೊಡಗು, ದಕ್ಷಿಣ ಜಿಲ್ಲೆಗಳಲ್ಲಿ ಬೆಳೆಯತಕ್ಕ ಅನಾನಸು ಹಲಸಿನ ಹಣ್ಣುಗಳನ್ನು ತೆಗೆದು ಬಿಸಾಕತಕ್ಕ ಪರಿಸ್ಥಿತಿ ಇದೆ. ಕೇಳುವವರು ಇರುವುದಿಲ್ಲ, ಉಪಯೋಗ ಮಾಡುವವರು ಇರುವುದಿಲ್ಲ. ಈ ರೀತಿ ವ್ಯರ್ಥವಾಗುವುದನ್ನು ನೋಡುತ್ತಾ ಇದ್ದೇವೆ. ಇವೆಲ್ಲವನ್ನೂ ಉಪಯೋಗಿಸಿಕೊಂಡು ಲಾಭವಾಗಿ ಮಾಡಲಿಕ್ಕೆ ಸಾಧ್ಯವಾಗುತ್ತದೆ. ನಾನು ಪಿ.ಎ.ಸಿ ಯಲ್ಲಿ ಸಿಕ್ಕಿಂಗೆ ಹೋಗಿದ್ದಾಗ ಅಲ್ಲಿ ಒಬ್ಬರು ತಜ್ಞರು ಒಂದು ಪಾನೀಯವನ್ನು ತಯಾರಿಸಿದ್ದರು. ಅಡಿಕೆ, ಲವಂಗ, ಎಲೆ, ಜಾಕಾಯಿ ಮುಂತಾದ ವಸ್ತುಗಳನ್ನು ಸೇರಿಸಿ 'ಲಿಕ್ಯೂರ' ಎಂಬ ಪಾನೀಯವನ್ನು ತಯಾರು ಮಾಡಿ ವಿದೇಶಿ ಹಣ ಗಳಿಸುತ್ತಿದ್ದಾರೆ. ಎಲೆಯನ್ನು ಮಧ್ಯಪ್ರದೇಶದಿಂದ ತರಿಸುತ್ತಾರೆ, ಅಡಿಕೆಯನ್ನು ಕರ್ನಾಟಕದಿಂದ ತರಿಸುತ್ತಾ ಇದ್ದಾರೆ, ಏಲಕ್ಕಿಯನ್ನೂ ಕರ್ನಾಟಕದಿಂದ ತರಿಸುತ್ತಾ ಇದ್ದಾರೆ. ಲಿಕ್ಯೂರ ಎಂಬ ಪಾನೀಯವನ್ನು ತಯಾರುಮಾಡಿ, ವಿದೇಶಗಳಿಗೆ ಪಾನೀಯವನ್ನು ಕಳಿಸಿ, ಸಿಕ್ಕಿಂನಲ್ಲಿ ಹೆಚ್ಚು ಲಾಭದಾಯಕವಾದ ಉದ್ಯಮವಾಗಿ ಮಾಡಿದ್ದಾರೆ. ಆ ಪಾನೀಯವನ್ನು ೬ ತಿಂಗಳ ಮಗುವಿನಿಂದ ಹಿಡಿದು ದೊಡ್ಡವರೆಲ್ಲರೂ ಕುಡಿಯುತ್ತಾರೆ, ಮಳೆಗಾಲದಲ್ಲಿ ಪ್ರತಿ ಮನೆಯಲ್ಲೂ ಕಾಫಿ ಕುಡಿಯುವ ಹಾಗೆ ಕುಡಿಯುತ್ತಾರೆ, ಊಟವಾದ ಕೂಡಲೇ ಎಲ್ಲರಿಗೂ ತಂದುಕೊಡುತ್ತಾರೆ. ನಾನು ಏಕೆ ಈ

ಮಾತನ್ನು ಹೇಳುತ್ತಿದ್ದೇನೆಂದರೆ, ನಮ್ಮಲ್ಲಿ ಬೆಳೆಯುತಕ್ಕ ಎಲ್ಲಾ ವಸ್ತುಗಳನ್ನು ಉಪಯೋಗಿಸಿಕೊಂಡು ಪಾನೀಯವನ್ನು ತಯಾರುಮಾಡಿ ಒಂದಕ್ಕೆ ನಾಲ್ಕರಷ್ಟು ಬೆಲೆಗೆ ಮಾರಾಟ ಮಾಡತಕ್ಕ ವಿಜ್ಞಾನವನ್ನು ಅಲ್ಲಿ ಕಂಡುಕೊಂಡರು. ಅವರು ಕನ್ನಡಿಗರು, ತುಮಕೂರಿನ ಒಬ್ಬ ವಿಜ್ಞಾನಿ. ಎಲೆ, ಅಡಿಕೆ, ಲವಂಗ, ಏಲಕ್ಕಿ ಬಳಸಿ ಲಿಕ್ಕ್ಯೂರ ತಯಾರು ಮಾಡಿ ಕೊಟ್ಟಿದ್ದಾರೆ. ಇಲ್ಲಿಂದ ಹೋದ ಎಲೆ, ಅಡಿಕೆ ಮುಂತಾದುವುಗಳನ್ನು ಉಪಯೋಗ ಮಾಡಿ ಪಾನೀಯ ತಯಾರು ಮಾಡಿ ವಿದೇಶೀ ವಿನಿಮಯ ಗಳಿಸುತ್ತಿದ್ದಾರೆ. ಆದ್ದರಿಂದ ನಾನು ಹೇಳುವುದೇನೆಂದರೆ, ಹಲಸಿನ ಹಣ್ಣು, ಅನಾನಸು ಎಲ್ಲವನ್ನೂ ಬಳಸಿದರೆ ವಿದೇಶಗಳಿಗೆ ಹೋಗತಕ್ಕ, ಲಿಕ್ಕ್ಯೂರ ತಯಾರು ಮಾಡತಕ್ಕ ಸಾಧ್ಯತೆ ಇದೆ. ಇಂತಹ ಉದ್ಯೋಗಾವಕಾಶಗಳನ್ನು ಕಲ್ಪನೆ ಮಾಡಿಕೊಡತಕ್ಕ ಅವಕಾಶವಿದೆ. ಆದುದರಿಂದ ಈ ದಿಕ್ಕಿನಲ್ಲಿ ಆಲೋಚನೆಮಾಡಿ ತೋಟಗಾರಿಕೆಯಲ್ಲಿ ಉತ್ಪಾದನೆಯಾಗತಕ್ಕ ಪದಾರ್ಥಗಳನ್ನು ಉಪಯೋಗ ಮಾಡಿ ಹೆಚ್ಚಿನ ಲಾಭ ಗಳಿಸಲು ಅನುಕೂಲವಾಗುತ್ತದೆ ಎಂಬ ವಿಷಯವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಕೊನೆಯದಾಗಿ, ಪಶುಸಂಗೋಪನಾ ಇಲಾಖೆಯ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಗೋಸಂಪತ್ತನ್ನು ಅಭಿವೃದ್ಧಿಗೊಳಿಸಬೇಕು ಎಂಬ ಉದ್ದೇಶವಿದೆ. ಇದಕ್ಕೆ ಪ್ರಯತ್ನ ನಡೆಯುತ್ತಾ ಇದೆ. ಮಂತ್ರಿಗಳಿಗೆ ಕಾಗದ ಬರೆದು ಪಶು ವೈದ್ಯಶಾಲೆ ಕೊಡಿ ಅಂದರೆ ಪಶು ವೈದ್ಯರಿಲ್ಲ, ತಜ್ಞರಿಲ್ಲ ಎಂದು ಹೇಳುತ್ತಾ ಇದ್ದಾರೆ. ಹಿಂದಿನ ಕಾಲದಿಂದಲೂ ಇದೇ ಮಾತು ಕೇಳಿ ಬರುತ್ತಾ ಇದೆ. ಈ ಬಗ್ಗೆ ಒಂದೆರಡು ಕಾಲೇಜುಗಳನ್ನು ತೆಗೆಯುವುದಕ್ಕೆ ತೊಂದರೆಯೇನು? ಎಲ್ಲೋ ಹಿಡಿತವಿದೆ. ನಿಮ್ಮ ಕೈಯಲ್ಲಿ ಕಾಲೇಜು ತೆಗೆಯುವುದಕ್ಕೆ ಆಗಲಿಲ್ಲ ಅಂದರೆ ಖಾಸಗಿ ಜನರು ಬಂದು ತೆರೆಯುತ್ತಾರೆ. ಅದಕ್ಕೆ ಯೋಚನೆ ಮಾಡಬೇಕಾಗಿಲ್ಲ. ನಿಮ್ಮ ಬಂಡವಾಳವಿಲ್ಲದೆ ಕಾಲೇಜು ತೆರೆಯತಕ್ಕ ಜನರಿದ್ದಾರೆ. ಅದಕ್ಕೆ ಮನೋಧರ್ಮ ಬೇಕಾಗಿದೆ. ಪಶುವೈದ್ಯ ಕಾಲೇಜನ್ನು ತೆರೆಯಬೇಕು, ಪಶುವೈದ್ಯ ಶಾಲೆಗಳನ್ನು ತೆರೆಯಬೇಕು. ಏಕೆಂದರೆ, ಇವತ್ತು ದನಕರುಗಳು ಸಾಯುತ್ತಾ ಇವೆ, ಕೇಳುವವರಿಲ್ಲ. ಗೋಸಮೃದ್ಧಿ ಮಾಡಬೇಕು ಎಂಬ ಆಸೆ ಇಟ್ಟುಕೊಂಡಿರತಕ್ಕ ದೇಶದಲ್ಲಿ ಅವ್ಯವಸ್ಥೆಯಾಗಿದೆ. ಇದರ ಬಗ್ಗೆ ತೀವ್ರವಾಗಿ ಲಕ್ಷ್ಯಕೊಟ್ಟು ಪ್ರತಿ ಗ್ರಾಮದಲ್ಲೂ ವೈದ್ಯರು ಇರತಕ್ಕ ವ್ಯವಸ್ಥೆ ಮಾಡಬೇಕು. ಈಗಿನಂತೆ ಔಷಧಿ ಕೊಡತಕ್ಕ ವೈದ್ಯರು ಇಲ್ಲದೇ ಇದ್ದ ಕಾಲದಲ್ಲಿ ರೋಗವನ್ನು ವಾಸಿಮಾಡುತ್ತಿದ್ದ ಹಳ್ಳಿಯ ರೈತ ಇನ್ನೂ ಗ್ರಾಮದಲ್ಲಿದ್ದಾರೆ. ದೊಡ್ಡ ವೈದ್ಯರು, ತಜ್ಞರು, ವಿದೇಶಗಳಿಂದ ಶಿಕ್ಷಣ ಪಡೆದವರು ವಾಸಿಮಾಡಲಾಗದಂಥ ದನಗಳ ರೋಗವನ್ನು ವಾಸಿ ಮಾಡತಕ್ಕ ಪಂಡಿತರು ಇವತ್ತು ಹಳ್ಳಿಯಲ್ಲಿದ್ದಾರೆ, ಅವರು ಸಮರ್ಥರಿದ್ದಾರೆ. ಆದುದರಿಂದ ರೈತರಿಗೆ ಪಶುಗಳಿಗೆ ಔಷಧಿ ಕೊಡತಕ್ಕ, ಶಿಕ್ಷಣ ಕೊಡತಕ್ಕ ಶಿಬಿರಗಳನ್ನು ಏರ್ಪಾಡುಮಾಡತಕ್ಕ ವ್ಯವಸ್ಥೆ ಮಾಡಿದರೆ ಸಾಕಷ್ಟು ಸಮಸ್ಯೆ ಬಗೆಹರಿಯುತ್ತದೆಂದು ಹೇಳುತ್ತೇನೆ.

ಇನ್ನು ಹಾಲು ಉತ್ಪಾದನೆ ಬಗ್ಗೆ ಹೇಳುವುದಾದರೆ, ಹಾಲು ಉತ್ಪಾದನಾ ಕೇಂದ್ರಗಳಿಗೆ ವಿಶ್ವ ಬ್ಯಾಂಕಿನ ನೆರವು ಬರುತ್ತಿದೆ. ಒಂದು ಸಲ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂದು ಆಯಿತು. ಈಗ ಫೆಡರೇಷನ್ ಮಾಡುತ್ತಾ ಇದ್ದಾರೆ. ನೌಕರರನ್ನು ನೇಮಿಸಿಕೊಂಡಿರಿ, ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಲ್ಲಿ ಅವರಿಗೆ ಕೆಲಸ ಕೊಟ್ಟಿರಿ. ಈಗ ಅವರಿಗೆ ಹೊರಗೆ ಹಾಕುತ್ತೇವೆಂದು ಹೇಳಿದಿರಿ. ಅಲ್ಲದೆ ಫೆಡೆರೇಷನ್ ಬೇರೆ ಮಾಡುತ್ತಾ ಇದ್ದೀರಿ. ಈಗ ಅವರಿಗೆ ನೋಟೀಸ್ ಕೊಡುತ್ತಾ ಇದ್ದಾರೆ. ಒಮ್ಮೆ ಕೆಲಸಕ್ಕೆ ನೇಮಿಸಿಕೊಂಡ ಮೇಲೆ ಅವರಿಗೆ ವ್ಯವಸ್ಥೆ ಮಾಡಬೇಕಾಗಿದೆ. ಆಡಳಿತದಲ್ಲಿರತಕ್ಕ ನೌಕರರ ಸೇವಾನಿಯಮಗಳಲ್ಲಿ ಬಹಳಷ್ಟು ಲೋಪದೋಷಗಳಿವೆ, ಅವ್ಯವಹಾರ ಇದೆ, ಅದರ ಬಗ್ಗೆ ಗಮನಕೊಡಬೇಕಾಗಿದೆ. ೧೪–೧೫ ವರ್ಷಗಳಿಂದ ದುಡಿದವರಿಗೆ ತೊಂದರೆಯಾಗುತ್ತದೆ. ಅದರಲ್ಲಿ ಯೂನಿಯನ್‌ನಲ್ಲಿ ಕೆಲಸ ಮಾಡುವವರು ಬೇರೆ, ಡೈರಿಗಳಲ್ಲಿ ಕೆಲಸ ಮಾಡುವವರು ಬೇರೆ ಇದ್ದಾರೆ. ಅವರ ಜೀವನದ ಭವಿಷ್ಯದ ಬಗ್ಗೆ ನಿಶ್ಚಯವಿಲ್ಲ. ಕೂಲಿಗಾರರಂತೆ ಕೆಲಸ ಮಾಡುತ್ತಾ ಇದ್ದಾರೆ. ಹೀಗೆ ದುಡಿಯತಕ್ಕ ಜನಗಳ ಬಗ್ಗೆ ತೀವ್ರವಾದ ಗಮನಕೊಟ್ಟು ಯೂನಿಟ್‌ನಲ್ಲಿ ಕೆಲಸ ಮಾಡತಕ್ಕ ಮತ್ತು ಡೈರಿಗಳಲ್ಲಿ ಕೆಲಸ ಮಾಡತಕ್ಕ ವ್ಯಕ್ತಿಗಳಿಗೆ ನಿರ್ದಿಷ್ಟವಾದ ಸಂಬಳ ಸಾರಿಗೆ ಕೊಡತಕ್ಕ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ.

೨.೦೦ ಪಿ.ಎಂ.

ಅವರಿಗೆ ಸೇವಾ ನಿಯಮವನ್ನು ರಚನೆ ಮಾಡಬೇಕು. ಕಾರ್ಪೊರೇಷನ್ ಒಳಗೆ ಸೇವಾ ನಿಯಮವಿಲ್ಲ. ಫೆಡರೇಷನ್‌ನಲ್ಲಿ ಏನು ಮಾಡುತ್ತಿರೋ ನನಗಂತೂ ಗೊತ್ತಿಲ್ಲ. ಜೊತೆಗೆ ಇದನ್ನು ಲಾಭದಾಯಕವಾಗುವಂತಹ ಸಂಸ್ಥೆಯನ್ನಾಗಿ ಮಾಡುವುದಕ್ಕೆ ಸಾಧ್ಯ ಇದೆ. ಹೊಸ ಹೊಸ ವಿಜ್ಞಾನ

ಹಾಗೂ ತಾಂತ್ರಿಕ ವಿಜ್ಞಾನವನ್ನು ಬಳಸಿಕೊಂಡು ಲಾಭದಾಯಕವಾಗಿ ಕೆಲಸ ಮಾಡುವುದರ ಕಡೆಗೆ ಗಮನ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ನಿಮ್ಮ ವಾರ್ಷಿಕ ವರದಿಯ ಪುಟ ೮ರಲ್ಲಿ ಈ ರೀತಿಯಾಗಿದೆ, ''ಮೇಲಿನ ಕೋಷ್ಟದಲ್ಲಿ ತೋರಿಸಿರುವಂತೆ ವರದಿಯ ವರ್ಷದಲ್ಲಿ ೧೪೯.೬೩ ಲಕ್ಷ ಲೀಟರ್ ಹಾಲನ್ನು ಉತ್ಪಾದಿಸಲಾಗಿದ್ದು ೧೭೩.೮೮ ಲಕ್ಷ ಲೀಟರ್ ಹಾಲನ್ನು ವಿತರಿಸಲಾಗಿದೆ''. ಉತ್ಪಾದನೆ ಮಾಡಿದ್ದು ೧೪೯.೬೩ ಲಕ್ಷ ಲೀಟರ್ ಹಾಲಾದರೆ, ವಿತರಣ ಮಾಡಿದ್ದು ೧೭೩.೮೮ ಲಕ್ಷ ಲೀಟರ್ ಹಾಲು. ಅಂದರೆ ೨೪.೨೫ ಲಕ್ಷ ಲೀಟರ್ ನೀರನ್ನು ಬೆರೆಸಿ ಮಾರಿದ್ದಾರೆಂದರಾಯಿತು. ಇದನ್ನೇನಾದರೂ ಮಾಡಿದ್ದೀರೋ? ನೀರು ಬೆರೆಸಿದ ಹಾಲನ್ನು ಮಾರಾಟ ಮಾಡಿದ್ದೀರೋ. ಇದರ ಕಡೆಗ ಗಮನ ಕೊಡಬೇಕು. ಒಳ್ಳೆಯ ಹಾಲನ್ನು ಸುಧಾರಿಸಿದ ವ್ಯವಸ್ಥಿತ ರೀತಿಯಲ್ಲಿ ಮಾಡಿ. ಕೇವು ಹೊಸ ಯೋಜನೆಗಳನ್ನು ತೆಗೆದುಕೊಂಡಿದ್ದೀರಿ. ಇದನ್ನು ವ್ಯವಸ್ಥಿತ ರೀತಿಯಲ್ಲಿ ಮಾಡ ತಕ್ಕಂಥಹದ್ದು ಒಳ್ಳೆಯದು. ವ್ಯವಸ್ಥಿತ ರೀತಿಯಲ್ಲಿ ಹಾಲನ್ನು ಉತ್ಪಾದನೆ ಮಾಡತಕ್ಕಂತಹ ರೈತನಿಗೆ ನಿಜವಾದ ಬೆಲೆ ಸಿಕ್ಕಬೇಕು. ಗ್ರಾಹಕರಿಗೆ ಸರಿಯಾದ ಹಾಗೂ ಉತ್ತಮವಾದ ಹಾಲನ್ನು ದೊರೆಯುವ ರೀತಿಯಲ್ಲಿ ವ್ಯವಸ್ಥೆ ಮಾಡುವ ಕಡೆಗೆ ಹೆಚ್ಚು ತಮ್ಮ ಗಮನ ಹರಿಸಬೇಕೆಂದು ಹೇಳುತ್ತಾ ಕೇಳಿರುವ ಬೇಡಿಕೆಗೆ ನಮ್ಮ ನೀಡಿಕೆಯನ್ನು ಕೊಟ್ಟು ನನ್ನ ಮಾತುಗಳನ್ನು ಮುಗಿಸು ತ್ತೇನೆ.

† ಶ್ರೀ ಕೆ.ಜಿ. ಮಹೇಶ್ವರಪ್ಪ (ಮಾಯಕೊಂಡ).—ಸನ್ಮಾನ್ಯ ಅಧ್ಯಕ್ಷರೆ, ನಾನು ರಸ್ತೆ ಸಾರಿಗೆ ಸಂಸ್ಥೆ ಹಾಗೂ ಆ ಇಲಾಖೆಯ ಬಗ್ಗೆ ಮಾತ್ರ ಮಾತನಾಡುತ್ತೇನೆ, ಕಾಲಾವಕಾಶ ಇಲ್ಲದೇ ಇರುವುದ ರಿಂದ ಮೊದಲನೆಯದಾಗಿ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ರಚನೆಯ ಬಗ್ಗೆ ಕಳೆದ ಸಾರಿಯೇ ಪ್ರಸ್ತಾಪ ಮಾಡಿದ್ದೆ. ಮಾನ್ಯ ಸದಸ್ಯರಾದ ಶ್ರೀಮಾನ್ ಗಂಗಾಧರನ್‌ರವರು ಮಾತನಾಡುತ್ತಾ ಆದರ ನಿಯಮಾವಳಿಯ ಪ್ರಕಾರ ಕೇವಲ ಅಧಿಕಾರಿಗಳು ಇರತಕ್ಕಂತಹದ್ದಕ್ಕೆ ಮಾತ್ರ ಅವಕಾಶ ಇದೆ ಅಂತ ಹೇಳಿದರು. ಹಾಗೇನೂ ಇಲ್ಲ. ನಿಯಮಾವಳಿಯ ಪ್ರಕಾರವೇ ಇದು ರಚನೆಯಾಗಿಲ್ಲ. ಸೆಕ್ಷನ್ ೫ರ ಕೆಳಗೆ ಸರ್ಕಾರ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯನ್ನು ಒಳಪಡಿಸದೆ ಮಾಡಿರತಕ್ಕಂತಹದ್ದು ಅಂತ ಇದೆ. ನಿಯಮಾವಳಿ ೧೨ರಲ್ಲಿ ಎಷ್ಟು ಜನ ಸದಸ್ಯರಿರಬೇಕು ಅಂದರೆ ಬೋರ್ಡಿನಲ್ಲಿ ಎಷ್ಟು ಜನ ಸದಸ್ಯರಿರಬೇಕೆಂಬುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಅದರ ಪ್ರಕಾರ ಒಟ್ಟು ೨೦ ಜನ ಸದಸ್ಯರು ಆ ಬೋರ್ಡಿನಲ್ಲಿರಬಹುದು. ಅದರಲ್ಲಿ ೯ ಜನ ಅಧಿಕಾರಿಗಳು ಇರಬೇಕು. ಇನ್ನುಳಿದ ೧೧ ಜನ ಅಧಿಕಾರರೇತರನ್ನು ಅಂದರೆ ನಾನ್ ಅಫಿಷಿಯಲ್ಸ್ ಇರಬೇಕೂ ಅಂತ ಇದೆ. ಇದು ರಚನೆ ಯಾಗಿರುವಂತಹದ್ದೇ ಇಲ್ಲೀಗಲಾಗಿದೆ.

''Rule 12–The Corporation shall consist of 20 members out of which 9 shall be officers and 11 shall be non officials'' ರೂಲ್ ೧೨ರಲ್ಲಿ ನಾನು ಹೇಳಿದ ಹಾಗೆ ಈ ಕಾರ್ಪೊರೇಷನ್‌ನಲ್ಲಿ ೨೦ ಜನ ಸದಸ್ಯರಿರತಕ್ಕಂತಹ ಬೋರ್ಡಿನಲ್ಲಿ ಬರೀ ಅಧಿಕಾರಿಗಳೇ ಇದ್ದಾರೆ. ಅದರಲ್ಲೂ ರಾಜ್ಯ ಸರ್ಕಾರದಿಂದ ನಾಮಕರಣ ಮಾಡಿದಂತಹ ೯ ಜನ ಅಧಿಕಾರಿಗಳು ಹಾಗೂ ಕೇಂದ್ರ ಸರ್ಕಾರದಿಂದ ನಾಮಕರಣ ಮಾಡಿದಂತಹ ೩ ಜನ ಅಧಿಕಾರಿಗಳೂ ಮಾತ್ರ ಇದ್ದಾರೆ. ಆದ್ದರಿಂದ ಈ ಬಗ್ಗೆ ಕಳೆದ ಸಾರಿಯೇ ಹೇಳಿದಾಗಲೂ ಮಾನ್ಯ ಸಚಿವರು ಭರವಸೆ ಕೊಟ್ಟಿದ್ದರು. ಆದಷ್ಟು ಬೇಗ ಈ ನಿಯಮಾವಳಿಯ ಪ್ರಕಾರ ಅಧಿಕಾರರೇತರನ್ನು ನೇಮಕ ಮಾಡುತ್ತೇವೆ. ಬೋರ್ಡನ್ನು ಪುನರ್‌ರಚನೆ ಮಾಡುತ್ತೇವೆ. ಅಧಿಕಾರರೇತರನ್ನು ಅಧ್ಯಕ್ಷರನ್ನಾಗಿ ಮಾಡುತ್ತೇನೆ ಭರವಸೆ ಕೊಟ್ಟು ಒಂದು ವರ್ಷವಾಯಿತು. ಆದರೆ ಇದುವರೆವಿಗೂ ಏನೂ ಮಾಡಲಿಲ್ಲ. ಖಾಸಗಿಯವರನ್ನು ವಿವಿಧ ಕ್ಷೇತ್ರದಲ್ಲಿ ಹಾಗೂ ರಸ್ತೆ ಸಾರಿಗೆ ಸಂಸ್ಥೆಯ ಬಗ್ಗೆ ಆಸಕ್ತಿ ಇರತಕ್ಕಂತಹವರನ್ನು ಸೇರಿಸಿ ಬೋರ್ಡ್ ಅನ್ನು ಮಾಡಿದರೆ ರಸ್ತೆ ಸಾರಿಗೆ ಸಂಸ್ಥೆಯ ಕಾರ್ಯ ಯಶಸ್ವಿಯಾಗಿ ನಡೆಯುತ್ತದೆ ಎನ್ನುವುದೇ ನನ್ನ ಉದ್ದೇಶ.

ಶ್ರೀ ಆರ್.ಎನ್. ನಾಯಕ್.—ತಮ್ಮನ್ನೇನಾದರೂ ನೇಮಕ ಮಾಡಬೇಕೆಂದು ಹೇಳು ತ್ತಿದ್ದೀರೋ?

ಶ್ರೀ ಕೆ.ಜಿ. ಮಹೇಶ್ವರಪ್ಪ.—ಅಲ್ಲಿ ಅಧಿಕಾರರೇತರೇ ಇಲ್ಲ. ಇರುವುದು ಕೇವಲ ೯ ಜನ ಅಧಿಕಾರಿಗಳು ಮಾತ್ರ. ಕಳೆದ ೨–೩ ವರ್ಷಗಳಿಂದ ಇಲ್ಲಿ There has been too much bureaucratisation. In any Public Undertaking there shall not be over bureaucratisation. ಯಾವುದೇ ಒಂದು ಪಬ್ಲಿಕ್ ಅಂಡರ್‌ಟೇಕಿಂಗ್ ಲಾಭ

ದಾಯಕವಾಗಿ ಯಶಸ್ವಿಯಾಗಬೇಕಾದರೆ ಅದರಲ್ಲಿ ಅಧಿಕಾರಿಗಳೇ ಇರಬಾರದು. ಆದರೆ ಆ ರೀತಿ ಈ ಒಂದು ಸಂಸ್ಥೆಯಲ್ಲಿ ಆಗಿದೆ. ಆದ್ದರಿಂದ ಇದನ್ನು ಕೂಡಲೇ ಸರಿಪಡಿಸಬೇಕೆಂದು ಈ ಸಂದರ್ಭದಲ್ಲಿ ಸಲಹೆ ಕೊಡುತ್ತಿದ್ದೇನೆ.

ಇನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ನಡೆಸತಕ್ಕಂತಹ ವ್ಯವಹಾರದ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವತಿಯಿಂದ ರಾಷ್ಟ್ರೀಕರಣ ಮಾಡುವ ಸಲುವಾಗಿ ಡ್ರಾಫ್ಟ್ ಪ್ರೊಪೋಸಲ್ ಮಾಡಿದ್ದಾರೆ. ರಾಯಚೂರು ಡ್ರಾಫ್ಟ್ ಸ್ಕೀಂ, ಗುಲ್ಬರ್ಗ ಡ್ರಾಫ್ಟ್ ಸ್ಕೀಂ, ಬೀದರ್ ಡ್ರಾಫ್ಟ್ ಸ್ಕೀಂ ಹಾಗೂ ದಾವಣಗೆರೆ ಡ್ರಾಫ್ಟ್ ಸ್ಕೀಂ ಅಂತ ಆಗಿದೆ. ೧೯೭೦ರಲ್ಲಿ ರಾಯಚೂರು ಡ್ರಾಫ್ಟ್ ಸ್ಕೀಂ ಪಬ್ಲಿಶ್ ಆಗಿದೆ. ೧೯೮೧ರಲ್ಲಿ ಪುನಃ ರೀಪಬ್ಲಿಶ್ ಆಯಿತು. ಗುಲ್ಬರ್ಗದಲ್ಲಿಯೂ ಕೂಡ ಹಾಗೆಯೇ ಆಗಿದೆ. ಅದೇ ರೀತಿ ಬೀದರ್‌ನಲ್ಲೂ ಕೂಡ ಆಗಿದೆ. ಆದರೆ ದಾವಣಗೆರೆ ಡ್ರಾಫ್ಟ್ ಸ್ಕೀಂ ೧೯೭೪ರಲ್ಲಿ ಆದದ್ದು ಅದು ನೋಟಿಫೈ ಆಗಿಲ್ಲ, ಇದರ ಪರಿಣಾಮ ಏನಾಗುತ್ತದೆಂಬುದನ್ನು ಮಾನ್ಯ ಸಚಿವರು ಯೋಚನೆ ಮಾಡಬೇಕು. ಡ್ರಾಫ್ಟ್ ಸ್ಕೀಂ, ಏನಿದೆ ಇದನ್ನು ಅಪ್ರೂವ್ ಮಾಡಿ ಇಲ್ಲಿ ಮಾಡಿಫೈ ಮಾಡಿ, ಇಲ್ಲದಿದ್ದರೆ ರಿಜೆಕ್ಟ್ ಮಾಡಿ. ದಾವಣಗೆರೆಯ ಭಾಗದಲ್ಲಿ ಡ್ರಾಫ್ಟ್ ಸ್ಕೀಂ ಇದ್ದಾಗ್ಯೂ ಖಾಸಗಿ ಯವರು ಯಾರೂ ಓಡಿಸುವುದಕ್ಕೆ ಅವಕಾಶ ಇಲ್ಲ. ಇತ್ತೀಚೆಗೆ ಕೆಲವೊಂದನ್ನು ಹಿಯರಿಂಗ್ ಮಾಡಿ ದ್ದಾರೆಂದು ಕೇಳಿದ್ದೇನೆ. ಈ ಡ್ರಾಫ್ಟ್ ಸ್ಕೀಂಗಳು ಏನಿದೆ ಅವುಗಳನ್ನು ಅಪ್ರೂವ್ ಮಾಡಿ. ಇಲ್ಲದಿದ್ದರೆ ಮಾಡಿಫೈ ಮಾಡಿ. ಅದೂ ಆಗದಿದ್ದರೆ ಕೊನೆಗೆ ರಿಜೆಕ್ಟ್ ಮಾಡಿ. ಇದು ಯಾವುದನ್ನೂ ಮಾಡದೇ ಸುಮ್ಮನೆ ಹತ್ತಾರು ವರ್ಷಗಳಿಂದ ಹಾಗೇ ಇಟ್ಟುಕೊಂಡಿರುವಂತಹದ್ದು ಸರಿಯಲ್ಲವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಡ್ರಾಫ್ಟ್ ಸ್ಕೀಂನಲ್ಲಿ ಇನ್ನೊಂದು ಸಲಹೆಯನ್ನು ಕೊಡು ವುದಕ್ಕೆ ಬಯಸುತ್ತೇನೆ. ಅದೇನೆಂದರೆ, ರಾಷ್ಟ್ರೀಕರಣ ಮಾಡಿದಂತಹ ರಸ್ತೆಯಲ್ಲಿ ಇನ್ನು ಮುಂದೆ ಕೇವಲ ಒಂದು ಇಂಚು ಕೂಡ ಓವರ್ ಲ್ಯಾಪ್ ಆಗಬಾರದೆಂಬ ಬಿಗಿಯಾದ ನಿಲುವನ್ನು ತೆಗೆದು ಕೊಂಡಿದ್ದಾರೆ. ಎಲ್ಲಾ ಸ್ಕೀಂಗಳನ್ನು ಮಾಡಿಫೈ ಮಾಡಿ, ರಾಷ್ಟ್ರೀಕರಣವಾದಂತಹ ರಸ್ತೆಗಳಲ್ಲಿ ಒಂದು ಇಂಚೂ ಕೂಡ ಓವರ್ ಲ್ಯಾಪ್ ಆಗಬಾರದೆಂದು ಹೈಕೋರ್ಟಿನಲ್ಲಿ ತೀರ್ಪು ಕೊಟ್ಟಿದ್ದಾರೆ. ಆದರೆ ಸುಪ್ರೀಂ ಕೋರ್ಟಿನಲ್ಲಿ ಆ ಬಗ್ಗೆ ಅದಂತಹ ಒಂದು ಜಡ್ಜ್‌ಮೆಂಟ್‌ನಲ್ಲಿ ೮ರಿಂದ ೧೦ ಕಿಲೋ ಮೀಟರ್‌ವರೆಗೆ ಕೌಂಟರ್ ಸಿಗ್ನೇಚರ್ ಅನ್ನು ಇಂಟರ್‌ಸ್ಟೇಟ್ ಎನ್‌ಕ್ಲೇವ್ ಬಂದಾಗ ಕೊಡುತ್ತಾರೆ. ತಮಿಳುನಾಡಿನಲ್ಲಿ ಹಾಗೆ ಕೊಡುತ್ತಾ ಇದ್ದಾರೆ. ಪಾವಗಡದಿಂದ ಮುಂದೆ ಹೋಗುವ ರಸ್ತೆಯು ಆಂಧ್ರದ ಎನ್‌ಕ್ಲೇವ್‌ನಲ್ಲಿ ಬರುತ್ತದೆ. ಆವಾಗ ಕೌಂಟರ್ ಸಿಗ್ನೇಚರ್ ಕೊಟ್ಟು ಪರ್ಮಿಷನ್ ಕೊಡುವುದಕ್ಕೆ ಅವಕಾಶ ಇದೆ. ಖಾಸಗಿ ಬಸ್ಸುಗಳನ್ನು ನಡೆಸುವವರು ಯಾವ ರೀತಿಯಿಂದಲಾದರೂ ಕನಿಷ್ಟ ೨-೩ ಮೈಲಿ ರಸ್ತೆಯ ಕ್ರಾಸಿಂಗ್ ಆಗಲೇಬೇಕಾಗುತ್ತದೆ. ಅದಕ್ಕೆ ಅವಕಾಶವನ್ನು ಕೊಟ್ಟಿರ ತಕ್ಕಂತಹ ಉದಾಹರಣೆಗಳು ಇದ್ದಾವೆ. ಈ ರೀತಿಯ ಸಮಸ್ಯೆಗಳು ಬಂದಾಗ ಎಷ್ಟೋ ಕಡೆ ಅದಕ್ಕೆ ಎಗ್ಸೆಂಪ್ಷನ್ ಕೊಟ್ಟಿದ್ದಾರೆ. ಈ ರೀತಿಯ ಇಂಟರ್‌ಸ್ಟೇಟ್ ರಸ್ತೆಯ ಪ್ರಶ್ನೆ ಬಂದಾಗ ಕನಿಷ್ಟ ಪಕ್ಷ ೫-೧೦ ಮೈಲಿಯವರೆಗಾದರೂ ಎಗ್ಸೆಂಪ್ಷನ್ ಕೊಡುವುದಕ್ಕೆ ಈಗ ಇರುವ ಅಪ್ರೂವ್ಡ್ ಸ್ಕೀಂನಲ್ಲಾದರೂ ಹಾಗೂ ಡ್ರಾಫ್ಟ್ ಸ್ಕೀಂನಲ್ಲಾದರೂ ಮಾಡಿಫೈ ಮಾಡುವುದು ಸಾರ್ವಜನಿಕ ದೃಷ್ಟಿಯಿಂದ ಒಳ್ಳೆಯ ದೆಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಹಾಸನದಲ್ಲಿ ಅಪ್ರೂವ್ಡ್ ಸ್ಕೀಂ ೧೯೬೦ರಲ್ಲಿ ಬಂದು, ಅದರಲ್ಲಿ ಮಿನಿಮಮ್ ಹಾಗೂ ಮ್ಯಾಗ್ಸಿಮಮ್ ಸರ್ವೀಸ್ ಆವಾಗ ಏನಿದೆಯೋ ಅಷ್ಟೇ ಇದೆ. ಇದನ್ನು ಜಾಸ್ತಿ ಮಾಡುವುದಕ್ಕೆ ಮಾನ್ಯ ಮಂತ್ರಿಗಳು ಗಮನ ಹರಿಸಬೇಕೆಂದು ಸಲಹೆ ಮಾಡು ತ್ತಿದ್ದೇನೆ.

(ಶ್ರೀ ಪಿ. ರಾಮದೇವ್‌ರವರು—ಅಧ್ಯಕ್ಷರ ಸ್ಥಾನವನ್ನಲಂಕರಿಸಿದರು)

ಇನ್ನು ಮೋಟಾರ್ ವಾಹನ ಇಲಾಖೆಯಲ್ಲಿ ಈ ವರ್ಷ ೧೭ ಕೋಟಿ ರೂಪಾಯಿಗಳ ಹೆಚ್ಚಿನ ಆದಾಯ ಬಂದಿದೆ. ಮೋಟಾರು ವಾಹನ ಇಲಾಖೆಯಲ್ಲಿ ಕಳೆದ ವರ್ಷ ೧೭ ಕೋಟಿ ರೂಪಾಯಿಗಳ ಹೆಚ್ಚು ಆಧಾಯ ಬಂದಿದೆ. ೧೯೮೧-೮೨ರಲ್ಲಿ ೮ ಕೋಟಿ ರೂಪಾಯಿಗಳು ಹೆಚ್ಚಾಗಿ ಆದಾಯ ಬಂದಿದೆ. ಅದೇ ೧೯೮೨-೮೩ರಲ್ಲಿ ಇನ್ನೂ ೮ ಕೋಟಿ ರೂ.ಗಳ ಹೆಚ್ಚು ಆದಾಯ ಬಂದಿದೆ. ೧೯೮೩-೮೪ರಲ್ಲಿ ಈ ೯ ತಿಂಗಳಲ್ಲಿ ೧೭ ಕೋಟಿ ರೂಪಾಯಿಗಳ ವ್ಯತ್ಯಾಸ ಆದಾಯದಲ್ಲಿ ಹೆಚ್ಚಿಗೆ ಬಂದಿದೆ. ಆದ್ದರಿಂದ ಇದು ಸ್ವಲ್ಪ ಏರಿಕೆಯಾಗಿದೆ. ಇದರಲ್ಲಿರತಕ್ಕಂತಹ ಫಿಲ್ಪರೇಜ್ ಕಡಿಮೆ ಮಾಡಿ ಮೋಟಾರು ವಾಹನ ಇಲಾಖೆಯಲ್ಲಿ ೧೭ ಕೋಟಿ ರೂಪಾಯಿಗಳ ಹೆಚ್ಚು ಆದಾಯ ಏನು ಬಂದಿದೆ, ನಿಜವಾಗಿಯೂ ಇದರಲ್ಲಿ ಬಹಳ ಒಳ್ಳೆಯ ಕೆಲಸಗಳಾಗಿವೆ, ಅದಕ್ಕಾಗಿ ನಾನು ಅಭಿನಂದಿಸುತ್ತೇನೆ. ಮಾನ್ಯ ಸಚಿವರು

ಕೂಡ ಬಹಳ ಚುರುಕಾದ ಸಚಿವರಾಗಿರುವುದರಿಂದ ಬಸ್ಸುಗಳು ಚುರುಕಾಗಿ ನಡೆಯುತ್ತಿವೆ ಎಂಬ ಅಭಿಪ್ರಾಯ ಸಾರ್ವಜನಿಕರಿಂದಲೂ ಬರುತ್ತಿದೆ. ನನ್ನ ಕ್ಷೇತ್ರದಲ್ಲಿ ಸಬ್-ಅರ್ಬನ್ ಸರ್ವೀಸ್ ಪ್ರಾರಂಭ ಮಾಡಿದ್ದಾರೆ. ಅವುಗಳು ಪಟ್ಟಣದಿಂದ ೧೦-೧೫ ಮೈಲಿ ದೂರದ ಹಳ್ಳಿಗಳಿಗೂ ಹೋಗಿ ಬರಬೇಕಾಗಿರುವುದರಿಂದ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಬಸ್ಸುಗಳನ್ನು ಹಾಕಬೇಕು. ಆದುದರಿಂದ ಇವತ್ತು ಅದೊಂದೇ ಅಲ್ಲ. ಆರ್.ಟಿ.ಓ ಕಛೇರಿಯಲ್ಲಾಗಲಿ, ಎಸ್.ಟಿ.ಓ ಕಛೇರಿಯಲ್ಲಾಗಲಿ, ಬೇರೆ ಕಡೆಯಾಗಲಿ, ಲಂಚದ ಹಾವಳಿ ತಪ್ಪಿಲ್ಲ. ಒಂದು ಫಿಟ್‌ನೆಸ್ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕಾದರೆ, ಡ್ರೈವಿಂಗ್ ಲೈಸೆನ್ಸ್ ತೆಗೆದುಕೊಳ್ಳಬೇಕಾದರೆ ಗುಮಾಸ್ತರು ಮಾಮೂಲನ್ನು ವಸೂಲ್ಮಾಡುತ್ತಾರೆ ಅದನ್ನು ನಾನು ಖುದ್ದಾಗಿ ನೋಡಿದ್ದೇನೆ. ಫಿಟ್‌ನೆಸ್ ಸರ್ಟಿಫಿಕೇಟಿಗೆ ಇಷ್ಟು ಎಂದು ಮಾಮೂಲು ಮಾಡಿಕೊಂಡಿದ್ದಾರೆ. ಇದನ್ನು ಹೇಗೆ ತಪ್ಪಿಸಬೇಕೆಂದು ಅರ್ಥವಾಗುತ್ತಿಲ್ಲ. ಯಾರೂ ಕೂಡ ೨೫೦ ರೂಪಾಯಿಗಳಿಗೆ ಕಡಿಮೆ ತೆಗೆದುಕೊಳ್ಳುವುದಿಲ್ಲ. ಮತ್ತೆ ಅದರ ಮೇಲೆ ಹೋಗದಂತೆ ತಡೆಯಿರಿ. ಈಗ ಧಾರಣೆವಾಸಿಗಳು ಜಾಸ್ತಿಯಾಗಿವೆ ಎಂದು ೨೫೦ ರೂಪಾಯಿ ಇರುವುದನ್ನು ೩೦೦ ರೂಪಾಯಿ ಮಾಡದಂತೆ ತಡೆಯಿರಿ. ಇದೂ ಕೂಡ ಬೆಲೆ ಸೂಚ್ಯಂಕದ ಪ್ರಕಾರ ಆಗಬಾರದು. ಇವತ್ತಿನ ದಿವಸ ಆರ್.ಟಿ.ಓ ಕಛೇರಿಗಳಿಗೆ ವಿಪರೀತ ಬಾಡಿಗೆ ಕೊಡುತ್ತಿದ್ದಾರೆ. ಬೆಂಗಳೂರಿನ ಆರ್.ಟಿ.ಓ ಕಛೇರಿಗೆ ೧೦ ಸಾವಿರ ರೂಪಾಯಿ ಬಾಡಿಗೆ ಕೊಡುತ್ತಿದ್ದಾರೆ. ಬೇರೆ ಊರುಗಳಲ್ಲಿರತಕ್ಕ ಕಛೇರಿಗಳೆಲ್ಲ ಬಾಡಿಗೆ ಕಛೇರಿಗಳೇ. ಇಷ್ಟು ವರ್ಷಗಳಿಂದ ಕೋಟ್ಯಾಂತರ ರೂಪಾಯಿಗಳ ವ್ಯವಹಾರ ಮಾಡತಕ್ಕ ಇಲಾಖೆಗೆ ಕಛೇರಿಗಳಿಗೆ ಬೇಕಾದ ಕಟ್ಟಡಗಳನ್ನು ಕಟ್ಟುವುದಕ್ಕೆ ಆಗಿಲ್ಲ. ಹಿಂದಿನ ಸರ್ಕಾರದವರು ಇದರ ಬಗ್ಗೆ ಗಮನ ಕೊಟ್ಟಿರಲಿಲ್ಲ. ಕಳೆದ ವರ್ಷ ನೀವು ೭-೮ ದೊಡ್ಡ ದೊಡ್ಡ ಊರುಗಳಲ್ಲಿ ಆರ್.ಟಿ.ಓ ಕಛೇರಿಗಳನ್ನು ಕಟ್ಟಿಸುವುದಕ್ಕೆ ಹಣ ಒದಗಿಸಿ ಈ ವರ್ಷ ೧೧ ಊರುಗಳಲ್ಲಿ ಕಛೇರಿಗಳನ್ನು ಕಟ್ಟಿಸುವುದಕ್ಕೆ ಹಣ ಒದಗಿಸಿದ್ದಾರೆ. ಅದಕೋಸ್ಕರ ಅವರಿಗೆ ನಾನು ಅಭಿನಂದಿಸುತ್ತೇನೆ. ಇನ್ನು ಕೆ.ಎಸ್.ಆರ್.ಟಿ.ಸಿಯಲ್ಲಿ ಬಸ್ಸುಗಳ ಬಾಡಿ ಬಿಲ್ಡಿಂಗ್ ಕೆಲಸವನ್ನು ಅವರೇ ವಹಿಸಿಕೊಳ್ಳಬೇಕೆಂದು ಕಳೆದ ಸಾರಿ ಹೇಳಿದ್ದೆ. ಅವರು ವಹಿಸಿಕೊಳ್ಳುತ್ತೇವೆಂದು ಹೇಳಿದ್ದರು. ಹುಬ್ಬಳ್ಳಿಯಲ್ಲಿ ಮತ್ತು ಬೆಂಗಳೂರಿನಲ್ಲಿ ಬಹಳ ವರ್ಕ್‌ಷಾಪ್‌ಗಳು ಇವೆ. ಅಲ್ಲಿ ತಿಂಗಳಿಗೆ ೫೦ ವಾಹನಗಳಿಗೆ ಬಾಡಿ ಬಿಲ್ಡ್ ಮಾಡುವುದಕ್ಕೆ ಅವಕಾಶ ಇದೆ. ಹೋದ ವರ್ಷ ಹೊಸದಾಗಿ ೬೦೦ ವಾಹನಗಳನ್ನು ತಂದರು ಅವಕ್ಕೆಲ್ಲ ಬಾಡಿ ಬಿಲ್ಡ್ ಮಾಡಿದ್ದರೆ ಸ್ವಲ್ಪ ಹಣ ಉಳಿತಾಯವಾಗುತ್ತಿತ್ತು. ಒಂದು ವಾಹನವನ್ನು ಹೊರಗಡೆ ಕಳುಹಿಸದೆ ಕೆ.ಎಸ್.ಆರ್.ಟಿ.ಸಿ ವರ್ಕ್‌ಷಾಪ್‌ನಲ್ಲಿ ಬಾಡಿ ಬಿಲ್ಡಿಂಗ್ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಬಿಡಿ ಭಾಗಗಳನ್ನು ಕೊಂಡು ಇಟ್ಟುಕೊಳ್ಳುವುದರಿಂದ ಕೋಟ್ಯಾಂತರ ರೂಪಾಯಿ ಹಣ ಬೇಕಾಗುತ್ತದೆ. ಆದ್ದರಿಂದ, ಟಾಟಾ, ಮರ್ಸಿಡೀಸ್, ಬೆಂಜ್ ಕಂಪನಿಯವರು ಬಿಡಿ ಭಾಗಗಳನ್ನು ಸ್ಟಾಕ್ ಇಟ್ಟುಕೊಂಡು ಇಲಾಖೆಗೆ ಬೇಕಾದಾಗ ಅವುಗಳನ್ನು ಕೊಟ್ಟರೆ ಆದರಿಂದ ಲಕ್ಷಾಂತರ ರೂಪಾಯಿ ಉಳಿತಾಯವಾಗುತ್ತದೆ. ಆ ಒಂದು ಕೆಲಸ ಮಾಡಲು ಆ ಕಂಪನಿಗಳವರು ಮುಂದೆ ಬಂದಿರುವುದು ಸ್ವಾಗತಾರ್ಹವಾದುದು ಮೊದಲೆಲ್ಲ ಬಿಡಿ ಭಾಗಗಳನ್ನು ಇಲಾಖೆಯಲ್ಲಿ ಇಟ್ಟುಕೊಂಡು ಅವು ಖರ್ಚಾಗದೆ ಅನೇಕ ದುರ್ವ್ಯವಹಾರಗಳು ನಡೆಯುತ್ತಿದ್ದವು. ಈ ಸಂದರ್ಭದಲ್ಲಿ, ಆಯಾಯ ಕಂಪನಿಯವರು ಬೇಕಾದಾಗ ಬೇಕಾದ ಬಿಡಿ ಭಾಗಗಳನ್ನು ಒದಗಿಸುತ್ತೇವೆಂದು ಮುಂದೆ ಬಂದಿರುವುದು ಸಂತೋಷ. ಇದರಿಂದ ಹೊಸ ಬಿಡಿ ಭಾಗಗಳನ್ನು ಖಾಸಗಿಯವರಿಗೆ ಮಾರಿ ಹಳೇ ಭಾಗಗಳನ್ನು ಇಟ್ಟು ಲಕ್ಷಾಂತರ ರೂಪಾಯಿ ನಷ್ಟವಾಗುವುದನ್ನು ತಪ್ಪಿಸುವುದಕ್ಕೆ ಅನುಕೂಲವಾಯಿತು. ಈ ಒಂದು ವ್ಯವಸ್ಥೆಯನ್ನು ಕೂಡಲೇ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ, ಡ್ರೈವರ್ ಮತ್ತು ಕಂಡಕ್ಟರ್‌ಗಳ ವರ್ತನೆ ಬಗ್ಗೆ ಅನೇಕ ಟೀಕೆಗಳು ಬಂದಿವೆ. ಅದಕೋಸ್ಕರ ಅವರಿಗೆ ಒಂದು ತರಬೇತಿ ಶಾಲೆಯನ್ನು ಮಾಡಬೇಕೆಂದು ಹೇಳುತ್ತೇನೆ. ಪೋಲೀಸ್ ತರಬೇತಿ ಶಾಲೆಗಳನ್ನು ಮಾಡಿದ ಹಾಗೆ ಡ್ರೈವರ್ ಮತ್ತು ಕಂಡಕ್ಟರ್‌ಗಳಿಗೆ ಪ್ರಯಾಣಿಕರೊಡನೆ ಹೇಗೆ ವರ್ತಿಸಬೇಕು ಎಂಬ ಬಗ್ಗೆ ತರಬೇತಿ ನೀಡಲು ೬ ತಿಂಗಳು ಅಥವಾ ಒಂದು ವರ್ಷದ ಕೋರ್ಸ್ ಇಟ್ಟು ಅದರಲ್ಲಿ ತರಬೇತಿ ಪಡೆದವರಿಗೆ ಮಾತ್ರ ಡ್ರೈವರ್ ಮತ್ತು ಕಂಡಕ್ಟರ್ ಕೆಲಸವನ್ನು ಕೊಡಬೇಕೆಂದು ಹೇಳುತ್ತೇನೆ. ಇತ್ತೀಚೆಗೆ ಕಂಡಕ್ಟರ್ ಮತ್ತು ಗಿರಾಕಿಯೊಬ್ಬರ ಮಧ್ಯೆ ಘರ್ಷಣೆ ನಡೆದು ಕಂಡಕ್ಟರ್ ಒಬ್ಬರ ಕೊಲೆಯೇ ಆಯಿತು. ಅಲ್ಲಿ ಕಂಡಕ್ಟರ್ ವರ್ತನೆ ಸರಿಯಿತ್ತೋ ಅಥವಾ ಗಿರಾಕಿಯ ವರ್ತತೆ ಸರಿಯಿತ್ತೋ ಗೊತ್ತಿಲ್ಲ. ಆದುದರಿಂದ ಸಾರ್ವಜನಿಕರ ಬಗ್ಗೆ ಈ ಇಲಾಖೆಯ ನೌಕರರು, ಡ್ರೈವರ್-ಕಂಡಕ್ಟರ್ ಸಂಯಮದಿಂದ ನಡೆದುಕೊಳ್ಳಬೇಕು. ಆದ್ದರಿಂದ, ಅದರ ಬಗ್ಗೆ ಒಂದು ತರಬೇತಿ ಶಾಲೆಯನ್ನು ತೆರೆಯಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿರತಕ್ಕ ಶೇಕಡ ೫೦ ಭಾಗ ವಾಹನಗಳು ನಮ್ಮ ಬೆಂಗಳೂರು

ನಗರದಲ್ಲಿವೆ. ಬೀದರ್‌ನಂತಕ ಜಿಲ್ಲೆಗಳಲ್ಲಿ ಶೇಕಡ ೯ ಭಾಗ ವಾಹನಗಳಿವೆ. ಆದ್ದರಿಂದ ಬೆಂಗಳೂರು ನಗರದಲ್ಲಿ ೫-೬ ಆರ್.ಟಿ.ಓ ಕಛೇರಿಗಳನ್ನು ಮಾಡಿದರೆ ವಿಕೇಂದ್ರೀಕರಣವಾಗಿ ಅನುಕೂಲವಾಗುತ್ತದೆ. ಅದಕ್ಕಾಗಿ ಹೆಚ್ಚು ಆರ್.ಟಿ.ಓ ಕಛೇರಿಗಳನ್ನು ತೆರೆಯುತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ, ಪಶುಸಂಗೋಪನೆ ಇಲಾಖೆಯ ಬಗ್ಗೆ ಒಂದೇ ಒಂದು ವಿಚಾರವನ್ನು ಹೇಳುತ್ತೇನೆ. ನನ್ನ ಕ್ಷೇತ್ರದಲ್ಲಿ ಮತ್ತು ಜಿಲ್ಲೆಯಲ್ಲಿ ಬಂದಂತಹ ಅಪಾದನೆಯ ವಿಚಾರವನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ಕೃತಕ ಗರ್ಭಧಾರಣೆ ಮಾಡತಕ್ಕ ಇಂಜಕ್ಷನ್ಸ್ ಎನಿವೆ ಅವನ್ನು ಹತ್ತಿಪ್ಪತ್ತು ಸಾರಿ ಮಾಡಿದರೂ ಯಾವ ಹಸುಗಳೂ ಗರ್ಭಧಾರಣೆ ಆಗುತ್ತಿಲ್ಲ. ಎಷ್ಟೋ ಕಡೆ ಹಳ್ಳಿಗಳಲ್ಲಿ ಗರ್ಭಧಾರಣೆಗಾಗಿ ಏತಕ್ಕೆ ಹಸುಗಳನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಬೇಕೆಂಬತಕ್ಕ ಪರಿಸ್ಥಿತಿ ಉಂಟಾಗಿದೆ ಕಳೆದ ವರ್ಷ ಕೆಲಸ ಚೆನ್ನಾಗಿ ನಡೆಯುತ್ತಿತ್ತು. ಅಂದಾಗ ಅದರರಲ್ಲಿ ಏನೋ ಒಂದು ಕೊರತೆ ಇದೆ ಅನ್ನಿಸುತ್ತದೆ. ಉಪಯೋಗ ಇಲ್ಲದಂತಹ ಇಂಜಕ್ಷನ್‌ಗಳನ್ನು ತರಿಸಿ ಇಂಜಕ್ಟ್ ಮಾಡುತ್ತಿದ್ದಾರೆಯೇ ಎಂಬುದನ್ನು ಇನ್‌ವೆಸ್ಟಿಗೇಟ್ ಮಾಡಬೇಕು. ಅದರಿಂದ ಗ್ರಾಮಾಂತರ ಪ್ರದೇಶದ ಜನರಿಗೆ ಬಹಳ ತೊಂದರೆಯಾಗಿದೆ ಎಂದು ಹೇಳುತ್ತೇನೆ. ಇದನ್ನು ಕೂಡಲೇ ಸರಿಪಡಿಸಬೇಕು. ಹಾಲಿನ ವಿಚಾರವನ್ನು ದೊಡ್ಡಬೋರೇಗೌಡರು ಪ್ರಸ್ತಾಪಿಸಿದರು. ಕೊಂಡುಕೊಳ್ಳುವವರು ಮತ್ತು ಮಾರುವವರ ನಡುವೆ ಒಂದು ರೂಪಾಯಿ ವ್ಯತ್ಯಾಸವಾಗಿದೆ ಎಂದು ಹೇಳಿದರು. ಇಷ್ಟೊಂದು ಅಂತರ ಯಾವತ್ತೂ ಇರಬಾರದು. ಇದನ್ನು ಮೊದಲು ಸರಿಪಡಿಸಬೇಕು. ಸಾರಿಗೆ ಸಂಸ್ಥೆಯ ವಿಚಾರದಲ್ಲಿ ಬಹಳ ಹೇಳಬೇಕೆಂದು ಇದ್ದೆ. ಆದರೆ ತಾವು ಅವಕಾಶ ಕೊಡುತ್ತಿಲ್ಲ. ಆದ್ದರಿಂದ ಆ ಬೋರ್ಡನ್ನು ತಕ್ಷಣ ರೀ ಕಾನ್‌ಸ್ಟಿಟ್ಯೂಟ್ ಮಾಡಿ ಅದರಲ್ಲಿ ಅಫಿಷಿಯಲ್ಸ್ ಮತ್ತು ನಾನ್ ಅಫಿಷಿಯಲ್ಸ್ ಇರುವಂತೆ ಮಾಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ.ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಅಧ್ಯಕ್ಷರೆ, ಸಾರಿಗೆ ಇಲಾಖೆ, ಪಶುಸಂಗೋಪನಾ ಇಲಾಖೆ ಮತ್ತು ತೋಟಗಾರಿಕೆ ಇಲಾಖೆ ಈ ಮೂರು ಇಲಾಖೆಯ ಬೇಡಿಕೆಗಳನ್ನು ಕುರಿತು ಮಾತನಾಡಬೇಕಾಗಿದೆ. ನಾನು ಮೊದಲನೆಯದಾಗಿ ಪಶು ಸಂಗೋಪನಾ ಇಲಾಖೆಯ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಹಾಲಿನ ಬೆಲೆ ಏರಿಕೆಯ ಬಗ್ಗೆ ಹೇಳುವುದಾದರೆ, ಬೆಲೆ ಏರಿಸಬೇಕಾಗಿತ್ತೇ ಬೇಡವೇ ಎಂಬ ಪ್ರಶ್ನೆ ಬಂದು ನಾವು ನೀವು ಹೋಗಿ ಮಂತ್ರಿಗಳನ್ನು ಕೇಳಿದೆವು. ಆಗ ನಮ್ಮನ್ನೆಲ್ಲ ಕರೆಸಿ ಮಾತನಾಡಿ, ಮಾಡಬೇಕೇ ಬೇಡವೇ ಎಂಬುದನ್ನು ತೀರ್ಮಾನ ಮಾಡುತ್ತೇವೆಂದು ಹೇಳಿದರು.

ಛೇರ್ಮನ್.—ವೆಸ್ಟ್‌ಎಂಡ್ ಹೋಟೆಲಿನಲ್ಲಿ ಡಿನ್ನರ್ ಕೊಟ್ರಲ್ಲ.

ಶ್ರೀ ಎಂ ಎಸ್. ಕೃಷ್ಣನ್.—ಪೂರಾ ವೆಜಿಟೇರಿಯನ್ ಡಿನ್ನರ್ ಕೊಟ್ಟರು. ಆದರೆ ಅವರು ನಾವು ಹೇಳಿದ್ದನ್ನು ಮಾಡಲಿಲ್ಲ. ಅದು ನ್ಯಾಯವಾದುದಲ್ಲವೆಂದು ನನಗನ್ನಿಸುತ್ತದೆ. ಎಲ್ಲರನ್ನೂ ಕನ್‌ಸಲ್ಟ್ ಮಾಡಿ ಮಾಡಬೇಕಾಗಿತ್ತು. ಶ್ರೀ ಚಿಕ್ಕೇಗೌಡರು ಮತ್ತು ಶ್ರೀ ದೊಡ್ಡಬೋರೇಗೌಡರು ಹಾಲಿನ ದರದ ಬಗ್ಗೆ ಮಾತನಾಡಿದರು. ಅಂದಾಕ್ಷಣ ರಾತ್ರಿಗೆ ಹಾಲು ಉತ್ಪಾದಕರಿಗೆ ಅನ್ಯಾಯವಾಗಬೇಕೆಂದು ಅಲ್ಲ. ಗ್ರಾಹಕರಿಗೆ ಮತ್ತು ಉತ್ಪಾದಕರಿಗೆ ಅನುಕೂಲವಾಗಬೇಕೆಂದು ಹೇಳೋಣ. ಯಾರಿಗೂ ಅನ್ಯಾಯವಾಗಬೇಕೆಂದು ಇಲ್ಲ. ಈ ವಿಚಾರ ಇಲ್ಲಿ ಚರ್ಚೆಗೆ ಬರಲಿಲ್ಲ. ನನ್ನ ಬಿನ್ನಹ ಏನೆಂದರೆ ನಿಮ್ಮ ಧೋರಣೆ, ಮನೋಭಾವ ಮತ್ತು ಪ್ರವೃತ್ತಿಯನ್ನು ಬದಲಾವಣೆ ಮಾಡಿಕೊಳ್ಳಬೇಕು. ನೀವು ಹಾಲಿನ ಬೆಲೆಯನ್ನು ಜಾಸ್ತಿ ಮಾಡಬೇಕಾಗಿರಲಿಲ್ಲ. ಅವರಿಗೆ ಬೇಕಾದ ಬೂಸಾ, ಹಿಂಡಿ ಮುಂತಾದವುಗಳನ್ನು ಕಡಿಮೆ ಬೆಲೆಯಲ್ಲಿ ಒದಗಿಸಿದ್ದರೆ ಅವರಿಗೂ ನ್ಯಾಯವಾದ ಬೆಲೆ ಸಿಗುತ್ತಿತ್ತು. ಗ್ರಾಹಕರಿಗೂ ಕಡಿಮೆ ಬೆಲೆಯಲ್ಲಿ ಹಾಲು ಸಿಗುತ್ತಿತ್ತು. ಅದನ್ನು ಮಾಡುವ ಚೈತನ್ಯವನ್ನು ನೀವು ಪಡೆಯಬೇಕು. ಇಂಥ ವಿಷಯಗಳು ಬಂದಾಗ ಎಲ್ಲರನ್ನೂ ಕನ್‌ಸಲ್ಟ್ ಮಾಡಿ ಮಾಡಬೇಕು. ನನ್ನ ಕ್ಷೇತ್ರದಲ್ಲಿ ಒಂದು ಪಶುವೈದ್ಯಶಾಲೆ ಮಾಡಬೇಕೆಂದು ನಾನು ಒಂದು ವರ್ಷದ ಹಿಂದೆ ತಮ್ಮನ್ನು ಕೇಳಿಕೊಂಡೆ. ಅಲ್ಲಿ ಬಹಳ ಜನ ಬಡವರು ಹಸುಗಳನ್ನು ಇಟ್ಟುಕೊಂಡು ಹಾಲು ಮಾರುತ್ತಿರುವುದರಿಂದ ಅಲ್ಲಿ ಪಶುವೈದ್ಯಶಾಲೆ ಅವಶ್ಯಕ ಎಂದು ಹೇಳಿದ ಮೇಲೆ ತಾವು ಆಗಬಹುದು, ವಿಚಾರ ಮಾಡುತ್ತೇನೆ ಎಂದು ಹೇಳಿದಿರಿ. ಈಗ ಅವಕ್ಕೆ ಕಾರ್ಪೊ

ರೇಷನ್ನಿನವರು ಒಂದು ಜಾಗ ಹುಡುಕಿದ್ದಾರೆ. ಇಲಾಖೆಯವರು ಕ್ರಮ ತೆಗೆದುಕೊಳ್ಳುತ್ತಾರೋ ಇಲ್ಲವೋ ಎಂದು ಅವರು ಹೇಳುತ್ತಿದ್ದಾರೆ. ಇಲಾಖೆಯವರನ್ನು ಕೇಳಿದರೆ ಜಾಗದ ಬಗ್ಗೆ ಕಾರ್ಪೊರೇಷನ್ನಿನಿಂದ ನಮಗೇನೂ ಮಾಹಿತಿ ಬಂದಿಲ್ಲ ಎಂದು ಹೇಳುತ್ತಾರೆ. ಇವರ ಮೇಲೆ ಅವರು, ಅವರ ಮೇಲೆ ಇವರು ಹೇಳುವ ಪರಿಸ್ಥಿತಿ ಬಂದಿದೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ ತಾವೇ ಖುದ್ದಾಗಿ ಕಾಳಜಿ ವಹಿಸಿ ರಾಜಾಜಿನಗರದಲ್ಲಿ ಪಶುವೈದ್ಯಶಾಲೆ ಬರುವಂತೆ ಮಾಡಬೇಕು. ಅಲ್ಲಿ ಸಹಸ್ರಾರು ಹಸುಗಳಿವೆ. ಆ ಜನರು ಪಶುವೈದ್ಯಶಾಲೆಗೆ ಬರಬೇಕಾದರೆ ಮಲ್ಲೇಶ್ವರಕ್ಕೆ ಬರಬೇಕಾಗಿದೆ. ಅದು ತುಂಬಾ ದೂರವಾಗುತ್ತದೆ. ಅಲ್ಲಿಂದ ಇಲ್ಲಿಗೆ ತರುವುದರಲ್ಲಿ ಹಸುಗಳು ಸತ್ತುಹೋಗುತ್ತವೆ. ನಾನು ಇದನ್ನೆಲ್ಲಾ ಪೂರ್ತಿ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ ಪೂರ್ಣಮಟ್ಟದ ಪಶುವೈದ್ಯಶಾಲೆಯನ್ನು ರಾಜಾಜಿನಗರದಲ್ಲಿ ಮಾಡಬೇಕು. ಮತ್ತು ಮಲ್ಲೇಶ್ವರದಲ್ಲಿರುವ ಪಶುವೈದ್ಯ ಶಾಲೆಯನ್ನು ಇಂಪ್ರೂವ್ ಮಾಡಬೇಕು. ಅದು ಬಹಳ ಕೀಳು ಮಟ್ಟದಲ್ಲಿದೆ. ಸುಣ್ಣ ಬಣ್ಣವನ್ನೂ ಸರಿಯಾಗಿ ಹೊಡೆದಿಲ್ಲ. ಬಿದ್ದು ಹೋಗುವ ಪರಿಸ್ಥಿತಿಯಲ್ಲಿ ಆ ಕಟ್ಟಡ ಇದೆ. ಅದನ್ನು ಸರಿಪಡಿಸಬೇಕು.

ತೋಟಗಾರಿಕೆ ಇಲಾಖೆ ಬಗ್ಗೆ ಹೇಳಬೇಕೆಂದರೆ ಇದರ ಬಗ್ಗೆ ನನ್ನ ಮಿತ್ರರು ಮಾತನಾಡಿದ್ದಾರೆ. ನಾನು ಕೆಲವು ವಿಷಯವನ್ನು ಮಾತ್ರ ಹೇಳುತ್ತೇನೆ. ತೋಟಗಾರಿಕೆ ಇಲಾಖೆ ಲಾಲ್‌ಬಾಗ್‌ನಲ್ಲಿದೆ. ಅವರಿಗೆ ಎಷ್ಟು ಹಣವನ್ನು ಕೊಡಬೇಕೋ ಅಷ್ಟು ಹಣವನ್ನು ಕೊಡುತ್ತಿಲ್ಲ ಎಂಬುದು ನನ್ನ ಭಾವನೆ. ಇವತ್ತು ತೋಟಗಾರಿಕೆ ಇಲಾಖೆಗೆ ಪ್ಲಾನ್ಸ್‌ನಲ್ಲಿ ೧.೫೦ ಲಕ್ಷ ಮತ್ತು ನಾನ್-ಪ್ಲಾನ್ಸ್‌ನಲ್ಲಿ ೨೬.೯೯ ಲಕ್ಷ, ಎರಡೂ ಸೇರಿ ಒಟ್ಟು ೨೮.೪೯ ಲಕ್ಷ ರೂಪಾಯಿಗಳನ್ನು ೧೯೮೪-೮೫ನೇ ಸಾಲಿಗೆ ಇಟ್ಟಿದ್ದೀರಿ. ಇದು ಬಹಳ ಕಡಿಮೆ. ಇದರಲ್ಲಿ ಲಾಲ್‌ಬಾಗ್ ಮಾತ್ರವಲ್ಲದೆ ಕಬ್ಬನ್ ಪಾರ್ಕ್ ಮುಂತಾದ ಅನೇಕ ಪಾರ್ಕುಗಳನ್ನು ಕೊಟ್ಟಿದ್ದೀರಿ. ಅದನ್ನೆಲ್ಲಾ ವಿವರ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಹೆಚ್ಚಿನ ರೀತಿಯಲ್ಲಿ ಹಣ ಕೊಟ್ಟು ಖರ್ಚು ಮಾಡಬೇಕು ಎಂದು ನಾನು ಹೇಳುತ್ತಿದ್ದೇನೆ. ಹಿಂದೆ ನಮ್ಮದೊಂದು ಟ್ರೇಡ್ ಯೂನಿಯನ್‌ನ ಸಮ್ಮೇಳನ ನಡೆದಾಗ ಲಾಲ್‌ಬಾಗಿನಲ್ಲಿ ನೋಡಿದೆವು. ಅಲ್ಲಿ ಸರಿಯಾದ ಲೈಟ್ ಇರಲಿಲ್ಲ, ರೋಡ್ ಇರಲಿಲ್ಲ. ಯಾರು ಏನು ಬೇಕಾದರೂ ಕದ್ದುಕೊಂಡು ಹೋಗಬಹುದಿತ್ತು. ಇದರ ಬಗ್ಗೆ ಅನೇಕ ದೂರುಗಳು ಬಂದಿತ್ತು. ಅಲ್ಲಿನ ಅಧಿಕಾರಿಗಳು ಕೂಡ ಇದನ್ನೆಲ್ಲಾ ಲೋಕೋಪಯೋಗಿ ಇಲಾಖೆಯವರು ಮಾಡಬೇಕು, ಅಲ್ಲಿ ಏನಾದರೂ ಪ್ರೊಪೋಸಲ್ ಕಳುಹಿಸಿದರೆ ಬೆಟ್ಟದಂತೆ ಇಲಾಖೆ ಇರುವುದರಿಂದ ತೊಂದರೆಯಾಗಿದೆ ಎಂದು ಹೇಳಿದರು. ಅದು ನ್ಯಾಯವಾದುದು. ಆದ್ದರಿಂದ ಅದನ್ನೆಲ್ಲಾ ನೋಡಿಕೊಳ್ಳುವ ಅಧಿಕಾರ ಈ ತೋಟಗಾರಿಕೆ ಇಲಾಖೆಗೇ ಇರುವಂತೆ ಮಾಡಬೇಕು. ಎರಡನೆಯದಾಗಿ ಹೆಚ್ಚು ಹಣವನ್ನು ಇದಕ್ಕೆ ಒದಗಿಸುವ ಪ್ರಯತ್ನ ಮಾಡಬೇಕು. ಮಾನ್ಯ ಮಂತ್ರಿಗಳು ತಮ್ಮ ಪ್ರಭಾವವನ್ನು ಮುಖ್ಯ ಮಂತ್ರಿಗಳ ಮೇಲೆ ಉಪಯೋಗಿಸಿ ಹೆಚ್ಚು ಹಣ ಪಡೆಯುವುದಕ್ಕೆ ಪ್ರಯತ್ನ ಮಾಡಬೇಕು. ಇದರಲ್ಲಿ ಇಂಡೋ ಬಲ್ಗೇರಿಯನ್ನು ಪ್ರಾಜೆಕ್ಟ್ ವಿಷಯ ಬರೆದಿದ್ದೀರಿ. ಇದು ಏನಾಗಿದೆಯೋ ಗೊತ್ತಿಲ್ಲ. ನಾನು ಒಂದು ಸಾರಿ ಬಲ್ಗೇರಿಯಾಕ್ಕೆ ಹೋಗಿದ್ದೆ. ಆಗ ಅಲ್ಲಿನ ಅಧಿಕಾರಿಗಳೊಬ್ಬರು ಸಿಕ್ಕಿ ನಾವು ಸಹಾಯ ಮಾಡಬೇಕೆಂದಿದ್ದೆವು, ಈ ಬಗ್ಗೆ ನಿಮ್ಮ ಅಧಿಕಾರಿಗಳು ಏನು ಹೇಳುತ್ತಾರೆ ಎಂದು ಕೇಳಿದರು. ಆಗ ಅದು ನನಗೆ ಗೊತ್ತಿಲ್ಲ ಎಂದು ಹೇಳಿದೆ ಇಲ್ಲಿ ಏನು ಮಾಡಿದ್ದಾರೋ ಗೊತ್ತಿಲ್ಲ. ಈಗ ಅದೇ ಪ್ರಾಜೆಕ್ಟ್ ವಿಷಯ ವರದಿಯಲ್ಲಿ ಕೊಟ್ಟಿದ್ದಾರೆ. ಇದಕ್ಕೆ ಸಣ್ಣ ಪ್ರಮಾಣದ ಯೋಜನೆಯನ್ನು ಮಾಡಿದ್ದೀರಿ. ಸಮಾಜವಾದಿ ರಾಷ್ಟ್ರದವರು ಸಹಾಯ ಮಾಡುತ್ತೇವೆ ಎಂದು ಹೇಳಿದರೂ ಈ ಸರ್ಕಾರದವರು ಅವರ ಸಹಾಯ ತೆಗೆದುಕೊಳ್ಳುವುದಕ್ಕೆ ಸಿದ್ಧವಿಲ್ಲದಿದ್ದರೆ ಯಾವ ರೀತಿ ಮುಂದುವರಿಯುತ್ತೀರಿ? ಆದ್ದರಿಂದ ಈ ಬಗ್ಗೆ ಯಾವ ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಸರಿಯಾದ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸಾರಿಗೆ ವಿಷಯಕ್ಕೆ ಬರುತ್ತೇನೆ. ಇದರಲ್ಲಿ ಮೊದಲನೆಯದಾಗಿ ಮೋಟಾರ್ ವೆಹಿಕಲ್ಸ್ ಇಲಾಖೆ ಬಗ್ಗೆ ಹೇಳುತ್ತೇನೆ. ನನ್ನ ಸ್ನೇಹಿತರು ಹೇಳಿದ ಹಾಗೆ ಇದರಲ್ಲಿ ವರಮಾನ ಜಾಸ್ತಿಯಾಗಿರುವುದು ಸಂತೋಷ. ೧೯೮೨-೮೩ರಲ್ಲಿ ೬೩.೯೯ ಕೋಟಿ ವರಮಾನ ಇದ್ದದ್ದು ೧೯೮೩-೮೪ರಲ್ಲಿ ೯ ತಿಂಗಳಲ್ಲಿ ೫೫.೯೪ ಕೋಟಿ ರೂಪಾಯಿ ಆಗಿದೆ. ನಿಮ್ಮ ಟಾರ್ಗೆಟ್ ೮೦ ಕೋಟಿ ಇದೆ. ಅದನ್ನು ಮುಟ್ಟುತ್ತದೋ ಇಲ್ಲವೋ ಗೊತ್ತಿಲ್ಲ.

ಶ್ರೀ ಎಂ.ಪಿ. ಪ್ರಕಾಶ್.—ನಮ್ಮ ಟಾರ್ಗೆಟ್ ಇರತಕ್ಕದ್ದು ೭೫ ಕೋಟಿ ರೂಪಾಯಿಗಳು.

ಶ್ರೀ ಎಂ.ಎಸ್. ಕೃಷ್ಣನ್.—ವರಮಾನ ಜಾಸ್ತಿ ಇದ್ದು ಖರ್ಚು ಕಡಿಮೆ ಇರುವುದರಿಂದ ರಾಜ್ಯದ ಬೊಕ್ಕಸಕ್ಕೆ ಹೆಚ್ಚು ಹಣ ಬರುತ್ತದೆಂಬುದು ಸ್ಪಷ್ಟ. ಆದರೂ ಇಷ್ಟೇನಾ ಬರಬೇಕಾದ್ದು ಎಂದು ಯೋಚನೆ ಮಾಡಬೇಕಾಗಿದೆ. ಇದರಲ್ಲಿ ಲೀಕೇಜ್ ಇದೆಯೋ ಎಂಬುದನ್ನು ಯೋಚನೆ ಮಾಡಬೇಕು. ನನಗೆ ಬಂದಿರುವ ವರ್ತಮಾನದ ಪ್ರಕಾರ ೨ ಪರ್ಸೆಂಟ್ ಲೀಕೇಜ್ ಇದೆ. ಇದನ್ನು ಪ್ಲಗ್ ಮಾಡಿದರೆ ೮೦ ಕೋಟಿ ಅಲ್ಲ ೯೦ ಕೋಟಿ ರೂಪಾಯಿಗಳನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆಂಬುದು ನನ್ನ ಅಭಿಪ್ರಾಯ. ಅದನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕು. ಲೀಕೇಜ್ ತಪ್ಪಿಸುವುದಕ್ಕೆ ತೀವ್ರವಾದ ಕ್ರಮ ತೆಗೆದುಕೊಳ್ಳಬೇಕು. ಈಗ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೋ ಗೊತ್ತಿಲ್ಲ. ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟ್‌ನಿಂದ ಆಲ್ ಇಂಡಿಯಾ ಪರ್ಮಿಟ್‌ಗಳು, ಇಂಟರ್‌ಸ್ಟೇಟ್ ಪರ್ಮಿಟ್‌ಗಳು ಮತ್ತು ಸ್ಟೇಟ್ ಪರ್ಮಿಟ್‌ಗಳು ಕೊಟ್ಟಿದ್ದೀರಿ. ಇದರಲ್ಲಿ ಪ್ರಶ್ನೆ ಏನೆಂದರೆ ಪರ್ಮಿಟ್‌ಗಳನ್ನು ಈ ರೀತಿ ಕೊಡುವುದು ಸರಿಯೇ. ಇದು ಎಷ್ಟು ದೂರ ಸರಿ, ಹೇಗೆ ಸರಿ ಎಂಬುದು ಪ್ರಶ್ನೆ. ಖಾಸಗಿ ಟ್ಯಾಕ್ಸಿಯವರು ಬಿಳಿ ಬೋರ್ಡ್ ಹಾಕಿಕೊಂಡು ಓಡಾಡುತ್ತಾರೆ. ಅದರ ಬಗ್ಗೆ ನನ್ನ ವಿರೋಧ ಇಲ್ಲ. ಆದರೆ ಪ್ರಶ್ನೆ ಏನೆಂದರೆ ಬಸ್ಸುಗಳಿಗೆ ನ್ಯಾಷನಲ್ ಪರ್ಮಿಟ್ ಕೊಡುವುದು......

ಶ್ರೀ ಎಂ.ಪಿ. ಪ್ರಕಾಶ್.—ಅದು ಲಾರಿಗಳಿಗೆ ಕೊಡುವುದು. ಬಸ್ಸಿಗಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಬಸ್ಸುಗಳಿಗೆ ಎಂದು ಇದರಲ್ಲಿ ಇದೆ.

ಶ್ರೀ ಎಂ.ಪಿ. ಪ್ರಕಾಶ್.—ಬಸ್ಸಿಗೆ ಪರ್ಮಿಟ್ ಕೊಟ್ಟಿಲ್ಲ. ಲಾರಿಗಳಿಗೆ ಮಾತ್ರ ಕೊಟ್ಟಿರುವುದು.

ಶ್ರೀ ಎಂ.ಎಸ್. ಕೃಷ್ಣನ್.—ಬಸ್ಸುಗಳಿಗೆ ಎಂದು ಹಾಕಿದಂತಿತ್ತು. ಲಾರಿಗಳಿಗಾದರೆ ಸರಿ. ೧೨೦೦ ಪರ್ಮಿಟ್‌ಗಳನ್ನು ಕೊಟ್ಟಿದ್ದೀರಿ. ಇನ್ನೊಂದು ಕಾಂಪೋಸಿಟ್ ಪರ್ಮಿಟ್ ಎಂದು ೯೦೦ ಕೊಟ್ಟಿದ್ದೀರಿ. ಬೈಲಾಟರಲ್ ಅಗ್ರಿಮೆಂಟ್ ಪ್ರಕಾರ ಪರ್ಮಿಷನ್ ಕೊಟ್ಟಿದ್ದೀರಿ. ೧೯೮೩ರಲ್ಲಿ ೨೭೭ ಖಾಸಗಿ ಬಸ್ಸುಗಳಿಗೆ ಪರ್ಮಿಟ್ ಕೊಟ್ಟಿದ್ದೀರಿ. ಹಿಂದೆ ಕಾಂಟ್ರಾಕ್ಟ್ ಕ್ಯಾರೇಜ್ ಅಬಾಲಿಷನ್ ಆಗುವುದಕ್ಕಿಂತ ಮುಂಚೆ ಪರಿಸ್ಥಿತಿ ನಿಮಗೆ ಗೊತ್ತಿರುವ ಹಾಗೆ ಏನಿತ್ತೆಂದರೆ ಅದು ಕೆ.ಎಸ್.ಆರ್.ಟಿ.ಸಿಗೆ ಪ್ಯಾರಲಲ್ ಆಗಿ ಓಡಾಡುತ್ತಿತ್ತು. ಅದಕ್ಕೋಸ್ಕರ ಅದನ್ನು ರದ್ದು ಮಾಡಿದರು. ಮತ್ತೆ ಈಗ ಖಾಸಗಿ ಬಸ್ಸುಗಳಿಗೆ ಪರ್ಮಿಷನ್‌ಗಳನ್ನು ಕೊಟ್ಟರೆ ಪ್ಯಾರಲಲ್ ರೋಡ್ ಟ್ರಾನ್ಸ್‌ಪೋರ್ಟ್ ಆಗುವುದಿಲ್ಲವೇ? ನಿಮಗೆ ಕಡಿಮೆ ವರಮಾನ ಬರುವುದಕ್ಕೆ ಇದೂ ಒಂದು ಮುಖ್ಯ ಕಾರಣ. ಆಲ್ ಇಂಡಿಯಾ ಪರ್ಮಿಟ್ ಹೆಸರಿನಲ್ಲಿ ಮಧ್ಯೆಮಧ್ಯೆ ಜನಗಳನ್ನು ಬೆಂಗಳೂರಿನಿಂದ ಮೈಸೂರಿಗೆ, ಮದ್ರಾಸಿಗೆ ಕರೆದುಕೊಂಡು ಹೋಗುವ ಪ್ರವೃತ್ತಿ ಬೆಳೆದಿದೆ. ಈ ಕನ್‌ಸೆಷನ್ ಖಾಸಗಿ ಬಸ್ಸುಗಳಿಗೆ ನೀವು ಕೊಟ್ಟಿದ್ದೀರಿ ಎಂದು ನನಗನ್ನಿಸುತ್ತದೆ. ೧೯೮೩ರಲ್ಲಿ ಪೂರ್ತಿ ನೀವು ಕೊಡದಿದ್ದರೂ ಇದರ ಬಗ್ಗೆ ಸ್ಪಷ್ಟವಾಗಿ ತಿಳುವಳಿಕೆ ಕೊಡಬೇಕು. ಮುಂದೆ ಇದರಲ್ಲಿ ನಿಮ್ಮ ಧೋರಣೆ ಏನು ಎಂಬುದನ್ನು ಹೇಳಬೇಕು. ಕೆ.ಎಸ್.ಆರ್.ಟಿ.ಸಿ.ಗೆ ಪ್ಯಾರಲಲ್ ಆಗಿ ಖಾಸಗಿ ಬಸ್ಸುಗಳನ್ನು ರನ್ ಮಾಡುವುದು ಸರಿಯಲ್ಲ. ಫಿಟ್‌ನೆಸ್ ಸರ್ಟಿಫಿಕೇಟುಗಳನ್ನು ಕೊಡತಕ್ಕದ್ದು ನಮ್ಮ ಕರ್ತವ್ಯವೆಂದು ಹೇಳಿದ್ದೀರಿ. ಮಾನ್ಯ ಮಹೇಶ್ವರಪ್ಪನವರು ಹೇಳಿದರು ಇದರಲ್ಲಿ ಇಷ್ಟಿಷ್ಟು ಎಂದು ಷೆಡ್ಯೂಲ್ ಫಿಕ್ಸ್ ಮಾಡಿದ್ದಾರೆ ಎಂದು. ಈ ಮಾಮೂಲಿ ಹಾವಳಿಯನ್ನು ತಪ್ಪಿಸುವುದಕ್ಕಾಗುವುದಿಲ್ಲವೆ? ಬ್ರೋಕರ್‌ಗಳನ್ನು ತಪ್ಪಿಸಿದ್ದೇವೆ ಎಂದು ಹೇಳಿದ್ದೀರಿ. ಆದರೆ ನಿಜಾಂಶ ಎಂದರೆ ಅಲ್ಲಿನ ತೊಂದರೆ ತಪ್ಪಿಲ್ಲ. ಆದ್ದರಿಂದ ಈ ವರದಿಯಲ್ಲಿ ಒಂದು ವಿಷಯವನ್ನು ಒಪ್ಪಿಕೊಳ್ಳಬೇಕಾಗಿದೆ. Strict action will be taken against staff who are indulging in corrupt practices, It is an admission of the facts that there is corruption and mal-practice ಎಂದು ಸತ್ಯಾಂಶವನ್ನು ಅಡ್ಮಿಟ್ ಮಾಡಿಕೊಂಡಿರುವುದು ಸಂತೋಷದ ವಿಷಯ. ಹಿಂದೆ ಇದನ್ನು ಮಾಡುತ್ತಿರಲಿಲ್ಲ. ಯಾವ ವರದಿ ತೆಗೆದುಕೊಂಡು ನೋಡಿದರೂ ಸಹ ಹಿಂದೆಲ್ಲಾ ಚೆನ್ನಾಗಿ ನಡೆಯುತ್ತಿದೆ, ಚೆನ್ನಾಗಿ ಕೆಲಸ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಆದರೆ ಈ ವರದಿಯಲ್ಲಿ ಕರಪ್ಟ್ ಪ್ರಾಕ್ಟೀಸ್ ಇದೆ ಎಂಬುದನ್ನು ಒಪ್ಪಿಕೊಂಡಿರುವುದು ಸಂತೋಷ. ಮೊದಲನೇ ಬಾರಿಗೆ ಕರಪ್ಟ್ ಪ್ರಾಕ್ಟೀಸ್ ಇದೆ. ಇದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂದು ಹೇಳಿರುವುದು ಸಂತೋಷ. ಇದನ್ನು ನಿಲ್ಲಿಸುವುದಕ್ಕೆ ಜರೂರು ಕ್ರಮ ತೆಗೆದುಕೊಳ್ಳಬೇಕು. ಇದರ ಬಿಗಿಯಾದ ಯಾವ ಕ್ರಮವನ್ನು ಬಗ್ಗೆ ತಾವು ತೆಗೆದುಕೊಂಡರೂ ನಮ್ಮ ಸಹಕಾರ ಅದಕ್ಕಿದೆ. ಇನ್ನು ಸಾರಿಗೆ ವಿಷಯಕ್ಕೆ ಬರುತ್ತೇನೆ. ೧೯೮೨-೮೩ರ ಅಂಕಿಅಂಶಗಳನ್ನು ಕೊಟ್ಟಿದ್ದಾರೆ.

೨-೩೦ ಪಿ. ಎಂ.

ಇದು ಸರಿಯೋ ಎಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ನಾವು ಈಗ ಮಾತನಾಡಬೇಕಾಗಿರುವುದು ೧೯೮೩-೮೪ರದು. ಆದರೆ ಏನಾಗಿದೆ ಎಂದರೆ ಹೋದಸಲ ಮಾತನಾಡುವ ಕಾಲದಲ್ಲಿ ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್ ೧೯೮೩-೮೪ನ್ನು ನಮಗೆ ಕೊಟ್ಟರು. ಆಗ ನಾವು ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್ ಮೇಲೆ ಮಾತನಾಡಿದೆವು. ಈಗ ಏನಾಗಿದೆ ಎಂದರೆ ನಮಗೆ ೧೯೮೨-೮೩ರ ಫೈನಾನ್ಸಿಯಲ್ ರೆವ್ಯೂ ಕೊಟ್ಟಿದ್ದಾರೆ. ಆದರೂ ಈ ವರ್ಷ ಪಾರ್ಟ್-೨ನ್ನು ಕೊಟ್ಟಿದ್ದಾರೆ. ಇದನ್ನು ಸರಿಪಡಿಸಬೇಕಾಗಿತ್ತು ಎಂದು ನಾನು ಹೇಳುತ್ತೇನೆ. ಇದಕ್ಕೆ ನಿಮ್ಮಿಂದ ಏನು ಉತ್ತರ ಬರುತ್ತದೆ ಎಂಬುದು ನನಗೆ ಗೊತ್ತಿದೆ. ಸೆಪ್ಟಂಬರ್ ತಿಂಗಳಲ್ಲಿ ಫೈನಾನ್ಸಿಯಲ್ ರೆವ್ಯೂ ಮಾಡುತ್ತೇವೆ ಎಂದು. ನ್ಯಾಯವಾಗಿ ನೋಡಿದರೆ ಅದು ಏಪ್ರಿಲ್‌ನಲ್ಲೇ ಮುಗಿಯಬೇಕು. ಇದನ್ನು ಸೆಪ್ಟೆಂಬರ್‌ನಲ್ಲಿ ಮಾಡುವುದರಿಂದ ಹೇಗೆ ಕೊಡುವುದಕ್ಕೆ ಸಾಧ್ಯ ಎಂದು ಹೇಳುತ್ತೀರಿ. ಇವತ್ತಿನ ದಿವಸ ನಮ್ಮ ಮುಂದೆ ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್ ನಮ್ಮ ಮುಂದೆ ಇಟ್ಟಿದ್ದೀರಿ. ಇವತ್ತು ಏನು ಸೆಪ್ಟೆಂಬರ್‌ನಲ್ಲಿ ಫೈನಾನ್ಸಿಯಲ್ ರೆವ್ಯೂ ಮಾಡುತ್ತೀರಿ ಆ ಒಂದು ಪ್ರಾಕ್ಟೀಸ್‌ನ್ನು ಬದಲಾವಣೆ ಮಾಡಬೇಕಾಗುತ್ತದೆ. ಇದನ್ನು ಬದಲಾವಣೆ ಮಾಡುವ ವಾದವನ್ನು ಒಪ್ಪಿದರೆ ಪ್ರಯೋಜನ ಇಲ್ಲ. ಮಾನ್ಯ ಲಕ್ಷ್ಮೀಸಾಗರ್ ಅವರು ಈ ಕಡೆ ಇದ್ದಾಗ ಈ ಬಗ್ಗೆ ವಾದ ಮಾಡಿದ್ದರು. ಅವರು ಆ ಕಡೆ ಹೋದಮೇಲೆ ಈ ವಾದವನ್ನು ಎತ್ತಿ ಹಿಡಿಯುತ್ತಾರೆಯೋ ಎಂದು ನೋಡಬೇಕಾಗಿದೆ. ರೋಡ್ ಟ್ರಾನ್ಸ್‌ಪೋರ್ಟ್ ಆಕ್ಟ್ ೧೯೫೦ರ ಪ್ರಕಾರ ಇದನ್ನು ಸೆಪ್ಟಂಬರ್‌ನಲ್ಲಿಯೇ ಮಾಡಬೇಕೆಂದೇನೂ ಇಲ್ಲ. ''ಆ್ಯಸ್ ಪ್ರಿಸ್‌ಕ್ರೈಬ್ಡ್'' ಎಂದು ಇದೆ. ಎಂದರೆ ಯಾವಾಗ ಬೇಕಾದರೂ ಮಾಡಬಹುದು. ಇದನ್ನು ಬದಲಾವಣೆ ಮಾಡಿದರೆ ನಮ್ಮ ಚರ್ಚೆಗೂ ಅನುಕೂಲವಾಗುತ್ತದೆ. ಫೈನಾನ್ಸಿಯಲ್ ರಿವ್ಯೂ ಮತ್ತು ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್ ಎರಡೂ ಬೇರೆ ಬೇರೆ ಬಂದರೆ ಚರ್ಚೆಗೆ ಅನುಕೂಲವಾಗುವುದಿಲ್ಲ. ಆದ್ದರಿಂದ ಒಟ್ಟಿಗೇ ಇಲ್ಲಿ ಇಡುವ ಒಂದು ಹೊಸ ದಾರಿಯಲ್ಲಿ ನೀವು ಹೋಗುವುದಕ್ಕೆ ತಾವು ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ. ಇನ್ನೊಂದು ಮುಖ್ಯ ವಿಷಯ ಎಂದರೆ, ಕೆ.ಎಸ್.ಆರ್.ಟಿ.ಸಿ ಲಾಸ್‌ನಲ್ಲಿ ನಡೆಯುತ್ತಿದೆ ಎನ್ನುತ್ತೀರಿ. ಈ ಬಗ್ಗೆ ಮಾನ್ಯ ಮಂತ್ರಿಗಳನು ಒಂದು ಮಾತನ್ನು ಹೇಳಿದ್ದಾರೆ. ಮೊನ್ನೆ ಉತ್ತರ ಕೊಡುವಾಗ ೧೯೮೩ನೇ ಆಗಸ್ಟ್ ತಿಂಗಳವರೆಗೆ ೧೭.೧೩ ಕೋಟಿ ರೂಪಾಯಿ ನಷ್ಟ ಆಗಿದೆ ಎಂದು ಈ ಮನೆಯಲ್ಲಿ ಉತ್ತರ ಕೊಟ್ಟರು. ಈಗ ಅದು ತಪ್ಪು, ಅಷ್ಟು ಅಲ್ಲ ೧೪.೨೫ ಕೋಟಿ ರೂಪಾಯಿ ಲಾಸ್ ಆಗಿದೆ ಎಂದು ಹೇಳುತ್ತಾರೆ ಎಂದು ಕಾಣುತ್ತದೆ. ಆದರೆ ಈ ರೀತಿ ತಪ್ಪು ಲೆಕ್ಕವನ್ನು ಇವರಿಗೆ ಕೊಟ್ಟವರು ಯಾರು ? ಹೇಗೆ ತಪ್ಪು ಲೆಕ್ಕ ಬಂತು ಎಂಬುದನ್ನು ತಾವು ವಿಚಾರ ಮಾಡಬೇಕಾಗುತ್ತದೆ.

ಶ್ರೀ ಎಂ. ಪಿ. ಪ್ರಕಾಶ್.—ಆಗ ಅದು ಒಂದು ಸಣ್ಣ ತಪ್ಪಾಗಿತ್ತು ಏನೆಂದರೆ ಆಗ ಅದರಲ್ಲಿ ಕಮರ್ಷಿಯಲ್ ರೆವಿನ್ಯೂವನ್ನು ಲೆಕ್ಕಕ್ಕೆ ಸೇರಿಸಿರಲಿಲ್ಲ. ಕಮರ್ಷಿಯಲ್ ರೆವಿನ್ಯೂವನ್ನು ವಜಾ ಮಾಡಿದರೆ ಒಟ್ಟು ನಷ್ಟ ೧೪.೨೫ ಕೋಟಿ ರೂ. ಆಗುತ್ತದೆ,

ಶ್ರೀ ಎಂ. ಎಸ್. ಕೃಷ್ಣನ್.—ಏನು ನೀವು ಈಗ ೧೪.೨೫ ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಹೇಳಿದಿರಿ ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಹಾಗೂ ಇವತ್ತು ಏನು ಈ ಬಗ್ಗೆ ಎಕ್ಸ್‌ಪ್ಲನೇಷನ್ಸ್ ಕೊಟ್ಟಿದ್ದೀರಿ ಅದು ಮುಖ್ಯ ಪ್ರಶ್ನೆ ಆಗುವುದಿಲ್ಲ. ಬೇರೆ ರಾಜ್ಯಗಳನ್ನು ಹೋಲಿಸಿ ನೋಡಿದರೆ ಆ ರಾಜ್ಯಗಳಲ್ಲೂ ನಷ್ಟವಾಗುತ್ತಿದೆ. ಹಾಗೆ ನೋಡಿದರೆ ಬೇರೆ ರಾಜ್ಯಗಳಿಗಿಂತಾ ನಮ್ಮ ರಾಜ್ಯದಲ್ಲಿ ನಷ್ಟ ಬಹಳ ಕಡಿಮೆ ಪ್ರಮಾಣದಲ್ಲಿ ಇದೆ. ನನ್ನ ಹತ್ತಿರ ''Report on the performance of the Nationalised Road Transport Undertakings 1979-80 and 1980-81'', compiled by Central Institute of Road Transport (Training and Research), Pune - ಎನ್ನುವ ಪುಸ್ತಕ ಇದೆ. ಅದರಲ್ಲಿ ಎಲ್ಲವನ್ನೂ ಕೊಟ್ಟಿದ್ದು ಅದನ್ನು ನಾನು ಇಲ್ಲಿ ಓದುವುದಕ್ಕೆ ಹೋಗುವುದಿಲ್ಲ. ಇವತ್ತು ತಮಿಳುನಾಡಿನಲ್ಲಿನ ೫ ಕಾರ್ಪೊರೇಷನ್‌ಗಳಲ್ಲಿ ೨ ಕಾರ್ಪೊರೇಷನ್‌ಗಳಲ್ಲಿ ಮಾತ್ರ ಲಾಭ ಬರುತ್ತಿದೆ. ಇವತ್ತು ನಾವು ಬರೀ ಲಾಭ ನಷ್ಟವನ್ನೇ ನೋಡುವುದಕ್ಕಾಗುವುದಿಲ್ಲ. ಇವತ್ತು ಅವು ನಷ್ಟದಲ್ಲಿ ನಡೆಯುತ್ತಿವೆ ಇವನ್ನು ಪ್ರೈವೇಟ್‌ನವರಿಗೆ ಕೊಡೋಣವೆಂದು ಏನು ಮಾನ್ಯ ದೊಡ್ಡ ಬೋರೇಗೌಡರು, ಮಾನ್ಯ ಗಂಗಾಧರನ್‌ರವರು. ಮಾನ್ಯ ಚಿಮ್ಮನಕಟ್ಟಿಯವರು ವಾದವನ್ನು ಇಟ್ಟು ಮಾತನಾಡಿದರು ಅದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಈ ಮನೆಯಲ್ಲಿ ಈ ರೀತಿ ಇವರು ಮಾತನಾಡಿದ್ದನ್ನು ನೋಡಿದರೆ ಇವತ್ತು ನಮ್ಮ ಗುರಿ ಏನು ? ಧ್ಯೇಯ ಏನು ? ಎಂಬ ಬಗ್ಗೆ ಇವರಲ್ಲಿ ನಿರ್ದಿಷ್ಟವಾದ ಅಭಿ

ಪ್ರಾಯ ಇದೆಯೋ ಎನ್ನುವ ಬಗ್ಗೆ ನನಗೆ ಶಂಕೆ ಬರುತ್ತದೆ. ಇವತ್ತು ಇದನ್ನು ಖಾಸಗಿಯವರಿಗೆ ಏಕೆ ಕೊಡಬೇಕು? ಇವತ್ತು ಡೀನ್ಯಾಷನಲೈಸೇಷನ್ ಮಾಡುವುದಾದರೆ ಇವತ್ತು ಖಾಸಗಿಯವರು ಕೋಟಿ ಕೋಟಿ ಹಣ ವಂಚನೆ ಮಾಡುತ್ತಾರೆ. ಅವರು ತೆರಿಗೆಯಿಂದ ತಪ್ಪಿಸಿಕೊಳ್ಳುತ್ತಾರೆ. ಅಥವಾ ಕಡಿಮೆ ತೆರಿಗೆ ಕೊಡುತ್ತಾರೆ. ಮೋಟರ್ ವೆಹಿಕಲ್ ಆಕ್ಟನ್ನು ಇವರು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಬೇರೆ ಯಾವ ಆಕ್ಟನ್ನೂ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಬರೀ ಹಣ ಲೂಟಿ ಮಾಡಿ ದುಡ್ಡು ಮಾಡಿಕೊಂಡು ಮನೆ ಮಾಡಿಕೊಳ್ಳುತ್ತಾರೆ, ೧ ಕೋಟಿ ಅಲ್ಲ ೩ ಕೋಟಿ ರೂಪಾಯಿ ಮಾಡಿಕೊಳ್ಳುತ್ತಾರೆ. ಇವತ್ತು ರಾಷ್ಟ್ರೀಕರಣ ಮಾಡುವುದರಿಂದ ಟ್ಯಾಕ್ಸ್ ಕೈಬಿಡುವುದಿಲ್ಲ. ಅದರ ವರಮಾನ ದೇಶದ ಅಭಿವೃದ್ಧಿಗೇ ವಿನಿಯೋಗ ಆಗುತ್ತಿದೆ. ಇವತ್ತು ಏನು ಮಾನ್ಯ ಸದಸ್ಯರು ಸಾರಿಗೆ ಸಂಸ್ಥೆಯನ್ನು ಡೀ-ನ್ಯಾಷನಲೈಸ್ ಮಾಡಿ ಎಂದು ವಾದವನ್ನು ಇಟ್ಟಿದ್ದಾರೆ ಅದು ತಪ್ಪುವಾದ ಎಂದು ನಾನು ಹೇಳುತ್ತೇನೆ. ಈ ಒಂದು ವಾದವನ್ನು ದೇಶವೇ ಒಪ್ಪದಿರುವಾಗ ಈ ಒಂದು ವಾದದಿಂದ ಇವರು ದೇಶಕ್ಕೆ ವಿರುದ್ಧವಾಗಿ ಇವರು ಹೋಗುತ್ತಿದ್ದಾರೆಂದು ನಾನು ಹೇಳಬೇಕಾಗುತ್ತದೆ. ಸಮಾಜ ವಾದವನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಆ ಬಗ್ಗೆ ಸಂಘಟನೆಯಲ್ಲಿ ನಾವು ಇದ್ದೇವೆ. ಈ ದಿನ ಇವರು ಈ ವಾದದಲ್ಲಿ ಸ್ವಲ್ಪ ಮುಂದುವರಿದು ಸಾರಿಗೆ ಡೀ–ನ್ಯಾಷನಲೈಸ್ ಮಾಡುವ ಜೊತೆಗೆ, ಕೋರ್ ಸೆಕ್ಟಾರ್‌ನ್ನು, ಸ್ಟೀಲನ್ನು ವಿದ್ಯುತ್‌ನ್ನು ಡೀ–ನ್ಯಾಷನಲೈಸ್ ಮಾಡಿದರೆ ಇದರ ಉಪಯೋಗವನ್ನು ಪಡೆದುಕೊಂಡ ಟಾ–ಟಾ ; ಬಿರ್ಲಾ ; ಡಾಲ್ಮಿಯಾಗಳೇ ಮುಂದುವರಿದು ನಮ್ಮ ಬಡ ಜನರನ್ನು, ದೇಶವನ್ನು ನುಂಗುತ್ತಾರೆಂದು ನಾನು ಹೇಳುತ್ತೇನೆ. ಇದರಿಂದ ಬಡವರು ಮೇಲೆ ಬರುದಕ್ಕೆ ಆಗುವುದಿಲ್ಲ. ಬಂಡವಾಳಶಾಹೀ ಪದ್ಧತಿ ಇನ್ನೂ ದೊಡ್ಡ ರೀತಿಯಲ್ಲಿ ಆಗುತ್ತದೆ ಆದ್ದರಿಂದ ಆ ರೀತಿ ಇದನ್ನು ಮಾಡಬಾರದು, ಅದು ತಪ್ಪು ಆಗುತ್ತದೆ ಎಂದು ನಾನು ಹೇಳುತ್ತೇನೆ. ಇದನ್ನು ಯಾರೂ ಸಹಾ ಒಪ್ಪುವುದಿಲ್ಲ. ಈ ಬಗ್ಗೆ ಜೆ. ಪಿ. ಕುಮಾರಪ್ಪ ಅವರು ಒಬ್ಬರು ಹೇಳಿದರೆ ಬೇರೆ ತಜ್ಞರು ಏನು ಹೇಳಿದ್ದಾರೆ ಎಂಬುದನ್ನು ನೋಡಬೇಕಾಗುತ್ತದೆ. ಇವತ್ತು ದೇಶದ ತಜ್ಞರು ಏನು ಹೇಳಿದ್ದಾರೆ ಅದನ್ನು ನೋಡಬೇಕಾಗುತ್ತದೆ. ಈ ಒಂದು ವಿಚಾರವನ್ನು ಯಾರೂ ಕೂಡಾ ಒಪ್ಪಿಕೊಳ್ಳುವುದಿಲ್ಲವಾದ್ದರಿಂದ ಇದಕ್ಕೆ ಇತಿಶ್ರೀ ಹಾಡಬೇಕೆಂದು ನಾನು ಹೇಳುತ್ತೇನೆ. ಆದರೆ ಅದಕ್ಕಿಂತಾ ಮುಖ್ಯವಾಗಿ ಇಲ್ಲಿ ಲಾಸ್ ಏನು ಆಗುತ್ತಿದೆ ಅದರ ಬಗ್ಗೆ ನಾವು ನೋಡಬೇಕಾಗುತ್ತದೆ. ಲಾಸ್ ಬಗ್ಗೆ ಮಾನ್ಯ ಮಂತ್ರಿಗಳು ಈ ರೀತಿ ಹೇಳಿದ್ದಾರೆ. Increase in operational cost, wages and other emoluments of workers, increase in the cost of diesel, tyres, chassis, spare-parts and other inputs without corresponding revision of fares and Rs. 3 crores towards concession to students and journalists. ಈ ನಾಲ್ಕು ಮುಖ್ಯ ಕಾರಣಗಳನ್ನು ಅವರು ಕೊಟ್ಟಿದ್ದಾರೆ. ಹೋದಸಾರಿಯೂ ಇದನ್ನು ಹೇಳಿದ್ದರು. ಈ ಬಗ್ಗೆ ನಾನು ಇಷ್ಟು ಹೇಳಬೇಕಾಗುತ್ತದೆ. ಈ ಬಗ್ಗೆ ನಾವು ಸ್ವಲ್ಪ ಆಳವಾಗಿ ಯೋಚನೆ ಮಾಡಿದಾಗ ಈ ವಾದದಲ್ಲಿ ತಿರುಳು ಇಲ್ಲ ಎಂದು ನನಗನ್ನಿಸುತ್ತದೆ. ಇವತ್ತು ಸಂಬಳ ಸಾರಿಗೆ ಬಗ್ಗೆ ಹೇಳುತ್ತೀರಿ. ಇವತ್ತು ನೀವು ಎಷ್ಟು ಸಂಬಳ ಕೊಡುತ್ತಿದ್ದೀರಿ ? ಇವತ್ತು ಡ್ರೈವರ್, ಕಂಡಕ್ಟರ್ ಹಾಗೂ ಇತರ ಸ್ಟಾಫ್‌ನ ಸಂಬಳ ಮತ್ತು ಇತರ ವೆಚ್ಚಗಳಿಗಾಗಿ ಎಷ್ಟು ಹಣ ಖರ್ಚು ಮಾಡಿದ್ದೀರಿ ಎಂಬ ಬಗ್ಗೆ ನೋಡಬೇಕಾಗುತ್ತದೆ. ನಿಮ್ಮ ಲೆಕ್ಕದ ಪ್ರಕಾರವೇ ಈ ಬಾಬಿಗಾಗಿ ೧೯೮೧–೮೨ರಲ್ಲಿ ನಿಮ್ಮ ಒಟ್ಟು ಖರ್ಚಿನಲ್ಲಿ ಶೇಕಡ ೫.೬೦ರಷ್ಟು ಹಣವನ್ನು ಖರ್ಚು ಮಾಡಿದ್ದು ೧೯೮೨–೮೩ರಲ್ಲಿ ಈ ಬಗ್ಗೆ ೫.೦೭ ಪರ್ಸೆಂಟ್‌ನಲ್ಲಿ ಹಣ ಖರ್ಚು ಆಗಿದೆ. ಇದರಲ್ಲಿ ಲೆಕ್ಕ ಹಾಕಿದರೆ ಜಾಸ್ತಿ ಏನೂ ಖರ್ಚು ಆಗಿರುವುದಿಲ್ಲ. ಇನ್ನೂ ಕಡಿಮೆ ಆಗಿದೆ. ಆದ್ದರಿಂದ ಈ ಬಾಬಿನಲ್ಲಿ ಹೆಚ್ಚು ಖರ್ಚು ಆಗಿದೆ ಎನ್ನುವ ವಾದ ಸರಿಯಾದುದಲ್ಲ. ಆದ್ದರಿಂದ ಇದನ್ನು ನಾನು ಇವತ್ತು ಒಪ್ಪಿಕೊಳ್ಳುವುದಕ್ಕೆ ತಯಾರು ಇಲ್ಲ. ಅಷ್ಟೇ ಅಲ್ಲ ಇವತ್ತು ಅಲ್ಲಿನ ಕಾರ್ಮಿಕರು ಸರಿಯಾಗಿ ಎಫಿಶಿಯೆಂಟಾಗಿ ಕೆಲಸ ಮಾಡಬೇಕಾದರೆ ಅವರಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕಾಗುತ್ತದೆ. ಅವರಿಗೆ ತಕ್ಕ ಸಂಬಳ ಸಾರಿಗೆ ವ್ಯವಸ್ಥೆ ಮಾಡಬೇಕಾಗುತ್ತದೆ. ಇವರ ಸಂಬಳ ಸಾರಿಗೆ ಬಗ್ಗೆ ಪುನರ್ ವಿಮರ್ಶೆ ಮಾಡಿ ಅವರು ಎಫಿಶಿಯೆಂಟ್ ಕೆಲಸ ಮಾಡುವಂತೆ ಆಗಬೇಕು. ಇದನ್ನು ತಾವು ಮಾಡಬೇಕಾಗುತ್ತದೆ. ಕಾಸ್ಟ್ ಆಫ್ ಡೀಸೆಲ್‌ನ ಬೆಲೆ ಜಾಸ್ತಿಯಾಗಿಗಿದೆ. ೩೫.೦೧ ರಿಂದ ೪೧.೯೫ಕ್ಕೆ ಏರಿದೆ. ಜಾಸ್ತಿ ಆಗುವುದರೊಳಗೆ ರೇಟು ಕೂಡ ಪುನರ್‌ವಿಮರ್ಶೆಯಾಗಿದೆ. ತಾವು ಬಹಳ ಜಾಣ್ಮೆಯಿಂದ ನಡೆಸಿಕೊಂಡು ಬಂದಿದ್ದೀರಿ. ಏನು ಒಂದು ಟ್ಯಾರಿಫ್ ರೇಟು ಇತ್ತು ಅದನ್ನು ಜಾಸ್ತಿ ಮಾಡಿದಿರಿ. ಅದರ ಬಗ್ಗೆ ನಾವು ಟೀಕೆ ಮಾಡಿದೆವು. ಕಡಿಮೆ ಮಾಡುತ್ತೇವೆಂದು ಹೇಳಿ ೧೦ ಪೈಸೆ ಕಡಿಮೆ ಮಾಡಿದಿರಿ. ಯಾವ ಒಂದು ಲೆವೆಲ್‌ನಲ್ಲಿ ಹಿಂದೆ ಇತ್ತು ಆ ಲೆವೆಲ್‌ಗೆ ತರಲಿಲ್ಲ. ಆದರೆ ಬೆಲೆ ಕಡಿಮೆ ಆಯಿತು ಎಂದು ಹೇಳಿದಿರಿ.

SRI RAMA KRISHNA HEGDE.—That shows how sensitive this Government towards peoples feelings.

SRI M. S. KRITHNAN.—The sensitive is to the extent of only ten paise.

ಶ್ರೀ ಎಸ್. ಸೂರ್ಯನಾರಾಯಣರಾವ್.—ಸ್ವಲ್ಪ ಆದರೂ ಸೆನ್‌ಸಿಟೀವ್ ಇದೆ ಎಂದು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ತಡವಾಗಿಯಾದರೂ ೧೦ ಪೈಸೆ ಇಳಿಸಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಂದು ರೂಪಾಯಿ ಏರಿಸಿ ೧೦ ಪೈಸೆ ಇಳಿಸಿದರೆ ಆಗುತ್ತದೆಯೋ ?

ಶ್ರೀ ಎಂ. ಎಸ್. ಕೃಷ್ಣನ್.—ಈ ಟ್ರಿಕ್ ಲೋಕ ಸಭೆಯಲ್ಲೂ ಮಾಡುತ್ತಾರೆ. ಇಂದಿರಾ ಗಾಂಧಿಯವರು ಪ್ರತಿಯೊಂದು ಬಡ್ಜೆಟ್ ಸೆಷನ್‌ನಲ್ಲಿ ಇದೇ ಮಾಡುತ್ತಿದ್ದಾರೆ. ನಮಗೆ ನೋಡಿ ನೋಡಿ ಸುಸ್ತಾಗಿದೆ. ಇನ್ನು ಮಾನ್ಯ ಖರ್ಗೆಯವರು ಹೇಳುವುದು ಬೇಡ, ತಾವು ಸುಮ್ಮನೆ ಇರಿ, ನಿಮ್ಮ ಬಣ್ಣ ಅಷ್ಟೇನು ಸರಿಯಿಲ್ಲ. ಸುಮ್ಮನೆ ಏತಕ್ಕೆ ಮಾತನಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮ ಬಣ್ಣ ಸರಿ ಇದೆ ಎಂದು ನಾವು ಹೇಳಿಲ್ಲ. ಒಂದು ರೂಪಾಯಿ ಏರಿಸಿ, ೧೦ ಪೈಸೆ ಇಳಿಸಿದರೆ ೯೦ ಪೈಸೆ ಏರಿಸಿದಂತೆ ಆಗಲಿಲ್ಲವೇ ? ನೀವು ಸಪೋರ್ಟ್ ಮಾಡುತ್ತೇವೆ ಎಂದು ಸಮರ್ಥನೆ ಮಾಡಿದರೆ ನೀವು ಉಳಿಯುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ತಮ್ಮ ಅಡ್ವೈಸ್ ಕೇಳುವ ಪರಿಸ್ಥಿತಿಯಲ್ಲಿ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮ ಜೊತೆಯಲ್ಲಿ ಸ್ವಲ್ಪ ದಿವಸ ತಾವು ಇದ್ದುದು ಮರೆಯಬೇಡಿ.

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮ ಜೊತೆಗೆ ಇನ್ನು ಬರುವುದಿಲ್ಲ, ಅದು ಮುಗಿದು ಹೋಯಿತು. ಅಸ್ಸಾಂ, ಪಂಜಾಬ್ ನೋಡಿದರೆ ದೇಶವನ್ನೇ ಮುಳುಗಿಸುತ್ತಿದ್ದೀರಿ. ಈಗ ರಾಜಕೀಯ ಚರ್ಚೆ ಬೇಡ. ಈಗ ಜಾಸ್ತಿ ಮಾಡಿರತಕ್ಕ ರೇಟು ಏನು ಇದೆ ಅದನ್ನು ಕಡಿಮೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇದು ಅಂಥ ಕೇಸ್ ಇದೆ, ಇದನ್ನು ಕಡಿಮೆ ಮಾಡಲಿಕ್ಕೆ ನಾನು ತೋರಿಸಿಕೊಡುತ್ತೇನೆ. ಡೀಸೆಲ್ ಕಾಸ್ಟ್ ಜಾಸ್ತಿಯಾದುದರಿಂದ, ಲಾಸ್ ಆಗುತ್ತಿದೆ ಅಂದರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಇನ್ನು ಈಗ ೩ ಕೋಟಿ ರೂಪಾಯಿ ಕನ್‌ಸೇಷನ್ ಕೊಟ್ಟಿರುವುದು ಹೇಳುವುದಾದರೆ, ಅದನ್ನು ಸರ್ಕಾರ ಕೊಡಬೇಕಾಗುತ್ತದೆ. ಅದರ ಜವಾಬ್ದಾರಿ ನಮ್ಮೆಲ್ಲರ ಮೇಲೆ ಇದೆ. ಮುಂಚೆ ಕೊಟ್ಟಿರತಕ್ಕ ಕನ್‌ಸೇಷನ್ ಭರ್ತಿ ಮಾಡಬೇಕು. ಈಗ ಕೊಟ್ಟಿರತಕ್ಕದ್ದು ಭರ್ತಿ ಮಾಡಬೇಕು ಅದನ್ನು ಕೆ.ಎಸ್.ಆರ್.ಟಿ.ಸಿ. ಮೇಲೆ ಹಾಕುವುದು ತಪ್ಪಾಗುತ್ತದೆ. ಆದರಿಂದ, ಲಾಸ್ ಆಗುತ್ತದೆ ಎಂದು ಹೇಳುವುದು ತಪ್ಪಾಗುತ್ತದೆ. ಅದು ನಿಜವಾದ ಅಂಶ ಅಲ್ಲ. ಲಾಸ್‌ಗೆ ಕಾರಣ ಏನು ಅಂದರೆ ನಾನು ಸ್ಟಡಿ ಮಾಡಿರುವ ಹಾಗೆ ಮೊದಲನೆಯದು ಮೇಂಟೆನೆನ್ಸ್ ಬಹಳ ಪೂರ್ ಆಗಿದೆ. ಇನ್ನು ಇಂಡಿಕೇಟರ್ಸ್ ಏನು ಎಂದು ಕೇಳಬಹುದು, ಇಂಡಿಕೇಟರ್ ನಮ್ಮ ರಾಜ್ಯಗಳಿಗೆ, ಬೇರೆ ರಾಜ್ಯಗಳಿಗೆ, ಹೋಲಿಸಿದರೆ, ೧೯೮೦–೮೧ರ ಅಂಕಿಅಂಶ ಇದೆ ಅದನ್ನು ನಾನು ತಮ್ಮ ಗಮನಕ್ಕೆ ತರಲಿಕ್ಕೆ ಇಷ್ಟ ಪಡುತ್ತೇನೆ.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಫ್ಲೀಟ್ ಯುಟಿಲೈಸೇಷನ್ ಆಂಧ್ರಪ್ರದೇಶದಲ್ಲಿ ೯೨ ಪರ್‌ಸೆಂಟ್. ಗುಜರಾತ್ ೮೦.೭೦ ಪರ್‌ಸೆಂಟ್ ಕೇರಳ ೮೩.೬೦ ಪರ್‌ಸೆಂಟ್, ಒರಿಸ್ಸಾ ೮೨ ಪರ್‌ಸೆಂಟ್, ಕರ್ನಾಟಕದಲ್ಲಿ ೭೯.೨೦ ಪರ್‌ಸೆಂಟ್ ಇದೆ. When you fully utilise the fleet strength naturally your revenue will also increase. If you don't utilise the fleet strength your revenue will come down. In Andhra Pradesh the fleet utilisation is 92% whereas in Karnataka it is 79% this is also one of factor contribute for loss. Therefore, you should take steps to increase the percentage of fleet utilisation ಫ್ಲೀಟ್ ಯುಟಿಲೈಸೇಷನ್ ಜಾಸ್ತಿ ಮಾಡಲಿಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಫ್ಲೀಟ್ ಯುಟಿಲೈಸೇಷನ್ನಿನ ಆವರೇಜ್ ೮೦ ಪರ್‌ಸೆಂಟ್ ಬಂದಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಇನ್ನು ವರ್ಕ್‌ಷಾಪ್‌ಗಳ ಬಗ್ಗೆ ಹೇಳಬೆಕೆಂದರೆ, ಈಗ ೭೫ ಡಿಪೋಗಳು ಇವೆ. ೧೩ ಡಿವಿಜನ್‌ಗಳು ಇವೆ. ಯಾವ ವರ್ಕ್‌ಷಾಪ್‌ನಲ್ಲಿಯೇ ತೆಗೆದುಕೊಳ್ಳಿ, ಎಷ್ಟು ಜನರು ಮೆಕಾನಿಕ್ ಇರಬೇಕೋ ಅಷ್ಟು ಜನರು ಇಲ್ಲ. ಎಷ್ಟು ಜನ ಕಾರ್ಮಿಕರು ಇರಬೇಕೋ ಅಷ್ಟು ಜನರು ಇಲ್ಲ. ಕೆ.ಎಸ್.ಆರ್.ಟಿ.ಸಿ. ಡಿಪೋಗೆ ಎಲ್ಲೇ ಹೋಗಿ ನೋಡಿ ಇದೇ ತರಹ ಇದೆ. ಬದಲಾವಣೆ ಮಾಡಿ ಎಂದು ಎಲ್ಲಾ ಕಡೆಯಿಂದ ರೆಪ್ರಸೆಂಟೇಷನ್‌ಗಳು ಬಂದಿವೆ. ಮೆಕಾನಿಕ್ ಮತ್ತು ಸ್ಕಿಲ್ಡ್ ಲೇಬರ್‌ಗಳನ್ನು ಜಾಸ್ತಿ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ನಿಮ್ಮ ರೆಕ್ರೂಟ್‌ಮೆಂಟ್ ಪಾಲಿಸಿ ಏನು ಎಂದು ಅರ್ಥವಾಗುತ್ತಿಲ್ಲ. ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುತ್ತಿದ್ದಾರೆ. ವರ್ಕ್‌ಷಾಪು ಗಳಲ್ಲಿ ಅವರಿಗೆ ಯಾರು ಬೇಕೋ ಅಂಥವರುಗಳನ್ನು ಅಪಾಯಿಂಟ್‌ಮೆಂಟ್ ಮಾಡಿಕೊಂಡಿದ್ದಾರೆ. ಈ ಬಗ್ಗೆ ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿಯವರು ೧೬ನೇ ಏಪ್ರಿಲ್ ೧೯೭೫ರ ರಿಪೋರ್ಟ್‌ನಲ್ಲಿ ಹೇಳಿದ್ದಾರೆ, ಅದನ್ನು ನಾನು ಓದಲಿಕ್ಕೆ ಹೋಗುವುದಿಲ್ಲ. ಅವರು ಪುಟ ೧೨೫ರಲ್ಲಿ ಏನು ಹೇಳಿದ್ದಾರೆ ಎಂದರೆ,...

> "The Committee are distressed to find that the installed capacity of the plant and machinery of the two workshops has not been assessed to enable comparison of actual utilisation with the installed capacity. Further, the planned targets of production during last 3 years have not been achieved and certain items of work was entrusted to private parties at higher rates and the Committee are not convinced of the arguments putforth justifying low production. The cost of retreading of tyres in the two captive shops were much higher than then rates charged for the work got done outside. The Committee therefore recommend that special efforts are necessary to improve the efficiency in the working of the workshops by full utilisation of installed capacity of the plant and machinery and the labour employed so that maximum economy is effected in the cost of repair and maintenance overhauling, retreading of tyres etc, which in turn reduces the cost of operation also."

೧೯೮೩–೮೪ನೇ ಸಾಲಿನಲ್ಲಿಯೂ ಸಹ ಪಿ.ಯು.ಸಿ. ಕಮಿಟಿಯವರು ಇದೇ ಮಾತನ್ನು ಬೇರೆ ರೀತಿಯಲ್ಲಿ ಹೇಳಿದ್ದಾರೆ. ೧೪ನೇ ರಿಪೋರ್ಟಿನಲ್ಲಿ ಹೇಳಿದ್ದಾರೆ. ಈಗ ಏನಾಗಿದೆ ಎಂದರೆ "ಗೋರ್ಕಲ ಮೇಲೆ ಮಳೆ ಸುರಿದಂತೆ ಸರ್ವಜ್ಞ" ಎನ್ನುವಂತೆ ಆಗಿದೆ. ಇವೊತ್ತು ಏನಾಗಿದೆ, ಅಂದರೆ ಅಧಿಕಾರಿಗಳವರಿಗೆ ಬೇಕಾದವರನ್ನು ನೇಮಕ ಮಾಡಿಕೊಳ್ಳುತ್ತಾರೆ. ಉದಾಹರಣೆಗೆ ಹೇಳಬೇಕೆಂದರೆ, ಅಸಿಸ್ಟೆಂಟ್ ಟ್ರಾಫಿಕ್ ಮ್ಯಾನೇಜರ್ ಹುದ್ದೆಗೆ ೩೦ ಜನರನ್ನು ರೆಕ್ರೂಟ್‌ಮೆಂಟ್ ಮಾಡಿದ್ದಾರೆ. ಇದು ಒಂದು ವರ್ಷದಲ್ಲಿ ಆಗಿರುವುದು ಎಂದು ತಿಳಿದುಕೊಳ್ಳಬೇಡಿ. ಮೊದಲಿಂದ ಆಗಿದೆ ೪೪ ಜನ ಟ್ರಾಫಿಕ್ ಇನ್‌ಸ್ಪೆಕ್ಟರ್‌ನ್ನು ಅಪಾಯಿಂಟ್‌ಮೆಂಟ್ ಮಾಡಿದರು. ಏತಕ್ಕೆ ಮಾಡಿದರು ಅಂದರೆ ಇದರಲ್ಲಿ ರಾಜಕೀಯ ಇದೆ. ನನಗೆ ತಿಳಿದುಬಂದ ಹಾಗೆ ಅಧಿಕಾರಿಗಳು ತಮ್ಮ ಸಂಬಂಧಿಕರನ್ನು ನೇಮಕ ಮಾಡಿಕೊಳ್ಳಲಿಕ್ಕೆ ಮಾಡಿದ್ದಾರೆಂದು ತಿಳಿದುಬಂದಿದೆ. ಈ ಆಪಾದನೆಯನ್ನು ಬಹಳ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ತಾವು ಬೇಕಾದರೆ ವೆರಿಫೈ ಮಾಡಿ ನೋಡಿ. ಈ ರೀತಿ ಆದರೆ ಎಫಿಷಿಯನ್ಸಿ ಹೇಗೆ ಬರುತ್ತದೆ? ಸ್ವಲ್ಪ ತಾವೇ ತಿಳಿಸಿ ವರ್ಕ್‌ಷಾಪಿಗೆ ಬೇಕಾದಂಥ ಜನರನ್ನು ರೆಕ್ರೂಟ್‌ಮೆಂಟ್ ಮಾಡಿಕೊಳ್ಳಬೇಕು. ಎಷ್ಟು ಜನರನ್ನು ನೇಮಕ ಮಾಡಿಕೊಳ್ಳಬೇಕೆಂಬ ಬಗ್ಗೆ ಸ್ಟಡಿ ಮಾಡಬೇಕು. ಇಲ್ಲಿ ಸ್ಟಡಿ ಮಾಡುವಂತಾದ್ದು ಇಲ್ಲ, ಏನೂ ಇಲ್ಲ. ಯಾರು ಏನು ಮಾಡುತ್ತಾರೋ ಗೊತ್ತಿಲ್ಲ. ಎಲ್ಲರೂ ಸೇರಿ ಕೆಲಸ ಮಾಡುತ್ತಾರೆ, ಎಂದು ಅವರು ಹೇಳುತ್ತಾರೆ. ಇದು ನಮಗೆ ಏನು ಗೊತ್ತು? ಏಕೆಂದರೆ ಇಲ್ಲಿ ನಾವು ಕೆಲಸ ಮಾಡಿದಂತೆ ಅಲ್ಲಿ ಅವರು ಮಾಡುತ್ತಾರೆ. ಒಬ್ಬೊಬ್ಬರೂ ಏನೇನು ಕೆಲಸ ಮಾಡುತ್ತಿದ್ದಾರೆ. ಎಷ್ಟೆಷ್ಟು ಮಾಡುತ್ತಾ

ರೆದು ನೋಡುವುದಕ್ಕೆ ಸಾಧ್ಯವಾಗುತ್ತದೆ ಇದನ್ನು ೧೯೭೪ರ ಸಮಿತಿಯವರೂ ಹೇಳಿದ್ದಾರೆ. ೧೯೭೦ರ ಸಮಿತಿಯವರೂ ಹೇಳಿದ್ದಾರೆ. ಈ ಸಂದರ್ಭದಲ್ಲಿ ಒಂದು ಉದಾಹರಣೆಯನ್ನು ಕೊಡುತ್ತೇನೆ. ಆದರೆ ಅವರ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ. ಒಬ್ಬ ಡ್ರೈವರ್ ಇದ್ದಾರೆ. ಅವರಿಗೆ ೧೫ ವರ್ಷ ಸರ್ವೀಸ್ ಆಗಿದೆ. ಅವರು ಪ್ರತಿದಿನ ತಮ್ಮ ಸ್ವಂತ ಕಾರ್‌ನಲ್ಲಿ ಮನೆಯಿಂದ ಬಸ್ ಡಿಪೋಕ್ಕೆ ಬರುತ್ತಾರೆ. ಈ ಡಿಪೋ ಇರುವುದು ಅವರ ಮನೆಯಿಂದ ಕೇವಲ ೨ ಕಿಲೋ ಮೀಟರ್. ಇವರು ಡಿಪೋದಿಂದ ಜಯನಗರ ೪ನೇ ಬ್ಲಾಕ್‌ಗೆ ಹೋಗತಕ್ಕದ್ದು. ಬಸ್‌ನಲ್ಲಿ ಇಬ್ಬರು ಮೆಕ್ಯಾನಿಕ್‌ಗಳನ್ನು ಕರೆದುಕೊಂಡು ಹೋಗಿ ಅಲ್ಲಿಂದ ಜಯನಗರಕ್ಕೆ ಹೋಗಿಬಂದು ಮನೆಗೆ ಹೋಗುತ್ತಾರೆ. ಇವರಿಗೆ ೩.೫೦ ರೂ. ಬ್ಯಾಟ ಮತ್ತು ಸಂಬಳ.

ಇನ್ನೊಂದು ಏನೆಂದರೆ, ಇನ್ನೊಬ್ಬ ಡ್ರೈವರ್ ೩ನೇ ಡಿಪೋಗೆ ಬರುತ್ತಾರೆ. ಈ ಡಿಪೋ ಅವರ ಮನೆಯಿಂದ ೧ ಕಿಲೋಮೀಟರ್ ದೂರ ಇದೆ. ಇವರು ಒಂದು ಲಾರಿಯನ್ನು ತೆಗೆದುಕೊಂಡು ಬರುತ್ತಾರೆ, ಇವರಿಗೂ ೩.೫೦ ರೂ. ಬ್ಯಾಟ ಮತ್ತು ಸಂಬಳ. ಇವರ ಕೆಲಸ ಇಷ್ಟೆ. ಮಾನ್ಯ ಸದಸ್ಯರಾದ ಚಿಕ್ಕೇಗೌಡರು ಹೇಳುತ್ತಿದ್ದರು, ಅವರು ಆಕ್ಸಿಡೆಂಟ್ ಮಾಡುತ್ತಿಲ್ಲ ಎಂದು. ಯಾರು ಆಕ್ಸಿಡೆಂಟನ್ನು ಅವರ ಸರ್ವೀಸ್‌ನಲ್ಲಿ ಮಾಡುವುದಿಲ್ಲ ಅಂಥವರಿಗೆ ಪಾರಿತೋಷಕವನ್ನು ಕೊಡುತ್ತೇವೆಂದು ಹೇಳಿದ್ದಾರೆ. ನಾನಾದರೂ ಹೇಳುತ್ತೇನೆ, ಇಂಥವರು ಆಕ್ಸಿಡೆಂಟನ್ನೇ ಮಾಡುವುದಿಲ್ಲ. ಕಾರಣ ಇವರು ಕೆಲಸವನ್ನು ಮಾಡಿದರಲ್ಲವೆ ಆಕ್ಸಿಡೆಂಟ್ ಆಗುವುದು. ಇವರು ಆಕ್ಸಿಡೆಂಟ್ ಮಾಡುವುದಕ್ಕೆ ಅವಕಾಶವಾದರೂ ಎಲ್ಲಿದೆ? ಇವರಿಗೆ ೧೫ ವರ್ಷ ಸರ್ವೀಸ್ ಆಗಿದೆ. ಈಗ ಮನೆಗೆ ಹೋಗುತ್ತಿದ್ದಾರೆ.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ, ಹಣವೆಲ್ಲಾ ಹಂಚಿಹೋಗಿದೆ. ಅವರು ಡ್ರೈವರ್ ಆದರೇನು? ಐ.ಎ.ಎಸ್. ಅಧಿಕಾರಿಯಾದರೇನು?

ಶ್ರೀ ಎಂ.ಎಸ್. ಕೃಷ್ಣನ್.—ಅವರು ಯಾವುದರಲ್ಲಾದರೂ ಬರಲಿ, ಅವರು ಹೆಲಿಕ್ಯಾಪ್ಟರ್ ನಲ್ಲಾದರೂ ಬರಲಿ, ಕಾರ್‌ನಲ್ಲಾದರೂ ಬರಲಿ, ಅದನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ನಾನು ಕೇಳುವುದೇನೆಂದರೆ, ನೀವು ಅವರ ಮೇಲೆ ಹತೋಟಿಯನ್ನು ಏನಾದರೂ ಇಟ್ಟುಕೊಂಡಿದ್ದೀರಾ? ಅವರಿಗೆ ಏನು ಕೆಲಸವನ್ನು ಕೊಟ್ಟಿದ್ದೀರಿ? ಇದರಲ್ಲಿ ರಾಜಕೀಯ ಇದೆ. ಇದರಲ್ಲಿ ಬೈರಪ್ಪಾಜಿಯವರ ರಾಜಕೀಯ ಇದೆ. ಆದ್ದರಿಂದ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ. ಮಹಾದೇವ್.—ರಾಜಕೀಯ ಬಂದಾಗ ರಾಜಕೀಯ ಮಾಡುತ್ತೇವೆ: ವರ್ಕ್ ಷಾಪ್‌ನಲ್ಲಿ ಮೈನ್‌ಟೆನೆನ್ಸ್ ವಿಚಾರದಲ್ಲಿ ಹೇಳುವುದಾದರೆ ಬಸ್‌ಗಳಲ್ಲಿ ಟೂಲ್ಸ್ ಇರುವುದಿಲ್ಲ. ಸ್ಪೀಡಾಮೀಟರ್ ಇರುವುದಿಲ್ಲ. ಬಸ್ಸುಗಳನ್ನು ತೊಳೆಯುವುದಿಲ್ಲ, ಇಲ್ಲಿ ಒಂದು ಉದಾಹರಣೆಯನ್ನು ಹೇಳುವುದಾದರೆ, ಮಾನ್ಯ ಗುಂಡೂರಾಯರ ಸರ್ಕಾರದಲ್ಲಿ ದೇಸಿಕಾನ್ ಮೀಟರ್ ಅಂದರೆ ಗವರ್ನರ್ಸ್‌ನ್ನು ಕೊಂಡುಕೊಂಡರು. ಈ ಗೌವರ್ನರ್ಸ್ ಏನು ಕೆಲಸ ಮಾಡುತ್ತೇವೆ ಎಂದರೆ ಸ್ಪೀಡನ್ನು ಕಟ್ ಮಾಡುತ್ತೇವೆ, ಸ್ಪೀಡ್ ಕಟ್ ಆದಾಗ ಫ್ಯೂಯಲ್ ಕನ್‌ಸಂಪಷನ್ ಕಡಿಮೆಯಾಗುತ್ತದೆ. ಇಂಥಾದ್ದು ೧೦೦೦ ಗೌರ್ನರ್ಸ್‌ನ್ನು ತೆಗೆದುಕೊಂಡರು. ಅವೆಲ್ಲಾ ಈಗ ಎಲ್ಲಿ ಹೋಗಿವೆ ಎಂಬುದು ಗೊತ್ತಿಲ್ಲ. ಸ್ಟೋರ್ಸ್‌ನಲ್ಲಿ ಇವೆಯೋ ಅಥವಾ ಬೇರೆ ಇನ್ನೆಲ್ಲಿಯಾದರೂ ಇವೆಯೋ ಗೊತ್ತಿಲ್ಲ. ನನಗೆ ತಿಳಿದಮಟ್ಟಿಗೆ ಅವು ಸ್ಟೋರ್ಸ್‌ನಲ್ಲಿ ಇಲ್ಲ ಎಂದು ಕಾಣಿಸುತ್ತದೆ. ಇಲ್ಲಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ನಡೆದಿದೆ.

ಶ್ರೀ ಎಂ.ಪಿ. ಪ್ರಕಾಶ್.—ಈಗಾಗಲೇ ಅವರಿಂದ ೨೫ ಲಕ್ಷ ರೂಪಾಯಿಗಳನ್ನು ವಾಪಸ್ಸು ಕಟ್ಟಿಸಿಕೊಂಡಿದ್ದೇವೆ.

ಶ್ರೀ ಎಂ.ಎಸ್. ಕೃಷ್ಣನ್.—ಅದು ಏನೋ ಗೊತ್ತಿಲ್ಲ. ಇನ್ನು ಸ್ಪೇರ್ ಪಾರ್ಟ್ಸ್ ವಿಷಯದಲ್ಲಿ ಹೇಳುವುದಾದರೆ, ನಮ್ಮ ಡ್ರೈವರ್‌ಗಳು ಏನು ಹೇಳುತ್ತಾರೆ ಎಂದರೆ ಎಸ್.ಎಸ್.ಪಿ., ಎಂದು ಮಾತು ಮಾತಿಗೂ ,ಹೇಳುತ್ತಿರುತ್ತಾರೆ. ಇವರು ಎಸ್.ಎಸ್.ಪಿ., ಎಂದು ಏತಕ್ಕೆ ಹೇಳುತ್ತಾರೆ? ಹಾಗೆ ಹೇಳುವುದರ ಅರ್ಥವಾದರೂ ಏನು ಎಂಬುದನ್ನು ನಾನು ಬಹಳ ದಿವಸದವರೆಗೂ ಅರ್ಥ ಮಾಡಿಕೊಳ್ಳುವುದಕ್ಕೇ ಸಾಧ್ಯವಾಗಲಿಲ್ಲ. ಸ್ಪೇರ್ ಪಾರ್ಟ್ಸ್ ಸರಿಯಾಗಿ ಸಿಕ್ಕುತ್ತಿಲ್ಲ ಎಂದರೆ ಎಸ್.ಎಸ್.ಪಿ., ಎಂದು ಹೇಳುತ್ತಾರೆ. ಇವರ ಎಸ್.ಎಸ್.ಪಿ.,ಗೂ ಸ್ಪೇರ್ ಪಾರ್ಟ್ಸ್‌ಗೂ ಏನು ಸಂಬಂಧ ಎಂದು ಕೇಳಿದಾಗ ಅದು Sardarji's spurious parts ಎಂದು ತಿಳಿದುಬಂದು

ಸ್ವಾಮಿ, ಓರಿಜಿನಲ್ ಪಾರ್ಟ್ಸ್‌ನ್ನು ಹಾಕಿದರೆ ಅದು ಬಾಳಿಕೆ ಬರುವುದೇ ಕಷ್ಟ, ಅಂಥಾದ್ದರಲ್ಲಿ ಸರ್ದಾಜಿಗಳ ಪಾರ್ಟ್ಸ್‌ನ್ನು ಹಾಕಿದರೆ ಇನ್ನು ಎಷ್ಟು ಚೆನ್ನಾಗಿ ಕೆಲಸ ಮಾಡಬಹುದೆಂಬುದನ್ನು ತಾವೇ ಯೋಚನೆ ಮಾಡಿನೋಡಿ. ಸ್ವಾಮಿ, ಒಂದೊಂದು ಡಿಪೋಗಳಲ್ಲಿ ಟೈರುಗಳೇ ಇರುವುದಿಲ್ಲ, ನನಗೆ ಒಂದು ಅನುಭವ ಆಯಿತು. ನಾನು ಒಂದು ಸಾರಿ ಬಿಜಾಪುರಕ್ಕೆ ಹೋಗಿ ಬರುವಾಗ ನಾವು ಬರುತ್ತಿದ್ದ ಕೆ.ಎಸ್.ಆರ್.ಟಿ.ಸಿ ಬಸ್‌ನ ಟೈರು ಬರ್ಸ್ಟ್ ಆಯಿತು. ಅಲ್ಲಿದ್ದ ಡಿಪೋಗೆ ಹೋಗಿ ಟೈರನ್ನು ಬದಲಾಯಿಸಿ ಕೊಡಿ ಎಂದು ಕೇಳಿದಾಗ ಅವರು ಟೈರನ್ನು ಕೊಡುವುದಕ್ಕೆ ಇಷ್ಟಪಡಲಿಲ್ಲ. ಅಲ್ಲದೆ ಅವರಲ್ಲಿ ಟೈರ್ ಕೂಡ ಇರಲಿಲ್ಲವೆಂದು ಕಾಣಿಸುತ್ತದೆ. ಆಮೇಲೆ ನಾವು ಅವರ ಹತ್ತಿರ ಜಗಳ ಮಾಡಿದ ಮೇಲೆ ಹೇಗೋ ಮಾಡಿ ಒಂದು ಟೈರನ್ನು ಹಾಕಿಕೊಟ್ಟರು. ಅನಂತರ ನಾವು ಬಂದೆವು. ಇದರಿಂದಾಗಿ ಸುಮಾರು ೩ ಗಂಟೆಕಾಲ ತಡವಾಯಿತು.

ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಚಾರ ಹೇಳುವುದಾದರೆ, ನಮ್ಮ ಸ್ಪೇರ್ ಪಾರ್ಟ್ಸ್ ನೀತಿಯಲ್ಲಿ ಒಂದು ವಿಚಾರ ಅಡಕವಾಗಿದೆ. ಯಾವುದೇ ಒಂದು ಫರ್ಮ್‌ನಿಂದ ಸ್ಪೇರ್ ಪಾರ್ಟ್ಸ್ ತಂದರೂ ಕೂಡ ಅದಕ್ಕೆ ಇಷ್ಟು ದಿವಸ ಎಂದು ಗ್ಯಾರಂಟಿ ಇದ್ದೇ ಇರುತ್ತದೆ. ಇದು ಇದ್ದರೂ ಕೂಡ ಈ ಪಾರ್ಟ್ಸ್ ಅವರು ಹೇಳಿರುವಷ್ಟು ದಿವಸ ಬಾಳಿಕೆ ಬರುತ್ತವೆಯೋ? ಇಲ್ಲವೆ? ಎಂಬುದನ್ನೂ ಕೂಡ ನೋಡದೆ ಆ ಪಾರ್ಟ್ಸ್‌ನ್ನು ತೆಗೆದುಕೊಂಡು ಹಣವನ್ನು ಕೊಡುತ್ತಿದ್ದಾರೆ. ಸ್ವಾಮಿ, ಈ ವಿಚಾರದಲ್ಲಿ ಗುಜರಾತ್ ಸಾರಿಗೆ ಸಂಸ್ಥೆಯವರಿಂದ ಪಾಠವನ್ನು ತಾವು ಕಲಿಯಬೇಕು. ಏಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆಂದರೆ, ಅವರು ಕೊಂಡುಕೊಳ್ಳತಕ್ಕ ಯಾವುದೇ ವಸ್ತುವಿಗಾಗಲಿ ಪೂರ್ತಿ ಹಣವನ್ನು ಕೊಡುವುದಿಲ್ಲ. ಗ್ಯಾರಂಟಿ ಅವಧಿಯನ್ನು ಏನು ಕಂಪೆನಿಯವರು ಕೊಟ್ಟಿರುತ್ತಾರೆ ಆ ಅವಧಿ ಮುಗಿದ ಮೇಲೆಯೇ ಹಣವನ್ನು ಕೊಡುವುದು. ಏನಾದರೂ ಲೋಪದೋಷ ಕಂಡುಬಂದರೆ ದುಡ್ಡನ್ನೇ ಕೊಡುವುದಿಲ್ಲ. ಅದೇ ರೀತಿ ನೀವೂ ಕೂಡ ಪೂರ್ತಿ ಹಣವನ್ನು ಕೊಡದೆ ಗ್ಯಾರಂಟಿ ಪೀರಿಯೆಡ್‌ವರೆಗೂ ಅವು ಚೆನ್ನಾಗಿ ಕೆಲಸ ಮಾಡುತ್ತದೆಯೋ ಇಲ್ಲವೇ ಎಂಬುದನ್ನು ಚೆಕಪ್ ಮಾಡಿ ಅವರಂತೆಯೇ ಹಣವನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳಬಯಸುತ್ತೇನೆ

ಮಾನ್ಯ ಅಧ್ಯಕ್ಷರೆ, ಇನ್ನೊಂದು ಮುಖ್ಯ ವಿಚಾರ ಎಂದರೆ ಮಾನ್ಯ ಸಚಿವರಾದ ಲಕ್ಷ್ಮೀಸಾಗರ್ ರವರು ಹೇಳಿದಂತೆ ಲಾಸ್ ಆಗುವುದಕ್ಕೆ ಓವರ್ ಏಜ್ಡ್ ಬಸ್‌ಗಳೂ ಕೂಡ ಒಂದು ಕಾರಣ. ಈಗ ರಸ್ತೆಯ ಮೇಲೆ ಓಡುತ್ತಿರುವ ಬಸ್‌ಗಳ ಸಂಖ್ಯೆ ೫೮೮೬. ಇದರಲ್ಲಿ ಓವರ್ ಏಜ್ಡ್ ಬಸ್‌ಗಳು ಎಷ್ಟಿವೆ ಎನ್ನುವ ಬಗ್ಗೆ ಪಿ.ಎ.ಸಿ. ಯವರು ತಮ್ಮ ೧೮ನೇ ರಿಪೋರ್ಟ್‌ನಲ್ಲಿ ಏನು ಹೇಳಿದ್ದಾರೆಂದರೆ,

> "The Corporation said in a written reply that the chassis of the vehicle is retained in the Corporation for 7.00 lakh Kms. or 10 years and the reconditioning of the bus is done for the first time after 3.5 lakh kms. and for the 2nd time after completion of another 1.6 lakh kms.,
>
> The Committee however noticed that overaged fleet in the Corporation (which performed more than 7 lakh kms) is on the high side.
>
> The vehicles which have run above 7 lakh Kms. are Leyland-833. Tata-663. others-13. total-1,509 percentage of fleet held is 25.8%.

ಬೇರೆ ರಾಜ್ಯದಲ್ಲಿ ಈ ರೀತಿ ಇದೆ, ಗುಜರಾತ್ ೧೧.೪, ಬಿಹಾರ ೧೮.೧ ಮಧ್ಯಪ್ರದೇಶ ೧.೯, ಮಹಾರಾಷ್ಟ್ರದಲ್ಲಿ ೨೨, ಉತ್ತರ ಪ್ರದೇಶ ೧೭ ಪರ್ಸೆಂಟ್. ಸ್ವಾಮಿ, ೮೩–೮೪ರ ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿ ರಿಪೋರ್ಟ್‌ನಲ್ಲಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದರೂ ನೀವು ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ?

೩–೦೦ ಪಿ. ಎಂ.

ಈಗ ಇರತಕ್ಕಂಥ ಓವರ್ ಏಜ್ಡ್ ವಾಹನಗಳನ್ನು ರಿಪ್ಲೇಸ್ ಮಾಡುವುದಕ್ಕೋಸ್ಕರ ಹೊಸ ಫ್ಲೀಟ್ ಬಂದಿದೆ ನಿಜ. ಇದರಲ್ಲೂ ಸಹ ಹಿಂದೆಯೆಲ್ಲ ಬಹಳ ದುರ್‌ವ್ಯವಹಾರ ನಡೆದಿದೆ. ಈಗ

ಒಂದು ಗಲಾಟೆ ಬಂದಿದೆ. ಅದೇನೆಂದರೆ ಆಗ್ಮೆಂಟೇಷನ್‌ಗೆ ಜಾಸ್ತಿ ಕೊಡಬೇಕೆಂದು ಮತ್ತೊಂದು ರಿಪ್ಲೆಸ್‌ಮೆಂಟ್‌ಗೆ ಜಾಸ್ತಿ ಕೊಡಬೇಕೆಂದು. ಇದೇ ಈಗಿರತಕ್ಕಂಥ ಪ್ರಶ್ನೆ. ನಾನು ಹೇಳುವುದೇನೆಂದರೆ ಮೊದಲು ರಿಪ್ಲೇಸ್‌ಮೆಂಟ್ ಮಾಡಬೇಕು. ಅದು ಬಹಳ ಮುಖ್ಯ. ಜಾಯ್‌ಸಿಂಗ್ ಎನ್ನುವವರು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಏನು ಹೇಳಿದ್ದಾರೆಂದರೆ ಹೈಯೆಸ್ಟ್ ರೇಟ್ ಆಫ್ ಆಕ್ಸಿಡೆಂಟ್‌ನಿಂದಲೇ ಕರ್ನಾಟಕದ ಬಿ. ಟಿ. ಎಸ್. ಅಂಡ್ ಕೆ. ಎಸ್. ಆರ್. ಟಿ. ಸಿ. ಲಾಸ್‌ಗೆ ಕಾರಣವೆಂದು ಹೇಳಿದ್ದಾರೆ ಇನ್ನೊಂದು ಕಾರಣವೇನೆಂದರೆ ಅಲ್ಲಿರತಕ್ಕಂಥ ಲಾ ಡಿಪಾರ್ಟ್‌ಮೆಂಟ್‌ನಿಂದ. ಈ ಲಾ ಡಿಪಾರ್ಟ್‌ಮೆಂಟ್‌ನವರ ಕೆಲಸವೇನೆಂದರೆ ಲೀಗಲ್ ಮ್ಯಾಟರ್ಸ್‌ಗೆ ಅಡ್ವೈಸ್ ಮಾಡುವುದು. ಆದರೆ ಅವರು ತಪ್ಪು ಸಲಹೆಯನ್ನು ಕೊಡುತ್ತಿದ್ದಾರೆ. ಕಂಡಕ್ಟರ್ಸ್, ಹೆಲ್ಪರ್ಸ್‌ಗೆ ಟರ್ಮಿನೇಟ್ ಮಾಡುತ್ತಿದ್ದಾರೆ. ಇದಕ್ಕೆ ಕಾರಣವೇನು ಕೊಡುತ್ತಿದ್ದಾರೆಂದರೆ ಅನ್‌ಫಿಟ್ ಎಂದು. ಈ ರೀತಿ ಸಾವಿರಾರು ಜನರನ್ನು ಟರ್ಮಿನೇಟ್ ಮಾಡಿದ್ದಾರೆ. ಇದರಿಂದ ಕೆಲವರು ಸುಪ್ರೀಮ್ ಕೋರ್ಟಿಗೆ ಹೋದರು, ಅಲ್ಲಿ ಇವರೆಲ್ಲರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಆಜ್ಞೆಯಾಯಿತು. ಹಿಂದಿನ ಸಂಬಳವನ್ನು ಕೊಡಬೇಕೆಂದೂ ಸಹ ತೀರ್ಮಾನವಾಯಿತು. ಇದರಿಂದ ಒಂದುಕೋಟಿ ರೂಪಾಯಿ ನಷ್ಟವಾಯಿತು. ಮೊದಲೇ ಸಲಹೆಯನ್ನು ಸರಿಯಾಗಿ ಕೊಟ್ಟಿದ್ದರೆ ಒಂದು ಕೋಟಿ ರೂಪಾಯಿಗಳು ಉಳಿಯುತ್ತಿತ್ತು.

SRI M. P. PRAKASH.—Our High Court Judgement was in favour of termination but the matter went to the Supreme Court and the Corporation was made a party there.

SRI M. S. KRISHNAN.—I am not competent to speak about High Court. For whatsover reason is considered as retrenchment *malafide* unless it is taken recourse in accordance with law The whole law department should be revamped. ಕೆಲಸ ಮಾಡುವವರನ್ನು ಕೆಲಸದಿಂದ ತೆಗೆದುಹಾಕಿ ಆ ಜಾಗದಲ್ಲಿ ಎರಡು, ಮೂರು ಸಾವಿರ ರೂಪಾಯಿಗಳ ಕಮಿಷನ್ ತೆಗೆದುಕೊಂಡು ಕೆಲಸ ಕೊಡುವುದು. ಇದು ಕರಪ್ಟ್ ಪ್ರಾಕ್ಟೀಸ್ ಅಲ್ಲವೇ ? ಅಧಿಕಾರ ವರ್ಗದಲ್ಲಿ ಇರತಕ್ಕಂಥ ಜನರು ಶಾಮೀಲಾಗಿರುವುದರಿಂದ ಕೋಟ್ಯಾಂತರ ರೂಪಾಯಿಗಳು ನಷ್ಟವಾಗಿದೆ. ಈ ಲಾ ಡಿಪಾರ್ಟ್‌ಮೆಂಟ್‌ನಲ್ಲಿ ಒಬ್ಬ ಲಾಯರು ಇದ್ದಾರೆ. ಅವರು ಎರಡು ಮೂರು ತಿಂಗಳಲ್ಲಿಯೇ ನಾಲ್ಕೈದು ಲಕ್ಷ ರೂಪಾಯಿಗಳನ್ನು ಮಾಡಿಕೊಂಡಿದ್ದಾರೆ. ಇನ್ನು ಇಬ್ಬರು ಲಾ ಆಫೀಸರ್ಸ್ ಇದ್ದಾರೆ ಅವರು ಕಾರ್ಮಿಕರಿಗೆ ಬಹಳ ತೊಂದರೆ ಕೊಡುತ್ತಿದ್ದಾರೆ. ಅವರ ಹೆಸರನ್ನು ಹೇಳುತ್ತೇನೆ. ಮೊದಲನೆಯದಾಗಿ ರಂಗಸ್ವಾಮಿ, ಅಸಿಸ್ಟೆಂಟ್ ಲಾ ಆಫೀಸರ್, ಬಿ.ಟಿ.ಎಸ್. ಎರಡನೆಯವರು ರಂಗದಾಮಯ್ಯ ಬಳ್ಳಾರಿಯವರು. ಇವರಿಬ್ಬರನ್ನು ಮಾನ್ಯ ಸಚಿವರು ವಿಚಾರಿಸಿಕೊಳ್ಳಬೇಕು. ಸರ್ಕಾರ ಈ ಲಾ ಡಿಪಾರ್ಟ್‌ಮೆಂಟನ್ನು ರಿ ವ್ಯಾಂಪ್ ಮಾಡಬೇಕು.

ಇನ್ನು ಕೆ. ಎಸ್. ಆರ್.ಟಿ.ಸಿಯಲ್ಲಿ ಲಾಸ್ ಆಗುತ್ತಿರುವುದಕ್ಕೆ ಮತ್ತೊಂದು ಕಾರಣವಿರುತ್ತದೆ. ಅದೇನೆಂದರೆ ಕಾರ್ಮಿಕರ ಸಹಕಾರವನ್ನು ತೆಗೆದುಕೊಳ್ಳದಿರುವುದು. ಮಾನ್ಯ ಮಹೇಶ್ವರಪ್ಪನವರು ಮಾತನಾಡುತ್ತಾ ಇನ್ನೂ ವರೆಗೆ ಅಲ್ಲಿ ಬೋರ್ಡನ್ನೇ ರಚನೆ ಮಾಡಿಲ್ಲವೆಂದು ಹೇಳಿರುತ್ತಾರೆ. ಅದು ಒಂದು ತಾಂತ್ರಿಕದೋಷ. ಮಾನ್ಯ ಗಂಗಾಧರನ್‌ರವರೂ ಸಹ ಹೇಳಿದ್ದಾರೆ. ವರ್ಕರ್ಸ್ ಪಾರ್ಟಿಸಿಪೇಷನ್ ಅಧಿಕಾರಿ ಮಂಡಲಿಯಲ್ಲಿ ಇಲ್ಲದೆ ಇರುವುದು ಎಂದು. ಇದರಿಂದ ಅನೇಕ ವರ್ಷಗಳಿಂದ ನೆನೆಗುದಿಗೆಗೆ ಬಿದ್ದಿದೆ. ಯಾವುದೇ ಪಬ್ಲಿಕ್ ಸೆಕ್ಟರ್, ಅಂಡರ್ ಟೇಕಿಂಗ್‌ನಲ್ಲಿ ತೆಗೆದುಕೊಂಡರೂ ಮ್ಯಾನೇಜ್‌ಮೆಂಟ್‌ನವರು ಕಾರ್ಮಿಕರ ಸಹಕಾರವನ್ನು ತೆಗೆದುಕೊಳ್ಳತಕ್ಕಂಥದ್ದು ಬಹಳ ಅಗತ್ಯವಿರುತ್ತದೆ. ಕಾರ್ಮಿಕರಿಗೋಸ್ಕರವಾಗಿ ಒಂದು ಓರಿಯೆಂಟೇಷನ್ ಕೋರ್ಸ್ ಮುಂತಾದವುಗಳನ್ನು ಮಾಡಬೇಕಾಗಿರುವುದು ಬಹಳ ಅಗತ್ಯವಿರುತ್ತದೆ. ಇವಕ್ಕೆ ಎಲ್ಲ ಯೂನಿಯನ್‌ನವರೂ ಸಹಕಾರವನ್ನು ಕೊಡುತ್ತಾರೆ. ಕಾರ್ಮಿಕರ ಚುನಾಯಿತ ಪ್ರತಿನಿಧಿಗಳನ್ನು ಮ್ಯಾನೇಜ್‌ಮೆಂಟಿನಲ್ಲಿ ಹಾಕಿ ೧೯೮೩-೮೪ರ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ರಿಪೋರ್ಟ್‌ನಲ್ಲಿ ಏನಿದೆ ಎಂಬುದನ್ನು ಎಲ್ಲರೂ ನೋಡಬೇಕು. It is gathering dust. Fortunately, it is not eaten up by white ants or rats. It is gathering dust. Workers participation in management. ಬಗ್ಗೆ ಇದರಲ್ಲಿ ಹೇಳಿದ್ದಾರೆ. ಇದು ಬಹಳ ಮುಖ್ಯ ಪ್ರಾಬ್ಲಮ್ಸ್‌ಗಳನ್ನು ತ್ವರಿತಗತಿಯಿಂದ ಬಗೆಹರಿಸಬೇಕು. ಇಲ್ಲಿ ಯಾವ ಗ್ರೀವೆನ್ಸ್ ಬಗೆ

ಹರಿಯುವುದೇ ಇಲ್ಲ. ತಿಂಗಳಾನುಗಟ್ಟಲೆ ಹಾಗೆ ಇರುತ್ತದೆ. ಮ್ಯಾನೇಜ್‌ಮೆಂಟ್ ಡಿಸಿಷನ್ಸ್‌ಗಳನ್ನೂ ಇಂಪ್ಲಿಮೆಂಟ್ ಮಾಡುವುದಿಲ್ಲ. ಉದಾಹರಣೆಗೆ ರಾಯಚೂರು ಡಿವಿಜನ್ ಬಗ್ಗೆ ವಾಹನಗಳ ಕಂಡಿಷನ್ ಬಗ್ಗೆ ಒಂದು ಡಿಸಿಷನ್‌ನ್ನೂ ಇನ್ನೂ ಇಂಪ್ಲಿಮೆಂಟ್ ಮಾಡಿಲ್ಲ ಕೋಲಾರದಲ್ಲಿ ಚಿಕ್ಕೆಗೌಡರೆಂಬುವವರು ನೂರಾರು ಜನ ಡ್ರೈವರ್‌ಗಳನ್ನು ಕಿತ್ತುಹಾಕಿದಾಗ ಅವರೆಲ್ಲಾ ಸ್ಟ್ರೈಕ್ ಮಾಡಿದ್ದರು. ಅದರ ಬಗ್ಗೆ ರಿವ್ಯೂ ಕಮಿಟಿಯ ರಿಪೋರ್ಟ್ ಬಂದಿರುತ್ತದೆ. ಅದರ ಬಗ್ಗೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಏತಕ್ಕೆ ತೆಗೆದುಕೊಂಡಿಲ್ಲವೆಂಬುದನ್ನು ತಿಳಿಸಬೇಕು. ಇನ್ನು ಲೇಬರ್ ಕೋರ್ಟ್ ಹುಬ್ಬಳ್ಳಿಯವರು ಒಂದು ತೀರ್ಮಾನವನ್ನು ಕೊಟ್ಟಿದ್ದಾರೆ. ಅದನ್ನು ಕಾರ್ಯಗತಮಾಡಿಲ್ಲ. ೧೬ನೇ ಫೆಬ್ರುವರಿ ೧೯೮೪ ರಲ್ಲಿ ಫೆಡರೇಷನ್ ಜೊತೆಯಲ್ಲಿ ಸೆಟಲ್‌ಮೆಂಟ್ ಆಗಿರುತ್ತದೆ. ಎನ್‌ಕ್ವಯರಿ ಮಾಡದೇನೆ ಡ್ಯಾಮೇಜಸ್‌ನ್ನು ಕೆಲಸಗಾರರಿಂದ ವಸೂಲು ಮಾಡಿಕೊಂಡಿರುತ್ತಾರೆ. ಇದು ಸರಿಯಾದುದಲ್ಲ. Driver is no doubt an accident-prone personality. ಇಲ್ಲಿರತಕ್ಕ ಸಿ. ಅಂಡ್ ಡಿ. ರೆಗ್ಯುಲೇಷನ್‌ನ್ನು ಪೂರ್ತಿ ಬದಲಾವಣೆಯನ್ನು ಮಾಡಬೇಕು. 'That C & D regulation is really an abnoxious regulation. ಈ ರೀತಿ ಎನ್‌ಕ್ವಯರಿ ಮಾಡದೇನೆ ೧೦-೧೨ ಸಾವಿರ ರೂಪಾಯಿಗಳನ್ನು ಡ್ಯಾಮೇಜಸ್ ಎಂದು ಡ್ರೈವರುಗಳಿಂದ ವಸೂಲು ಮಾಡಿಕೊಂಡಿರುತ್ತಾರೆ. ಇದು ಸರಿಯಾದುದಲ್ಲ ಮಾನ್ಯ ಮಂತ್ರಿಗಳು ಇದರ ಬಗ್ಗೆ ಪರಿಶೀಲನೆ ಮಾಡಿ ಬಡ ಡ್ರೈವರ್‌ಗಳಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕು.

ನಾನು ಈ ಬಗ್ಗೆ ಇಷ್ಟು ಮಾತ್ರ ಹೇಳುತ್ತೇನೆ, ಏನೆಂದರೆ, ಜನರ ಮನಸ್ಸಿನಲ್ಲಿರುವಂತೆ, ಪದೇ ಪದೇ ಚಳುವಳಿ ಮಾಡುವಂತಹ ಉದ್ದೇಶ ನಮ್ಮ ಡ್ರೈವರ್‌ಗಾಗಲೀ, ಕಂಡಕ್ಟರ್ಸ್‌ಗೇ ಆಗಲೀ ಇಲ್ಲ. ಈ ಕೆಲಸಗಾರರ ಯೂನಿಯನ್ ಅವರಿಗೂ ಸಹ ಪದೇಪದೇ ಚಳುವಳಿ ಮಾಡುವುದರ ಮೂಲಕ ಜನರಿಗೆ ತೊಂದರೆ ಕೊಡಬೇಕೆಂಬ ಉದ್ದೇಶವಿಲ್ಲ. ಆದರೂ ಇದ್ದಕ್ಕಿದ್ದಂತೆ ಮಿಂಚಿನ ಮುಷ್ಕರ ಏತಕ್ಕೆ ಮಾಡುತ್ತಾರೆ ಎಂಬುದನ್ನು ನಾವೆಲ್ಲರೂ ಆಲೋಚನೆ ಮಾಡಬೇಕಾಗಿದೆ. ಮೊನ್ನೆ ನಡೆದಂಥ ಸ್ಟ್ರೈಕ್‌ನ್ನು ಮಾನ್ಯ ಮುಖ್ಯ ಮಂತ್ರಿಗಳು wild cat strike ಎಂದು ಕರೆದರು. ಆದರೆ ಇದಕ್ಕೇನು ಕಾರಣ ಎಂಬುದನ್ನು ಕಂಡುಹಿಡಿಯದೆ ಕಂಡಕ್ಟರ್ಸ್ ಮತ್ತು ಡ್ರೈವರ್ಸ್ ಮೇಲೆ ಗೂಬೆ ಕೂರಿಸಲು ಯಾರೂ ಸಹ ಪ್ರಯತ್ನ ಮಾಡಬಾರದು. ಡ್ರೈವರ್‌ಗಳು ೮ ಗಂಟೆಗಳ ಕಾಲ ಕೆಲಸ ಮಾಡಿ ಹಣ್ಣುಗಾಯಿ ಆಗಿರುತ್ತಾರೆ. ಒಳ್ಳೆಯ ಕಂಡೀಷನ್‌ನಲ್ಲಿರುವಂತಹ ಬಸ್‌ಗಳನ್ನು ಓಡಿಸಲು ಕೊಡುವುದಿಲ್ಲ. ಈ ಒಂದು ತೊಂದರೆ ಸಹ ಇರುತ್ತದೆ ಇದರ ಜೊತೆಗೆ ಏನು ಅವಾರ್ಡ್ ಆಗಿರುತ್ತದೆ, ಅದನ್ನು ಸಕಾಲದಲ್ಲಿ ಮೇನೇಜ್‌ಮೆಂಟ್‌ನವರು ಜಾರಿಗೆ ಕೊಡುವುದಿಲ್ಲ. ಪ್ರಯಾಣಿಕರೊಂದಿಗೆ ಸಹಕರಿಸಿಕೊಂಡು ಹೋಗಿ ಎಂದು ಹೇಳತಕ್ಕಂಥ ಜವಾಬ್ದಾರಿ ನಮ್ಮ ಮೇಲೂ ಸಹ ಇದೆ. ಆದರೆ ಅದೇ ಸಮಯಕ್ಕೆ ಮೇನೇಜ್‌ಮೆಂಟ್‌ನವರು ಸಹ ಕೆಲಸಗಾರರ ಜೊತೆಯಲ್ಲಿ ಸಹಕರಿಸಬೇಕಾಗುತ್ತದೆ. ಕೆಲವು ಸಲ commuter *versus* drivers and conductors, police *versus* drivers and condoctors, students *versus* drivers and conductors ಗಳಿಗೆ ತಿಕ್ಕಾಟ ಬಂದಾಗ ಸ್ಟ್ರೈಕ್‌ಗಳಾಗುವುದು ಉಂಟು. ಈ ರೀತಿ ಆಗಬಾರದೆಂಬುದೇ ನಮ್ಮ ಅಭಿಪ್ರಾಯ. ಆದ್ದರಿಂದ ಈಗ ಪೋಲೀಸರಿಗೆ ಯಾವ ರೀತಿ ಓರಿಯೆಂಟೇಷನ್ ಕೋರ್ಸ್ ಇದೆಯೋ ಅದೇ ರೀತಿ ಡ್ರೈವರ್ಸ್ ಮತ್ತು ಕಂಡೆಕ್ಟರ್ಸ್‌ಗೂ ಓರಿಯೆಂಟೇಷನ್ ಕೋರ್ಸ್‌ನ್ನು ಇಡುವುದು ಒಳ್ಳೆಯದು. ಕೆಲವೊಂದು ಸಲ ಪೋಲೀಸರೇ ಸಹಕರಿಸುವುದಿಲ್ಲ. ಪೋಲೀಸರು ಬಸ್‌ಗಳಲ್ಲಿ ಪ್ರಯಾಣ ಮಾಡುವಾಗ ಹಿಂದಿನ ಬಾಗಿಲಿನಿಂದ ಬಸ್‌ನ್ನು ಹತ್ತದೆ ಮುಂದುಗಡೆಯೇ ಹತ್ತುತ್ತಾರೆ. ಇದಕ್ಕೆ ಕಂಡಕ್ಟರ್ ಏನಾದರು ಕೇಳಲು ಹೋದರೆ, ನೀನು ಯಾರೋ ಕೇಳುವುದಕ್ಕೆ ಎಂದು ಹೇಳುತ್ತಾರೆ. ಈ ಕಾರಣದಿಂದ ಕಂಡಕ್ಟರ್ಸ್‌ಗೆ ಈ ಪೋಲೀಸರನ್ನು ಹದ್ದುಬಸ್ತಿನಲ್ಲಿಟ್ಟು ಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಮೊನ್ನೆ ನಡೆದಂಥ ಸ್ಟ್ರೈಕ್ ನಂತರ ಮೂರು ಜನ ಕಾರ್ಮಿಕರಿಗೆ ಪೋಲೀಸರು ಹೊಡೆದಿದ್ದಾರೆ. ಬಸವರಾಜ್ ಎಂಬ ಕಂಡಕ್ಟರ್‌ಗೆ ಪೋಲೀಸರು ಹೊಡೆದ ವಿಚಾರ ಕನ್ನಡ ಪ್ರಭಾ, ಮುಂಜಾನೆ ಮುಂತಾದ ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಕಂಡಕ್ಟರ್ ಇದ್ದ ಬಸ್‌ಗೆ ಒಬ್ಬ ಪೋಲೀಸ್ ಮುಂದಿನಿಂದ ಹತ್ತಿದ. ಡ್ರೈವರ್ ಒಂದು ಸಲ ಬ್ರೇಕ್ ಹಾಕಿದಾಗ ಈ ಪೋಲೀಸ್ ಪಕ್ಕದಲ್ಲಿ ನಿಂತಿದ್ದ ಒಬ್ಬ ಮಹಿಳೆಯ ಮೇಲೆ ಬಿದ್ದ. ಆಗ ಆ ಮಹಿಳೆ ಆ ಪೋಲೀಸ್‌ಗೆ ಬಸ್‌ನ ಹಿಂದಕ್ಕೆ ಹೋಗುವಂತೆ ತಿಳಿಸಿದರೂ ಸಹ ಹೋಗಲಿಲ್ಲ. ನಂತರ ಆ ಮಹಿಳೆ ಈ ವಿಚಾರವನ್ನು ಕಂಡಕ್ಟರ್‌ಗೆ ತಿಳಿಸಿದರು. ಆಗ ಕಂಡಕ್ಟರ ಆ ಪೋಲೀಸ್‌ಗೆ ಹಿಂದಕ್ಕೆ ಹೋಗುವಂತೆ ಹೇಳಿದರೂ ಸಹ ಹೋಗಲಿಲ್ಲ. ಅಷ್ಟೇ ಅಲ್ಲ, ಇದನ್ನು ಹೇಳಲು ನೀನು ಯಾರು ಎಂದು ಕಂಡಕ್ಟರ್‌ಗೇ ಗದರಿಸಿದಾಗ ಬಸ್‌ನಲ್ಲಿದ್ದ ಪ್ರಯಾಣಿಕರೆಲ್ಲರೂ ಪೋಲೀಸ್ ಮೇಲೆ ತಿರುಗಿ ಬಿದ್ದರು. ಆಗ ಆ ಪೋಲೀಸ್ ನಂತರ ನಿನ್ನನ್ನು ನೋಡಿ

ಕೊಳ್ಳುತ್ತೇನೆಂದು ಕಂಡಕ್ಟರ್‌ಗೆ ಹೇಳಿ ಬಸ್ ಇಳಿದು ಹೊರಟು ಹೋದ. ನಂತರ ಅದೇ ಪೋಲೀಸ್ ಆ ದಿನ ಸಾಯಂಕಾಲ ಮಫ್ತಿಯಲ್ಲಿ ಬೇರೆ ಕೆಲಸದ ಜೊತೆಯಲ್ಲಿ ಈ ಕಂಡಕ್ಟರ್ ಮನೆಗೆ ಹೋಗಿ ಆತನನ್ನು ರಾಜಾಜಿನಗರದ ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿದ್ದಾರೆ. ಅಲ್ಲಿನ ಸಬ್–ಇನ್ಸ್‌ಪೆಕ್ಟರ್ ಆದಂಥ ಶ್ರೀ ಸಂಗ್ರಾಮ್‌ಸಿಂಗ್ ಅವರು ಈತನನ್ನು ಸಿಕ್ಕಾಪಟ್ಟೆ ಹೊಡೆದಿದ್ದಾರೆ ಏರೋಪ್ಲೇನ್ ಎತ್ತಿಸಿದ್ದಾರೆ, ಚಪಾತಿ ಟ್ರೀಟ್‌ಮೆಂಟ್ ಸಹ ಕೊಟ್ಟಿದ್ದಾರೆ. ಈ ಟ್ರೀಟ್‌ಮೆಂಟ್ ಯಾವ ರೀತಿ ಇರುತ್ತದೆಂಬುದನ್ನು ನಾನು ಸಹ ಹಿಂದೆ ಅನುಭವಿಸಿದ್ದೇನೆ.

ಶ್ರೀ ಆರ್ ಎನ್. ನಾಯಕ್.—ಪೋಲೀಸ್ ಸ್ಟೇಷನ್‌ಗಳಲ್ಲಿ ಚಪಾತಿಯನ್ನು ಸಹ ಕೊಡುತ್ತಾರೆಯೇ ?

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸದಸ್ಯರು ಇನ್ನೂ ಚಿಕ್ಕವಯಸ್ಸಿನವರಾಗಿದ್ದಾರೆ. ಅವರಿಗೆ ಈ ಟ್ರೀಟ್‌ಮೆಂಟ್ ಯಾವ ರೀತಿ ಇರುತ್ತದೆಂಬುದು ಇನ್ನೂ ಗೊತ್ತಿಲ್ಲ.

ಶ್ರೀ ಎಂ. ಎಸ್. ಪಾಟೀಲ್.—ಚಪಾತಿ ಜೊತೆಗೆ ಪೊಟಾಟೋ – ಬಾಜಿಯನ್ನು ಕೊಟ್ಟಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು.

ಶ್ರೀ ಎಂ. ಎಸ್. ಕೃಷ್ಣನ್.—ಹೌದು, ತಮ್ಮ ಸರ್ಕಾರವಿದ್ದಾಗ ಸೇಬಿನ ಹಣ್ಣು ಕೊಡುತ್ತಿದ್ದರೆಂದು ಕಾಣುತ್ತದೆ, ಈ ಕಂಡಕ್ಟರ್ ಕುಡಿಯಲು ನೀರು ಕೇಳಿದಾಗ ಮೂತ್ರ ಕೊಟ್ಟಿದ್ದಾರೆ. ಸರ್ಕಾರ ಬದಲಾದರೂ ಕೂಡ ಈ ಪೋಲೀಸರು ಮಾತ್ರ ಮೊದಲಿನಂತಯೇ ಇದ್ದಾರೆ.

ಶ್ರೀ ಆರ್. ಎನ್. ನಾಯಕ್ —ಹಾಗಿದ್ದರೆ ನೀವು ಸರ್ಕಾರಕ್ಕೆ ಹೇಳಿ ಬದಲಾವಣೆ ಮಾಡಿಸಿ.

ಶ್ರೀ ಎಂ. ಎಸ್. ಕೃಷ್ಣನ್.—ಈ ನಮ್ಮ ಕಂಡಕ್ಟರ್ಸ್, ಹಾಗೂ ಡ್ರೈವರ್ಸ್‌ಗೆ ಪೋಲೀಸರಿಂದ ಹಾಗೂ ವಿದ್ಯಾರ್ಥಿಗಳಿಂದ ಆಗುತ್ತಿರುವ ಕಾಟವನ್ನು ತಪ್ಪಿಸಲು ಸರ್ಕಾರದವರು ಆಗಾಗ್ಗೆ ಸಾರ್ವಜನಿಕ ಸಭೆಗಳನ್ನು ನಡೆಸಬೇಕು. ಕಾರ್ಮಿಕ ಪ್ರತಿನಿಧಿಗಳನ್ನು ಸಹ ಆಗಾಗ್ಗೆ ಕರೆಸಿ ವಿಚಾರವಿನಿಮಯ ನಡೆಸಬೇಕು. ಏಕೆಂದರೆ, ಮೊನ್ನೆ ನಡೆದಂತ ಸ್ಟ್ರೈಕ್ ನಂತರ ಮೂರು ಘಟನೆಗಳು ನಡೆದಿವೆ. ಎಲ್ಲವನ್ನೂ ವಿವರಿಸಿ ಹೇಳಲು ನನಗೆ ಸಮಯವಿಲ್ಲ. ಮಾನ್ಯಮಂತ್ರಿಗಳ ಮಟ್ಟದಲ್ಲಿ ಈ ಬಗ್ಗೆ ಕೆಲವು ಕ್ರಮಗಳನ್ನು ತೆಗೆದುಕೊಂಡಾಗ ಮಾತ್ರ ಇಂತಹ ಅನಾಹುತಗಳಾಗುವುದನ್ನು ತಪ್ಪಿಸಬಹುದೆಂದು ಸಲಹೆ ಮಾಡುತ್ತೇನೆ. ಈ ಬಿ.ಟಿ.ಎಸ್.ನ್ನು ಉತ್ತಮಪಡಿಸುವ ಬಗ್ಗೆ ಉನ್ನತಮಟ್ಟದಲ್ಲಿ ಶ್ರೀ ಲೀನ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಬ್ ಕಮಿಟಿಯನ್ನು ರಚಿಸಲಾಗಿತ್ತು. ಅದರಲ್ಲಿ ಹೋಂ ಸೆಕ್ರಟರಿ ಸಹ ಇದ್ದರು. ಈ ಕಮಿಟಿಯವರು ತಮ್ಮ ವರದಿ ಕೊಟ್ಟಿದ್ದಾರೆಂಬ ವಿಷಯ ಪತ್ರಿಕೆಗಳಲ್ಲಿ ಬಂದಿತ್ತು. ಆದ್ದರಿಂದ ಆ ವರದಿಯಲ್ಲಿ ಏನೇನು ಸಲಹೆಗಳನ್ನು ಮಾಡಿದ್ದಾರೆಂಬ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆ ಕೊಡಬೇಕು. ಮತ್ತೆ ಈ ಕಾರ್ಪೋರೇಷನನ್ನು ಮದ್ರಾಸ್‌ನಲ್ಲಿ ಮಾಡಿರುವಂತೆ ೫ ವಿಭಾಗಗಳನ್ನಾಗಿ ವಿಂಗಡಿಸಬೇಕೆಂದು ಒಂದು ಸೂಚನೆ ಬಂದಿದೆ. ಆದರೆ ಈ ರೀತಿ ಮಾಡುವುದಕ್ಕೆ ಬದಲು ರೀಜನಲ್ ಮೇನೇಜರ್ಸ್‌ಗೆ ಹೆಚ್ಚು ಅಧಿಕಾರ ಕೊಡಿ ಎಂದು ಪಿ. ಯು. ಸಿ. ನವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಆದ್ದರಿಂದ You fix up the responsibility on them. They are accountable for profits or losses and other things including co-ordination with other staff. If he does not do it, he must be sacked and if he does it, he must be rewarded. ಈ ರೀತಿ ಮಾಡಿದಾಗ ಮಾತ್ರ ಈ ಸಂಸ್ಥೆ ಖಂಡಿತವಾಗಿ ಮುಂದೆ ಹೋಗುವುದಕ್ಕೆ ಸಾಧ್ಯವಾಗುತ್ತದೆ. ಮತ್ತೆ ಕಡೆಯದಾಗಿ ನಮ್ಮ ಸರ್ಕಾರದವರು ಈ ಸಂಸ್ಥೆಗೆ ಎಷ್ಟು ಹಣ ಸಹಾಯ ಮಾಡಬೇಕಾಗಿತ್ತೋ ಅಷ್ಟು ಮಾಡಿಲ್ಲವೆಂದು ಹೇಳುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ಕೆಲವು ಅಂಕಿ ಅಂಶಗಳನ್ನು ಕೊಡುತ್ತೇನೆ. ಈ ಅಂಕಿ ಅಂಶಗಳ ಆಧಾರದ ಮೇಲೆ ನೋಡುವುದಾದರೆ ಕೇಂದ್ರ ಸರ್ಕಾರದವರು ಕೂಡ ಬೇರೆ ರಾಜ್ಯಗಳಿಗಿಂತ ಕಡಿಮೆ ಸಹಾಯ ಮಾಡಿರುವುದು ಕಂಡುಬರುತ್ತದೆ. ಕೇಂದ್ರ ಸರ್ಕಾರ ನಮ್ಮ ರಾಜ್ಯದ ಬಗ್ಗೆ ಮಲತಾಯಿ ಧೋರಣೆ ಅನುಸರಿಸುತ್ತಿವೆ ಎಂಬುದಕ್ಕೆ ನಾನು ಕೊಡುವಂತಹ ಅಂಕಿ ಅಂಶಗಳೇ ಸಾಕ್ಷಿಯಾಗಿದೆ. ಒಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯದ ಆರ್ಥಿಕ ಸಹಾಯ ಕಡಿಮೆ ಇರುವ ಕಾರಣದಿಂದ ಈ ಸಂಸ್ಥೆಯವರು ಡಿಬೆಂಚರ್ ಲೋನನ್ನು ಅಪ್ರೋಚ್ ಮಾಡುತ್ತಿದ್ದಾರೆ. ಮುಖ್ಯವಾಗಿ ಕೇಂದ್ರ ಮತ್ತು ರಾಜ್ಯಗಳ ಒಂದು ಸಹಾಯ ಯಾವ ರೀತಿ ಇದೆ ಎಂಬ ಬಗ್ಗೆ ಮತ್ತು ಇತರ ಕೆಲವು ರಾಜ್ಯಗಳಲ್ಲಿ ಯಾವ ರೀತಿ ಇದೆ ಎಂಬ ಬಗ್ಗೆ ಸ್ವಲ್ಪದರಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

I would like to quote few figures from a book *viz.*,

"Report on the performance of the Nationalised Road Transport Undertakings 1979-80 and 1980-81" compiled by Central Institute of Road Transport (Training and Research), pune."

Capital Structure as on March 1980

Description	A.P. Rs. in lakhs	%age of total	Gujarat Rs. in lakhs	%age of total	Karnataka Rs. in lakhs	%age of total	Kerala Rs. in lakhs	%age of total
Total capital investment								
State Government	4547-70	29-07	4585-42	40.61	1701-51	21.80	2038-00	51.10
Central Government	1860-00	11.89	1983-21	17.65	614-21	7.81	809-17	20.30
Debentures/ Loans	1838-09	11.74	1079-23	9.56	1401-18	17.95	558-00	13.99

ಈ ರೀತಿಯಾದರೆ ನಮ್ಮ ಕೆ.ಎಸ್.ಆರ್.ಟಿ.ಸಿ. ಯಾವ ರೀತಿ ಉದ್ಧಾರವಾಗುತ್ತದೆ? ಆದ್ದರಿಂದ ನಾನು ಹೇಳುವುದಾದರೂ ಏನೆಂದರೆ ಕೇಂದ್ರ ಸರ್ಕಾರದಿಂದ ಹೆಚ್ಚಿನ ಹಣವನ್ನು ರಾಜ್ಯ ಸರ್ಕಾರ ಪಡೆದುಕೊಳ್ಳುವುದಕ್ಕೆ ಪ್ರಯತ್ನಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಸೂರ್ಯನಾರಾಯಣರಾವ್ (ಪತ್ತೂರು).—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಪಶುಸಂಗೋಪನಾ ಮತ್ತು ತೋಟಗಾರಿಕೆ ಇಲಾಖೆಯ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳ ಮೇಲೆ ನಾನು ಕೆಲವಾರು ಸಲಹೆಗಳನ್ನು ಕೊಡಬಯಸುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿ ಪಶುಸಂಗೋಪನಾ ಇಲಾಖೆ ಬಹಳ ಮುಖ್ಯವಾದಂಥ ಇಲಾಖೆ. ಆದರೆ ನಮ್ಮ ಸರ್ಕಾರದವರು ಈ ಪಶುಸಂಗೋಪನಾ ಇಲಾಖೆಯನ್ನು ಕಡೆಗಣಿಸಿದ್ದಾರೆಂದು ಹೇಳಿದರೂ ಕೂಡ ತಪ್ಪಾಗಲಾರದು. ನಮ್ಮ ರಾಜ್ಯದಲ್ಲಿ ಪಶುಗಳ ಸಂಖ್ಯೆ ಬಹಳ ಇವೆ, ಆದರೆ ಈ ಪಶುಗಳ ಆರೋಗ್ಯವನ್ನು ಕಾಪಾಡಿ ಕೊಂಡು ಬರಲು ಸರ್ಕಾರದವರು ಇದುವರೆಗೂ ಯಾವ ಯಾವ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ? ಯಾವ ಯಾವ ಕೆಲಸಕಾರ್ಯಗಳನ್ನು ಮಾಡಿದ್ದಾರೆಂದು ನಾವು ವೀಕ್ಷಣೆ ಮಾಡಿ ನೋಡಿದಾಗ ಅದರ ಸುಳಿವೇ ನಮಗೆ ಕಾಣುತ್ತಿಲ್ಲ, ೧೯೭೫-೭೬ನೇ ಸಾಲಿನಲ್ಲಿ ಶ್ರೀ ನಾರಾಯಣ ಪೈರವರು ತಮ್ಮ ವರದಿಯಲ್ಲಿ ಈ ಇಲಾಖೆಯನ್ನು ಪುನರ್ ವಿಂಗಡಣೆ ಮಾಡಬೇಕೆಂದು ಹೇಳಿದ್ದಾರೆ. ಆದರೂ ಕೂಡ ಇದುವರೆಗೂ ಈ ಇಲಾಖೆ ಹಾಗೆಯೇ ಇದೆ. ಈ ಇಲಾಖೆಯಲ್ಲಿ ಬರೀ ಅಸಿಸ್ಟೆಂಟ್ ಸರ್ಜನರು ಮಾತ್ರ ಇದ್ದಾರೆ. ಸ್ವಾಮಿ ಈ ಪಶುಸಂಗೋಪನೆಯನ್ನು ಮಾಡುವುದಕ್ಕೆ ಐ.ಆರ್.ಡಿ.ಪಿ.

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಪ್ರೋಗ್ರಾಂನಲ್ಲಿ ಹಣ ಬರುತ್ತದೆ. ಈ ಹಣದಿಂದ ಕೆ.ಡಿ.ಡಿ.ಸಿ.ಯನ್ನು ಅಭಿವೃದ್ಧಿ ಮಾಡುತ್ತಾರೆ. ಮತ್ತೆ ೨೦ ಅಂಶಗಳ ಕಾರ್ಯಕ್ರಮದಲ್ಲಿ ಕೂಡ ಈ ಬಾಬಿಗೆ ಹಣ ಬರುತ್ತದೆ. ಆದರೆ ಈ ಇಲಾಖೆ ಯಲ್ಲಿ ಪಶುಗಳ ಯೋಗಕ್ಷೇಮವನ್ನು ನೋಡಿಕೊಳ್ಳುವುದಕ್ಕೆ ಡಾಕ್ಟರ್ಸ್ ಇಲ್ಲ. ನಮ್ಮ ಮಾನ್ಯ ಮಂತ್ರಿಗಳು ಹಳ್ಳಿಯಿಂದ ಬಂದವರು. ಅವರು ಈ ಪಶುಸಂಗೋಪನಾ ಇಲಾಖೆಯನ್ನು ಚೆನ್ನಾಗಿ ನೋಡಿಕೊಂಡು ಅಭಿವೃದ್ಧಿ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಈ ಇಲಾಖೆಯಲ್ಲಿ ಇದುವರೆಗೂ ಯಾವುದೇ ಒಂದು ಅಭಿವೃದ್ಧಿ ಕೆಲಸಕಾರ್ಯಗಳು ನಡೆದಿಲ್ಲ. ಸ್ವಾಮಿ ಇವತ್ತು ನಮ್ಮ ರಾಜ್ಯದಲ್ಲಿ ಸುಮಾರು ೨.೧೮ ಲಕ್ಷ ಪಶುಗಳು ಇವೆ. ಆದರೆ ೬೭೦ ಮಂದಿ ಡಾಕ್ಟರ್ಸ್ ಮಾತ್ರ ಇದ್ದಾರೆ. ಆದರೆ ಈ ಸಾರಿ ಇನ್ನು ೧೩ ಜನ ಡಾಕ್ಟರ್ಸ್ ಕಡಿಮೆಯಾಗಿದ್ದಾರೆ. ಅಂದರೆ ನಾನು ಸರಾಸರಿ ಲೆಕ್ಕಾಚಾರ ಮಾಡಿದಾಗ ನನಗನಿಸುತ್ತದೆ ೩೬ ಸಾವಿರ ಪಶುಗಳಿಗೆ ಒಬ್ಬ ಡಾಕ್ಟರ್. ಇದು ಯಾವ ರೀತಿ ಸಾಧ್ಯವಾಗುತ್ತದೆ? ಸ್ವಾಮಿ ನಾನು ಮಾನ್ಯ ಮಂತ್ರಿಗಳಿಗೆ ಒಂದು ಪ್ರಶ್ನೆ ಯನ್ನು ಕಳುಹಿಸಿಕೊಟ್ಟಿದ್ದೆ. ಆಗ ಮಾನ್ಯ ಮಂತ್ರಿಗಳು ನನಗೆ ಉತ್ತರ ಹೇಳುತ್ತಾ ಹೇಳಿದರು ೧೦ ಸಾವಿರ ಪಶುಗಳು ಒಂದು ತಾಲ್ಲೂಕಿನಲ್ಲಿ ಇದ್ದರೆ ಮಾತ್ರ ನಾವು ಅಲ್ಲಿಗೆ ಒಂದು ಪಶುವೈದ್ಯ ಶಾಲೆಯನ್ನು ಕೊಡುತ್ತೇವೆಂದು. ಆದರೆ ನಮ್ಮ ವರ್ತೂರು ತಾಲ್ಲೂಕಿನಲ್ಲಿ ಸುಮಾರು ೮ ಸಾವಿರ ಮಾತ್ರ ಪಶುಗಳು ಇದ್ದವು. ಆದ್ದರಿಂದ ಕೊಡಲಿಲ್ಲವೆಂದು ಹೇಳಿದರು. ಇನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು ೧೩೩೦ ಪಶುವೈದ್ಯ ಶಾಲೆಗಳು ಇವೆ. ಈ ಪಶುವೈದ್ಯ ಶಾಲೆಗಳಲ್ಲಿ ಸರಿಯಾ ದಂಥ ಔಷಧಿ ಇಲ್ಲ. ಇದರಿಂದ ರೈತರಿಗೆ ಯಾವುದೇ ರೀತಿಯ ಅನುಕೂಲವಾಗುತ್ತಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಇತ್ತಕಡೆ ಸ್ವಲ್ಪ ಗಮನಹರಿಸಬೇಕು. ಸ್ವಾಮಿ ಇವತ್ತು ಪಶುವೈದ್ಯ ಶಾಲೆ ಗಳಲ್ಲಿ ಸುಮಾರು ೨೩ ಜನ ಡಾಕ್ಟರ್ಸ್ ಕಡಿಮೆಯಾಗಿದ್ದಾರೆ. ಕಾರಣವಾದರೂ ಏನೆಂದರೆ ಡಾಕ್ಟರ್ಸ್‌ಗೆ ಸುಮಾರು ೧೫ ವರ್ಷಗಳಾದರೂ ಸಹ ಪ್ರಮೋಷನ್ ಇಲ್ಲ. ಆದ್ದರಿಂದ ಈ ಇಲಾಖೆಗೆ ಯಾರು ಬರುತ್ತಾರೆ. ಆದ್ದರಿಂದ ತಾವು ಅವರಿಗೆ ಪ್ರಮೋಷನ್ ಕೊಡುವಂಥ ಒಂದು ವ್ಯವಸ್ಥೆಯನ್ನು ಮಾಡಿಕೊಡಿ. ಇವತ್ತು ಈ ರಾಜ್ಯದ ಪಶುಸಂಪತ್ತನ್ನು ಕಾಪಾಡತಕ್ಕಂಥ ಒಂದು ಜವಾಬ್ದಾರಿ ಯನ್ನು ಮಾನ್ಯ ಮಂತ್ರಿಗಳು ವಹಿಸಿಕೊಳ್ಳಬೇಕು. ಸ್ವಾಮಿ ಇವತ್ತು ಸುಮಾರು ೧೮೦ ಪಶು ವೈದ್ಯಶಾಲೆಗಳಲ್ಲಿ ಡಾಕ್ಟರ್ಸ್ ಇಲ್ಲ. ಅಂತಹ ಪಶುವೈದ್ಯ ಶಾಲೆಗಳಿಗೆ ದನಗಳು ಬರುತ್ತವೆ. ಆದರೂ ಸಹ ಡಾಕ್ಟರ್‌ಗಳು ಇರುವುದಿಲ್ಲ. ಒಂದು ವೇಳೆ ದನಗಳಿಗೆ ಖಾಯಿಲೆ ಏನಾದರೂ ಜಾಸ್ತಿಯಾದರೆ ಅವು ಸತ್ತು ಹೋಗುತ್ತವೆ. ಇದರಿಂದ ರೈತನಿಗೆ ಬಹಳ ನಷ್ಟವಾಗುತ್ತದೆ. ಇನ್ನು ಆ ಪಶುಗಳಿಗೆ ಫೀಡ್ಸ್‌ನ್ನು ಒದಗಿಸಿಕೊಡುವ ಬಗ್ಗೆ ನಾನು ಪ್ರಸ್ತಾಪ ಮಾಡುವುದಾದರೆ ತಾವು ಆಹಾರ ಪದಾರ್ಥ ಗಳನ್ನು ಕಡಿಮೆ ಬೆಲೆಗೆ ಒದಗಿಸಿಕೊಡಬೇಕು. ಆದ್ದರಿಂದ ರೈತನಿಗೆ ಅನುಕೂಲ ಮಾಡಿಕೊಟ್ಟರೆ ಹಾಲಿನ ಬೆಲೆಯನ್ನು ಕೂಡ ಕಡಿಮೆ ಮಾಡಬಹುದು. ತಾವು ಬೂಸ ಬೆಲೆಯನ್ನು ಜಾಸ್ತಿ ಮಾಡು ತ್ತೀರಿ. ಈ ಕಡೆ ಹಾಲಿನ ಬೆಲೆಯನ್ನು ಜಾಸ್ತಿ ಮಾಡುತ್ತೀರಿ. ಇದರಿಂದ ಎಲ್ಲರಿಗೂ ತೊಂದರೆ ಯಾಗುತ್ತದೆ. ಮತ್ತೆ ಅಮೃತಮಹಲ್ ಕಾವಲ್‌ನಲ್ಲಿ ಸುಮಾರು ೭–೮ ಸಾವಿರ ಎಕರೆ ಜಮೀನನ್ನು ಶ್ರೀಮಂತರು ತೆಗೆದುಕೊಂಡಿದ್ದಾರೆ. ಇಲ್ಲಿ ಒಂದು ರೀತಿಯಲ್ಲಿ ಮೋಸ ನಡೆಯುತ್ತಿದೆ. ಇದನ್ನು ಮಾನ್ಯ ಮಂತ್ರಿಗಳು ಸರಿಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಮತ್ತೆ ಹಾಲಿನ ಸಹಕಾರ ಸಂಘಗಳಲ್ಲಿ ಮೋಸ ನಡೆಯುತ್ತಿದೆ ಇದನ್ನು ಕೂಡ ಮಾನ್ಯ ಮಂತ್ರಿಗಳು ಸರಿಮಾಡಬೇಕು. ಇದರಿಂದ ಸಣ್ಣಸಣ್ಣ ಬಡವರಿಗೆ ತೊಂದರೆಯಾಗುತ್ತದೆ. ಮತ್ತೆ ನಮ್ಮಲ್ಲಿ ಕೋಳಿ ಸಾಕಾಣಿಕೆ ಮಾಡು ವುದಕ್ಕೆ ನವೀನ ರೀತಿಯ ಒಂದು ರಿಸರ್ಚ್ ಮಾಡಬೇಕೆಂದುನಾನು ಮಾನ್ಯ ಮಂತ್ರಿಗಳಿಗೆ ಸಲಹೆ ಮಾಡುತ್ತೇನೆ. ಸ್ವಾಮಿ ತಾವು ಐ.ಆರ್.ಡಿ.ಪಿ. ಪ್ರೋಗ್ರಾಂನಲ್ಲಿ ಹಣವನ್ನು ಕೊಟ್ಟು ಒಬ್ಬ ರೈತನಿಗೆ ಹಸು ತೆಗೆದುಕೊಟ್ಟಿರುತ್ತೀರಿ. ಆದರೆ ರೈತ ಬೇರೆ ಕಡೆಯಿಂದ ಸಾಲವನ್ನು ತೆಗೆದುಕೊಂಡು ಬಂದಿರುತ್ತಾನೆ. ಆ ಸಾಲದ ವಜಾಕ್ಕೆ ಬೇರೆ ಬ್ಯಾಂಕಿನವರು ಆ ಹಸುವನ್ನು ಹಿಡಿದುಕೊಂಡು ಹೋಗುತ್ತಾರೆ. ಆ ಹಸುವನ್ನು ಅವರು ಹರಾಜು ಮಾಡುತ್ತಾರೆ. ಆಗ ತಾವು ರೈತನ ಅಭಿವೃದ್ಧಿಗೆ ಕೊಟ್ಟ ಹಸು ಹೋಗುತ್ತದೆ. ಇದನ್ನು ತಾವು ತಪ್ಪಿಸುವಂಥ ವ್ಯವಸ್ಥೆ ಮಾಡಬೇಕು. ಇನ್ನು ನಾನು ತೋಟಗಾರಿಕೆ ಇಲಾಖೆಯ ಬಗ್ಗೆ ಪ್ರಸ್ತಾಪ ಮಾಡುವುದಾದರೆ ನಾನು ಚಿಕ್ಕ ಹುಡುಗನಾಗಿ ದ್ದಾಗ ಲಾಲ್‌ಬಾಗ್ ಮತ್ತು ಕಬ್ಬನ್‌ಪಾರ್ಕಿನಲ್ಲಿ ವಾಕಿಂಗ್ ಹೋಗುತ್ತಿದ್ದೆ. ಆಗ ಯಾವ ರೀತಿ ಯಲ್ಲಿ ಇತ್ತು ಅದೇ ರೀತಿಯಲ್ಲಿ ಇವತ್ತಿಗೂ ಸಹ ಇದೆ. ಅಲ್ಲಿ ಸರಿಯಾದಂಥ ವ್ಯವಸ್ಥೆ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಇನ್ನು ತೋಟಗಾರಿಕೆ ಇಲಾಖೆಯಲ್ಲಿ ನಮಗೆ ಹಣ್ಣುಹಂಪಲು ಬೆಳೆದು ಕೊಡುತ್ತಾರೆ. ತೋಟಗಾರಿಕೆ ಇಲಾಖೆಯಲ್ಲಿ ಹಣ್ಣುಹಂಪಲು ಬೆಳೆಸಿ ನಮಗೆ ತಿನ್ನುವುದಕ್ಕೆ ಕೊಡು ತ್ತಾರೆ. ಆದರೆ ಅವರಿಗೆ ಒಂದು ಹೊತ್ತು ಗಂಜಿ ಕುಡಿಯುವುದಕ್ಕೆ ತಾವು ಸರಿಯಾದಂಥ ವ್ಯವಸ್ಥೆ ಯನ್ನು ಮಾನ್ಯ ಮಂತ್ರಿಗಳು ಮಾಡಿಕೊಟ್ಟಿಲ್ಲ. ಸ್ವಾಮಿ ತಾವು ಇವತ್ತು ತಮ್ಮ ತೋಟಗಾರಿಕೆ

ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಒಂದು ದಿನಕ್ಕೆ ದಿನಗೂಲಿಯ ಆಧಾರದ ಮೇಲೆ ಸುಮಾರು ೫ ರೂಪಾಯಿಗಳನ್ನು ಕೊಡುತ್ತೀರಿ. ಇದರಿಂದ ಆತ ಯಾವ ರೀತಿಯಲ್ಲಿ ಜೀವನ ಮಾಡುವುದಕ್ಕೆ ಆಗುತ್ತದೆ? ಆದರೆ ತಾವು ಮತ್ತು ತಮ್ಮ ಅಧಿಕಾರಿಗಳಿಗೆ ಅಶೋಕ ಹೋಟಲ್ ತರಹದ ಬಂಗಲೆಗಳು ಬೇಕು. ಒಳ್ಳೆಯ ಊಟ ಮತ್ತು ಒಳ್ಳೆಯ ಬಟ್ಟೆ ಬೇಕು. ಆದರೆ ಅವರಿಗೆ ಯಾವುದೂ

೩-೩೦ ಪಿ.ಎಂ.

ಬೇಡವೆಂದು ತಮ್ಮ ಅರ್ಥವೇ? ಲಾಲ್‌ಬಾಗ್‌ನಲ್ಲಿ ಕೆಲಸ ಮಾಡಲಿಕ್ಕೆ ಜನಗಳು ಬೇಡವೆ ? ಕೆಲಸಕ್ಕೆ ತೆಗೆದುಕೊಂಡರೆ ಅವರನ್ನು ಖಾಯಂ ಮಾಡುವುದಿಲ್ಲ. ಅವರನ್ನು ಕ್ಯಾಜ್ಯುಯಲ್ ಲೇಬರ್ ಆಗಿ ಇಟ್ಟುಕೊಂಡರೆ ಹೇಗೆ? ದಯವಿಟ್ಟು ಅವರನ್ನು ಖಾಯಂ ಮಾಡಬೇಕು.

ಶ್ರೀ ಮದನಗೋಪಾಲ ನಾಯಕ್.—ನೀವು ಬೆಂಬಲ ಕೊಟ್ಟಿರತಕ್ಕ ಸರ್ಕಾರ ಇದೆ, ನೀವು ಖಾಯಂ ಮಾಡಿಸಿ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಏತಕ್ಕೋಸ್ಕರ ಬೆಂಬಲ ಕೊಡಬೇಕು ಎನ್ನುವುದು ನಮಗೆ ಗೊತ್ತಿದೆ. ಸರ್ಕಾರ ಸರಿಯಾಗಿ ಕೆಲಸ ಮಾಡಲಿಲ್ಲ ಅಂದರೆ ಅದನ್ನು ಕೇಳತಕ್ಕ ಹಕ್ಕು ನಮಗೆ ಇದೆ. ನಾವು ರಾಜಕೀಯವಾಗಿ ಬೆಂಬಲ ಕೊಡುತ್ತಿದ್ದೇವೆ. ಆರ್ಥಿಕ ನೀತಿಯ ಬಗ್ಗೆ ವಾದ ಮಾಡುತ್ತಿದ್ದೇವೆ.

ಶ್ರೀ ಮದನಗೋಪಾಲ್ ನಾಯಕ್.—ನೀವು ವಾದ ಮಾಡುವುದರಲ್ಲಿ ಒಂದು ಗುರಿಯಿರಬೇಕು. ಜನರಿಗೆ ತೋರಿಸಿಕೊಳ್ಳುವುದು ಬೇಡ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಸಮಾಜವನ್ನು ಯಾವ ರೀತಿ ಬದಲಾವಣೆ ಮಾಡಬೇಕೆಂದು ನಮಗೆ ಗೊತ್ತು. ಸಾರಿಗೆ ಇಲಾಖೆಯ ಬಗ್ಗೆ ಮಾನ್ಯ ಕೃಷ್ಣನ್‌ನವರು ಹೇಳಿದ್ದಾರೆ. ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಸಾರಿಗೆ ಸಂಸ್ಥೆಯಲ್ಲಿ ಯಾವರೀತಿ ಲುಕ್ಸಾನು ಆಗುತ್ತಿದೆ ಎನ್ನುವುದನ್ನು ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿಯ ೧೯೮೩-೮೪ರ ವರದಿಯಲ್ಲಿ ಹೇಳಿದ್ದಾರೆ. ಅದು ಈ ರೀತಿಯಾಗಿದೆ:—

> "It is necessary to see that such glaring errors leading to waste of lakhs of rupees Government funds is avoided at all costs."

ಬಸ್ಸುಗಳನ್ನು ರಾಷ್ಟ್ರೀಕರಣ ಮಾಡಿದರು ಆದರೆ ಡಬ್ಬಲ್ ರಸ್ತೆಯಲ್ಲಿ ಹೋಗಿ ನೋಡಿದರೆ ಗೊತ್ತಾಗುತ್ತದೆ. ಬಸ್ಸುಗಳು ಹೇಗ ಬೇಕೋ ಹಾಗೆ ನಿಂತಿರುತ್ತವೆ. ಟೈರು, ಇಂಜನ್ ಇನ್ನಿತರ ಬೆಲೆ ಬಾಳುವ ಉಪಕರಣಗಳನ್ನು ಬಿಚ್ಚಿಕೊಂಡು ಹೋಗುತ್ತಾರೆ. ಕೆಲವು ಬಸ್ಸುಗಳಿಗೆ ಹೊಸ ಉಪಕರಣಗಳನ್ನು ಬಿಚ್ಚಿಕೊಂಡು ಹಳೆಯ ಉಪಕರಣಗಳನ್ನು ಜೋಡಿಸುತ್ತಾರೆ. ಈ ತರಹ ಲಕ್ಷಾಂತರ ರೂಪಾಯಿ ಅವ್ಯವಹಾರ ನಡೆಯುತ್ತಿದೆ. ಸಾರಿಗೆ ಸಂಸ್ಥೆಗೆ ಸಂಬಂಧಪಟ್ಟಂತೆ ಬೇಕಾದಷ್ಟು ಜಾಗ ಇದೆ. ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳುತ್ತಿಲ್ಲ. ಶೆಡ್ಡುಗಳಲ್ಲಿ ಬೇಕಾದಷ್ಟು ಹಳೆಯ ಸಾಮಾನುಗಳನ್ನು ಇಟ್ಟುಕೊಂಡಿದ್ದಾರೆ. ಹಳೆಯ ಸಾಮಾನುಗಳನ್ನು ವಿಲೇವಾರಿ ಮಾಡುವ ವ್ಯವಸ್ಥೆ ಮಾಡಿ. ಹಳೆಯ ಕಬ್ಬಿಣದ ಸಾಮಾನುಗಳನ್ನು ವಿಲೇವಾರಿ ಮಾಡದಿದ್ದರೆ ತುಕ್ಕು ಹಿಡಿದು ಹಾಳಾಗಿ ಹೋಗುತ್ತವೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ವಿಚಾರ ಮಾಡಬೇಕಾಗುತ್ತದೆ. ಬಿ.ಟಿ.ಎಸ್. ಬಸ್‌ನಲ್ಲಿ ಹಣ ಹೊಡೆಯುತ್ತಾರೆಂದು ಹೇಳುತ್ತಾರೆ. ಬಿ.ಟಿ.ಎಸ್. ಬಸ್‌ನಲ್ಲಿ ಒಬ್ಬ ಕಂಡಕ್ಟರ್ ೨೦ ರೂಪಾಯಿ ಸಂಪಾದನೆ ಮಾಡಿದರೆ ಅದರಲ್ಲಿ ಕಂಡಕ್ಟರನಿಗೆ ೩ ರೂಪಾಯಿ ಕೂಡ ಉಳಿಯುವುದಿಲ್ಲವೆಂದು ಕಾಣುತ್ತದೆ. ಡ್ರೈವರಿಗೆ ಬೆಳಿಗ್ಗೆ ತಿಂಡಿ ಕಾಫಿ, ಮಧ್ಯಾಹ್ನ ಊಟ, ಮನೆಗೆ ಹೋಗುವಾಗ ಖರ್ಚಿಗೆ ಹಣ ಕೊಟ್ಟು ಕಳುಹಿಸಬೇಕು. ಬಸ್ ತೊಳೆಯುವವನಿಗೆ ಹಣ ಕೊಡಬೇಕು. ಒಳ್ಳೆಯ ಬಸ್ ಕೊಡಬೇಕೆಂದರೆ ಡಿಪೋದಲ್ಲಿರತಕ್ಕವರಿಗೆ ಹಣ ಕೊಡಬೇಕು. ಹಣ ಕೊಡದಿದ್ದರೆ ಬ್ರೇಕ್ ಇಲ್ಲದ ಬಸ್, ಸ್ಟಾರ್ಟ್ ಆಗದೆ ಇರುವ ಹಳೆಯ ಬಸ್ ಕೊಟ್ಟುಬಿಡುತ್ತಾರೆ. ಜೊತೆಗೆ ಟಿ.ಸಿ.ಗೆ ಹಣ ಕೊಡಬೇಕು. ಮಾನ್ಯ ಸಾರಿಗೆ ಮಂತ್ರಿಗಳು ಕರಪ್ಷನ್ ಇಲ್ಲವೆಂದು ಹೇಳುತ್ತಾರೆ. ಮಾಮೂಲು ಪದ್ಧತಿ ಇದ್ದೇ ಇರುತ್ತದೆ. ಸಬ್ ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ಯಾವರೀತಿ ಮಾಮೂಲು ಪದ್ಧತಿ ಇರುತ್ತದೆ, ಅದೇರೀತಿ ಸಾರಿಗೆ ಸಂಸ್ಥೆಯಲ್ಲೂ ಕೂಡ

ಮಾಮೂಲು ಪದ್ಧತಿ ಇರುತ್ತದೆ. ಸಾರಿಗೆ ಸಂಸ್ಥೆಯಲ್ಲಿ ಹಣ ಸೋರುವಿಕೆ ಮತ್ತು ಲಾಸಸ್ ಅನ್ನು ತಡೆಗಟ್ಟುವುದಕ್ಕೆ ಆಗುವುದಿಲ್ಲ. ಚಾಸೀಸ್ ಪರ್ಚೇಸ್ ಮಾಡುವುದರಲ್ಲಿ ಬಾಡಿ ಬಿಲ್ಡಿಂಗ್ ಮಾಡುವುದರಲ್ಲಿ ಮಾಮೂಲು ಇದ್ದೇ ಇರುತ್ತದೆ.

ಶ್ರೀ ಜಿ. ನಾರಾಯಣಕುಮಾರ್.—ಕಾರ್ಮಿಕ ಮುಖಂಡರು ಕಾರ್ಮಿಕರ ಮೇಲೆ ಅಪಾದನೆ ಮಾಡುತ್ತಿದ್ದಾರೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಕಾರ್ಮಿಕರ ಕೂಲಿಯನ್ನು ಹೆಚ್ಚಳ ಮಾಡುವುದಕ್ಕೆ ಹೋರಾಟ ಮಾಡುತ್ತೇವೆ. ಕಾರ್ಮಿಕರು ಕಳ್ಳತನ ಮಾಡುವುದಕ್ಕೆ ನಾವು ಬೆಂಬಲ ಕೊಡುವುದಿಲ್ಲ. ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿ ವರದಿಯ ಪುಟ ಸಂ. ೨೯ರಲ್ಲಿ ನೋಡಿದರೆ ಗೊತ್ತಾಗುತ್ತದೆ. Need to achieve norms set ಎಂದು ಇದೆ. ಪುಟ ೭೯ರಲ್ಲಿ Retreading of tyres deficiency in production ಎಂದು ಬಂದಿದೆ. ಅದನ್ನು ತಾವು ವಿಚಾರಮಾಡಿ. ಮ್ಯಾನೇಜ್‌ಮೆಂಟ್ ಪಾರ್ಟಿಸಿಪೇಷನ್‌ನಲ್ಲಿ ಕೆಲವರನ್ನು ಬೋರ್ಡ್ ಮೆಂಬರ್ಸ್‌ನ್ನಾಗಿ ಹಾಕಬೇಕೆಂದು ಮಾನ್ಯ ಸದಸ್ಯರು ಹೇಳಿದರು. ಮಾನ್ಯ ಕೃಷ್ಣನ್‌ನವರು ಹೇಳಿದಹಾಗೆ ಎಲೆಕ್ಟ್ ಮಾಡಿ ಹಾಕಿ. ಹಾಗೆಯೇ ಹಾಕಿದರೆ ಏನೂ ಆಗುವುದಿಲ್ಲ. ಮ್ಯಾನೇಜ್‌ಮೆಂಟ್ ಪಾರ್ಟಿಸಿಪೇಷನ್, ವರ್ಕರ್ಸ್ ರೆಪ್ರಸೆಂಟೇಷನ್ ಇದ್ದರೆ ಎಲ್ಲಾ ಹಂತದಲ್ಲೂ ಡಿಸಿಷನ್ ಮೇಕಿಂಗ್ ತೀರ್ಮಾನ ಆಗುತ್ತದೆ. ಎ.ಐ.ಟಿ.ಯು.ಸಿ. ಮತ್ತು ಐ.ಎನ್.ಟಿ.ಯು.ಸಿ.ಯಲ್ಲಿ ಯಾರಾದರೂ ಬರುತ್ತಾರೆ. ಡಿಸಿಸನ್ ಮೇಕಿಂಗ್ ಬಾಡಿ ಇದ್ದರೆ ಒಳ್ಳೆಯದು. ಇದನ್ನು ನನ್ನ ಅನುಭವದಿಂದ ಹೇಳುತ್ತೇನೆ. Including the finance, purchases and administration ಇದರಲ್ಲಿ ಇದ್ದರೆ ಮಾತ್ರ ಲಂಚ ತೆಗೆದುಕೊಳ್ಳುವುದನ್ನು ತಡೆಗಟ್ಟಬಹುದು, ಇಲ್ಲದಿದ್ದರೆ ಕರಪ್ಷನ್ ಮಾಡುತ್ತಾರೆ. ಇನ್ನು ಬಸ್ ದರವನ್ನು ಏರಿಸಿದರ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ನಾನು ಹೆಚ್ಚಾಗಿ ಹೇಳುವುದಕ್ಕೆ ಹೋಗುವುದಿಲ್ಲ. ನಗರ ಸಾರಿಗೆ ದರವನ್ನು ಕಡಿಮೆ ಮಾಡಿದರು. ನಗರದಿಂದ ಹೊರ ಹೋಗತಕ್ಕ ಬಸ್ಸುಗಳ ದರವನ್ನು ಕಡಿಮೆ ಮಾಡಿಲ್ಲ. ನಗರದಿಂದ ಹೊರಗೆ ಹೋಗತಕ್ಕ ಕೆಂಪು ಬೋರ್ಡ್ ಬಸ್‌ಗಳಲ್ಲಿ ಪ್ರಯಾಣ ಮಾಡತಕ್ಕ ಪ್ರಯಾಣಿಕರಿಗೆ ರಿಯಾಯಿತಿ ಕೊಟ್ಟಿಲ್ಲ. ಕೆಂಪು ಬೋರ್ಡ್ ಬಸ್‌ಗಳಲ್ಲಿ ಪ್ರಯಾಣ ಮಾಡತಕ್ಕ ಪ್ರಯಾಣಿಕರು ಧರಣಿ ಮಾಡಬೇಕೆಂದು ಯೋಚನೆ ಮಾಡುತ್ತಿದ್ದರು. ನಾನು ಧರಣಿ ಮಾಡಬೇಡಿ ನಾನು ಮಂತ್ರಿಗಳಿಗೆ ಹೇಳುತ್ತೇನೆಂದು ಹೇಳಿದ್ದೇನೆ. ಇದರ ಕಡೆಗೆ ಮಾನ್ಯ ಮಂತ್ರಿಗಳು ಗಮನಹರಿಸಬೇಕೆಂದು ಹೇಳುತ್ತೇನೆ. ಬೆಂಗಳೂರಿನ ಹೊರವಲಯದಲ್ಲಿರತಕ್ಕ ಸಣ್ಣ ಸಣ್ಣ ಫ್ಯಾಕ್ಟರಿಗಳಿಗೆ ಹೋಗತಕ್ಕ ನೌಕರರ ಅನುಕೂಲಕ್ಕಾಗಿ ಬಿ.ಟಿ.ಎಸ್. ಬಸ್ಸುಗಳನ್ನು ಹಾಕಬೇಕೆಂದು ನಾನು ಕಳೆದ ಸಲ ಕೂಡ ಪ್ರಸ್ತಾಪ ಮಾಡಿದ್ದೇನೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ಹೇಳಿದ್ದೆ ಅದು ಕೂಡ ಆಗಿಲ್ಲ. ನಮ್ಮ ಕ್ಷೇತ್ರದಲ್ಲಿರತಕ್ಕವರು ಕಾಲೇಜಿಗೆ, ಆಸ್ಪತ್ರೆಗೆ ಬರಬೇಕಾದರೆ ಬಹಳ ತೊಂದರೆಯಿದೆ ಎಂದು ನಾನು ಅಧಿಕಾರಿಗಳಿಗೆ ಹೇಳಿದ್ದರೂ ಕೂಡ ನನ್ನ ಕ್ಷೇತ್ರಕ್ಕೆ ಬಸ್‌ಗಳು ಬರಲಿಲ್ಲ. ನನ್ನ ಕ್ಷೇತ್ರದಲ್ಲಿ ಸಾವಿರಾರು ಜನ ಕೈಗಾರಿಕೆಗಳಲ್ಲಿ ದುಡಿಯತಕ್ಕವರು ಇದ್ದಾರೆ. ಕಾರ್ಮಿಕರು ಕಾರ್ಖಾನೆಗಳಿಗೆ ಹೋಗಿ ಬರಲಿಕ್ಕೆ, ಅವರ ಮಕ್ಕಳು ಕಾಲೇಜಿಗೆ ಹೈಸ್ಕೂಲ್‌ಗೆ ಬರಲಿಕ್ಕೆ ತುಂಬಾ ತೊಂದರೆಯಾಗಿದೆ. ಹೆಚ್.ಎ.ಎಲ್. ಮತ್ತು ಐ.ಟಿ.ಐ. ಬಸ್‌ಗಳಲ್ಲಿ ಯಾರನ್ನೂ ಹತ್ತಿಸುವುದಿಲ್ಲ. ಹೆಣ್ಣುಮಕ್ಕಳು ಶಾಲಾ ಕಾಲೇಜುಗಳಿಗೆ ಬರಲಿಕ್ಕೆ ತುಂಬಾ ತೊಂದರೆಯಾಗಿರುವುದರಿಂದ ಅಲ್ಲಿ ವಿದ್ಯಾರ್ಥಿಗಳ ಅನುಕೂಲಕ್ಕೋಸ್ಕರ ಹೆಚ್ಚಿನ ಬಸ್ಸುಗಳನ್ನು ಓಡಿಸಬೇಕು. ಇಲ್ಲಿ ಸಹಕಾರ ಬೇಕು ಎನ್ನುವುದಾದರೆ ಔಟ್‌ಲುಕ್ ಒಳ್ಳೆಯದು ಆಗಬೇಕು. ಪ್ರಚಾರ ಮಾಡಿದರೆ ಕಾರ್ಮಿಕರು ಎಂದು ಹೇಳುತ್ತಾರೆ, ಈ ತರಹ ಸಂಕುಚಿತ ಪ್ರವೃತ್ತಿ ಕಾರ್ಮಿಕರ ಬಗ್ಗೆ ಇರುವುದು ಬೇಡ. ಕಾರ್ಮಿಕರಿಗೆ ಇರತಕ್ಕ ದೇಶಪ್ರೇಮ ಬೇರೆ ಯಾರಿಗೂ ಇಲ್ಲ. ಕಾರ್ಮಿಕರಿಗೆ ತಿಳುವಳಿಕೆ ಕೊಟ್ಟು ಜವಾಬ್ದಾರಿಯನ್ನು ಅರಿತು ನಡೆದುಕೊಳ್ಳುವಂತೆ ಮಾಡಬೇಕು. ದೇಶದ ಮುಖಂಡರು ಸಾಮಾಜಿಕ ಪರಿವರ್ತನೆ ಮಾಡತಕ್ಕ ಜನ ಸರಿಯಾದ ರೀತಿಯಲ್ಲಿ ಕಾರ್ಮಿಕರಿಗೆ ಟ್ರೈನಿಂಗ್ ಕೊಟ್ಟರೆ, ಕಾರ್ಮಿಕರ ಸಹಕಾರ ತೆಗೆದುಕೊಂಡರೆ ಹೆಚ್ಚಿನ ಎಫಿಶಿಯೆನ್ಸಿ ಬರುತ್ತದೆ. ಒಬ್ಬ ನೌಕರನನ್ನು ಸಸ್ಪೆಂಡ್ ಮಾಡಿದ ಮೇಲೆ ರೀಇನ್‌ಸ್ಟೇಟ್ ಮಾಡಲಾಗುತ್ತದೆ. ಸಸ್ಪೆಂಡ್ ಆಗುತ್ತೇವೆ ಎನ್ನುವ ಭಯ ನೌಕರಿಗೆ ಇರುವುದಿಲ್ಲ. ಸಸ್ಪೆಂಡ್ ಆದರೆ ಏನಾದರೂ ದಂಧೆ ಮಾಡಬಹುದೆನ್ನುವ ಅಭಿಪ್ರಾಯ ಬರುತ್ತದೆ. ನೌಕರರನ್ನು ಸಸ್ಪೆಂಡ್ ಏತಕ್ಕೆ ಮಾಡುತ್ತೀರಿ? ಸಹಕಾರ ಮನೋಭಾವದಿಂದ ಅವರನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಿ. ಮೊನ್ನೆ ನಡೆದಂತಹ ಘಟನೆ ಸಾರಿಗೆ ಸಂಸ್ಥೆ ನೌಕರರು ಮತ್ತು ಪೋಲೀಸ್‌ನವರು ಸರಿಯಾದ ರೀತಿಯಲ್ಲಿ ನಡೆದುಕೊಳ್ಳಬೇಕಾಗಿತ್ತು. ಈ ರೀತಿಯಾದರೆ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಸಭೆಗಳನ್ನು ಕರೆದು ಘರ್ಷಣೆಯಾಗುವುದನ್ನು ತಪ್ಪಿಸ

ಬೇಕು. ಕಾರ್ಮಿಕರಿಗೆ ಆಗತಕ್ಕ ತೊಂದರೆಯನ್ನು ತಪ್ಪಿಸಬೇಕು. ಮೊನ್ನೆ ಇಬ್ಬರ ಜಗಳದಲ್ಲಿ ಒಬ್ಬರು ತೀರಿಹೋಗಿರುತ್ತಾರೆ. ಆ ಒಂದು ಘಟನೆಯಿಂದ ಸಾರ್ವಜನಿಕರಿಗೆ ಅನೇಕ ರೀತಿಯಲ್ಲಿ ತೊಂದರೆಯಾಗಿದೆ. ಆಟೋರಿಕ್ಷಾಗಳನ್ನು ನಮ್ಮ ರಾಜ್ಯದಲ್ಲಿ ಬಹಳ ಬಡ ಜನರು ಓಡಿಸುತ್ತಿದ್ದಾರೆ. ಕೇರಳದಲ್ಲಿ ಏನು ಮೋಟಾರ್ ವೆಹಿಕಲ್ ಟ್ಯಾಕ್ಸ್ ಇದೆ, ಆ ಮಟ್ಟಕ್ಕೆ ಇಲ್ಲಿ ಕೂಡ ತರಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದರಿಂದ ಸಾವಿರಾರು ಜನ ಯಾರು ಬಡಜನರು ಆಟೋರಿಕ್ಷಾಗಳನ್ನು ಓಡಿಸುತ್ತಿದ್ದಾರೆ, ಅವರಿಗೆ ಅನುಕೂಲ ಮಾಡಿಕೊಟ್ಟ ಹಾಗೆ ಆಗುತ್ತದೆ. ಇದನ್ನು ಕೇರಳ ರೀತಿಯಲ್ಲೇ ಮಾಡಿ ಎಂದು ಮತ್ತೊಮ್ಮೆ ಕೇಳಿಕೊಳ್ಳುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಸಭಾಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಒಬ್ಬರು ಮಾನ್ಯ ಸದಸ್ಯರು.—ಆಟೋರಿಕ್ಷಾದಲ್ಲಿ ಮೂರು ಜನರನ್ನು ಕೂರಿಸುವ ಬಗ್ಗೆ ನಿಮ್ಮ ಅಭಿಪ್ರಾಯ ಏನು ?

ಶ್ರೀ ಎಸ್. ಸೂರ್ಯನಾರಾಯಣರಾವ್.—ಇದನ್ನು ನಾನು ಬಹಳ ಹಿಂದೆಯೇ ವಿರೋಧ ಮಾಡಿದ್ದೇನೆ. ಆಟೋರಿಕ್ಷಾ ಚಾಸೀಸ್ ಸೈಜ್ ನೋಡಿ. ಕಾರ್ಪೊರೇಷನ್ ಮೆಂಟೇಯ್ನ್ ಮಾಡುವ ರಸ್ತೆಗಳಲ್ಲಿ ಪಿಟ್‌ಫಾಲ್‌ಗಳು ಇರುತ್ತವೆ. ಅನಾಹುತವಾಗುವ ಸಂಭವ ಜಾಸ್ತಿ ಇರುತ್ತದೆ. ಜನರ ಸುರಕ್ಷತೆ ದೃಷ್ಟಿಯಿಂದ ಆಟೊ ರಿಕ್ಷಾದಲ್ಲಿ ಇಬ್ಬರು ಪ್ರಯಾಣಿಕರು ಸಾಕು. ಹಿಂದೆ ಶ್ರೀಮಾನ್ ಮಹಮ್ಮದ್ ಅಲಿಯವರು ಸಾರಿಗೆ ಮಂತ್ರಿಯಾಗಿದ್ದಾಗಲೂ ನಾನು ಇದರ ಬಗ್ಗೆ ವಿರೋಧ ಮಾಡಿದ್ದೇನೆ.

† ಶ್ರೀ ಕೆ. ಶಿವಮೂರ್ತಿ (ಭರಮಸಾಗರ).—ಮಾನ್ಯ ಅಧ್ಯಕ್ಷರೇ, ಈ ರಸ್ತೆ ಸಾರಿಗೆ ಖಾತೆ ಹತೋಟಿಯಲ್ಲಿರತಕ್ಕಂಥ ಮಂತ್ರಿಗಳು ಬಹಳ ಉತ್ಸಾಹಶಾಲಿಗಳೂ. ಯುವಕರೂ ಹೌದು. ಒಳ್ಳೆಯ ಸಮಾಜವಾದಿಗಳು. ಮತ್ತು ಬಹಳ ಚೆನ್ನಾಗಿ ಮಾತನಾಡುತ್ತಾರೆ. ಎಲ್ಲಾ ವಿಷಯಗಳ ಬಗ್ಗೆ ಅವರಿಗೆ ಒಳ್ಳೆಯ ಆಸಕ್ತಿ ಇದೆ. ಎಲ್ಲರ ಮೆಚ್ಚುಗೆಯನ್ನು ಗಳಿಸಿರತಕ್ಕ ಸಚಿವರಲ್ಲಿ ಒಬ್ಬರು ಎಂದರೆ ಅದರಲ್ಲಿ ಯಾವ ಅನುಮಾನವೂ ಇಲ್ಲ. ಆದರೆ ಅವರಿಗೆ ಸ್ಟೇಟ್ ದರ್ಜೆಯ ಮಂತ್ರಿ ಪದವಿ ಕೊಟ್ಟಿದ್ದಾರೆ. ಅವರಿಗೆ ಕ್ಯಾಬಿನೇಟ್ ದರ್ಜೆ ಕೊಡಲಿ ಎಂಬ ಆಸೆಯನ್ನು ನಾವು ವಿರೋಧ ಪಕ್ಷದವರೂ ಕೂಡ ಇಟ್ಟುಕೊಂಡಿದ್ದೇವೆ. ಏಕೆಂದರೆ ಅವರಲ್ಲಿ ಆ ಸಾಮರ್ಥ್ಯ ಇದೆ. ಆದರೆ ಅವರು ಈ ಸಾಮರ್ಥ್ಯ ಇಟ್ಟುಕೊಂಡಿದ್ದರೂ ಕೂಡ ಇವತ್ತು ಸಾರಿಗೆ ಇಲಾಖೆಯಲ್ಲಿ ಲುಕ್ಸಾನು ಆಗುತ್ತಿದೆ. ಈ ರೀತಿಯ ಸಾಮರ್ಥ್ಯ ಇಟ್ಟುಕೊಂಡಿದ್ದರೂ, ಸಮಾಜ ವಾದದಲ್ಲಿ ಕಟ್ಟುನಿಟ್ಟಾದ ನಂಬಿಕೆ ಇಟ್ಟುಕೊಂಡಿದ್ದರೂ ಕೋಟಿಗಟ್ಟಲೆ ನಷ್ಟ ಇವತ್ತು ರಾಜ್ಯ ಸರ್ಕಾರಕ್ಕೆ ಆಗುತ್ತಿದೆ. ಸಮಾಜವಾದದಲ್ಲಿ ಏನು ಹೇಳುತ್ತದೆ ಎಂದರೆ ನಾವು ಎಷ್ಟು ಇನ್‌ವೆಸ್ಟ್ ಮಾಡುತ್ತೇವೋ ಅದರಂತೆ ಉತ್ಪತ್ತಿ ಕೂಡ ಆಗಬೇಕು ಮಾತ್ರವಲ್ಲ ಆದಾಯ ಕೂಡ ಹೆಚ್ಚಬೇಕು. ಆದರೆ ಇದಕ್ಕೆ ಬದಲಾಗಿ ಈ ಸಾರಿಗೆ ಖಾತೆಯಲ್ಲಿ ಎಷ್ಟು ಇನ್‌ವೆಸ್ಟ್ ಮಾಡುತ್ತಿದ್ದೇವೆಯೋ ಅದಕ್ಕೆ ದುಪ್ಪಟ್ಟಿನಷ್ಟು ನಷ್ಟವನ್ನು ಕಾಣುತ್ತಿದ್ದೇವೆ. ಸ್ವಾಮಿ, ಈ ರಾಜ್ಯ ರಸ್ತೆ ಸಾರಿಗೆಯಲ್ಲಿ ರೋಡ್ ಕಿಂಗ್ಸ್ ಅಂತ ಇರುತ್ತಾರೆ. ಟ್ರಾಫಿಕ್ ಇನ್‌ಸ್ಪೆಕ್ಟರ್ ಆಗಲಿ, ಆರ್‌ಟಿಓ ಇನ್‌ಸ್ಪೆಕ್ಟರ್‌ಗಳಾಗಲೀ, ಬ್ರೇಕ್ ಇನ್‌ಸ್ಪೆಕ್ಟರ್‌ಗಳಾಗಲೀ, ಟ್ರಾಫಿಕ್ ಸಬ್ ಇನ್‌ಸ್ಪೆಕ್ಟರ್‌ಗಳಾಗಲೀ, ಇವರು ರೋಡ್ ಕಿಂಗ್ಸ್ ಇದ್ದ ಹಾಗೆ. ಇವರು ರಾತ್ರಿ ನಾಲ್ಕು ಗಂಟೆಗೆ ರಸ್ತೆಯಲ್ಲಿ ನಿಂತುಬಿಟ್ಟರೆ, ಪಕ್ಕದಲ್ಲಿ ಇನ್ನೊಬ್ಬ ಪೋಲೀಸರೂ ಇರುತ್ತಾರೆ. ಈ ಆರ್.ಟಿ ಓ. ಮುಂದಿಯ ಜೇಬಿನಲ್ಲಿ ರೊಕ್ಕ ತುಂಬಿಹೋಗಿರುತ್ತದೆ. ಲಾರಿಯವರು ಇವರಿಗೆ ಶಾಪ ಹಾಕುತ್ತಾರೆ. ಅವರದ್ದು ಏನೂ ತಪ್ಪಿಲ್ಲದಿದ್ದರೂ ಅವರು ಕನಿಷ್ಟ ಐವತ್ತು ರೂಪಾಯಿಗಳನ್ನು ಕೊಡಲೇಬೇಕು. ತಪ್ಪಿದ್ದರಂತೂ ಜಾಸ್ತಿ ಕೊಡಬೇಕು. ಈ ರೋಡ್ ಕಿಂಗ್ಸ್ ರೋಡ್ ಡಕಾಯಿಟ್ಸ್ ಇದ್ದ ಹಾಗೆ. ಯಾರನ್ನೂ ಬಿಡುವುದಿಲ್ಲ ಇವರು. ಇವರಿಂದಾಗಿ ಯಾವಾಗಲೂ ರಸ್ತೆಯಲ್ಲಿ ಲಂಚಾವತಾರ ನಡೆಯುತ್ತದೆ. ಪಾಪ, ಯಾರಾದರೊಬ್ಬ ಬಸ್ ಕಂಡಕ್ಟರ್ ಐದು ರೂಪಾಯಿ ಕದ್ದರು ಎಂದರೆ ಅದನ್ನು ಪತ್ರಿಕೆಯಲ್ಲಿ ಪ್ರಕಟಿಸುತ್ತಾರೆ. ಡ್ರೈವರ್ ಕ್ಲೀನರ್‌ಗಳ ಮೇಲೆ ಅಪಾದನೆ ಹಾಕುತ್ತಾರೆ. ಆದರೆ ಈ ರೋಡ್ ಮೋನಾರ್ಕ್ಸ್ ಪಬ್ಲಿಕ್‌ನಲ್ಲೇ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಲಂಚ ತೆಗೆದುಕೊಳ್ಳತಕ್ಕಂಥ ಜನ. They are prestigious people. ಈ ಇಲಾಖೆ ಲಂಚಮಯವಾಗಿದೆ. ಹೊರಗಡೆ ಬಸ್ಸು ತೆಗೆದುಕೊಂಡು ಹೋಗಬೇಕಾದರೆ ಡಿಪೋ ಮ್ಯಾನೇಜರ್‌ಗೆ ಲಂಚ ಕೊಡಬೇಕು. ಬಸ್ಸನ್ನು ಹೊರಗಡೆ ತರಬೇಕಾದರೆ ಅದನ್ನು ಶುಚಿಯಾಗಿ ತರಬೇಕು. ಜನರು ಬಸ್ಸಿನಲ್ಲಿ ವಾಂತಿ ಮಾಡಿರುತ್ತಾರೆ. ಅದನ್ನು ಸರಿಯಾಗಿ ತೊಳೆದಿರುವುದಿಲ್ಲ. ಬಸ್ಸು ರಿಪೇರಿಯಾಗಬೇಕಾಗುತ್ತದೆ. ಇದೆಲ್ಲವೂ ಆಗಿ ಯೋಗ್ಯ ರೀತಿಯಲ್ಲಿ ಬಸ್ಸು ಹೊರಗೆ ಬರಬೇಕಾದರೆ ಅಲ್ಲಿ ಲಂಚ ಕೊಡಬೇಕು. ಈ ರೀತಿ ಅಧಿಕಾರಿ ಮಟ್ಟದಲ್ಲಿ ಲಂಚ ಇದೆ. ಸಾವಿರಾರು ಅಲ್ಲ, ಕೋಟಿಗಟ್ಟಲೆ ಹಣ ಸೋರಿ ಹೋಗುತ್ತಿರುವುದರ ಬಗ್ಗೆ ಯೋಚನೆ ಮಾಡಬೇಕು. ಬರೀ ನೂರು ರೂಪಾಯಿಗಳ ವಿಷಯವಾದರೆ ದೊಡ್ಡದಾಗಿ ಪತ್ರಿಕೆಯಲ್ಲಿ ಹಾಕುತ್ತಾರೆ. ಈ ರೀತಿಯಾದ ಪತ್ರಿಕಾ ಪ್ರಚಾರ ಬೇಡ. ದೊಡ್ಡ ದೊಡ್ಡ ಹೆಗ್ಗಣಗಳು ಇಲ್ಲಿ ಸೇರಿಕೊಂಡಿವೆ. ಲಂಚ ಮಾತ್ರವಲ್ಲದೆ, ಮೊನ್ನೆ ಗುಲ್ಬರ್ಗಾದಲ್ಲಿ ದೊಡ್ಡ ಪ್ರಮಾಣದಲ್ಲಿ ನಕಲಿ ಟಿಕೇಟು ಪ್ರಿಂಟ್ ಮಾಡುವ ಜಾಲವನ್ನು ಪೊಲೀಸರು ಪತ್ತೆಹಚ್ಚಿದ್ದರು. ಇದರ ಬಗ್ಗೆ ಇಲಾಖೆಯವರು ಏನು ಕ್ರಮ ತೆಗೆದುಕೊಂಡಿದ್ದಾರೆ? ಈ ರೀತಿ ಟಿಕೇಟು ಪ್ರಿಂಟ್ ಮಾಡಿಸಿಬಿಟ್ಟು ಮಾರತಕ್ಕ ವ್ಯವಸ್ಥೆ ಇದೆ. ಇಷ್ಟು ಮಾತ್ರವಲ್ಲ, ಈ ಇಲಾಖೆಯಲ್ಲಿ ಟೈರು, ಸಣ್ಣ ಸಣ್ಣ ಬಿಡಿ ಭಾಗಗಳು, ಇತ್ಯಾದಿಗಳಿಗೆ ಟೆಂಡರ್ ಕರೆಯುತ್ತಾರೆ. ಹಾಗೆ ಟೆಂಡರ್ ಕರೆದಾಗ ಇವರು ಸುಮ್ಮನೆ ಒಪ್ಪಿಕೊಳ್ಳುತ್ತಾರೆಯೆ? ಖಾಸಗಿ ಕಂಪೆನಿಯವರು ಇವರಿಗೆ ಮಾಮೂಲು ಕೊಡಬೇಕು. ಮಾಮೂಲು ತೆಗೆದುಕೊಳ್ಳುವುದರಲ್ಲಿ ಈ ಇಲಾಖೆ ಎತ್ತಿದ ಕೈ. ಇಲ್ಲದಿದ್ದರೆ ಟೆಂಡರ್‌ನ್ನು ಒಪ್ಪಿಕೊಳ್ಳಲಾಗುವುದಿಲ್ಲ. ಚಾಸೀಸ್‌ನಿಂದ ಹಿಡಿದು ಸಣ್ಣಪುಟ್ಟ ಕೆಲಸಕ್ಕೆ ಕಮೀಶನ್ ಏಜಂಟ್‌ಗಳು ಇದ್ದಾರೆ. ಈ ರೀತಿ ಲಂಚ ತುಂಬಿತುಳುಕುತ್ತದೆ. ಇವತ್ತು ಸಾರಿಗೆ ಸೌಕರ್ಯದ ಬೆಳವಣಿಗೆ ಜಾಸ್ತಿಯಾಗಿದೆ. ಹಿಂದೆ ಆದರೆ ಹಳ್ಳಿಗಳಲ್ಲಿ ಚಕ್ಕಡಿಗಳಲ್ಲಿ ಓಡಾಡುತ್ತಿದ್ದರು. ಇವತ್ತು ಅಲ್ಲಿ ಸೈಕಲುಗಳು ಬಂದಿವೆ. ಇನ್ನು, ಪಟ್ಟಣಗಳಲ್ಲಿ ಸಿಟಿಬಸ್ಸುಗಳ ಪಾಡಂತೂ ಹೇಳತೀರದು. ಬಿ.ಟಿ.ಎಸ್. ಬಸ್ಸುಗಳಲ್ಲಿ ಬಡವರೇನೂ ಪುಕ್ಸಟ್ಟೆ ಓಡಾಡುವುದಿಲ್ಲ, ಅವರು ರೊಕ್ಕ ಕೊಟ್ಟು ಓಡಾಡುತ್ತಾರೆ. ಹೀಗಿರುವಾಗಲೂ ಇಲ್ಲಿ ಲುಕ್ಸಾನು ಏಕೆ ಆಗುತ್ತಿದೆ? ಪ್ರಯಾಣಿಕರ ಸಂಖ್ಯೆ ಜಾಸ್ತಿಯಾಗಿದೆ. ಇವರು ದುಡ್ಡುಕೊಟ್ಟು ಬಸ್ಸುಗಳಲ್ಲಿ ಪ್ರಯಾಣ ಮಾಡುತ್ತಿದ್ದರೂ ಸಹ ಈ ಹಣ ಎಲ್ಲಿ ಸೋರಿಹೋಗುತ್ತಿದೆ? ಇದರ ಬಗ್ಗೆ ಬಹಳಷ್ಟು ಸಂಶಯ ಸಾರ್ವಜನಿಕರಲ್ಲಿ ಮೂಡಿದೆ ಇನ್ನು, ರಸ್ತೆ ಅಫಘಾತಗಳು, ರಾಷ್ಟ್ರೀಯ ಹೆದ್ದಾರಿಗಳಲ್ಲಿ ಪ್ರತಿನಿತ್ಯ ನೋಡುತ್ತೇವೆ. ಇದರ ಬಗ್ಗೆ ಏನಾದರೂ ಯೋಚನೆ ಮಾಡಿದ್ದೀರಾ? ಬೆಂಗಳೂರು ಮತ್ತು ಬೆಳಗಾಂ ಹೆದ್ದಾರಿ ರಸ್ತೆಯಲ್ಲಿ ಹೋದರೆ ಎಷ್ಟೋ, ಲಾರಿ, ಕಾರು, ಬಸ್ಸುಗಳು ಅಪಘಾತಕ್ಕೀಡಾಗಿ ಬಿದ್ದಿರುತ್ತವೆ. ಇದಕ್ಕೆ ಕಾರಣವೇನು? ಇದು ಚಾಲಕರ ತಪ್ಪು ಎಂದು ಹೇಳುವುದಕ್ಕೆ ಆಗುತ್ತದೆಯೆ? ಇದರಲ್ಲಿ ಚಾಲಕನ ತಪ್ಪು ಏನಿರುತ್ತದೆ? ರಸ್ತೆಗಳು ಸರಿಯಿಲ್ಲವೆ? ಯಂತ್ರಭಾಗಗಳು ಸರಿಯಿಲ್ಲವೆ? ಇದರ ಬಗ್ಗೆ ತಾವು ಸಮಗ್ರವಾಗಿ ಒಂದು ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು. ಇಲ್ಲಿಂದ ಬೆಂಗಳೂರು ಬಿಟ್ಟರೆ ಬೆಳಗಾಮ್‌ವರೆಗೆ ೫೦ರಿಂದ ೬೦ ರಸ್ತೆ ಅಪಘಾತಗಳು ಆಗಿರುವುದನ್ನು ಸರ್ವೆಸಾಮಾನ್ಯವಾಗಿ ಕಾಣುತ್ತಿದ್ದೇವೆ. ಇಲ್ಲಿ ರೂಲ್ಸ್ ಅಂಡ್ ರೆಗ್ಯುಲೇಶನ್ಸ್ ಸರಿಯಾಗಿ ಪಾಲನೆಯಾಗುತ್ತಿಲ್ಲ. ಚಾಲಕರು ಶಿರಸ್ತ್ರಾಣ ಧರಿಸುವ ವ್ಯವಸ್ಥೆ ಸರಿಯಾಗಿಲ್ಲ. ವಿ. ಐ. ಪಿ. ಕಾರು ಹೋಗುತ್ತಿದ್ದರೆ ಸ್ಕ್ರೀನ್ ಹಾಕಿರುತ್ತಾರೆ. ಸ್ಟಿಕರ್ಸ್ ಹಚ್ಚಿರುತ್ತಾರೆ. ಇದರಿಂದಾಗಿ ಹಿಂದಿನ ವಾಹನಗಳು ಕಾಣುವ ವ್ಯವಸ್ಥೆ ಇರುವುದಿಲ್ಲ. ಇಂತಹ ಕಾರುಗಳಿಗೆ ಹಾಕಿರತಕ್ಕ ಸ್ಕ್ರೀನ್‌ನ್ನು ತೆಗೆಯಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೀರೋ ಹೇಗೆ? ಈ ಕಾರಣಗಳಿಂದಲೂ ಸಹ ಅಪಘಾತಗಳಾಗುವ ಸಂಭವ ಉಂಟು. ಇನ್ನೊಂದು ವಿಷಯ ಇದೆ. ಅದೇನೆಂದರೆ ಸಿಖ್ ಜನಾಂಗದವರು ಹೆಲ್ಮೆಟ್ ಹಾಕುವುದಿಲ್ಲ. ಎಲ್ಲರಿಗೂ ಅನ್ವಯಿಸುವ ಈ ನಿಯಮ ಅವರಿಗೆ ಮಾತ್ರ ಏತಕ್ಕೆ ಅನ್ವಯಿಸುವುದಿಲ್ಲ? ಇವರಿಗೆ ಯಾವ ಕಾನೂನು ಇದೆ? ಇದರ ಬಗ್ಗೆ ನನಗೆ ಗೊತ್ತಿಲ್ಲವಾದ್ದರಿಂದ ಸರ್ಕಾರವೇ ಹೇಳಬೇಕು. ಇನ್ನು, ರಸ್ತೆಸಾರಿಗೆ ಸಂಸ್ಥೆ ನಿಗಮದ ಒಂದು ಬೋರ್ಡ್ ಇದೆ. ಇಲ್ಲಿ ಬರೀ ಐ. ಎ. ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳು ಇದ್ದಾರೆ. ಇಲ್ಲಿ ಏಕೆ ಬರೀ ಐ. ಎ. ಎಸ್. ಮತ್ತು ಐ. ಪಿ. ಎಸ್. ಅಧಿಕಾರಿಗಳನ್ನು ತುಂಬುತ್ತೀರಿ? ಇಲ್ಲಿ ಒಂದು ವರ್ಷ ಇರುತ್ತಾರೆ, ಮತ್ತೊಂದು ವರ್ಷ ಬೇರೆ ಕಡೆ ಇರುತ್ತಾರೆ. ಅಂತಹ ಅಗಾಧವಾದ ಸಾಮರ್ಥ್ಯವನ್ನೇನೂ ಅವರು ಹೊಂದಿರುವುದಿಲ್ಲ. ಟೆಕ್ನಿಕಲ್ ಸೈಡ್‌ನಲ್ಲಿ ಅವರಿಗೆ ಅನುಭವ ಸಾಲದು. ಐ.ಎ.ಎಸ್., ಐ.ಪಿ.ಎಸ್. ಪರೀಕ್ಷೆ ಪಾಸ್ ಮಾಡಿಕೊಂಡು ಬಂದಿರುತ್ತಾರೆ. ಪೇಪರುಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆ ಕಳಿಸಿ ಕೆಲಸ ಮಾಡುವುದಕ್ಕೆ ಒಬ್ಬ ಐ.ಎ.ಎಸ್. ಅಧಿಕಾರಿ ಬೇಕಾ ? ಆದರೆ ಎಫಿಷಿಯನ್ಸಿ, ಎಕ್ಸ್‌ಪೀರಿಯನ್ಸ್ ಅದೂ ಕೂಡಾ ಮುಖ್ಯ. ಈ ಇಲಾಖೆಯಲ್ಲಿ ಟೆಕ್ನಿಕಲ್ ಎಫಿಷಿಯನ್ಸಿ ಇರತಕ್ಕವರನ್ನು ಏತಕ್ಕೆ ತೆಗೆದುಕೊಳ್ಳುವುದಿಲ್ಲ ? ಬರೀ ಐಎಎಸ್ ಐಪಿಎಸ್ ಅಧಿ

ಕಾರಿಗಳನ್ನು ತೆಗೆದುಕೊಳ್ಳುವುದರಿಂದ ಅವರು ಸ್ವಲ್ಪ ದಿನ ಇದ್ದು ಮತ್ತೇ ಬೇರೆ ಕಡೆ ಹೊರಟು ಹೋಗುತ್ತಾರೆ. ಅವರು ಬರೀ ಪೇಪರ್‌ನಲ್ಲಿ ಕೆಲಸ ಮಾಡತಕ್ಕ ಅನುಭವ ಇರುವವರು. ಅಂಥ ವರನ್ನಿಟ್ಟುಕೊಂಡು ಈ ಇಲಾಖೆಯಲ್ಲಿ ಕೆಲಸ ಮಾಡುವ ಬಗೆಯಾವರೂ ಹೇಗೆ? ಈಗ ಅಲ್ಲಿ ಒಂದು ವೈಸ್ ಛೇರ್‌ಮನ್ ಹುದ್ದೆ ಇದೆ. ಛೇರ್ಮನ್ ಇರುವಾಗ ವೈಸ್ ಛೇರ್ಮನ್ ಅನ್ನು ಏತಕ್ಕೆ ಇಟ್ಟು ಕೊಂಡಿದ್ದೀರಿ? ಅವರು ಹೊರದೇಶಕ್ಕೆ ಹೋಗಿಬರಲಿ, ಲಂಡನ್ನಿಗೆ ಹೋಗಿಬರಲಿ, ಜರ್ಮನಿಗೆ ಹೋಗಿ ಬರಲಿ ಎಂದು ಇಟ್ಟುಕೊಂಡಿದ್ದೀರಾ? ಈರೀತಿ ಅನಾವಶ್ಯಕವಾಗಿ ಏತಕ್ಕೆ ಇಂಥ ಹುದ್ದೆಗಳನ್ನು ಇಟ್ಟು ಕೊಳ್ಳುತ್ತೀರಿ? ಅದರಿಂದ ಏನಾದರೂ ಪ್ರಯೋಜನ ಇದೆಯೇ? ಇಲಾಖೆಯಲ್ಲಿರತಕ್ಕ ಅಧಿಕಾರಿಗಳೆಲ್ಲಾ ಒಂದೇ ವಾಹನದಲ್ಲಿ ಓಡಾಡಲೀ, ಸಾವಿರಾರು ಮೈಲಿ ಹೋಗಿ ಬರಲಿ. ಆಗ ಅವರಿಗೆ ಸಾಮಾನ್ಯ ಜನರು ಓಡಾಡುವುದು ಎಷ್ಟು ಕಷ್ಟ ಇದೆ ಎಷ್ಟು ತೊಂದರೆ ಇದೆ, ಎಂಬುದು ಗೊತ್ತಾಗುತ್ತದೆ. ಉನ್ನತ ಅಧಿಕಾರಿಗಳಾಗಲೀ ಸಚಿವರಾಗಲೀ ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಬೇಕು. ಜನಸಾಮಾನ್ಯರ ಕಷ್ಟ ಪರಿಸ್ಥಿತಿಯ ಬಗ್ಗೆ ಇಲಾಖೆಯಲ್ಲಿರತಕ್ಕ ಅಧಿಕಾರಿಗಳಿಗೆ ಏನು ಅನುಭವ ಇಲ್ಲ ವೆಂದು ನಾನಾದರೂ ಹೇಳುತ್ತೇನೆ. ಇದರ ಬಗ್ಗೆ ಅವರಿಗೆ ಮನವರಿಕೆಯಾಗುವಂತೆ ಮಾಡಬೇಕು.

ಇನ್ನು ಈ ಸಂಸ್ಥೆಯಲ್ಲಿ ಮ್ಯಾನೇಜ್‌ಮೆಂಟ್ ಹೇಗಿರಬೇಕು, ಬೋರ್ಡ್ ಆಫ್ ಡೈರೆಕ್ಟರ್ಸ್ ಎಷ್ಟಿರಬೇಕು, ನಾನ್ ಆಫಿಷಿಯಲ್ಸ್ ಡೈರೆಕ್ಟರ್ಸ್ ಎಷ್ಟು ಇರಬೇಕು ಎಂಬ ಬಗ್ಗೆ ಎಲ್ಲಾ ರಿಪೋರ್ಟಿನಲ್ಲೇ ಮಾಹಿತಿ ಒದಗಿಸಿ ಕೊಟ್ಟಿದ್ದೇವೆ. ಆದರೂ ಇದುವರೆಗೆ ಅದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ ಇವೊತ್ತಿನ ದಿವಸ ಕೆ.ಎಸ್.ಆರ್.ಟಿ.ಸಿ ಯಲ್ಲಿ ಸಮಗ್ರವಾಗಿ ಒಂದು ವಿಷಿಯಸ್ ಸರ್ಕಲ್ ಎಂದು ಏನು ಹೇಳುತ್ತೇವೆ ಅದು ಬೆಳೆಯುತ್ತಿದೆ. ಇದರ ಬಗ್ಗೆ ಮಾನ್ಯ ಸಚಿವರು ಕ್ರಮ ತೆಗೆದುಕೊಳ್ಳು ತ್ತಾರೆಂಬ ಭರವಸೆ ಇಟ್ಟುಕೊಂಡಿದ್ದೇನೆ. ಅವರ ಬಗ್ಗೆ ನನಗೆ ಬಹಳಷ್ಟು ಗೌರವ ಇದೆ. ಅಲ್ಲಿರತಕ್ಕ ಲಂಚದ ಹಾವಳಿಯನ್ನು ಕಡಿಮೆ ಮಾಡಿ ಮತ್ತು ಸಂಸ್ಥೆಗೆ ಆಗತಕ್ಕ ನಷ್ಟವನ್ನು ಕಡಿಮೆ ಮಾಡಿ ಎಂದು ವಿನಂತಿಸಿಕೊಳ್ಳುತ್ತೇನೆ ಆ ದಿಸೆಯಲ್ಲಿ ಮಂತ್ರಿಗಳು ಪ್ರಯತ್ನ ಮಾಡಿ ಮುಂದಿನ ವರ್ಷ ಇಷ್ಟು ನಷ್ಟವನ್ನು ಕಡಿಮೆ ಮಾಡುತ್ತೇವೆಂಬ ಗುರಿ ಇಟ್ಟುಕೊಂಡರೆ ಅದನ್ನು ನಾನು ಮೆಚ್ಚುತ್ತೇನೆ ಮತ್ತು ಒಪ್ಪುತ್ತೇನೆ.

ಇನ್ನು ಪಶುಸಂಗೋಪನೆ ಮತ್ತು ತೋಟಗಾರಿಕೆ ಇಲಾಖೆಯ ಬಗ್ಗೆ ಹೇಳುವುದಾದರೆ ಆ ಇಲಾಖೆಯ ಮಂತ್ರಿಗಳು ತಮ್ಮ ಛೇಂಬರ್‌ನಲ್ಲಿ ಬಹಳ ಉತ್ಸಾಹದಿಂದ ಸುಭಾಷ್ ಚಂದ್ರಬೋಸ್‌ರ ಭಾವ ಚಿತ್ರವನ್ನು ಇಟ್ಟುಕೊಂಡಿರುತ್ತಾರೆ. ಅವರು ಬಹಳ ಉತ್ಸಾಹಿಗಳು, ದೇಶಾಭಿಮಾನಿಗಳು, ಆದರೆ ಏಕೋ ಅವರ ಆರೋಗ್ಯ ಸರಿಯಾಗಿಲ್ಲ, ಅವರಿಗೆ ಓಡಾಡಲಿಕ್ಕೆ ಆಗುವುದಿಲ್ಲ. ಆದರೂ ಅವರಿಗೆ ದೊಡ್ಡ ಇಲಾಖೆಯನ್ನೇ ಕೊಟ್ಟಿದ್ದೀರಿ, ಅವರ ಆರೋಗ್ಯ ಸರಿಯಾಗಿಲ್ಲದಿರುವುದರ ಜೊತೆಗೆ ನಮ್ಮ ರಾಜ್ಯದಲ್ಲಿರತಕ್ಕ ಪಶುಗಳ ಆರೋಗ್ಯ ಸಹ ಕೆಟ್ಟಿದೆ. ಅವು ದಷ್ಟ ಪುಷ್ಟವಾಗಿ ಬೆಳೆಯುತ್ತಿಲ್ಲ, ಇದಕ್ಕೆ ಕಾರಣವೇನು ಎಂದು ನನಗೆ ಗೊತ್ತಾಗುತ್ತಿಲ್ಲ. ಇವೊತ್ತಿನ ದಿವಸ ಸರ್ಕಾರಿ ಫಾರಂನಲ್ಲಿ ಪಶುಗಳನ್ನು ಸಾಕುತ್ತಿದ್ದಾರೆ. ಜೊತೆಗೆ ಕುರಿ, ಕೋಳಿ, ಎಮ್ಮೆ, ಹಸು, ಎತ್ತು ಕೋಣ ಇವುಗಳನ್ನು ಕೊಳ್ಳಲು ಸಹ ಬಡವರಿಗೆ ಸಾಲ ಕೊಡುತ್ತಿದ್ದಾರೆ. ಆ ರೀತಿ ಸಾಲ ಪಡೆದವರು ಎತ್ತು ಎಮ್ಮೆ ಹಸುಗಳನ್ನು ಕೊಳ್ಳಲು ಮಾರುಕಟ್ಟೆಗಳಿಗೆ ಮತ್ತು ದನದ ಜಾತ್ರೆಗಳಿಗೆ ಹೋಗುತ್ತಾರೆ. ಅಲ್ಲಿ ಎಂತಹ ಅವ್ಯವ ಹಾರ ನಡೆಯುತ್ತಿದೆ ಎಂಬುದನ್ನು ನೋಡಬೇಕು. ದನಗಳನ್ನು ಕೊಳ್ಳುವುದಕ್ಕೆ ಸರ್ಕಾರದವರು ಸಾಲ ನೀಡುವುದಕ್ಕೆ ಬದಲಾಗಿ ಫಾರಂಗಳಲ್ಲಿಯೇ ಏನು ಪಶುಗಳನ್ನು ಬೆಳೆಸಿರುತ್ತಾರೆ ಅವನ್ನೇ ಏತಕ್ಕೆ ಬಡವರಿಗೆ ಕೊಡಬಾರದು? ಫಾರಂಗಳಲ್ಲಿ ಬೆಳೆಸಿರತಕ್ಕ ಎತ್ತು, ಎಮ್ಮೆಗಳನ್ನು ಹಣವಂತರಿಗೆ ಕೊಡುತ್ತಿದ್ದಾರೆ. ಅದಕ್ಕೆ ಬದಲಾಗಿ ಅವನ್ನು ಬಡವರಿಗೆ ಕೊಡತಕ್ಕ ವ್ಯವಸ್ಥೆಯನ್ನು ಏತಕ್ಕೆ ಮಾಡುವುದಕ್ಕಾಗುವುದಿಲ್ಲ? ಇವೊತ್ತಿನ ದಿವಸ ಹಾಲಿನ ದರವನ್ನು ಏರಿಸಿದ್ದೀರಿ, ಅದರಲ್ಲಿ ಏನು ಅನುಮಾನ ಇಲ್ಲ. ನಾವು ಹಳ್ಳಿಯ ಜನ, ಹಸುಗಳನ್ನು ಎಮ್ಮೆಗಳನ್ನು ಪೋಷಣೆ ಮಾಡುವವರು ನಾವು ಆದರೆ ಹಾಲು ಕುಡಿಯುವವರು ಮಾತ್ರ ಬೇರೆಯವರು. ಅವರಲ್ಲಿ ಕೆಲವರಿಗೆ ಎಮ್ಮೆ, ಹಸು ಎಂದರೆ ಗೊತ್ತಿರುವುದಿಲ್ಲ, ಅವುಗಳ ಪಾಲನೆ, ಪೋಷಣೆ ಮಾಡಿದ ಜನ ಹಾಲಿನ ರುಚಿಯನ್ನು ಕಳೆದು ಕೊಳ್ಳುತ್ತಾರೆ. ಬಹು ಪಾಲು ಹಳ್ಳಿಯ ಜನರು ಹಾಲನ್ನು ಕುಡಿಯುತ್ತಿಲ್ಲ. ಹಳ್ಳಿಗೆ ಹಾಲು ವಿತರಣೆ ಯಾಗುತ್ತಿಲ್ಲ. ಹಳ್ಳಿಗೆ ಹಾಲು ವಿತರಣೆಯಾಗುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ? ಮನುಷ್ಯರಿಗೆ ನೋವಾದರೆ, ಕಾಯಿಲೆಯಾದರೆ ಇನ್ನೊಬ್ಬರಿಗೆ ಹೇಳತಕ್ಕ ಬುದ್ಧಿ ಇದೆ. ಆದರೆ ಪಶುಗಳಿಗೆ ಆ ಒಂದು ಶಕ್ತಿ ಇರುವುದಿಲ್ಲ. ಅವು ಮೂಕಪ್ರಾಣಿಗಳು, ಪಶುಗಳಾಗಲೀ ಪಕ್ಷಿಗಳಾಗಲೀ ಬಂದು ತಮ್ಮ ಕಷ್ಟವನ್ನು ಯಾರ ಮುಂದಾದರೂ ಹೇಳಿಕೊಳ್ಳುತ್ತವೆಯೇ? ಇಲ್ಲ. ಅಂಥ ಮೂಕ ಪ್ರಾಣಿಗಳಿಗೆ ಹಳ್ಳಿಯಲ್ಲಿ ಬೃಹದಾಕಾರವಾದ ಪಶುವೈದ್ಯ ಶಾಲೆಗಳನ್ನೇನೋ ತೆರೆದಿರುತ್ತೀರಿ ಆದರೆ ಅಲ್ಲಿ ವೈದ್ಯರು ಇರುವುದಿಲ್ಲ.

ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂಥ ಪಶುವೈದ್ಯ ಶಾಲೆಗೆ ವೈದ್ಯರನ್ನು ಕೊಡಿ ಎಂದು ಪತ್ರ ಬರೆದು ಕೇಳಿದ್ದೆನು. ನೀವು ಅದಕ್ಕೆ ವೈದ್ಯರು ಇಲ್ಲವೆಂದು ಹೇಳಿದ್ದೀರಿ. ಆದುದರಿಂದ ಸಾಕಷ್ಟು ವೈದ್ಯಕೀಯ ಕಾಲೇಜುಗಳನ್ನು ತೆರೆದು, ಪಶುವೈದ್ಯರನ್ನು ಜಾಸ್ತಿ ಮಾಡತಕ್ಕ ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ವೈದ್ಯರನ್ನು ಜಾಸ್ತಿ ಮಾಡಿ ಮೂಕ ಪ್ರಾಣಿಗಳನ್ನು ರಕ್ಷಿಸಿ. ಜೊತೆಗೆ ಪಶುವೈದ್ಯ ಶಾಲೆಗಳಿಗೆ ಔಷಧಿ ಸರಬರಾಜು ಮಾಡತಕ್ಕದ್ದು ಬಹಳ ಮುಖ್ಯ. ಇವೊತ್ತಿನ ದಿವಸ ಪ್ರಾಣಿಗಳಿಗೆ ನಾನಾ ರೀತಿಯ ರೋಗಗಳು ಹರಡುತ್ತಿವೆ. ಹೀಗಾಗಿ ಪಶುಗಳು ಚೆನ್ನಾಗಿ ಬೆಳೆಯುತ್ತಿಲ್ಲ. ಹಳ್ಳಿಗಳಲ್ಲಿ ಪಶುವೈದ್ಯ ಶಾಲೆಗಳು ಯಾವ ರೀತಿ ಹರಿಯುತ್ತಿವೆ ಎನ್ನುವುದನ್ನು ನೀವು ಹೋಗಿ ನೋಡಿದರೆ ಗೊತ್ತಾಗುತ್ತದೆ. ಇತ್ತೀಚೆಗೆ ಮೊಬೈಲ್ ವ್ಯಾನ್‌ಗಳ ವ್ಯವಸ್ಥೆ ಮಾಡಿ ಅವು ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಪಶುಗಳಿಗೆ ಬೇಕಾದ ಔಷಧಿ ಮತ್ತು ಚಿಕಿತ್ಸೆಯನ್ನು ನೀಡತಕ್ಕ ವ್ಯವಸ್ಥೆ ಮಾಡಿದ್ದೀರಿ. ಆದರೆ ಅವು ಎಲ್ಲೆಲ್ಲಿ ಹೋಗುತ್ತವೆ ಎಂಬುದು ಗೊತ್ತಿಲ್ಲ. ಇಂತಿಂಥ ಹಳ್ಳಿಗಳನ್ನು ಕವರ್ ಮಾಡಬೇಕೆಂಬ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಈಗಿರತಕ್ಕ ಅಡ್ಮಿನಿಸ್ಟ್ರೇಟಿವ್ ಸಿಸ್ಟಂ ಸರಿಯಾಗಿಲ್ಲ. ಪ್ರತಿಯೊಂದು ಪಶುವೈದ್ಯ ಶಾಲೆಗಳಲ್ಲಿ ಇರತಕ್ಕ ಕಾಂಪೌಂಡರ್‌ಗಳು ಅಲ್ಲಿಗೆ ಬರತಕ್ಕಂಥ ರೋಗಗ್ರಸ್ಥ ದನಗಳಿಗೆ ಔಷಧಿ ಕೊಡುವುದರ ಜೊತೆಗೆ ಹಳ್ಳಿಗಳ ಕಡೆ ಸಹ ಹೋಗಿ ತಿರುಗಾಡಿ ಅಲ್ಲೇನಾದರೂ ಪಶುಗಳಿಗೆ ರೋಗವಿದ್ದರೆ ಆ ಬಗ್ಗೆ ಕಾಳಜಿ ವಹಿಸಬೇಕು. ಆಸ್ಪತ್ರೆಯಲ್ಲಿ ಔಷಧಿ ಇಲ್ಲದಿದ್ದರೆ ಸರ್ಕಾರಕ್ಕೆ ಬರೆದು ತರಿಸಬೇಕು. ಮೂಕ ಪ್ರಾಣಿಗಳಿಗೆ ಬೇಕಾದ ಅವಶ್ಯಕತೆಯನ್ನು ಪೂರೈಸಬೇಕು.

ಇನ್ನು ತೆಂಗಿನ ಸಸಿ ವಿಚಾರವಾಗಿ ಹೇಳುವುದಾದರೆ, ಇವೊತ್ತಿನ ದಿವಸ ಆಧ್ರದಿಂದ ತೆಂಗಿನ ಸಸಿಗಳನ್ನು ದಾವಣಗೆರೆಯಲ್ಲಿ ಮಾರಾಟ ಮಾಡುತ್ತಾರೆ. ಅವು ಸರಿಯಾಗಿ ಹುಟ್ಟುವುದಿಲ್ಲ. ಈ ಬಗ್ಗೆ ರೈತರ ಅಭಿಪ್ರಾಯ ಏನೆಂದರೆ ೨೦ ವರ್ಷ ವಯಸ್ಸಾಗಿರತಕ್ಕ ಮರದ ಕಾಯಿಯನ್ನು ಕಿತ್ತು ನೆಟ್ಟರೆ ಒಳ್ಳೆಯ ಗಿಡ ಬೆಳೆಯುತ್ತದೆಂದು ಹೇಳುತ್ತಾರೆ. ಆದರೆ ತಾವು ಕೊಡತಕ್ಕ ಸಸಿಯ ಗುಣಮಟ್ಟ ಬಹಳ ಕೆಳಮಟ್ಟದ್ದಾಗಿರುತ್ತದೆ. ಇವೊತ್ತು ಕಲಬೆರಿಕೆ ಎಲ್ಲಿಗೆ ಹೋಗಿದೆ ಎಂಬುದನ್ನು ತಾವು ಗಮನಿಸಬೇಕು. ತೆಂಗಿನ ಸಸಿಯಿಂದ ಹಿಡಿದು ಎಲ್ಲದರಲ್ಲಿಯೂ ಕಲಬೆರಿಕೆಯೇ ಹೀಗಾದರೆ ರೈತರು ಹೇಗೆ ಬದುಕಬೇಕು ? ಸರ್ಕಾರನ್ನು ನಂಬಿ ಕೆಲಸ ಮಾಡುವುದಾದರು ಹೇಗೆ ? ಇದರ ಬಗ್ಗೆ ತಾವು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ತೋಟಗಾರಿಕೆ ಇಲಾಖೆಯ ಬಗ್ಗೆ ಎಲ್ಲರೂ ಮಾತನಾಡಿದ್ದಾರೆ. ಶ್ರೀ ಗಂಗಾಧರನ್ ಅವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ತಾವು ನಮ್ಮ ಕೈಗೆ ಕೆಲವು ಪುಸ್ತಕಗಳನ್ನು ಕೊಟ್ಟು ಅದರಲ್ಲಿ ಅಂಕಿಸಂಖ್ಯೆಗಳನ್ನು ಹೇಳಿದ್ದೀರಿ. ಆ ಅಂಕಿ ಸಂಖ್ಯೆಗಳನ್ನು ಅಳೆಯುವುದಕ್ಕೆ ಏನಾದರೂ ಮಾಪನ ಇದೆಯೇ ? ತಾವು ಹೇಳಿದ್ದೇ ಅಂಕಿ ಸಂಖ್ಯೆಯಾದರೆ ಬಹಳ ಕಷ್ಟವಾಗುತ್ತದೆ. ಈ ರೀತಿಯಾಗಿ ತಪ್ಪು ತಪ್ಪು ಅಂಕಿಸಂಖ್ಯೆಗಳನ್ನು ಕೊಟ್ಟು ಸದನವನ್ನು ತಪ್ಪುದಾರಿಗೆಳೆಯತಕ್ಕ ಕೆಲಸ ಮಾಡಬೇಡಿ. ಆ ಅಂಕಿಸಂಖ್ಯೆಯನ್ನು ಅಳೆಯತಕ್ಕ ಮಾಪನವೇನಾದರೂ ಇದ್ದರೆ ಹೇಳಿ. ಒಟ್ಟಿನಲ್ಲಿ ಈ ಒಂದು ಪದ್ಧತಿಯನ್ನು ಮೊದಲು ತಪ್ಪಿಸಿ ಎಂದು ಹೇಳಿ ಇದರ ಬಗ್ಗೆ ಮುಂಜಾಗರೂಕತೆ ಕ್ರಮ ಕೈಗೊಳ್ಳುತ್ತೀರೆಂಬ ಭರವಸೆಯನ್ನಿಟ್ಟುಕೊಂಡು ಇಷ್ಟು ಕಾಲ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬೈರಪ್ಪಾಜಿ (ತುರುವೇಕೆರೆ).—ಸನ್ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ನಮ್ಮ ಮುಂದೆ ಇಬ್ಬರು ಮಂತ್ರಿಗಳು ಮಂಡಿಸಿರತಕ್ಕ ಹೇಳಿಕೆಗಳನ್ನು ವಿರೋಧಿಸಿ ಎರಡು ಮಾತುಗಳನ್ನು ಆಡುವುದಕ್ಕೆ ಇಚ್ಛೆಪಡುತ್ತೇನೆ. ಕಳೆದ ಸಾರಿ ಕೂಡಾ ನಾನು ಕೆ.ಎಸ್.ಆರ್.ಟಿ.ಸಿ. ಬಗ್ಗೆ ಮಾತನಾಡಿದ್ದೆ. ಹೇಳಿದ್ದೇ ಹೇಳೋ ಕಿಸು ಬಾಯಿ ದಾಸ ಎಂಬಂತೆ ಇವೊತ್ತು ಮತ್ತೇ ಅದನ್ನೇ ಹೇಳುತ್ತಿದ್ದೇನೆ. ನಮ್ಮ ಸರ್ಕಾರವಿದ್ದಾಗ ಏನು ಹೇಳಿದ್ದೆ, ಅದನ್ನೇ ಇವೊತ್ತು ನಿಮ್ಮ ಸರ್ಕಾರ ಇರುವಾಗಲೂ ಹೇಳುತ್ತಿದ್ದೇನೆ. ಆದರೆ ಅವೊತ್ತಿನಿಂದ ಇವೊತ್ತಿನವರೆವಿಗೂ ಏನೇನೂ ಬದಲಾವಣೆ ಆಗಿಲ್ಲ. ಸುಮಾರು ಈ ಇಲಾಖೆಯಲ್ಲಿ ಕೆಲಸ ಮಾಡತಕ್ಕವರು ೭೦–೮೦ ಸಾವಿರ ಜನರು ಇರಬಹುದು ಎಂದು ಕಾಣುತ್ತದೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

೪-೦೦ ಪಿ.ಎಂ.

ಶ್ರೀ ಎಂ.ಪಿ. ಪ್ರಕಾಶ್.—೭೦ ಸಾವಿರ ಅಲ್ಲ ೩೮ ಸಾವಿರ ಕೆಲಸಗಾರರು ಇದ್ದಾರೆ.

ಶ್ರೀ ಬೈರಪ್ಪಾಜಿ.—ಸುಮಾರು ೩೮ ಸಾವಿರ ಜನರು ಕೆಲಸ ಮಾಡುವ ಒಂದು ದೊಡ್ಡ ಸಂಸ್ಥೆಯಾಗಿದೆ. ಈ ಸಂಸ್ಥೆಯಲ್ಲಿ ಇರತಕ್ಕ ಲೋಪದೋಷಗಳನ್ನು ಸರಿಪಡಿಸಬೇಕೆಂಬುದೇ ನಮ್ಮ ಪಕ್ಷದ ನೀತಿ. ಖಾಸಗೀಯವರಿಗೆ ಬಸ್‌ಗಳನ್ನು ಓಡಿಸುವುದಕ್ಕೆ ಕೊಡಬೇಕು ಎನ್ನುವ ಸಿದ್ಧಾಂತ ಇಲ್ಲ. ಲೋಪದೋಷಗಳನ್ನು ಕಂಡ ಆ ಕಡೆಯ ಶ್ರೀಮಾನ್ ದೊಡ್ಡಬೋರೇಗೌಡರು ಮತ್ತು ಶ್ರೀಮಾನ್ ಎಂ.ಎಸ್. ಕೃಷ್ಣನ್‌ರವರು ಸಹ ಹೇಳಿದ್ದಾರೆ. ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಹೊರ ರಾಜ್ಯಗಳಿಗೆ ಹೋಗಿ ಅಲ್ಲಿಯ ನಡವಳಿಕೆ ಮತ್ತು ಅಂಶಗಳನ್ನು ನೋಡಿದ ನಂತರವೂ ಸಹ ಅದನ್ನು ಕಾರ್ಯರೂಪಕ್ಕೆ ತರದಿದ್ದರೆ ಏನು ಪ್ರಯೋಜನವಾಗುತ್ತದೆಂದು ನಾನು ಸರ್ಕಾರ ವನ್ನು ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಈ ಒಂದು ಇಲಾಖೆ ಅತ್ಯುತ್ತಮವಾಗಿ ಕೆಲಸ ಮಾಡಬೇಕು ಖಾಸಗೀಯವರು ನಡೆಸುತ್ತಿರುವಂಥಾ ಬಸ್ಸುಗಳ ಬಗ್ಗೆ ಹೇಳಿದರು. ಜನಗಳ ವಿಶ್ವಾಸವನ್ನು ಗಳಿಸಿದ್ದಾರೆ, ಹಣವನ್ನು ಗಳಿಸಿದ್ದಾರೆ ಎಲ್ಲಾ ರೀತಿಯಲ್ಲಿಯೂ ಕೂಡ ಖಾಸಗೀ ಬಸ್‌ಗಳವರು ಉತ್ತಮ ಎನ್ನುವ ಅಭಿಪ್ರಾಯಕ್ಕೆ ಬಂದಿದ್ದಾರೆ. ನಮ್ಮಲ್ಲಿ ಏನಾಗಿದೆ ಈ ಒಂದು ಭಾವನೆ ಬರುವಂತಹ ರೀತಿಯಲ್ಲಿ ಸಂಸ್ಥೆಯು ಕೆಲಸ ಮಾಡುತ್ತಿಲ್ಲ. ಚಾಲಕರ ಮತ್ತು ನಿರ್ವಾಹಕರ ಉಪಟಳ ಜಾಸ್ತಿ ಯಾಗಿದೆ. ಎಲ್ಲಾ ನಿರ್ವಾಹಕರು ಆ ರೀತಿಯಾಗಿದ್ದಾರೆಂದು ಹೇಳುವುದಿಲ್ಲ. ಅವರಿಗೆ ಸರಿಯಾದ ತರಬೇತಿ ಕೊಡುತ್ತಿಲ್ಲ. ನಾನು ಮೊನ್ನೆ ಅರಸೀಕೆರೆಗೆ ಹೋಗಿದ್ದೆ. ಅಲ್ಲಿರತಕ್ಕ ಆಫೀಸ್‌ನೊಳಗೆ ಹೋಗಿ ನಾನೊಬ್ಬ ಶಾಸಕ ಊರಿಗೆ ಹೋಗಬೇಕಾಗಿದೆ ಅದಕ್ಕಾಗಿ ಬಸ್ಸಿನ ವ್ಯವಸ್ಥೆ ಹೇಗಿದೆ ಎಂದು ಕೇಳಿದ್ದಕ್ಕೆ ಅವರು ಕುಳಿತುಕೊಳ್ಳಿ ಎಂದು ಹೇಳತಕ್ಕಂಥಾ ಸೌಜನ್ಯ ಕೂಡ ಅವರಲ್ಲಿರಲಿಲ್ಲ. ಈ ರೀತಿಯ ಲೋಪದೋಷಗಳು ಜನರ ಮನಸ್ಸಿನ ಮೇಲೆ ಪರಿಣಾಮ ಮಾಡತಕ್ಕಂಥ ರೀತಿಯಲ್ಲಿ ನಡೆಯುತ್ತಿವೆ. ಕೆಲವು ಸ್ನೇಹಿತರು ಇದರಿಂದ ಅಷ್ಟು ಲಾಸ್ ಆಗುವುದಿಲ್ಲವೆಂದು ಹೇಳಿದರು, ಸ್ಪೇರ್ ಪಾರ್ಟ್ಸ್‌ಗಳನ್ನು ಕೊಳ್ಳುವುದರಲ್ಲಿ, ಟೈರುಗಳನ್ನು ಕೊಳ್ಳುವುದರಲ್ಲಿ ಚಾಸಿಸ್ ಕೊಳ್ಳುವುದರಲ್ಲಿ ಮೋಸವಾಗುತ್ತದೆಂದು ಹೇಳಿದರು. ರಿಪೋರ್ಟ್‌ಗಳ ಆಧಾರದ ಮೇಲೆ ಮೋಸವಾಗುತ್ತಿವೆಯೆಂದು ಹೇಳುತ್ತಿದ್ದಾರೆ. ಇಷ್ಟೆಲ್ಲಾ ವರದಿ ಇದ್ದರೂ ಕೂಡ ಯಾರು ಎಲ್ಲಿ ತಪ್ಪು ಮಾಡುತ್ತಾರೆ, ಆ ತಪ್ಪನ್ನು ಸರಿಪಡಿಸುವುದಕ್ಕೆ ತಾವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? ಈ ರೀತಿಯಾಗಿ ಸಂಸ್ಥೆಗೆ ಹೆಚ್ಚಿನ ಪ್ರಮಾಣದಲ್ಲಿ ಲುಕ್ಸಾನು ಆಗುತ್ತಿರುವುದನ್ನು ತಪ್ಪಿಸುವುದಕ್ಕೆ ಏನು ಕ್ರಮ ಕೈಗೊಂಡಿ ದ್ದೀರಿ? ಇದರಿಂದ ರಾಜ್ಯದಲ್ಲಿ ಅನಾನುಕೂಲ ಉಂಟಾಗಿ ಬರತಕ್ಕಂಥಾ ಹಣ ಕೂಡ ಪೋಲಾಗು ತ್ತಿದೆ ಮತ್ತು ರಾಜ್ಯದ ಜನತೆಗೂ ಕೂಡ ಅನಾನುಕೂಲವಾಗುತ್ತದೆ. ಈ ಎಲ್ಲಾ ದೃಷ್ಟಿಯಿಂದ ಸಂಸ್ಥೆಯು ಉತ್ತಮವಾಗಿ ಕೆಲಸ ಮಾಡಬೇಕು ಜನರ ಹಿತವನ್ನು ರಕ್ಷಣೆ ಮಾಡತಕ್ಕಂಥ ರೀತಿಯಲ್ಲಿ ಕೆಲಸ ಮಾಡಬೇಕೆನ್ನುವುದೇ ನಮ್ಮ ಉದ್ದೇಶ. ಅದಕ್ಕೆ ೪-೬ ಸಲಹೆಗಳನ್ನು ನಾವು ಕೊಟ್ಟಿದ್ದೇವೆ. ಮತ್ತು ಕೊಡುತ್ತಿದ್ದೇವೆ. ೧೯೬೪ರಲ್ಲಿ ಬಸ್ಸುಗಳನ್ನು ರಾಷ್ಟ್ರೀಕರಣ ಮಾಡಿದರು. ನಾನು ಆಗ ಪ್ರಜಾ ಸೋಷಲಿಸ್ಟ್ ಪಕ್ಷದಿಂದ ಚುನಾಯಿತನಾಗಿ ಬಂದಿದ್ದೆ. ತತ್ವದ ಆಧಾರದ ಮೇಲೆ ನೀತಿಯ ಆಧಾರದ ಮೇಲೆ ಈ ದೇಶದ ಜನತೆಯು ಕಷ್ಟವನ್ನು ಎಷ್ಟು ಕಾಲ ಎಷ್ಟು ಪ್ರಮಾಣದಲ್ಲಿ ಅನುಭವಿಸ ಬೇಕು ಎನ್ನುವುದನ್ನು ನಾನು ಸರ್ಕಾರಕ್ಕೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ಇಷ್ಟು ದೊಡ್ಡ ಸಂಸ್ಥೆ ಯಲ್ಲಿ ತಪ್ಪಾಗುತ್ತದೆ, ಆದರೆ ಆ ತಪ್ಪನ್ನು ಸರಿಪಡಿಸತಕ್ಕಂಥಾ ರೀತಿಯಲ್ಲಿ ಕೆಲಸವನ್ನು ಮಾಡಬೇಕು ಇದನ್ನು ಅರಿತು ಸರ್ಕಾರ ಎಲ್ಲಿ ಲೋಪದೋಷಗಳಿವೆ, ಎಲ್ಲಿ ಅನ್ಯಾಯ ನಡೆಯುತ್ತಿದೆ ಅವುಗಳ ಬಗ್ಗೆ ಗಮನ ಹರಿಸಿ ಸಂಸ್ಥೆಯ ಹಿತದೃಷ್ಟಿಯಿಂದ ಮತ್ತು ಜನತೆಯ ಹಿತದೃಷ್ಟಿಯಿಂದ ಸರಿಪಡಿಸತಕ್ಕ ವ್ಯವಸ್ಥೆಯನ್ನು ಕೈಗೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಸುಮಾರು ೧೪ ಕೋಟಿ ಎಂದು ತಾವು ಹೇಳಿದ್ದೀರಿ. ಇದು ವರ್ಷೇ ವರ್ಷ ಜಾಸ್ತಿಯಾಗುತ್ತಿದೆ. ಇದನ್ನು ಆದಷ್ಟು ಕಡಿಮೆ ಮಾಡಬೇಕು ಬೇರೆ ರಾಜ್ಯಗಳಲ್ಲೂ ಕೂಡ ಲಾಸಾಗುತ್ತಿದೆ. ಕೆಲವು ರಾಜ್ಯಗಳಲ್ಲಿ ಲಾಭವನ್ನು ಗಳಿಸಿದೆ. ಇದೇ ರೀತಿ ವರ್ಷ ವರ್ಷ ಮುಂದುವರಿಸಿಕೊಂಡು ಹೋಗದಂತೆ ಸರ್ಕಾರ ಯೋಚನೆ ಮಾಡಬೇಕು.

ಇನ್ನು ಆಕ್ಸಿಡೆಂಟ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಬಹು ಭಾಗ ಆಕ್ಸಿಡೆಂಟ್ ಆಗು ತ್ತಿರುವುದನ್ನು ನಾವು ದಿನಬೆಳಗ್ಗೆ ಪತ್ರಿಕೆಗಳಲ್ಲೂ ನೋಡುತ್ತಿರುತ್ತೇವೆ. ಎರಡು ಕೆ.ಎಸ್.ಆರ್.ಟಿ.ಸಿ ಬಸ್ ಮೊದಲು ಆಕ್ಸಿಡೆಂಟ್ ಆಯಿತು. ಆಕ್ಸಿಡೆಂಟ್ ಆದ ಬಸ್ಸಿಗೆ ಇನ್ನೊಂದು ಕೆ.ಎಸ್.ಆರ್.ಟಿ.ಸಿ ಬಸ್ ಬಂದು ಡಿಕ್ಕಿ ಹೊಡೆಯಿತು ಎಂದು ಕೇಳಿರುತ್ತೇವೆ. ಇದಕ್ಕೆ ಕಾರಣ ಏನು? ಅನೇಕ ಡ್ರೈವರ್‌ಗಳು ಕುಡಿದ ಅಮಲಿನಲ್ಲಿ ಇದ್ದಾಗ ಈ ಅಪಘಾತಗಳು ಆಗುತ್ತವೆ ಎನ್ನುವುದನ್ನು ಪದೇ

ವರದಿ ಮಾಡಿದ್ದಾರೆ. ಕುಡಿದ ಅಮಲಿನಲ್ಲಿದ್ದಾಗ ಬಸ್ಸುಗಳನ್ನು ಡ್ರೈವ್ ಮಾಡತಕ್ಕದ್ದನ್ನು ತಪ್ಪಿಸಿ ಕಠಿಣ ಶಿಕ್ಷೆಯನ್ನು ವಿಧಿಸತಕ್ಕ ಒಂದು ನಿಯಮವನ್ನು ನೀವು ಏತಕ್ಕೆ ತರಬಾರದು? ಅವರಿಗೆ ೭ ಕೋಟಿ ರೂಪಾಯಿಗಳನ್ನು ಕಾಂಪನ್‌ಸೇಷನ್ ಕೊಟ್ಟಿದ್ದೀರಿ, ಆ ಕಾಂಪನ್‌ಸೇಷನ್ ಉಳಿಯುವುದಿಲ್ಲವೇ ಎನ್ನುವುದನ್ನು ಯೋಚನೆ ಮಾಡಬೇಕು. ೧೦೦ಕ್ಕೆ ೯೦ ಭಾಗ ಆಕ್ಸಿಡೆಂಟ್ ಆಗುವುದಕ್ಕೆ ಕುಡಿದ ಅಮಲಿನಲ್ಲಿ ವಾಹನಗಳನ್ನು ನಡೆಸುವುದೇ ಕಾರಣ ಎಂದು ಹೇಳತಕ್ಕಂಥದ್ದು ಜನಜನಿತವಾಗಿರತಕ್ಕ ಅಂಶ. ಈ ಬಗ್ಗೆ ಮಾನ್ಯ ಮಂತ್ರಿಗಳು ಈ ಅಪರಾಧವನ್ನು ಮಾಡಿದಂತ ಚಾಲಕನಿಗೆ ಕಠಿಣ ಸಜೆಯನ್ನು ಕೊಡತಕ್ಕಂಥ ನಿಯಮವನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಈ ವರದಿಗಳ ಬಗ್ಗೆ ಈಗಾಗಲೇ ಮಾತನಾಡಿದ್ದಾರೆ. ಈ ಬಗ್ಗೆ ಹಳೇ ಟೈರು ಹಾಕಿದ್ದಾರೆಯೋ ಅಥವಾ ಮಾರ್ವಾಡಿ ಅಂಗಡಿಗಳಿಂದ ತಂದು ಹಾಕಿರುತ್ತಾರೋ ಇಂಥವುಗಳನ್ನೆಲ್ಲಾ ಕಡಿಮೆ ಮಾಡುವುದಕ್ಕಾಗುವುದಿಲ್ಲವೇ? ನಿಮ್ಮ ಕಣ್ಣು ಮುಂದೆ ಹಾಗೂ ಸರ್ಕಾರದ ಕಣ್ಣು ಮುಂದೆ ಇವೆಲ್ಲಾ ನಡೆಯುತ್ತಿವೆಯಲ್ಲಾ? ಇವುಗಳನ್ನು ತಪ್ಪಿಸುವುದಕ್ಕೆ ಏಕೆ ಪ್ರಯತ್ನ ಮಾಡಬಾರದು ಎನ್ನುವುದನ್ನು ಮತ್ತೊಮ್ಮೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬಾಡಿ ಬಿಲ್ಡಿಂಗ್‌ಗಾಗಿ ನಿಮ್ಮಲ್ಲಿ ವ್ಯವಸ್ಥಿತವಾದ ವರ್ಕ್‌ಷಾಪುಗಳಿವೆ. ಬೆಂಗಳೂರಿನಲ್ಲಿವೆ, ಮತ್ತು ಬೇರೆ ಬೇರೆ ವಿಭಾಗಗಳಲ್ಲಿವೆ. ಆದರೂ ಕೂಡ ಖಾಸಗಿಯವರಿಗೆ ಕೊಡತಕ್ಕಂಥ ಉದ್ದೇಶವಾದರೂ ಏನು? ಏತಕ್ಕೆ ಕೊಡಬೇಕು? ನಿಮ್ಮಲ್ಲಿ ಮೆಕ್ಯಾನಿಕ್ಸ್ ಇಲ್ಲವೇ? ಅದಕ್ಕೆ ಸಂಬಂಧಪಟ್ಟ ನೌಕರರನ್ನು ನೇಮಿಸಿಕೊಂಡಿಲ್ಲವೇ? ಇಲ್ಲಾ ವ್ಯವಸ್ಥೆಯನ್ನು ಇಟ್ಟುಕೊಂಡು, ನೀವು ಬೇರೆಯವರಿಗೆ ಕೊಟ್ಟು ಲಕ್ಷಾಂತರ ರೂಪಾಯಿಗಳನ್ನು ಈ ಒಂದು ಸಂಸ್ಥೆಗೆ ಲಾಸಾಗುವ ರೀತಿಯಲ್ಲಿ ತಾವು ವ್ಯವಹರಿಸುತ್ತಿದ್ದೀರಾ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ವಿನಯತೆಯ ಬಗ್ಗೆ ಮತ್ತು ಸಾರ್ವಜನಿಕರ ಜೊತೆ ಹೇಗೆ ನಡೆದುಕೊಳ್ಳಬೇಕು ಎನ್ನುವ ಬಗ್ಗೆ ಕಂಡಕ್ಟರ್ಸ್ ಹಾಗೂ ಡ್ರೈವರುಗಳಿಗೆ ಮತ್ತು ಈ ಇಲಾಖೆಯಲ್ಲಿ ಕೆಲಸ ಮಾಡತಕ್ಕವರಿಗೆ ಅದರಲ್ಲೂ ಬಹು ಮುಖ್ಯವಾಗಿ ಕಂಡಕ್ಟರ್ಸ್ ಅವರಿಗೆ ತರಬೇತಿಯನ್ನು ಕೊಡಬೇಕೆಂದು ಹೇಳುತ್ತೇನೆ. ಈ ಬಗ್ಗೆ ತಾವು ಗಮನವನ್ನು ಹರಿಸಬೇಕು. ಈ ಸಂಸ್ಥೆ ಹೋದರೆ, ಸಾವಿರಾರು ಜನರ ಜೀವನಕ್ಕೆ ತೊಂದರೆಯಾಗುತ್ತದೆ. ವರ್ಷೇ ವರ್ಷೇ ಕೋಟಿಗಟ್ಟಲೆ ಲಾಸ್ ಆಗುತ್ತಿದೆ. ತಾವು ಕೆಲವರಿಗೆ ವಿನಾಯಿತಿ ಕೊಟ್ಟಿದ್ದೀರಿ. ವೃದ್ಧರಿಗೆ, ವಿದ್ಯಾರ್ಥಿಗಳಿಗೆ ರಿಯಾಯಿತಿಯನ್ನು ಕೊಟ್ಟಿದ್ದೀರಿ, ಸಂತೋಷ. ಆದರೆ ಸರ್ಕಾರ ಆ ನಷ್ಟವನ್ನು ತುಂಬಬೇಕು. ಸರ್ಕಾರದಿಂದ ಆ ನಷ್ಟವನ್ನು ಪಡೆಯುವುದಕ್ಕೆ ಏನು ಕ್ರಮವನ್ನು ಕೈಗೊಂಡಿದ್ದೀರಿ? ಸಂಸ್ಥೆಯ ಮೇಲೆ ಸಾಕಷ್ಟು ಕೆಟ್ಟ ಹೆಸರು ಬರುತ್ತಿದೆ. ಇದನ್ನು ತಪ್ಪಿಸುವುದಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ? ದಿನೇ ದಿನೇ ವಿನಾಶದ ಕಡೆಗೆ ಹೋಗುತ್ತೀರೇ ವಿನಹ ಅಭಿವೃದ್ಧಿ ಕಡೆಗೆ ಬರುತ್ತಿಲ್ಲ. ಆದುದರಿಂದ ಇದನ್ನು ಈ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಈ ಸಂಸ್ಥೆಯ ಗುಣಮಟ್ಟ ಮತ್ತು ಸೋರುವಿಕೆ, ಇವೆಲ್ಲವನ್ನೂ ಸರಿಪಡಿಸಿ ಉತ್ತಮ ಸ್ಥಿತಿಗೆ ತರುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು, ಈ ಮೂಲಕ ಸರ್ಕಾರಕ್ಕೆ ಸೂಚನೆ ಕೊಡಲು ಇಷ್ಟಪಡುತ್ತೇನೆ.

ಇನ್ನು ಮೋಟಾರ್ ವೆಹಿಕಲ್ ಡಿಪಾರ್ಟ್‌ಮೆಂಟ್, ಇದು ಹೆಚ್ಚಿಗೆ ಖರ್ಚಿಲ್ಲದ, ಸರ್ಕಾರದ ಬೊಕ್ಕಸಕ್ಕೆ ಹಣ ಬರತಕ್ಕಂಥ ಇಲಾಖೆಯಾಗಿದೆ ಹೆಚ್ಚು ಹಣ ಬರುತ್ತದೆ, ಹೆಚ್ಚು ಖರ್ಚು ಕೂಡ ಆಗುತ್ತಿಲ್ಲ. ಇವುಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಮತ್ತು ಸೋರುವಿಕೆಯನ್ನು ಏತಕ್ಕೆ ಕಡಿಮೆ ಮಾಡುವುದಕ್ಕಾಗುವುದಿಲ್ಲ. ಬರೀ ಬಾಯಿಯಲ್ಲಿ ಭ್ರಷ್ಟಾಚಾರ ಆಗುತ್ತದೆ, ಲಂಚ ನಡೆಯುತ್ತಿದೆ, ಕೋಟ್ಯಾಂತರ ರೂಪಾಯಿ ಹೋಗುತ್ತಿದೆ ಎಂದು ಹೇಳುತ್ತಿದ್ದರೆ ಏನು ಪ್ರಯೋಜನವಾಗುತ್ತದೆ? ಬರೀ ಬಾಯಿಯಲ್ಲಿ ಹೇಳಿದರೆ ಏನು ಪ್ರಯೋಜನವಾಗುತ್ತದೆ?

ಶ್ರೀ ಎಂ.ಪಿ. ಪ್ರಕಾಶ್.—ಕಡಿಮೆ ಮಾಡಿದ್ದರಿಂದ, ಈ ವರ್ಷ ೧೭ ಕೋಟಿ ರೂಪಾಯಿ ಹೆಚ್ಚು ವಸೂಲಾಗಿದೆ.

ಶ್ರೀ ಬೈರಪ್ಪಾಜಿ.—ಆಗಿದೆ, ಅದನ್ನು ನಾನು ಒಪ್ಪುತ್ತೇನೆ. ಇನ್ನೂ ಕೂಡ ಹೆಚ್ಚು ಬರುವುದಕ್ಕೆ ಅವಕಾಶ ಇದೆ. ಎರಡು ಪರ್ಸೆಂಟ್ ಸೋರಿ ಹೋಗುತ್ತಿದೆ ಎನ್ನುವುದನ್ನು ಅನೇಕ ಸ್ನೇಹಿತರು ಹೇಳಿದ್ದಾರೆ, ನಾನೂ ಕೂಡ ಹೇಳುತ್ತಿದ್ದೇನೆ. ಇನ್ನೂ ಇದರ ಕಾರ್ಯ ವ್ಯಾಪ್ತಿಯನ್ನು ಉತ್ತಮಪಡಿಸಿ, ಎಲ್ಲಿ ಲೋಪವಿದೆ ಅದನ್ನು ಕಂಡುಹಿಡಿದು, ಸರ್ಕಾರಕ್ಕೆ ಇನ್ನು ಹೆಚ್ಚಿಗೆ ಆದಾಯ ಬರುವುದಕ್ಕೆ ವ್ಯವಸ್ಥೆ ಮಾಡಿ ಎಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಇನ್ನು ತೋಟಗಾರಿಕೆ ಇಲಾಖೆ ವಿಚಾರದಲ್ಲಿ ಹೇಳುವುದಾದರೆ, ಮಾನ್ಯಮಂತ್ರಿಗಳು ಈ ಒಂದು ಇಲಾಖೆಯನ್ನು ವಹಿಸಿಕೊಂಡ ಮೇಲೆ ಬಹುಶಃ ಉತ್ತಮ ಸ್ಥಿತಿಗೆ ಬಂದಿಲ್ಲ. ಈ ಬಗ್ಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ತಿಪಟೂರು ಮತ್ತು ತುರುವೇಕೆರೆ ತಾಲ್ಲೂಕು ಈ ಭಾಗಗಳಲ್ಲಿ ತೆಂಗಿನ ಗಿಡಗಳಿಗೆ ಕರಿತಲೆ ಹುಳುಗಳು ಬಿದ್ದು, ತೋಟಗಳು ನಾಶವಾಗುತ್ತಿವೆ ಎಂದು ಈ ಶಾಸನ ಸಭೆಯಲ್ಲಿ ಹೇಳಿದ್ದಾಯಿತು, ಹೊರಗಡೆಯೂ ಹೇಳಿದ್ದಾಯಿತು, ಅಧಿಕಾರಿಗಳಿಗೆ ಹೇಳಿದ್ದಾಯಿತು. ಇದನ್ನು ನಿಲ್ಲಿಸುವುದಕ್ಕೆ ಇನ್ನೂ ಕೂಡ ಸಿಬ್ಬಂದಿಯನ್ನು ತುರುವೇಕೆರೆ ತಾಲ್ಲೂಕಿಗೆ ಕಳುಹಿಸಿಕೊಟ್ಟಿಲ್ಲ. ಇದು ಲಘುವಾಗಿ ಕಾಣತಕ್ಕ ವಿಚಾರವಲ್ಲ. ಒಂದು ಗಿಡ ಬೆಳೆಸಬೇಕಾದರೆ, ಒಂದು ತೋಟ ಬೆಳೆಸಬೇಕಾದರೆ, ಹತ್ತಾರು ವರ್ಷಗಳ ಕಾಲ ಕಷ್ಟ ಪಡಬೇಕು. ಅವನ ಕಷ್ಟ ಅವನ ಹೆಂಡತಿಮಕ್ಕಳು ಅನುಭವಿಸಿದ ಕಷ್ಟ ಹೇಳತೀರದು. ಬಹಳ ಕಷ್ಟದ ಪರಿಸ್ಥಿತಿಯಲ್ಲಿ ಬೆಳೆಸಿರುತ್ತಾರೆ. ಇಲಾಖೆಯಲ್ಲಿ ಬೇಕಾದಷ್ಟು ಸಿಬ್ಬಂದಿ ಇದೆ. ಸಿಬ್ಬಂದಿ ಕೊರತೆ ಇಲ್ಲ, ಬೇಕಾದಷ್ಟು ಸಿಬ್ಬಂದಿ ಇದ್ದರೂ ಕೂಡ ಇಲ್ಲಿ ಇಂತಹ ಸಮಸ್ಯೆಗಳು ಬರುತ್ತಿವೆ. ಇಂತಹ ರೋಗಗಳು ಕಾಣುತ್ತಿವೆ. ತಕ್ಷಣ ಸಿಬ್ಬಂದಿ ಹೋಗಿ, ರೈತರಿಗೆ ನೆರವನ್ನು ಕೊಡತಕ್ಕಂಥದ್ದು ತಿಳುವಳಿಕೆಯನ್ನು ಕೊಡತಕ್ಕಂಥದ್ದನ್ನು ಮಾಡದೇ ಇದ್ದರೆ, ಈ ಇಲಾಖೆ ಇದ್ದರೆ ಎಷ್ಟು, ಇಲ್ಲದಿದ್ದರೆ ಎಷ್ಟು? ಎಂದು ಮಾನ್ಯ ಮಂತ್ರಿಗಳಲ್ಲಿ ಬಹಳ ವ್ಯಸನದಿಂದ ಹೇಳುತ್ತಿದ್ದೇನೆ. ಈ ಕೂಡಲೇ ಎಲ್ಲೆಲ್ಲಿ ರೋಗ ಇದೆ ಎಂಬುದನ್ನು ಕಂಡುಹಿಡಿದು ಅದನ್ನು ಕೂಡಲೇ ತಡೆಗಟ್ಟುವುದಕ್ಕೆ, ನಿವಾರಣೆ ಮಾಡುವುದಕ್ಕೆ, ರೈತರಿಗೆ ಸಹಾಯ ಮಾಡುವುದಕ್ಕೆ ಮುಂದೆ ಬರಬೇಕೆಂದು, ಹೇಳಿ ಸರ್ಕಾರಕ್ಕೆ ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ ಮತ್ತು ತಿಳುವಳಿಕೆಯನ್ನು ಕೊಡುತ್ತಿದ್ದೇನೆ. ಈ ಮಾತನ್ನು ಪದೇ ಪದೇ ಹೇಳಿದ್ದೇನೆ. ತೆಂಗಿನ ತೋಟಗಳಲ್ಲಿ ಸಾಮಾನ್ಯವಾಗಿ ಒಂದು ಎಕರೆಯಲ್ಲಿ ೪೦ ತೆಂಗಿನ ಸಸಿಗಳನ್ನು ಹಾಕುತ್ತಿದ್ದರು, ಆಮೇಲೆ ಇದು ೫೦ ಗಿಡಗಳಿಗೆ ಬಂತು. ಇವತ್ತು ನಿಮ್ಮ ಇಲಾಖೆಯ ಆದೇಶದ ಪ್ರಕಾರ. ಒಂದು ಎಕರೆಯಲ್ಲಿ ೬೦ ತೆಂಗಿನ ಸಸಿಗಳನ್ನು ನೆಡುತ್ತಿದ್ದಾರೆ ಅವರು ಕಾಯಿ ಬೆಳೆಯುವುದಕ್ಕಲ್ಲ, ಬರೀ ತೆಂಗಿನ ಮರಗಳು ಬೆಳೆದಿದೆಯೆಂದು ಹೇಳುವುದಕ್ಕೆ ಇದನ್ನು ಯಾರಾದರೂ ಹೆಡ್ಡರು ಮಾಡತಕ್ಕ ಕೆಲಸ. ನಾನು ಅನೇಕ ಅಧಿಕಾರಿಗಳಿಗೆ ಗಿಡ ನೆಡುವ ಸಮಾರಂಭಗಳಿಗೆ ನನ್ನನ್ನು ಕರೆದುಕೊಂಡು ಹೋದಾಗ, ನೀವು ಇಲಾಖೆಗೆ ಇದರ ಬಗ್ಗೆ ಬರೆಯಿರಿ ಎಂದು ಕಟ್ಟುನಿಟ್ಟಾಗಿ ಹೇಳಿದ್ದೇನೆ. ದಯಮಾಡಿ ಇನ್ನು ಮುಂದೆ ಈ ರೀತಿಯ ತಪ್ಪು ಕೆಲಸವನ್ನು ಮಾಡಬೇಡಿ. ರೈತರಿಗೆ ಅನ್ಯಾಯ ಆಗತಕ್ಕಂಥ ಕೆಲಸಗಳನ್ನು ಕೂಡಲೇ ನಿಲ್ಲಿಸಬೇಕೆಂದು ಹೇಳುತ್ತೇನೆ. ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಒಂದು ಎಕರೆಗೆ ೬೦ ತೆಂಗಿನ ಗಿಡ ಹಾಕುವುದು ಶುದ್ಧಾಂಗ ತಪ್ಪು, ರೈತರಿಗೆ ಯಾವ ರೀತಿಯ ಅನುಕೂಲವೂ ಆಗುವುದಿಲ್ಲ, ಬರೀ ತೆಂಗಿನ ಮರಗಳು ಬೆಳೆದುಕೊಂಡು ಹೋಗುತ್ತವೆಯೇ ವಿನಹ ಕಾಯಿ ಬಿಡುವುದಿಲ್ಲ. ಆದುದರಿಂದ ಕೂಡಲೇ ಸಂಬಂಧಪಟ್ಟ ಇಲಾಖೆಯವರಿಗೆ ತಿಳಿಸಿ, ಒಂದು ಎಕರೆಗೆ ೫೦ ತೆಂಗಿನ ಗಿಡಗಳ ಮೇಲೆ ಬೆಳೆಸಬಾರದು ಎಂದು ಕಟ್ಟುನಿಟ್ಟಾದ ಸೂಚನೆಯನ್ನು ಜಾರಿಗೆ ಕೊಡಬೇಕೆಂದು ಮಾನ್ಯಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಇನ್ನು ಫಾರಂಗಳ ವಿಚಾರವಾಗಿ ಹೇಳಬೇಕಾದರೆ, ಈ ಇಲಾಖೆಯ ಹಿಂದಿನ ನಿರ್ದೇಶಕರು ಒಳ್ಳೆಯ ಸದುದ್ದೇಶವನ್ನು ಇಟ್ಟುಕೊಂಡು ಎಲ್ಲಿ ಸರ್ಕಾರದ ಜಮೀನುಗಳು ಸಿಗುತ್ತವೆಯೋ ಅಲ್ಲೆಲ್ಲಾ ಫಾರಂಗಳನ್ನು ಮಾಡಿದರು. ತಾವು ಕುಣಿಗಲ್ ರಸ್ತೆಯಲ್ಲಿ ಹೋಗಿರಬಹುದು, ಅಲ್ಲಿ ಬೆಂಗಳೂರಿನಿಂದ ಕುಣಿಗಲ್‌ಗೆ ಹೋಗುವ ಮಾರ್ಗದಲ್ಲಿ ಮಾಗಡಿ ತಾಲ್ಲೂಕಿಗೆ ಸೇರಿದ ಒಂದುಕಡೆ ೧೦೧ ಎಕರೆ ಪ್ರದೇಶದಲ್ಲಿ ಗಾಂಧಿ ಫಾರಂನ್ನು ಮಾಡಿದ್ದಾರೆ. ಅದು ಇವತ್ತು ರೈತರ ಹತ್ತಿರ ಇದ್ದರೆ, ಬಹುಶಃ ೪-೫ ಕೋಟಿ ರೂಪಾಯಿಗಳ ಆಸ್ತಿ ಆಗುತ್ತಿತ್ತು. ಇದನ್ನು ನೋಡುವವರೇ ದಿಕ್ಕಿಲ್ಲ, ಗಿಡಗಳನ್ನು ಹಾಕಿದ್ದಾರೆ. ಶ್ರೀಮಾನ್ ಮರಿಗೌಡರು ಯಾವ ಉದ್ದೇಶದಿಂದ ಇದನ್ನು ಮಾಡಿದರು ಎಂಬುದನ್ನು ನನಗೆ ಹೇಳುತ್ತಿದ್ದರು. ಬೈರಪ್ಪಾಜಿಯವರೇ ಹಣ್ಣಿನ ಗಿಡ ಇದ್ದರೆ, ರೈತರು ಒಂದಾದರೂ ಕಿತ್ತು ತಿನ್ನುತ್ತಾರೆ, ರೈತರ ಮಕ್ಕಳಿಗೆ ಇದರಿಂದ ಅನುಕೂಲವಾಗುತ್ತದೆ. ಆದ್ದರಿಂದ ಈ ಫಾರಂಗಳನ್ನು ಒಂದು ತಾಲ್ಲೂಕಿಗೆ ೪-೪ ಆದರೂ ಮಾಡೋಣ ಎಂದು ಹಿಂದೆ ಮಾಡಿದರು. ಇವತ್ತು ಆ ಫಾರಂಗಳ ಬೆಲೆಯನ್ನು ಏನಾದರೂ ನಿಗದಿ ಮಾಡುವುದಾದರೆ, ಬಹುಶಃ ೫೦ ಕೋಟಿ ರೂಪಾಯಿಗಳ ಫಾರಂ ಆಗಬಹುದು.

ಇವತ್ತು ಅದು ೫೦ ಕೋಟಿಗೂ ಮೀರಿ ಆಗಬಹುದು. ಆದರೆ ಅದನ್ನು ನೋಡಿಕೊಳ್ಳುವವರು ಯಾರೂ ಇಲ್ಲ, ದಿಕ್ಕೂ ಇಲ್ಲ. ಆ ಜಮೀನಿಗೆ ಉಕ್ಕೆ ಇಲ್ಲ, ಬೇಲಿ ಇಲ್ಲ, ಅಲ್ಲದೆ ಅದರಿಂದ ಈ ಇಲಾಖೆಗೆ ಏನು ಉತ್ಪತ್ತಿ ಬರುತ್ತಿತ್ತೋ ಅದೂ ಕಡಿಮೆಯಾಗಿದೆ. ಈ ಬಗ್ಗೆ ಮಾನ್ಯ ಮಂತ್ರಿಗಳನ್ನು ನಾನು ಕೇಳುವುದು ಇಷ್ಟೆ. ಅಲ್ಲಿ ಬೆಳೆದಂಥಾ ಹಣ್ಣನ್ನು ಯಾವರೀತಿಯಾಗಿ ಮಾರಾಟ

ಮಾಡುತ್ತಾರೆ. ಎಂದರೆ ಬೆಂಗಳೂರಿನಿಂದ ಯಾರನ್ನೋ ಅಲ್ಲಿಗೆ ಕರೆದುಕೊಂಡು ಹೋಗುವುದು, ಅಲ್ಲಿ ಯಾವುದೋ ರೀತಿಯಲ್ಲಿ ಹರಾಜು ಮಾಡಿಸುವುದು. ೧೦೦ ರೂಪಾಯಿ ಬೆಲೆ ಇದ್ದರೆ ೭೫ ರೂಪಾಯಿಗೆ ಹರಾಜು ಮಾಡಿಸುವುದು ಹಿಗೆಲ್ಲಾ ಆಗುತ್ತಿದೆ. ಇದರಿಂದ ಈ ಇಲಾಖೆಗೆ ಲಕ್ಷಾಂತರ ರೂಪಾಯಿ ಮೋಸವಾಗುತ್ತಿದೆ. ಸಾವಿರಾರು ಎಕರೆ ಫಾರಂಗಳು ಏನು ಇವೆ, ಕೋಟ್ಯಾಂತರ ರೂಪಾಯಿ ಆಸ್ತಿ ಏನು ಇದೆ ಅದನ್ನು ಉತ್ತಮ ಸ್ಥಿತಿಯಲ್ಲಿ ತರುವುದಕ್ಕೆ ಇವತ್ತಿಗೂ ಸಾಧ್ಯವಾಗಿಲ್ಲ. ಆ ಕಾರಣದಿಂದ ನಿಮಗೆ ಎಷ್ಟು ಹಣ ಬರಬೇಕಾಗಿತ್ತೊ, ಅಷ್ಟು ಬರುತ್ತಾ ಇಲ್ಲ. ಇದನ್ನು ಸರಿಪಡಿಸುವುದಕ್ಕಾಗುವುದಾಗಲಿ, ಇದರಲ್ಲಿ ಎಲ್ಲಿ ಲೋಪ ಆಗಿದೆ. ಎಲ್ಲಿ ದೋಷ ಇದೆ ಅದನ್ನು ಕಂಡುಹಿಡಿದು ಆ ದೋಷವನ್ನು ಸರಿಪಡಿಸುವುದಕ್ಕೆ ತಾವು ಏತಕ್ಕೆ ಪ್ರಯತ್ನ ಪಡುತ್ತಾ ಇಲ್ಲ. ಯಾವನೋ ಒಬ್ಬ ಮಾಲಿ ಹಣ್ಣು ಕಿತ್ತುಕೊಂಡು ಹೋದ ಅಲ್ಲಿ ಇದ್ದ ಹಣ್ಣನ್ನು ತಿಂದ ಎಂದು ಅವನನ್ನು ಸಸ್ಪೆನ್ಷನ್ ಮಾಡಿರುವುದು ನನ್ನ ಗಮನಕ್ಕೆ ಬಂದಿದೆ. ಅವನ್ನು ಚೆನ್ನಾಗಿ ಬೆಳೆಸುವಂತೆ ಮಾಡಿದರೆ ಬೇಕಾದರೆ ಅವನೂ ಹಣ್ಣನ್ನು ತಿನ್ನಲಿ ಅವನ ಸಂಸಾರವೂ ಕೂಡ ಹಣನ್ನು ತಿನ್ನಲಿ. ಅಕ್ಕಪಕ್ಕದವರೂ ಕೂಡ ಹಣ್ಣನ್ನು ತಿನ್ನಲಿ, ಬೇಡ ಅನ್ನಬಾರದು. ಆದರೆ ಹೆಚ್ಚು ಫಸಲು ಬರುವ ಹಾಗೆ ಮಾಡತಕ್ಕಂಥಾದ್ದು ಅವನ ಕರ್ತವ್ಯವಾಗಿರಬೇಕು. ನಮ್ಮ ರಾಜ್ಯದಲ್ಲಿ ಉತ್ತಮವಾದ ಸ್ಥಳದಲ್ಲಿ ಕೆಲವು ಫಾರಂಗಳು ಇವೆ. ಅವುಗಳ ಪರಿಸ್ಥಿತಿಯನ್ನು ನೋಡಿದರೆ ಬಹಳ ನೋವಾಗುತ್ತದೆ. ಅನೇಕ ಫಾರಂಗಳು ಒಳ್ಳೆಯ ಸ್ಥಳದಲ್ಲಿದ್ದು ಕೋಟ್ಯಾಂತರ ರೂಪಾಯಿ ಬೆಲೆ ಬಾಳತಕ್ಕಂಥಾ ಆಸ್ತಿಗಳು ಏನು ಇವೆ, ಅದನ್ನು ನೋಡುವವರು ದಿಕ್ಕು ಇಲ್ಲದೆ ಹಾಳಾಗುತ್ತಿವೆ. ಅದು ರಾಜ್ಯದ ಸ್ವತ್ತು ಎಂದು ತಿಳಿದು ಅವುಗಳನ್ನು ಕ್ರಮವಾಗಿ ರೂಡಿಸಬೇಕು, ಅದರಲ್ಲಿ ಹೆಚ್ಚು ಉತ್ಪತ್ತಿ ಮಾಡತಕ್ಕಂಥಾ ವ್ಯವಸ್ಥೆಯನ್ನು ಇದುವರೆಗೂ ಮಾಡಿಲ್ಲಾ. ಇನ್ನು ಮುಂದಾದರೂ ಕೂಡ ಅದರಲ್ಲಿ ಹೆಚ್ಚು ಉತ್ಪತ್ತಿ ಬರುವ ಹಾಗೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಚಿಕ್ಕನಾಯಕನಹಳ್ಳಿಗೆ ಸೇರಿದ ಬೆಳ್ಳಾರ ಫಾರಂ ಏನು ಇದೆ ಅಲ್ಲಿ ಹೈಯೀಲ್ಡಿಂಗ್ ಕೊಡತಕ್ಕಂಥಾ ೧೦ ಸಾವಿರ ತೆಂಗಿನ ಗಿಡಗಳನ್ನು ನೆಡೆಸಿದರು. ಹಿಂದೆ ಅರ್ಥ ಮಂತ್ರಿಗಳಾಗಿದ್ದ ಶ್ರೀ ಎಂ. ವೈ. ಘೋರ್ಪಡೆಯವರನ್ನು ನಾನು ಒಂದು ಸಾರಿ ಅಲ್ಲಿಗೆ ಕರೆದುಕೊಂಡು ಹೋಗಿ ಅಲ್ಲಿ ಆಗಬೇಕಾದಂಥಾ ಕೆಲಸಗಳನ್ನು ಮಾಡಿಸಿದ್ದೆ. ಇವತ್ತು ಅದರ ಬೆಲೆಯನ್ನು ನಿಗದಿ ಮಾಡುವುದಕ್ಕೆ ಹೋದರೆ ೪-೫ ಕೋಟಿ ರೂಪಾಯಿ ಆಗುತ್ತದೆ. ಇವತ್ತು ಅಲ್ಲಿ ಎಷ್ಟು ಸಸಿಗಳು ಇವೆ ಅನ್ನುವುದನ್ನು ನೋಡಿದ್ದೀರಾ ? ಅಲ್ಲಿ ಏನೂ ಕೆಲಸವಾಗಿಲ್ಲಾ, ಹೀಗಾದರೆ ರೈತರಿಗೆ ಏನು ಅನುಕೂಲವಾಗುತ್ತದೆ ? ಈ ಬಗ್ಗೆ ಮಾನ್ಯ ಮಂತ್ರಿಗಳು ಗಮನಿಸಬೇಕು ಎಂದು ಹೇಳುತ್ತೇನೆ. ಈ ಒಂದು ಫಾರಂ ರೈತ ಜನಾಂಗಕ್ಕೇನೇ ಆದರ್ಶಪ್ರಾಯವಾಗಿತ್ತು. ಇದನ್ನು ನೋಡಿ ಬೇರೆ ಜಿಲ್ಲೆಯ ರೈತರೂ ಕೂಡ ಈ ಹೈ ಯೀಲ್ಡಿಂಗ್ ವೆರೈಟಿಯ ಬೆಳೆಯನ್ನು ಬೆಳೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದರು. ಈಗ ಅಲ್ಲಿ ನೋಡಿದರೆ ಯಾವ ಕೆಲಸವೂ ನಡೆಯುತ್ತಾ ಇಲ್ಲ. ಅದು ಮೂಲೆ ಗುಂಪಾಗಿ ಕೆಲಸಕ್ಕೆ ಬಾರದ ಫಾರಂ ಆಗಿದೆ. ಅದರ ಗತಿ ನೋಡಿದರೆ ತಮಗೇ ಗೊತ್ತಾಗುತ್ತದೆ. ಈ ಫಾರಂ ಅನ್ನು ಉತ್ತಮಪಡಿಸುವುದಕ್ಕೆ ಸೂಕ್ತವಾದ ವ್ಯವಸ್ಥೆ ಮಾಡಬೇಕು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ವೆಟರ್ನರಿ ಇಲಾಖೆ ಬಗ್ಗೆ ಹೇಳಬೇಕಾದರೆ ಮಾನ್ಯ ಮಂತ್ರಿಗಳಿಗೆ ೨-೩ ಸಾರಿ ಕಾಗದ ಬರೆದಿದ್ದೇನೆ. ಮೊಕ್ತಾ ಭೇಟಿ ಮಾಡಿದ್ದೇನೆ. ನಮ್ಮ ತಾಲ್ಲೂಕಿನಲ್ಲಿ ೩-೪ ಕಡೆ ಆರ್.ವಿ.ಡಿ. ಗಳನ್ನು ಕೊಟ್ಟಿದ್ದೀರಿ. ಇನ್ನೂ ಕೆಲವು ಕಡೆ ಆಸ್ಪತ್ರೆ ಆಗಬೇಕು. ಕೆಲವು ಕಡೆಗಳಲ್ಲಿ ಡಾಕ್ಟರ್ ಇಲ್ಲ, ಸರಿಯಾದ ಸಿಬ್ಬಂದಿ ಇಲ್ಲ. ಇದರ ಬಗ್ಗೆ ಏನು ವ್ಯವಸ್ಥೆ ಮಾಡುತ್ತೀರಾ ಅನ್ನುವುದನ್ನಾದರೂ ಹೇಳಿ ರೈತನ ಸಂಪತ್ತು ಗೋಸಂಪತ್ತು. ಈ ಗೋವಿಗೆ ಯಾವುದಾದರೂ ಸಾಂಕ್ರಾಮಿಕ ರೋಗ ಬಂದರೆ ರಾಸುಗಳು ಹೋಗುತ್ತದೆ. ಆದುದರಿಂದ ಈ ಬಗ್ಗೆ ಗಮನಹರಿಸಿ ಹೆಚ್ಚು ಹೆಚ್ಚು ಪಶುವೈದ್ಯ ಶಾಲೆಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ಪ್ರಾರಂಭ ಮಾಡಬೇಕು ಅದಕ್ಕೆ ತಕ್ಕಂತೆ ಸಿಬ್ಬಂದಿಯನ್ನು ತಯಾರು ಮಾಡುವ ವ್ಯವಸ್ಥೆ ಮಾಡಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

ಇನ್ನು ಇನ್‌ಸೆಮಿನೇಷನ್ ಬಗ್ಗೆ ಹೇಳಬೇಕಾದರೆ ಇದೂ ಕೂಡ ಅಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಾ ಇಲ್ಲ, ಎಂದು ಮಾನ್ಯ ಮಂತ್ರಿಗಳಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದನ್ನು ಕಡ್ಡಾಯವಾಗಿ ಕಟ್ಟುನಿಟ್ಟಾಗಿ ಹೋಗಿ ನೋಡಬೇಕು. ಯಾರು ಇದನ್ನು ಪ್ರಾರಂಭ ಮಾಡುತ್ತಾರೋ ಅವರು ಅಲ್ಲಿಗೆ ಹೋಗಿ ಇದರಲ್ಲಿ ಲೋಪ ದೋಷ ಏನು ಇದೆ ಎನ್ನುವುದನ್ನು ಕಂಡುಹಿಡಿದು ಇದರ ಬಗ್ಗೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಹಾಲು ಉತ್ಪಾದನೆ ಬಗ್ಗೆ ಹೇಳುವುದಾದರೆ ಕರ್ನಾಟಕ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನವರು ಉತ್ತಮವಾದ ಆಡಳಿತಗಾರರಾದರೂ ಕೂಡ ಏತಕ್ಕೋ ಗೊತ್ತಿಲ್ಲ ಇವತ್ತಿನ ದಿವಸ ಈ ಹಾಲು ಉತ್ಪಾದಕರಿಗೆ ಸರಿಯಾದ ಬೆಲೆ ಸಿಕ್ಕುತ್ತಾ ಇಲ್ಲ. ಇವತ್ತಿನ ದಿವಸ ಹಸುಗಳನ್ನು ಸಾಕುವುದು ಅಷ್ಟು ಸುಲಭವಾದ ಕೆಲಸವಲ್ಲ. ಒಂದು ರಾಸುವಿಗೆ ೫-೬ ಸಾವಿರ ರೂಪಾಯಿ ಕೊಟ್ಟು ಹೊಸದಾಗಿ ಕೊಂಡುಕೊಂಡರೆ ಅವನು ಆ ರಾಸುವಿನ ಮೇವಿಗಾಗಿ ಅದರ ಪೋಷಣೆಗಾಗಿ ಸಾಕಷ್ಟು ಹಣ ಖರ್ಚು ಮಾಡುತ್ತಾನೆ. ಅವನು ತನ್ನ ಮಕ್ಕಳಿಗೂ ಸಹ ಹಾಲನ್ನು ಇಡದೇ ಎಲ್ಲವನ್ನೂ ಮಾರಿ ಕೊಳ್ಳುತ್ತಾನೆ. ಸಾಲ ತೀರಿಸುವುದಕ್ಕೋಸ್ಕರ ಆ ರೀತಿ ಮಾಡುತ್ತಾನೆ. ಆದರಿಂದ ಆ ರೈತನಿಗೆ ಅನುಕೂಲವಾಗತಕ್ಕಂಥಾ ರೀತಿಯಲ್ಲಿ ಬೆಲೆಯನ್ನು ನಿಗದಿ ಮಾಡಬೇಕು ಎಂದು ಹೇಳುತ್ತೇನೆ. ಈಗ ತಾವು ಕೊಡತಕ್ಕಂಥ ಬೆಲೆ ಕಡಿಮೆ ಇದೆ. ಹೀಗೆ ಹೇಳಿದ ಮಾತ್ರಕ್ಕೆ ನಾನು ಗ್ರಾಹಕರಿಗೆ ತೊಂದರೆ ಮಾಡಿ ಎಂದು ಹೇಳುತ್ತಾ ಇಲ್ಲ. ಗ್ರಾಹಕರಿಗೂ ತೊಂದರೆಯಾಗದೇ ಇರುವ ಹಾಗೆ, ಉತ್ಪಾದನೆ ಮಾಡತಕ್ಕಂಥಾ ರೈತನಿಗೂ ಕೂಡ ನ್ಯಾಯವಾದ ಬೆಲೆ ದೊರಕುವಂತೆ ಸರಿಯಾದ ಒಂದು ದೃಷ್ಟಿಯನ್ನಿಟ್ಟುಕೊಂಡು ಈ ಹಾಲಿನ ದರವನ್ನು ನಿಗದಿ ಮಾಡಬೇಕು ಎಂದು ಹೇಳುತ್ತೇನೆ. ಈ ಕೆ.ಡಿ.ಡಿ.ಸಿ. ಯಲ್ಲಿ ಉತ್ತಮವಾದ ಪ್ರಾಮಾಣಿಕರಾದ ದಕ್ಷತೆ ಇರುವ ಅಧಿಕಾರಿಗಳು ಇದ್ದಾರೆ. ಅವರಿಗೆ ಈ ಬಗ್ಗೆ ಹೆಚ್ಚಿನ ಪ್ರೋತ್ಸಾಹ ಬೆಂಬಲ ಅಗತ್ಯ. ಇವತ್ತು ಇಬ್ಬರು ಮಂತ್ರಿಗಳು ಒಳ್ಳೆಯವರಾಗಿದ್ದಾರೆ. ಹಾಗೆಯೇ ಶ್ರೀ ಎಂ. ಪಿ. ಪ್ರಕಾಶ್‌ರವರೂ ಸಹ ಬಹಳ ಪ್ರಾಮಾಣಿಕವಾದ ವ್ಯಕ್ತಿ. ಆದರೂ ಕೂಡ ಇವರೆಲ್ಲರೂ ಸಹ ಒಂದು ಹಿಡಿತಕ್ಕೆ ಸಿಕ್ಕಿ ಸಾಕಷ್ಟು ಕೆಲಸ ಆಗಿಲ್ಲ ಅನ್ನುವ ವ್ಯಸನ ಅವರಿಗೆ ಇದೆ. ಯಾರು ಹೆಚ್ಚಿನ ದಕ್ಷತೆಯಿಂದ ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಾರೋ ಅವರಿಗೆ ತಕ್ಕ ಬೆಂಬಲ ಕೊಡದೇ ಹೋದರೆ ಪ್ರಯೋಜನ ಏನೂ ಆಗುವುದಿಲ್ಲ. ಆದುದರಿಂದ ದಯಮಾಡಿ ಯಾರು ಹೆಚ್ಚಿನ ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಾರೋ ಅವರ ಕಾರ್ಯವ್ಯಾಪ್ತಿಯನ್ನು ಹೆಚ್ಚಿಸಿದರೆ ಈ ಎರಡೂ ಇಲಾಖೆಗಳೂ ಸಹ ಉತ್ತಮವಾಗಿ ಕೆಲಸ ಮಾಡಬಹುದು. ನಮ್ಮ ದೇಶದಲ್ಲಿ ೮೦ ಪರ್ಸೆಂಟ್ ರೈತ ಏನು ಇದ್ದಾರೆ ಆ ರೈತನಿಗೆ ಸರಿಯಾಗಿ ಅನುಕೂಲವಾಗಬೇಕಾದರೆ ಈ ಎರಡು ಇಲಾಖೆಗಳಿಗೆ ಯೇನಿವೆ ಒಂದನೆಯ ವ್ಯವಸಾಯ ಇಲಾಖೆ, ಎರಡನೆಯದು ಈ ಇಲಾಖೆ. ಕ್ಷಾಮ ಬಂದಂಥಾ ಕಾಲದಲ್ಲಿ ನಮ್ಮ ಜಿಲ್ಲೆಯ ಅನೇಕ ಭಾಗದಲ್ಲಿ ಇವರು ಹಾಲು ಮಾರಿ ತಮ್ಮ ಸಂಸಾರವನ್ನು ನಡೆಸಿಕೊಂಡು ಹೋಗುತ್ತಿದ್ದುದನ್ನು ನಾನು ನೋಡಿದ್ದೇನೆ. ಆದುದರಿಂದ ರೈತರ ಬೇಡಿಕೆ ಏನು ಇದೆ ಅದನ್ನು ದಯಮಾಡಿ ಒಪ್ಪಿ, ಈ ಎರಡೂ ಇಲಾಖೆಗಳ ದಕ್ಷತೆಯನ್ನು ಹೆಚ್ಚಿಸಿ ರಾಜ್ಯದಲ್ಲಿರುವ ರೈತ ಜನಾಂಗಕ್ಕೆ ಅನುಕೂಲವಾಗತಕ್ಕಂಥಾ ರೀತಿಯಲ್ಲಿ ಕೆಲಸ ಮಾಡಬೇಕು ಎಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

೪-೩೦ ಪಿ.ಎಂ.

ಉಪಾಧ್ಯಕ್ಷರು.—ಇವತ್ತು ಬೆಳಗ್ಗೆ ಮಾನ್ಯ ಅಧ್ಯಕ್ಷರು ಓದಿದ ರೀತಿಯಲ್ಲಿ ನಾಲ್ಕುವರೆ ಗಂಟೆಗೆ ಚರ್ಚೆ ಮುಗಿಯಬೇಕೆಂದು ಇತ್ತು. ಅನೇಕ ಸದಸ್ಯರುಗಳು ಇದರ ಬಗ್ಗೆ ಮಾತನಾಡಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸಿ ಪತ್ರಗಳನ್ನು ಕಳುಹಿಸಿದ್ದಾರೆ. ಸಮಯದ ಅಭಾವದ ದೃಷ್ಟಿಯಿಂದ ಕೇವಲ ೧೦ ನಿಮಿಷ ಮಾತ್ರ ಕೊಡುತ್ತೇನೆ. ಇನ್ನೂ ೧೦-೧೫ ಸದಸ್ಯರುಗಳ ಪಟ್ಟಿ ಇದೆ. ತಾವು ಗಡಿಯಾರ ನೋಡಿಕೊಂಡು ಸರಿಯಾಗಿ ಹತ್ತು ನಿಮಿಷ ಮಾತ್ರ ಮಾತನಾಡಬೇಕು.

† ಶ್ರೀ ಬಿ. ಧನಂಜಯಕುಮಾರ್ (ಮಂಗಳೂರು).—ಮಾನ್ಯ ಉಪಾಧ್ಯಕ್ಷರೇ, ಇಬ್ಬರು ಸಚಿವರುಗಳಿಗೆ ಸೇರಿದಂಥ, ರಸ್ತೆಸಾರಿಗೆ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಬಗ್ಗೆ ಈ ಸಭೆಯ ಮುಂದೆ ಇಟ್ಟಿರತಕ್ಕಂಥ ಬೇಡಿಕೆಗಳ ಬಗ್ಗೆ ನನ್ನ ಕಡೆಯಿಂದ ಕೆಲವು ಸೂಚನೆಗಳನ್ನು ನೀಡಲಿಕ್ಕೆ ನಾನು ನಿಂತಿದ್ದೇನೆ. ಇವತ್ತು ರಸ್ತೆಸಾರಿಗೆ ಇಲಾಖೆ ಬಗ್ಗೆ ಹೇಳುವುದಾದರೆ, ಇದರಲ್ಲಿ ಬಹಳ ನಷ್ಟವಾಗಿದೆ. ಸನ್ಮಾನ್ಯ ಮಂತ್ರಿಗಳ ಹೆಸರಿಗೆ ತಕ್ಕಹಾಗೆ, ಅವರು ಮಂತ್ರಿಗಳಾದ ಮೇಲೆ ಈ ಇಲಾಖೆ ಪ್ರಕಾಶಮಾನವಾಗಿ ಬೆಳಗುತ್ತದೆಂದು ನಾವು ತಿಳಿದುಕೊಂಡಿದ್ದೆವು. ಅವರು ಮುಂತುವರ್ಜಿ ವಹಿಸಿ ಕೆಲಸ ಮಾಡುತ್ತಿದ್ದಾರೆ. ಆದರೂ ಬಹಳ ಕಷ್ಟ ಇದೆ. ನಿರೀಕ್ಷಿಸಿದ ಪ್ರತಿಫಲ ಸಿಗುತ್ತಿಲ್ಲ ಎಂದು ನಾವು ಹೇಳಬೇಕಾಗಿದೆ. ಇವತ್ತು ಈ ಮೋಟಾರ್ ವಾಹನಗಳ ಒಂದು ಇಲಾಖೆ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಯಲ್ಲಿ ಆಗುತ್ತಿರುವ ತೊಂದರೆಗಳ ಬಗ್ಗೆ ಕಳೆದಬಾರಿ ಕೂಡಾ ನಾನು ಮಾತನಾಡಿದ್ದೆ. ಈ ಮೋಟಾರ್ ವೆಹಿಕಲ್ಸ್ ರೂಲ್ಸ್ ಏನಿದೆ, ಆ ನಿಯಮಗಳ ಕೆಳಗೆ ಕೆಲಸ ಮಾಡುತ್ತಾ ಇರಬೇಕಾದರೆ, ವಾಹನಗಳ ಮಾಲೀಕರಿಗೆ ಯಾವರೀತಿಯಲ್ಲಿ ತೊಂದರೆ ಕೊಡಬೇಕು, ಅದನ್ನು ಹುಡುಕಿ ಕೆಲಸ ಮಾಡುವಂಥ ಅಧಿಕಾರಿಗಳ ಪ್ರವೃತ್ತಿ ಏನಿದೆ, ಅದು ಮೊದಲು ಬದಲಾಗಬೇಕಾಗಿದೆ. ಅನೇಕಸಾರಿ ನಾವು ಕೂಡಾ ಈ ನಿಯಮಗಳಲ್ಲಿ ಸೂಕ್ತ ಬದಲಾವಣೆ ಆಗಬೇಕೆಂದು ಹೇಳಿ ಸೂಚನೆ ಮಾಡುತ್ತಿದ್ದೇವೆ. ಆದರೆ ಇದುವರೆಗೆ ಯಾವುದೇ ರೀತಿಯಾದ ನಿರ್ದಿಷ್ಟ ಕ್ರಮ ಕೈಗೊಂಡಿದ್ದು ಕಾಣಿಸುತ್ತಿಲ್ಲ. ಇವತ್ತು ಈ ಇಲಾಖೆಯಲ್ಲಿ ನಿಜವಾಗಿಯೂ ಹೆಚ್ಚುವರಿ ಸಂಪನ್ಮೂಲ ಬರುತ್ತಿದೆ. ತೆರಿಗೆಗಳನ್ನು ಸಮಯಕ್ಕೆ ಸರಿಯಾಗಿ ವಸೂಲಿ ಮಾಡುವ ಮಹತ್ತರ ಜವಾಬ್ದಾರಿ ಈ ಇಲಾಖೆಯ ಮೇಲಿದೆ. ಜೊತೆಗೆ ಮೋಟಾರ್ ವಾಹನಗಳ ನಿಯಂತ್ರಣದ ದೃಷ್ಟಿಯಿಂದ, ಕಾನೂನನ್ನು ಸದುಪಯೋಗಪಡಿಸಿಕೊಂಡು, ಮೋಟಾರುವಾಹನಗಳನ್ನು ನಿಯಂತ್ರಣ ಮಾಡಬೇಕು. ಆದರೆ ಅನೇಕಬಾರಿ ನಾವು ನೋಡುತ್ತಿದ್ದೇವೆ. ಈ ನಿಯಮಾವಳಿಗಳ ಪ್ರಯೋಜನ ಪಡೆದುಕೊಂಡು, ಯಾವರೀತಿಯಲ್ಲಿ ತೊಂದರೆ ಕೊಡಬೇಕೆಂಬುದನ್ನು ಮಾತ್ರ ಅಧಿಕಾರಿಗಳು ಗಮನಿಸಿದಹಾಗೆ ನಮಗೆ ಕಾಣುತ್ತಿದೆ. ವಾಹನಗಳ ಮಾಲೀಕರು ಇಲಾಖೆಯ ನಿಯಮಾವಳಿಗಳನ್ನು ಸರಿಯಾಗಿ ಪಾಲಿಸದಿದ್ದರೆ, ಅವರ ಮೇಲೆ ಹಾಕತಕ್ಕ ಮೊಕದ್ದಮೆಗಳನ್ನು ನಡೆಸಿಕೊಂಡು ಹೋಗತಕ್ಕ ಇಲಾಖೆಯ ಅಧಿಕಾರಿಗಳಾದ, ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರ್‌ಗಳು ಸುಮಾರು ೬ ಮಂದಿ ಇದ್ದಾರೆ. ಇವರ ಬಗ್ಗೆ ನಾನು ಎರಡು ಮೂರು ಸಲ ಮಾನ್ಯ ಮಂತ್ರಿಗಳಿಗೆ ಮನವಿ ಮಾಡಿಕೊಂಡಿದ್ದೆ, ಈ ಆರು ಮಂದಿಯೂ ಕಾನೂನು ಪದವಿ ಪಡೆದಂಥವರಿದ್ದಾರೆ. ಅವರಿಗೆ ಈ ಒಂದು ಕಾನೂನಿನಲ್ಲಿ ವಿಶೇಷ ಪರಿಣತಿ ಇರುತ್ತದೆ. ಅವರಿಗೆ ಪ್ರತ್ಯೇಕವಾದ ಒಂದು ಕೇಡರ್ ನಿರ್ಮಾಣ ಮಾಡಬೇಕೆಂದು, ಸರಕಾರದ ಯೋಜನೆ ಇತ್ತು. ಜಸ್ಟೀಸ್ ನಾರಾಯಣಪ್ಪ ಆಯೋಗದವರೂ ಸಹ ಸಲಹೆ ಮಾಡಿದ್ದರು. ಕಳೆದ ಎರಡು ಮೂರು ವರ್ಷಗಳಿಂದ ಇದರ ಬಗ್ಗೆ ನಿಧಾನಗತಿಯಲ್ಲಿ ಕೆಲಸ ನಡೆಯುತ್ತಿದೆ. ಪ್ರತ್ಯೇಕ ವರ್ಗದ ರಚನೆ ಇನ್ನೂ ಆಗಿಲ್ಲ. ತಮಗೆಲ್ಲಾ ತಿಳಿದಿರುವಂತೆ, ಇಲಾಖೆಯಲ್ಲಿ ಜಿಲ್ಲಾ ಸಾರಿಗೆ ಅಧಿಕಾರಿ ಆಗಬೇಕಾದರೆ, ಅದಕ್ಕೂ ಬಡ್ತಿ ಕೊಡಬೇಕಾದರೆ, ಕನಿಷ್ಠ ಅರ್ಹತೆ ಕಾನೂನು ಪದವೀಧರರಾಗಿರಬೇಕು. ಅಥವಾ ಲೈಸೆನ್‌ಷಿಯೇಟ್ ಮೆಕ್ಯಾನಿಕಲ್ ಎಂಜಿನಿಯರ್ ಅಥವಾ ಬಿ. ಇ. ಗ್ರಾಜುಯೇಟ್ ಆದವರಿಗೆ ಅವಕಾಶ ಇದೆ. ಆದರೆ ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರ್ಸ್ ಕೂಡಾ ಕಾನೂನು ಪದವೀಧರರಾಗಿದ್ದರೂ ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರ್ ಆಗತಕ್ಕ ಅವಕಾಶ ಇದೆ. ಅಂತಹವರಿಗೂ ಅವರ ವೇತನ ಶ್ರೇಣಿಯಲ್ಲಿ ಅವರ ಒಂದು ವರ್ಗದಲ್ಲಿ ಕೂಡಾ ತುಂಬಾ ಅಂತರ ಇರುವಂಥಾದ್ದು ನಾವು ನೋಡುತ್ತೇವೆ. ಇದನ್ನು ಈಗಲಾದರೂ ಸರಿಪಡಿಸಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಈ ಇಲಾಖೆಯಲ್ಲಿರುವ ಇತರ ಕೆಲವು ವಿಚಾರಗಳನ್ನು ನಾನು ಹೇಳಬೇಕಾಗಿದೆ. ಇವತ್ತು ಸಾಮಾನ್ಯವಾಗಿ ಸಾರಿಗೆ ಹೆಚ್ಚು ಸಂಪನ್ಮೂಲ ಒದಗಿಸಿಕೊಡುವ ಇಲಾಖೆ ಎಂದು ಹೇಳಿಕೊಂಡು, ನಮಗೆ ಹೆಚ್ಚು ಸಂಪನ್ಮೂಲ ಕೊಡಿಸಬೇಕೆಂದು ಏತಕ್ಕೆ ವಾಹನ ತೆರಿಗೆಯನ್ನು ಹೆಚ್ಚು ಮಾಡಬೇಕು? ಪ್ರತಿವರ್ಷ ಬಜೆಟ್ ಬರುವಾಗ ಎಲ್ಲರೂ ನಿರೀಕ್ಷಣೆ ಮಾಡುವಂಥಾದ್ದು ಮೋಟಾರ್ ವಾಹನಗಳ ತೆರಿಗೆ ಹೆಚ್ಚಾಗಬಹುದು, ಪೆಟ್ರೋಲ್, ಡೀಸೆಲ್, ಹೈಸ್ಪೀಡಾಲ್ ಇವುಗಳ ಮೇಲೆ ಹೆಚ್ಚುವರಿ ತೆರಿಗೆ ಹಾಕಿ ಸಂಪನ್ಮೂಲ ಒದಗಿಸುವುದನ್ನು ನಾವು ನೋಡುತ್ತೇವೆ. ಇವೆಲ್ಲಾ ತೆರಿಗೆಗಳ ಒಂದು ಭಾರ ಸಾಮಾನ್ಯ ಜನರ ಮೇಲೆ ಬೀಳುವುದನ್ನೂ ನಾವು ನೋಡುತ್ತಿದ್ದೇವೆ. ಇದನ್ನು ಅವರು ಯಾವ ರೀತಿಯಲ್ಲಿ ಭರಿಸಬೇಕು. ಸುತ್ತಮುತ್ತಲಿರುವ ರಾಜ್ಯಗಳಿಗಿಂತ ನಮ್ಮ ರಾಜ್ಯದಲ್ಲಿ ಈ ತೆರಿಗೆ ಜಾಸ್ತಿ ಇದೆ. ಇದಕ್ಕಾಗಿ ತೆರಿಗೆಯನ್ನು ತಪ್ಪಿಸುವಂಥ ಅನೇಕ ತಂತ್ರಗಳನ್ನು ನಮ್ಮ ವಾಹನ ಮಾಲೀಕರು ಮಾಡುತ್ತಿದ್ದಾರೆ. ನೆರೆ ರಾಜ್ಯಗಳಿಗೆ ಹೋಗಿ, ನೋಂದಣಿ ಮಾಡಿಕೊಂಡು ಬಂದು, ನಮ್ಮ ರಾಜ್ಯದ ರಸ್ತೆಗಳನ್ನು ಉಪಯೋಗಿಸಿಕೊಂಡು ಲಾಭವನ್ನು ಗಳಿಸುತ್ತಿದ್ದಾರೆ. ಇದನ್ನು ತಪ್ಪಿಸಲಿಕ್ಕೆ ತೆರಿಗೆಗಳಲ್ಲಿ ಸಾಕಷ್ಟು ಕಡಿತವನ್ನು ಮಾಡಬೇಕು. ತೆರಿಗೆಗಳನ್ನು ಕಡಿಮೆ ಮಾಡಿದರೂ ಹೆಚ್ಚಿನ ಒಂದು ಸಂಪನ್ಮೂಲ ಗಳಿಸಲಿಕ್ಕೆ ಸಾಧ್ಯವಾಗಬಹುದು. ಸರಿಯಾಗಿ ಈ ಒಂದು ತೆರಿಗೆಯನ್ನು ವಸೂಲು ಮಾಡಿದರೆ ಅವಕಾಶ ಆಗಬಹುದು. ಇದರ ಬಗ್ಗೆ ನಿಜವಾಗಿಯೂ ಇವತ್ತು ಸರಕಾರ ಗಮನಹರಿಸಬೇಕು. ಇವತ್ತು ಮೊಪೆಡ್ಸ್ ಏನಿವೆ, ಶ್ರೀಸಾಮಾನ್ಯರು ಉಪಯೋಗ ಮಾಡತಕ್ಕ ಸಣ್ಣ ವಾಹನಗಳು, ಇದಕ್ಕೂ, ಸ್ಕೂಟರ್ ಮುಂತಾದ ದ್ವಿಚಕ್ರ ವಾಹನಗಳಿಗೆ ಹಾಕುವಷ್ಟು ತೆರಿಗೆಯನ್ನು ವಿಧಿಸಿರುವುದು ಶೋಚನೀಯ. ಇವತ್ತು ಸಾಮಾನ್ಯ ಜನತೆಗೆ ಅನುಕೂಲವನ್ನು ಮಾಡಬೇಕಾಗಿದ್ದರೆ, ಮೊದಲು ಈ ವಾಹನಗಳಿಗೆ ಹಾಕಿರತಕ್ಕ ತೆರಿಗೆಯನ್ನು ಕಡಿಮೆ ಮಾಡಬೇಕು. ಇದನ್ನು ಮಾಡಬೇಕೆಂದು ನಾನು ಸರಕಾರಕ್ಕೆ ಒತ್ತಾಯ ಮಾಡುತ್ತೇನೆ. ಇನ್ನು ಒಂದು ಹಾಸ್ಯಾಸ್ಪದವಾದ ವಿಚಾರ ಇದೆ. ಈ ಟಿ.ವಿ.ಎಸ್. ಮುಂತಾದ ಮೊಪೆಡ್‌ಗಳಲ್ಲಿ

ಒಬ್ಬ ಚಾಲಕ ಇದ್ದಾಗ ಶಿರಸ್ತ್ರಾಣ ಧರಿಸಬೇಕೆಂದು ಇಲ್ಲ. ಇಬ್ಬರು ಹೋದಾಗ ಶಿರಸ್ತ್ರಾಣವನ್ನು ಧರಿಸಬೇಕೆಂಬ ವಿಚಿತ್ರವಾದ ಕಾನೂನು ಜಾರಿಯಲ್ಲಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಹರಿಸಬೇಕು. ಇದೇ ರೀತಿ ದೊಡ್ಡ ಬಸ್ಸುಗಳು ಮತ್ತು ಲಾರಿಗಳಿಗೆ ಬೇಕಾದಂಥ ಚಾಸಿಸ್ ಇದೂ ಸಹ ಪಕ್ಕದ ರಾಜ್ಯಗಳಲ್ಲಿ ಕಡಿಮೆ ಬೆಲೆಗೆ ಸಿಗುತ್ತದೆ. ಅವುಗಳನ್ನು ಅಲ್ಲಿ ಖರೀದಿ ಮಾಡುವುದು, ಅವುಗಳಿಗೆ ಬಾಡಿ ಕಟ್ಟಿಸುವಂಥ ಕೆಲಸ, ಫೈಬರ್‌ಗ್ಲಾಸ್ ಬಾಡಿ ಸಹ ಪಕ್ಕದ ಪ್ರಾಂತ್ಯಗಳಲ್ಲಿ ಕಡಿಮೆ ವೆಚ್ಚದಲ್ಲಿ ಆಗುತ್ತದೆ ಎಂದು ಹೇಳಿಕೊಂಡು ವಾಹನಗಳ ಮಾಲೀಕರು ಇದರ ಪ್ರಯೋಜನ ಪಡೆದು ಕೊಳ್ಳುತ್ತಿದ್ದಾರೆ. ಈ ಫೈಬರ್‌ಗ್ಲಾಸ್ ಬಾಡಿಯಿಂದ ವಾಹನಗಳು ಹೆಚ್ಚು ಕಾಲ ಬಾಳಿಕೆ ಬರುತ್ತವೆ. ಇದೇ ರೀತಿಯಲ್ಲಿ ಕಡಿಮೆ ವೆಚ್ಚದಲ್ಲಿ ವಾಹನಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಅವಕಾಶ ಆಗುತ್ತವೆ. ಇದರ ಬಗ್ಗೆ ಸರಕಾರ ಗಮನ ಹರಿಸಬೇಕು. ನಮ್ಮ ರಾಜ್ಯದಲ್ಲಿಯೂ ಈ ಬಾಡಿ ನಿರ್ಮಾಣಕ್ಕೆ ಅವಕಾಶ ಕಲ್ಪಿಸಿ ಕೊಡಬೇಕು. ಇದಕ್ಕೆ ಸೂಕ್ತವಾದ ಪ್ರೋತ್ಸಾಹ ಕೊಟ್ಟರೆ ಇದರಿಂದ ನಮಗೆ ಉಳಿತಾಯ ಆಗಬಹುದು. ಇನ್ನು ತಮ್ಮ ವರದಿಯಲ್ಲಿ ತೋರಿಸಿದ ಹಾಗೆ ಇಡೀ ರಾಜ್ಯದಲ್ಲಿ ಬೆಂಗಳೂರು ನಗರ ಬಿಟ್ಟರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳು ನೋಂದಾಯಿಸಲ್ಪಡುತ್ತವೆ. ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳು ಓಡಾಡುತ್ತಿವೆ. ಅಲ್ಲಿಂದ ಹೆಚ್ಚು ಸಂಪನ್ಮೂಲ ಸರಕಾರಕ್ಕೆ ಬರುತ್ತಿದೆ. ಮೋಟಾರ್ ವಾಹನಗಳ ಇಲಾಖೆಯಲ್ಲಿ ಜಿಲ್ಲಾ ಮಟ್ಟದ ಸಾರಿಗೆ ಅಧಿಕಾರಿಗಳು ಇರುತ್ತಾರೆ. ಅವರು ಕಾನೂನಿನ್ವಯ ಮಾಡುವಂಥ ವಿಧಿಗಳು ಯಾವುದು ಇದೆ ಅದರ ಮೇಲೆ ಅಪೀಲ್ ಮಾಡಿಕೊಳ್ಳಬೇಕಾದರೆ ಈಗ ಶಿವಮೊಗ್ಗಕ್ಕೆ ಹೋಗಬೇಕು. ಉಪಸಾರಿಗೆ ಕಮಿಷನರ್‌ರವರ ಕಚೇರಿ ಇರುವುದು ಶಿವಮೊಗ್ಗದಲ್ಲಿ. ನಮ್ಮ ಜಿಲ್ಲೆಯನ್ನು ಶಿವಮೊಗ್ಗಕ್ಕೆ ಸೇರಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚು ವಾಹನಗಳು ಇರುವುದರಿಂದ ಉಪಸಾರಿಗೆ ಕಮಿಷನರ್‌ರವರ ಕಚೇರಿಯನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಬಹಳ ಮಂದಿ ವಾಹನ ಮಾಲೀಕರಿಗೆ ತೊಂದರೆಯಾಗಿದೆ, ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಗ್ಗೆ ಹೇಳಬೇಕಾದರೆ, ಮಾನ್ಯ ಗಂಗಾಧರನ್‌ರವರು ಮಾತನಾಡುತ್ತಾ, ಈ ಒಂದು ಸಂಸ್ಥೆ ಬಹಳಷ್ಟು ನಷ್ಟದಲ್ಲಿ ನಡೆಯುತ್ತಿದೆಯೆಂದು ಹೇಳಿದರು. ಇದೇ ಸಭೆಯಲ್ಲಿ ಮಾನ್ಯ ಮಂತ್ರಿಯವರು ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಲಾಭಗಳಿಸತಕ್ಕಂಥ ದೃಷ್ಟಿಯಿಂದ ಸಾರಿಗೆ ಸಂಸ್ಥೆಯನ್ನು ನಡೆಸುತ್ತಿಲ್ಲ, ನಮ್ಮ ರಾಜ್ಯದ ಜನರಿಗೆ ವಿಶೇಷವಾದ ಸೌಲಭ್ಯವನ್ನು ಒದಗಿಸಿಕೊಡುವ ಉದ್ದೇಶದಿಂದ ಸಾರಿಗೆ ಸಂಸ್ಥೆಯನ್ನು ಮಾಡಿದ್ದೇವೆಂದು ಹೇಳಿದರು ಬಹಳಷ್ಟು ಹಣವನ್ನು ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟಿನಲ್ಲಿ ತೊಡಗಿಸಿ ಅದನ್ನು ನಷ್ಟ ಅಂತ ಕಾಣಿಸಿದರೂ ನಮ್ಮಲ್ಲಿರುವಂಥ ಮೂಲ ಬಂಡವಾಳ ಹೆಚ್ಚಿದೆ ಎಂದು ಹೇಳಿದ್ದಾರೆ. ಈಗಾಗಲೇ ಮಾತನಾಡಿದಂಥ ಹಲವಾರು ಮಾನ್ಯ ಸದಸ್ಯರುಗಳು ಸಾರಿಗೆ ಸಂಸ್ಥೆಯವರು ಪ್ರಯಾಣದ ಧರವನ್ನು ಹೆಚ್ಚಿಸಿರುವ ಬಗ್ಗೆ ಮಾತನಾಡಿದ್ದಾರೆ. ಆದರೆ, ಖಾಸಗೀ ಮಾಲೀಕರು ನಡೆಸುವಂಥ ಬಸ್ಸುಗಳಲ್ಲಿ ಪ್ರಯಾಣದ ದರ ಬಹಳ ಕಡಿಮೆ ಇದೆ, ಆದರೂ ಅವರು ಲಾಭಗಳಿಸು ತ್ತಿದ್ದಾರೆ. ಸಾರಿಗೆ ಸಂಸ್ಥೆಯಲ್ಲಿ ಪ್ರಯಾಣದ ದರವನ್ನು ಹೆಚ್ಚಿಸಿದರೂ ಅದು ಲಾಭ ಗಳಿಸುತ್ತಿಲ್ಲ, ಇದಕ್ಕೆ ಕಾರಣ ಏನು ? ಸೋರಿ ಹೋಗುವ ವಿಚಾರದಲ್ಲಿ ಹೇಳುವುದಾದರೆ ಪ್ರತಿಯೊಂದು ಬಸ್ಸು ಗಳು ಕಾನೂನು ಪ್ರಕಾರ ಎಷ್ಟು ಪ್ರಯಾಣಿಕರನ್ನು ಹಾಕಬೇಕು ಅಷ್ಟು ಜನರನ್ನು ಹಾಕಿಕೊಂಡೇ ಹೋಗುತ್ತಾರೆ. ಅದರ ಮೇಲೆ ಇನ್ನು ಜಾಸ್ತಿ ಜನ ಹಾಕಿಕೊಂಡು ಹೋಗುವುದು ಸರ್ವೆಸಾಮಾನ್ಯ ವಾಗಿ ನಡೆಯುತ್ತಿದೆ. ಸಂಬಂಧಪಟ್ಟವರು ನಿಗದಿಯಾದ ಲೆಕ್ಕದಂತೆ ಹಣ ಜಮಾ ಮಾಡುತ್ತಾರೆ. ಕ್ಯಾಪಾಸಿಟಿಗಿಂತ ಹೆಚ್ಚು ಜನ ಹಾಕಿ ಬಂದಂತ ಹಣವನ್ನು ಕಂಡಕ್ಟರುಗಳು ಇತರೆ ಸಿಬ್ಬಂದಿವರ್ಗದ ವರು ಪಡೆಯಬಹುದೇ ಹೊರತು ಕ್ಯಾಪ್ಯಾಸಿಟಿ ಒಳಗೆ ಇರತಕ್ಕ ಹಣ ಲಪಟಾಯಿಸುವುದಕ್ಕೆ ಆಗುವು ದಿಲ್ಲ. ಪ್ರತಿ ಕಿಲೋಮೀಟರ್‌ಗೆ ಬರುವಂಥ ನಿರ್ವಹಣೆ ಖರ್ಚು ಎಷ್ಟು ? ಇದರ ಬಗ್ಗೆ ನಿಮ್ಮಲ್ಲಿ ಸ್ಟ್ಯಾಟಿಸ್ಟಿಕಲ್ ಡಿಪಾರ್ಟಮೆಂಟ್ ಇದೆ, ಅವರ ಹತ್ತಿರ ಲೆಕ್ಕ ಸಿಗುತ್ತದೆ. ಅದೇ ರೀತಿ ಉತ್ಪತ್ತಿ ಎಷ್ಟು ಬರುತ್ತದೆ ಎನ್ನುವುದು ಲೆಕ್ಕ ಇದೆ ಸಾರಿಗೆ ಸಂಸ್ಥೆಗೆ ಸಾಕಷ್ಟು ಉತ್ಪತ್ತಿ ಬರುತ್ತದೆ ಎನ್ನುವುದರಲ್ಲಿ ಸಂಶಯ ಇಲ್ಲ. ಅದರೂ ಕೂಡ ಏತಕ್ಕೆ ನಷ್ಟ ಅನುಭವಿಸುತ್ತಿದ್ದಾರೆ ಎನ್ನುವುದರ ಕಡೆ ಗಮನಹರಿಸಿ ಹಾಲಿ ಇರತಕ್ಕ ವ್ಯವಸ್ಥೆಯನ್ನು ಅಮೂಲಾಗ್ರವಾಗಿ ಬದಲಾವಣೆ ಮಾಡಬೇಕು. ಈ ದಿಸೆಯಲ್ಲಿ ಸರ್ಕಾರ ಹೊಸ ದೃಷ್ಟಿಕೋನವನ್ನು ಇಟ್ಟುಕೊಂಡು ಕೆಲಸ ಮಾಡು ತ್ತಿಲ್ಲವೆಂದು ಹೇಳುತ್ತೇನೆ. ಸರ್ಕಾರಿ ಮಾಲಿಕತ್ವದ ಬಸ್ಸುಗಳು, ಜನರಿಗಾಗಿ ಇರತಕ್ಕ ಬಸ್ಸು ಗಳು, ಇದು ಜನರ ಸ್ವತ್ತು ಎನ್ನುವ ಬಗ್ಗೆ ಸಾರ್ವಜನಿಕರಲ್ಲಿ ಅಭಿಪ್ರಾಯವನ್ನು ರೂಪಿಸಬೇಕಾಗಿದೆ

ಸಾರ್ವಜನಿಕರಿಗೆ ಸಂಬಂಧಪಟ್ಟ ಸ್ವತ್ತನ್ನು ರಕ್ಷಣೆ ಮಾಡುವ ವಿಚಾರದಲ್ಲಿ ಕೂಡ ಜನತೆಯ ಅಭಿಮತವನ್ನು ರೂಪಿಸಬೇಕಾಗಿದೆ. ಸಾರ್ವಜನಿಕರಿಂದ ಸಂಪನ್ಮೂಲಗಳನ್ನು ರೂಢಿಸಿಕೊಳ್ಳುವಂಥ ಹೊಸ ಚಿಂತನೆಯನ್ನು ಮಾಡಬೇಕಾದುದು ಬಹಳ ಅಗತ್ಯ ಇದೆ. ಸಾಕಷ್ಟು ಬಂಡವಾಳವನ್ನು ಸಂಸ್ಥೆಯಲ್ಲಿ ಹೂಡಿ, ಅದರ ಆಗು ಹೋಗುಗಳನ್ನು ಮತ್ತು ವ್ಯವಹಾರಗಳನ್ನು ನಿಯಂತ್ರಣ ಮಾಡುವುದರಲ್ಲಿ ಸಾರ್ವಜನಿಕರಿಗೂ ಅವಕಾಶ ಕಲ್ಪಿಸಿಕೊಡಬೇಕು ಸಾರ್ವಜನಿಕರರಿಂದ ಹಣ ಸಂಗ್ರಹಿಸುವುದಕ್ಕೆ ಸಂಪನ್ಮೂಲಗಳನ್ನು ರೂಢಿಸಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕು. ಸಣ್ಣ ಉಳಿತಾಯ ಯೋಜನೆಗಳಲ್ಲಿ ಲಾಟರಿ ಯೋಜನೆಗಳಲ್ಲಿ ಹಣ ಎತ್ತುವುದಕ್ಕೆ ಅವಕಾಶ ಮಾಡಿಕೊಳ್ಳಬಹುದು. ಈ ವಿಚಾರದಲ್ಲಿ ಮಾನ್ಯ ಮಂತ್ರಿಯವರು ಚಿಂತನೆ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಸಾರ್ವಜನಿಕರ ಅಭಿಪ್ರಾಯವನ್ನು ರೂಪಿಸಿ. ಕೆ. ಎಸ್.ಆರ್.ಟಿ.ಸಿ. ಸಂಸ್ಥೆಯಲ್ಲಿ ಸಾರ್ವಜನಿಕರು ಹಣ ತೊಡಗಿಸುವಂಥ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಸೂಚಿಸುತ್ತೇನೆ.

ಇನ್ನು ಆಡಳಿತದಲ್ಲಿ ಯಾವರೀತಿ ಬದಲಾವಣೆಗಳನ್ನು ಮಾಡಬೇಕೆಂಬುದನ್ನು ಮಾನ್ಯ ಸದಸ್ಯರುಗಳು ಸೂಚನೆ ಮಾಡಿದ್ದಾರೆ. ಮಂಡಲಿಯಲ್ಲಿ ಸಾರ್ವಜನಿಕರಿಗೆ ಹೆಚ್ಚು ಸೌಲಭ್ಯಗಳನ್ನು ಒದಗಿಸಿಕೊಡುವುದರ ಜೊತೆಗೆ ಹೆಚ್ಚು ಲಾಭಗಳಿಸತಕ್ಕಂಥ ದೃಷ್ಟಿಕೋನ ಇರತಕ್ಕ ವ್ಯಕ್ತಿಗಳನ್ನು ಹಾಕಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಬಸ್ಸುಗಳನ್ನು ರಾಷ್ಟ್ರೀಕರಣ ಮಾಡಿದಮೇಲೆ ಇದು ರಾಷ್ಟ್ರದ ಸ್ವತ್ತು ಎನ್ನುವ ಕಲ್ಪನೆ ಶ್ರೀಸಾಮಾನ್ಯನಿಗೆ ಬರಬೇಕು. ಇದರಿಂದ ಶ್ರೀಸಾಮಾನ್ಯನಿಗೆ ಪ್ರಯೋಜನ ಸಿಗುತ್ತದೆ ಎನ್ನುವ ವಿಚಾರಗಳನ್ನು ಜನರಿಗೆ ತಿಳಿಸಬೇಕು. ಇನ್ನು ಒಂದು ಹೆಜ್ಜೆ ಮುಂದೆಹೋಗಿ ಹೇಳುವುದಾದರೆ. ಬೇರೆ ಬೇರೆ ಕೈಗಾರಿಕೆಗಳಲ್ಲಿ ಕಾರ್ಮಿಕರುಗಳಿಗೆ ಪಾಲು ಇರುವಂಥ ವ್ಯವಸ್ಥೆ ಮಾಡಬೇಕೆನ್ನುವ ದೂರುಗಳು ಆಗಾಗ್ಗೆ ಬರುತ್ತವೆ. ಅಲ್ಲದೆ, ಬಸ್ಸುಗಳಲ್ಲಿ ಕೆಲಸ ಮಾಡುವಂಥ ಚಾಲಕರು ನಿರ್ವಾಹಕರು ಕೂಡ ಸರಿಯಾಗಿ ವರ್ತನೆ ಮಾಡುತ್ತಿಲ್ಲವೆನ್ನುವ ದೂರುಗಳು ಕೂಡ ಬರುತ್ತಿವೆ. ಇದರಿಂದ ನಷ್ಟವಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಮಾಲೀಕತ್ವದಲ್ಲಿ ಕಾರ್ಮಿಕರಿಗೂ ಪಾಲು ಇರುವಂಥ ವ್ಯವಸ್ಥೆ ಮಾಡಿದರೆ ಇದು ನಮ್ಮ ಸ್ವತ್ತು, ಇದರಲ್ಲಿ ಲಾಭ ಬರುವುದಕ್ಕೆ ಪ್ರಯತ್ನ ಮಾಡಬೇಕೆಂಬ ಮನೋಭಾವನೆ ಬೆಳೆಯುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಬಿಡಿಭಾಗಗಳನ್ನು ಕೊಳ್ಳುವುದರಲ್ಲಿ ಮೋಸ ನಡೆಯುತ್ತಿದೆ ಎನ್ನುವ ಮಾತು ಕೂಡ ಇಲ್ಲಿ ಕೇಳಿ ಬಂತು. ಬಿಡಿಭಾಗಗಳು ಎಷ್ಟು ಬೇಕೋ ಅಷ್ಟು ಮಾತ್ರ ಸಂಗ್ರಹ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಸಂಗ್ರಹ ಮಾಡಿದಂಥ ವಸ್ತುಗಳ ಕಡೆ ನಿಗಾ ಇಲ್ಲದೇ ಇರುವುದು, ವಾಹನಗಳನ್ನು ಸರಿಯಾದಂಥ ದೃಷ್ಟಿಯಿಂದ ನೋಡದೇ ಇರುವುದು ಇವೆಲ್ಲಾ ನಡೆಯುತ್ತಿವೆ. ಇನ್ನು ಕೂಡ ಮಂಗಳೂರು ಡಿಪೋ ಮಾಡಿಲ್ಲ, ಮಾರ್ಗದ ಬದಿಯಲ್ಲಿಯೇ ಬಸ್ಸುಗಳನ್ನು ನಿಲ್ಲಿಸುತ್ತಾರೆ. ಬಸ್ಸುಗಳನ್ನು ತೊಳೆಯುವಂಥ ವ್ಯವಸ್ಥೆಯಿಲ್ಲ. ನಮ್ಮ ಪುತ್ತೂರಿಗೆ ಒಂದು ಸುಖಾಸೀನ ಮಾದರಿಯ ಬಸ್ಸು ಹಾಕಬೇಕೆಂದು ಕೇಳಿಕೊಂಡಿದ್ದರೂ ಇದುವರೆಗೆ ಹಾಕಿಲ್ಲ. ಇದರ ಕಡೆ ಮಾನ್ಯ ಮಂತ್ರಿಯವರು ಗಮನಕೊಡಬೇಕೆಂದು ಹೇಳುತ್ತೇನೆ. ಬೆಂಗಳೂರಿನಿಂದ ಬೀದರ್‌ಗೆ ಸುಮಾರು ೨೨ ತಾಸುಗಳ ಪ್ರಯಾಣ ಇದೆಯೆಂದು ಕೇಳಿದ್ದೇವೆ, ಮಧ್ಯದಲ್ಲಿ ಬರುವಂಥ ನಿಲುಗಡೆಗಳನ್ನು ಕಡಿಮೆ ಮಾಡಿ ಆದಷ್ಟು ಬೇಗ ಬಸ್ಸುಗಳು ತಲುಪುವಂಥ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಕೆ. ರಾಮಭಟ್.—ನಮಗೆ ಲಕ್ಸುರಿ ಬಸ್ ಕೊಟ್ಟರೆ, ಹಣ್ಣು ಕಾಯಿ ಮಾಡಿಸುತ್ತೇನೆ. ಒಟ್ಟಾರೆ ಹೊಸ ರೂಪವನ್ನು ಕೊಡುವಂಥ ದೃಷ್ಟಿಯಲ್ಲಿ ಮುಂದಿನ ವರ್ಷ ಉತ್ತಮ ವರದಿಯನ್ನು ಕೊಡುತ್ತೀರೆಂದು ಆಶಿಸುತ್ತೇನೆ. ಮತ್ತೆ ಮಾನ್ಯ ದೊಡ್ಡಬೈರೇಗೌಡರು ಹೇಳಿದಹಾಗೆ, ಈಗ ಇರತಕ್ಕ ಬಣ್ಣ ಕೆಂಪು, ಇದು ಡೇಂಜರ್. ಇದನ್ನು ಬದಲಾಯಿಸುವುದರ ಮೂಲಕ ಪರಿವರ್ತನೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರೆಂದು ಹೇಳುತ್ತೇನೆ. ಇನ್ನು ತೋಟಗಾರಿಕೆಯ ಇಲಾಖೆಯ ವಿಚಾರದಲ್ಲಿ ಹೇಳುವುದಾದರೆ. ಹಣ್ಣು ಹಂಪಲುಗಳನ್ನು ಹೆಚ್ಚು ಹೆಚ್ಚು ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಇವತ್ತು ರಾಜ್ಯದಲ್ಲಿರುವ ಅನೇಕ ಪಶುವೈದ್ಯ ಶಾಲೆಗಳಲ್ಲಿ ಸಿಬ್ಬಂದಿ ಇಲ್ಲ. ಮಾನ್ಯ ಮಂತ್ರಿಯವರು ತರಬೇತಿ ಪಡೆದವರು ಇಲ್ಲವೆಂದು ಹೇಳಿದ್ದಾರೆ.

ಶ್ರೀ ಬಿ. ಧನಂಜಯ ಕುಮಾರ್.—ಉಜಿರೆಯಲ್ಲಿ ಮಂಜುನಾಥ ಸ್ವಾಮಿ ಕಾಲೇಜ್ ಇದೆ. ಆ ಕಾಲೇಜ್‌ನಲ್ಲಿ ತರಬೇತಿಯನ್ನು ಕೊಡುತ್ತಿದ್ದಾರೆ. ಆ ರೀತಿಯಾಗಿ ಅಲ್ಲಿ ತರಬೇತಿಯಾದಂಥ ಹುಡುಗರು ಯಾರು ಇದ್ದಾರೆ ಅವರನ್ನು ತಾವು ಲೈವ್‌ಸ್ಟಾಕ್ ಇನ್ಸ್‌ಪೆಕ್ಟರ್‌ನ್ನಾಗಿ ನೇಮಕ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಅನೇಕ ಖಾಲಿ ಇರತಕ್ಕ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಅವಕಾಶವಿದೆ, ಆ ರೀತಿಯಾಗಿ ಮಾಡುವುದಕ್ಕೆ ತಾವುಗಮನ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ

ಇನ್ನು ಹಾಲು ಉತ್ಪಾದನೆ ಮತ್ತು ವಿತರಣೆಯ ಬಗ್ಗೆ ಸಾಕಷ್ಟು ಹೇಳಿದ್ದಾರೆ. ನಮ್ಮ ಮಂಗಳೂರಿನಲ್ಲಿರತಕ್ಕ ಹಾಲು ಡೈರಿಯನ್ನು ಹಾಲು ಉತ್ಪಾದನೆ ಮತ್ತು ವಿತರಣೆಯ ದೃಷ್ಟಿಯಿಂದ ತಾವು ಕಡೆಗಣಿಸಿದ್ದೀರಿ. ಆದುದರಿಂದ ತಾವು ದಯಮಾಡಿ ಒಮ್ಮೆ ನಮ್ಮ ಕಡೆಗೆ ಬಂದು ಅದನ್ನು ಪರಿಶೀಲನೆ ಮಾಡಬೇಕೆಂದು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ. ಇಷ್ಟು ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ (ಸಾಗರ).—ಮಾನ್ಯ ಅಧ್ಯಕ್ಷರೇ, ಪಶುಸಂಗೋಪನೆ ಮತ್ತು ತೋಟಗಾರಿಕೆ ಇಲಾಖೆಯ ಮೇಲೆ ಒಂದೆರಡು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಇದಕ್ಕಿಂತ ಮುಂಚಿತವಾಗಿ ಸಾರಿಗೆ ಮಂತ್ರಿಗಳವರು ಇಲ್ಲಿಯೇ ಕೂತಿರುವದರಿಂದ, ಅವರ ಇಲಾಖೆಯ ಬಗ್ಗೆ ನನ್ನ ಸ್ವಂತ ಅನುಭವವನ್ನು ಹೇಳಿ ಅನಂತರ ಈ ಎರಡು ಇಲಾಖೆಗಳ ಬಗ್ಗೆ ಹೇಳುತ್ತೇನೆ. ಮೊನ್ನೆ ದಿವಸ ರಾತ್ರಿ ನಾನು ೯ ಗಂಟೆಗೆ ನಮ್ಮ ಕೆ.ಎಸ್.ಆರ್.ಟಿ.ಸಿ. ಬಸ್‌ನಲ್ಲಿ ನಮ್ಮ ಊರಿಗೆ ಹೊರಟೆ, ಆದರೆ ನಾನು ಮರು ದಿನ ಮಧ್ಯಾಹ್ನ ೪ ಗಂಟೆಗೆ ಮಂಗಳೂರಿಗೆ ತಲುಪಿದ್ದೇನೆ. ಇದು ಏನಾಯಿತು ಎಂದರೆ ಮಧ್ಯೆ ಹಾಸನ ಮತ್ತು ಕುಣಿಗಲ್ ಮಧ್ಯದ ದಾರಿಯಲ್ಲಿ ಬಸ್ ಕೆಟ್ಟು ನಿಂತು ಹೋಯಿತು. ಅದು ರಿಪೇರಿ ಆಗಿ ನಾನು ಮಂಗಳೂರು ತಲಪುವಷ್ಟು ಹೊತ್ತಿಗೆ ೪ ಗಂಟೆಯಾಗಿತ್ತು. ಮಧ್ಯ ರಾತ್ರಿ ನೀರು ಕುಡಿಯುವುದಕ್ಕೆ ನೀರನ್ನು ಕೇಳಿದರೆ ನಿಮ್ಮ ಬಸ್ಸಿನಲ್ಲಿ ನೀರನ್ನು ಸಹ ಇಟ್ಟಿರಲಿಲ್ಲ. ರಾತ್ರಿ ಹೊತ್ತು ಬಸ್‌ನಲ್ಲಿ ಪ್ರಯಾಣ ಮಾಡುವವರ ಹಿತದೃಷ್ಟಿಯಿಂದ ಏತಕ್ಕೆ ನೀವು ನೀರನ್ನು ಇಡುವ ವ್ಯವಸ್ಥೆಯನ್ನು ಮಾಡಬಾರದು. ಅನಂತರ ಡ್ರೈವರ್‌ನ್ನು ಕೇಳಿದ್ದಕ್ಕೆ ಸ್ವಾಮಿ, ನಾನು ಧರ್ಮಸ್ಥಳ, ಕಾರವಾರಕ್ಕೆ ಹೋಗಿ ೩ ದಿವಸಗಳಿಂದ ನಿದ್ದೆಗೆಟ್ಟಿದ್ದೇನೆ, ಇನ್ನು ಬಸ್ಸನ್ನು ಹೇಗೆ ಓಡಿಸಬೇಕು ನೀವೇ ಹೇಳಿ ಎಂದು ಹೇಳುತ್ತಾನೆ. ಇಷ್ಟರಮಟ್ಟಿಗೆ ನಿಮ್ಮ ಇಲಾಖೆ ನಡೆಯುತ್ತಿದೆ. ನಮ್ಮಲ್ಲಿ ಗಜಾನನ ಕಂಪನಿಯವರು ಬರೀ ೮೦ ಬಸ್‌ಗಳನ್ನು ಇಟ್ಟುಕೊಂಡಿರತಕ್ಕವರು ೩೦ ಪರ್ಸೆಂಟ್ ಡಿವಿಡೆಂಡ್‌ನ್ನು ತಮ್ಮಲ್ಲಿರತಕ್ಕ ಕೆಲಸಗಾರರಿಗೆ ಕೊಡುತ್ತಾರೆ. ಮತ್ತು ನಾವು ಧರ್ಮ ಕೇಳಿದರೆ ಧರ್ಮವನ್ನೂ ಕೊಡುತ್ತಾರೆ, ಆದುದರಿಂದ ನನಗಾದ ತೊಂದರೆಯನ್ನು ನಿಮ್ಮ ಗಮನಕ್ಕೆ ತಂದಿದ್ದೇನೆ ಅದನ್ನು ಮಾನ್ಯ ಸಚಿವರು ಸರಿಪಡಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಮಾನ್ಯ ಮಂತ್ರಿಗಳಾದ ಶ್ರೀ ವಿಶ್ವನಾಥರೆಡ್ಡಿಯವರು ಋಷಿ ಜೀವನವನ್ನು ನಡೆಸುತ್ತಿದ್ದಾರೆ. ಅವರು ಹಾಲು ಹಣ್ಣು ಹೆಚ್ಚಾಗಿ ತೆಗೆದುಕೊಳ್ಳುತ್ತಾರೆಂದು ಕಾಣುತ್ತದೆ. ಆ ಹಾಲು ಹಣ್ಣನ್ನು ವಿತರಣೆ ಮಾಡತಕ್ಕ ಕೆಲಸವನ್ನು ಅವರು ವಹಿಸಿಕೊಂಡಿದ್ದಾರೆ. ಇದು ಪೌಷ್ಟಿಕ ಆಹಾರ, ಹಣ್ಣುಗಳು ರೋಗಿಗಳಿಗೆ ಬೇಕೇ ಬೇಕು, ಅದನ್ನು ಒದಗಿಸತಕ್ಕ ಪುಣ್ಯದ ಕಾರ್ಯವನ್ನು ಅವರು ಮಾಡುತ್ತಿದ್ದಾರೆ. ಹಿಂದೆ ಪಶುಗಳ ಮೇಲೆ ಸಂಪತ್ತನ್ನು ಅಳೆಯುತ್ತಿದ್ದರು. ಈ ರಾಜ್ಯದಲ್ಲಿ ಎಷ್ಟು ಆಕಳುಗಳು ಇವೆ ಎನ್ನುವುದರ ಮೇಲೆ ಆ ರಾಜ್ಯದ ಸಂಪತ್ತನ್ನು ಅಳೆಯುವಂಥಾ ಕಾಲವಿತ್ತು. ಇವತ್ತೂ ಕೂಡ ಅದೇ ಪರಿಸ್ಥಿತಿ ಇದೆ. ಕೃಷಿಕನಿಗೆ ಸಂಪತ್ತು ಈ ಪಶುಗಳೇ ಆಗಿವೆ. ಹಿಂದೆ ಹಲಸು ಮಾವಿನ ಮರಗಳನ್ನು ಬೆಳೆದು ಬರಗಾಲ ಬಂದಾಗ ಆ ಹಣ್ಣುಗಳನ್ನೇ ತಿಂದು ಜೀವನ ಮಾಡುತ್ತಿದ್ದರು. ಆದುದರಿಂದ ತೋಟಗಾರಿಕೆ ಮತ್ತು ಪಶುಸಂಗೋಪನಾ ಈ ಎರಡು ಇಲಾಖೆಗಳು ಬಹಳ ಮುಖ್ಯವಾದ ಇಲಾಖೆಗಳಾಗಿವೆ. ಈ ತೋಟಗಾರಿಕೆ ಇಲಾಖೆಯಲ್ಲಿ ಹಿಂದೆ ಒಬ್ಬರು ಡೈರೆಕ್ಟರ್‌ರವರು ಶ್ರೀ ಮರೀಗೌಡರು ಎಂದು ಇದ್ದರು, ಅವರ ವಿಚಾರ ಅನೇಕರಿಗೆ ಗೊತ್ತಿರಬಹುದು. ಅವರು ಇದ್ದಾಗ ತೋಟಗಾರಿಕೆ ಇಲಾಖೆಯಲ್ಲಿ ಬಹಳಷ್ಟು ಕೆಲಸವನ್ನು ಮಾಡಿ ಹೋಗಿದ್ದಾರೆ. ಅವರ ನಂತರ ಐ. ಎ. ಎಸ್. ಆಫೀಸರ್‌ಗಳು ಬಂದಿದ್ದಾರೆ, ಅವರಿಗೆ ಇದರಲ್ಲಿ ಜ್ಞಾನ ಇಲ್ಲದೇ ಇರತಕ್ಕವರು ಬಂದಿದ್ದಾರೆ. ಇದರಿಂದಾಗಿ ತೋಟಗಾರಿಕೆ ಇಲಾಖೆಯಿಂದ ಎಷ್ಟರಮಟ್ಟಿನ ಲಾಭ ದೊರೆಯಬೇಕಾಗಿತ್ತೋ ಅದು ದೊರೆಯದ ಹಾಗಾಗಿದೆ. ೧೭೩ ಕಡೆ ತಾಲ್ಲೂಕ್ ಕೇಂದ್ರಗಳಲ್ಲಿ ತೋಟಗಾರಿಕೆ ಇಲಾಖೆಯವರು ಫಾರಂಗಳನ್ನು ಮಾಡಿದ್ದೇವೆಂದು ಹೇಳಿದ್ದಾರೆ. ಸಂತೋಷ. ಆದರೆ ಆಯಾಯಾ ತಾಲ್ಲೂಕ್‌ಗಳಲ್ಲಿ ಇರತಕ್ಕ ಹವಾಮಾನ, ಮಣ್ಣಿನ ಗುಣಕ್ಕೆ ಅನುಸಾರವಾಗಿ ಮರಗಿಡಗಳನ್ನು ಬೆಳೆಯತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಇವತ್ತು ಏನಾಗುತ್ತಿದೆ ಎಂದರೆ ತೆಂಗಿನ ಸಸಿಯಾಗಲೀ ಮತ್ತೊಂದು ಗಿಡದ ಸಸಿಯಾಗಲೀ ಅದು ಹವಾಯ್‌ನಿಂದ ಬಂದದ್ದು, ಆಸ್ಟ್ರೇಲಿಯದಿಂದ ಬಂದದ್ದು ಎಂದು ಸುಳ್ಳು ಹೇಳಿ ರೈತರಿಗೆ ಮೋಸ ಮಾಡತಕ್ಕ ಪ್ರಕರಣಗಳು ನಡೆಯುತ್ತಿವೆ. ಆದುದರಿಂದ ಇವತ್ತಿನ ದಿವಸ

---

† ಈ ಚಿಹ್ನೆಯು ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತದೆ.

ಒಂದೊಂದು ತಾಲ್ಲೂಕಿನಲ್ಲಿಯೂ ಈ ಫಾರಂಗಳನ್ನು ಮಾಡಿರತಕ್ಕ ಉದ್ದೇಶವೇನೆಂದರೆ ಅವರು ಅಲ್ಲಿಯ ಹವಾಮಾನಕ್ಕೆ ಅನುಸಾರವಾಗಿ ಮತ್ತು ಮಣ್ಣಿನ ಗುಣಕ್ಕೆ ಅನುಸಾರವಾಗಿ ಗಿಡ ಮರಗಳನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು. ಇನ್ನು ಅಡಿಕೆ, ಸಾಂಬಾರ್ ಪದಾರ್ಥಗಳು ನಮ್ಮ ಕರ್ನಾಟಕ ರಾಜ್ಯದಿಂದ ಬೇರೆ ರಾಷ್ಟ್ರಗಳಿಗೆ ಅಮದು ಮಾಡುವುದರಲ್ಲಿ ಹಾವಳಿಯನ್ನು ಸ್ಥಾಪಿಸಿತ್ತು. ಆದರೆ ಇವತ್ತು ಆ ಸಾಂಬಾರ್ ಪದಾರ್ಥಗಳು ಎಲ್ಲಿವೆ? ಪೆಪ್ಪರ್, ಮೆಣಸಿನ ಗಿಡಕ್ಕೆ ರೋಗ ಹಿಡಿದಿದೆ, ರೋಗ ನಿವಾರಣೆ ಮಾಡುವುದರ ಬಗ್ಗೆ ಇಲ್ಲಿ ಒಂದೊಂದು ಚುಟಕಿಯಾಗಿ ಉತ್ತರವನ್ನು ಹೇಳಿದ್ದೀರಿ ಆದರೆ ಇವತ್ತು ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಮೆಣಸಿನ ಬಳ್ಳಿಗಳು ಎಲ್ಲಾ ಉದುರಿ ಬಿದ್ದು ಹೋಗುತ್ತಿದೆ. ಇನ್ನು ಅಡಿಕೆಯನ್ನು ನಮ್ಮ ರಾಜ್ಯದಿಂದ ರಫ್ತು ಮಾಡುತ್ತಿರುವುದರಿಂದ ಎಷ್ಟು ಆದಾಯ ಬರುತ್ತಿದೆ? ಆದರೆ ಇವತ್ತಿನ ದಿವಸ ಅದಕ್ಕೆ ರೋಗ ಹಿಡಿದಿದೆ ಅದನ್ನು ನಿವಾರಣೆ ಮಾಡುವುದಕ್ಕೆ ತಾವು ಏನು ಕ್ರಮವನ್ನು ಕೈಗೊಂಡಿದ್ದೀರಿ? ಅಡಿಕೆ ಬೆಳೆಯೆಲ್ಲಾ ಹಾಳಾಗಿ ಹೋಗುತ್ತಿದೆ. ನಮ್ಮಲ್ಲಿ ಕೆಲವು ಫಾರಂಗಳು ಇವೆ, ಮಲೆನಾಡಿನ ಭಾಗಕ್ಕೆ ತಾವು ಬಂದಿಲ್ಲ, ಬಂದು ನೋಡಿ. ಮೆಣಸಿನ ಬಳ್ಳಿಗಳು ಎಲ್ಲಾ ಹಾಳಾಗಿ ಹೋಯಿತು ಅದನ್ನು ಕಾಪಾಡುವುದಕ್ಕೆ ತಾವು ಏನು ವ್ಯವಸ್ಥೆಯನ್ನು ಮಾಡಿಲ್ಲ. ಆದುದರಿಂದ ಕೂಡಲೇ ಇದರ ಬಗ್ಗೆ ತಾವು ವ್ಯವಸ್ಥೆಯನ್ನು ಮಾಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ. ಇನ್ನು ನಮ್ಮ ರಾಜ್ಯದಲ್ಲಿ ಬೆಳೆಯತಕ್ಕ ಮಾವಿನ ಕಾಯಿಯು ಉಪ್ಪಿನ ಕಾಯಿಯನ್ನು ಹೊರದೇಶಕ್ಕೆ ರಫ್ತು ಮಾಡುತ್ತಿದ್ದರು. ಅಂಥಾ ಉತ್ಕೃಷ್ಟವಾದ ಮಾವಿನ ಮರಗಳ ಸಂಪತ್ತು ನಮ್ಮಲ್ಲಿತ್ತು. ಆದರೆ ದೊಡ್ಡ ದೊಡ್ಡ ಅಣೆಕಟ್ಟೆಗಳನ್ನು ಕಟ್ಟುವಾಗ ಅಂಥಾ ಉತ್ಕೃಷ್ಟವಾದ ಮರಗಳು ಎಲ್ಲಾ ಮುಳುಗಿ ಹಾಳಾಗಿ ಹೋದವು ಇದನ್ನೆಲ್ಲಾ ಕಾಪಾಡಬೇಕಾಗಿತ್ತು. ಅದನ್ನು ಕಸಿಮಾಡಿ ಹಾರ್ಟಿಕಲ್ಚರ್ ಫಾರಂನಲ್ಲಿ ಸಿಗುವಂತೆ ಮಾಡಬೇಕಾಗಿತ್ತು. ಅಂತಹ ಉತ್ಕೃಷ್ಟವಾದಂಥ ತಳಿಗಳನ್ನು ಕಾಪಾಡಬೇಕಾಗಿತ್ತು. ಫಾರಂಗಳನ್ನು ಮಾಡಿರತಕ್ಕ ಉದ್ದೇಶವೇ ಅದು. ಆದರೆ ಇವತ್ತಿನ ದಿವಸ ಫಾರಂಗಳೆಲ್ಲಾ ಹೋಗಿವೆ.

೫-೦೦ ಪಿ. ಎಂ.

ಶ್ರೀ ಎಂ. ವೀರಪ್ಪ ಮೊಯಿಲಿ.—ಯಾರಿಗೆ ರುಚಿ ವಿಚಾರ ಹೇಳುತ್ತಿದ್ದೀರಿ. ಮಾನ್ಯ ಲಕ್ಷ್ಮೀಸಾಗರ್‌ರವರಿಗೂ ರುಚಿ ಇಲ್ಲ. ರುಚಿ ಮಂತ್ರಿಗಳಿಗೂ ಇಲ್ಲ. ಯಾರಿಗೆ ರುಚಿ ವಿಚಾರ ಹೇಳುತ್ತೀರಿ.

ಶ್ರೀ ವಿ. ಲಕ್ಷ್ಮೀಸಾಗರ್.—ಬೇರೆ ರುಚಿ ಕಂಡಿದ್ದಾರಲ್ಲ ಅವರಿಗೆ ರುಚಿ ಅಭಿರುಚಿ ಇದೆ, ಅವರ ಅನುಕೂಲ ಮಾಡುವುದಕ್ಕೋಸ್ಕರ ರುಚಿಕರವಾದಂಥ ಹಣ್ಣುಗಳನ್ನು ಬೆಳೆಯುವುದಕ್ಕೆ ಸಹಾಯ ಮಾಡುತ್ತಾ ಇದ್ದಾರೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.—ಇವರು ಅಂತಹ ಗಿಡಗಳನ್ನು ಕಾಪಾಡಬೇಕಾಗಿತ್ತು. ಆ ಸಂಪತ್ತು ಇರತಕ್ಕ ಪ್ರದೇಶಗಳು ದೊಡ್ಡ ದೊಡ್ಡ ವಿದ್ಯುತ್ ಯೋಜನೆಗಳಲ್ಲಿ ಮುಳುಗಿ ಹೋಗಿವೆ. ಅಂತಹ ಮರಗಳನ್ನು ಕಸಿಮಾಡಿ, ಮಾವು, ಹಲಸು ಮುಂತಾದ ಉತ್ಕೃಷ್ಟ ಜಾತಿಯ ಫಲವೃಕ್ಷಗಳನ್ನು ಕಾಪಾಡಬೇಕೆಂಬ ಸದುದ್ದೇಶದಿಂದ ಮರಿಗೌಡರು ಆ ಕಾಲದಲ್ಲಿ ಫಾರಂಗಳನ್ನು ಮಾಡಿದರು. ಆ ಫಾರಂಗಳು ಹೋಗಿವೆ. ತಾವು ಪ್ರತಿ ತಾಲ್ಲೂಕಿನಲ್ಲಿ ಹೋಗಿ ನೋಡಿದ್ದೀರಾ. ನಿಮ್ಮ ತಾಲ್ಲೂಕಿನಲ್ಲಿ ಫಾರಂ ಇದ್ದರೆ ಗೊತ್ತಾಗಬಹುದು. ಅದರಲ್ಲಿ ಹಣ್ಣಿನ ಗಿಡಗಳು, ಹೂವಿನ ಗಿಡಗಳು ಇಲ್ಲ. ಆ ಫಾರಂನಲ್ಲಿ ಹೋಗಲಿಕ್ಕೆ ಹೆದರಿಕೆಯಾಗುವಂಥ ಪರಿಸ್ಥಿತಿಯಲ್ಲಿದೆ. ಮಾನ್ಯ ಮಂತ್ರಿಗಳು ಇಂತಹ ಫಾರಂಗಳನ್ನು ಎಲ್ಲಿಯಾದರೂ ನೋಡಿದ್ದಾರೆಯೋ, ನಿಮ್ಮ ಕಡೆ ತಾವು ಬಂದಿಲ್ಲ, ಬಂದರೆ ಫಾರಂನಲ್ಲಿ ಯಾವ ರೀತಿ ಇದೆಯೆಂದು ತೋರಿಸುತ್ತೇನೆ. ತಾವು ೩೬೩ ಫಾರಂಗಳಿವೆ ಎಂದು ಹೇಳಿದ್ದೀರಿ. ಈ ಇಲಾಖೆಗೆ ಬೇರೆ ಹಣ ಕೊಡಬೇಕಾದ್ದಿಲ್ಲ. ತೋಟಗಾರಿಕೆಯಲ್ಲಿ ಬೆಳೆ ಬೆಳೆಯುವವರು ಶ್ರೀಮಂತರಿದ್ದಾರೆ ಹೇಳುತ್ತೀರಿ. ಮಂತ್ರಿಗಳೂ ಕೂಡ ಶ್ರೀಮಂತರಾಗಬಹುದು. ಈ ೩೬೩ ಫಾರಂಗಳನ್ನು ಸರಿಯಾಗಿಟ್ಟುಕೊಂಡರೆ, ಈ ಇಲಾಖೆಗೆ ಈ ಬಾಬಿನಲ್ಲಿ ಹಣ ಇಡುವುದೇ ಬೇಡ, ಇದು ಆದಾಯದ ಮೂಲ. ಇದೆಲ್ಲಾ ಒಂದೇ ವರ್ಷದಲ್ಲಿ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಒಂದು ದೃಷ್ಟಿಯನ್ನಾದರೂ ಇಟ್ಟುಕೊಳ್ಳಿ. ಒಂದು ವರ್ಷದಲ್ಲಾದರೂ ಕೆಲವು ಭಾಗಗಳನ್ನು ನೋಡಿ ಹೊಂದಿಸಬೇಕಾಗಿತ್ತು. ಇನ್ನು ಮುಂದಾದರೂ ಕೂಡ ಈ ಒಂದು ದೃಷ್ಟಿಯನ್ನು ಇಟ್ಟುಕೊಂಡು ಕೆಲಸ ಮಾಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಒಂದು ದುರದೃಷ್ಟ ಸಂಗತಿ ಎಂದರೆ ಗುಡ್ಡಗಾಡು ಜನರಿಗೆ ಹಾರ್ಟಿಕಲ್ಚರ್ ಟ್ರೈನಿಂಗ್ ಕೊಡುತ್ತಾರೆ. ಅವರಿಗೆ ಟ್ರೈನಿಂಗ್ ಕೊಟ್ಟರೆ ಅವರು ಮುಂದೆ ಏನು ಮಾಡಬೇಕು. ಅವರನ್ನು ನೀವು ಈ ಫಾರಂಗಳಲ್ಲಿ ಖಾಯಂಆಗಿ ಕೆಲಸಕ್ಕೆ ಇಟ್ಟುಕೊಳ್ಳಿ ಮತ್ತು ಈ ಫಾರಂಗಳನ್ನು ಅಭಿವೃದ್ಧಿ ಮಾಡಿ; ಅವರಿಗೆ ಉದ್ಯೋಗಾವಕಾಶ ಮಾಡಿಕೊಡಿ. ಹಾಳು ಫಾರಂ

ಗಳನ್ನಾಗಿ ಇಡಬೇಡಿ. ತರಬೇತಿ ಕೊಟ್ಟು ಅವರನ್ನು ನೇಮಿಸಿಕೊಳ್ಳಿ. ಮತ್ತೆ ಅವರಿಗೆ ಗಿಡಗಳನ್ನು ಕೊಡಬೇಕು. ಒಂದು ದುರದೃಷ್ಟ ಸಂಗತಿ ಎಂದರೆ, ಇಲಾಖೆಗಳಲ್ಲಿ ಒಂದಕ್ಕೊಂದಕ್ಕೆ ಕೋಆರ್ಡಿನೇಷನ್ ಇಲ್ಲ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಬಾವಿ ತೋಡುವುದಕ್ಕೆ ೭೫ ಪರ್ಸೆಂಟ್ ಸಬ್ಸಿಡಿ ಇದೆ. ಈ ಇಲಾಖೆಯವರಿಗೂ, ಬೇರೆ ಇಲಾಖೆಯವರಿಗೂ ಕೋಆರ್ಡಿನೇಷನ್ ಇಲ್ಲ. ಇಲಾಖೆಗಳಲ್ಲಿ ಒಂದಕ್ಕೊಂದಕ್ಕೆ ಸಮನ್ವಯವಿಲ್ಲ. ಪರಿಶಿಷ್ಟ ವರ್ಗದವರಿಗೆ ಕೊಟ್ಟಂಥ ಒಂದು ಗಿಡವೂ ಬದುಕಲಿಕ್ಕೆ ಆಗುವುದಿಲ್ಲ. ಇದರ ಕಡೆ ಗಮನ ಕೊಡಬೇಕು. ಮತ್ತೆ ಆಸ್ಪತ್ರೆಗಳಲ್ಲಿ ಉದ್ಯಾನ ಬೆಳೆಸುವುದು, ಮಂತ್ರಿಗಳ ಮನೆ ಕಾಂಪೌಂಡಿನಲ್ಲಿ ಮತ್ತು ವಿಧಾನಸೌಧ ಸುತ್ತ ಉದ್ಯಾನ ಬೆಳೆಸುವುದು ಎಂದು ಎಲ್ಲಾ ಹೇಳಿದ್ದೀರಿ. ಜಿಲ್ಲಾಮಟ್ಟದ ಆಸ್ಪತ್ರೆಗಳ ಉದ್ಯಾನಕ್ಕಾಗಿ ಒಂದು ಲಕ್ಷ ೮೦ ಸಾವಿರ ಇಟ್ಟಿದ್ದೀರಿ. ಇಷ್ಟು ಹಣ ಇಟ್ಟರೆ ಸಾಕೆ ? ಯಾವ ಆಸ್ಪತ್ರೆಗಳಲ್ಲಿ ಉದ್ಯಾನವನ್ನು ಬೆಳೆಸುತ್ತಿದ್ದೀರಿ? ಹೀಗೆ ಎಲ್ಲಾ ಚೌಚೌ ಸ್ಕೀಮುಗಳನ್ನು ಕೊಡಬೇಡಿ. ೨೫ ಸ್ಕೀಮುಗಳಲ್ಲಿ ಯಾವುದೂ ಸರಿಯಾಗಿ ನಡೆಯದೇ ಹೋಗಬಹುದು. ಆಮೇಲೆ ಗೃಹಿಣಿಯರಿಗೆ ಮತ್ತು ಇತರರಿಗೆ ಹಣ್ಣು ಮತ್ತು ತರಕಾರಿಗಳ ಸಂಸ್ಕರಣೆ ಮತ್ತು ಶೇಖರಣೆ ಬಗ್ಗೆ ತರಬೇತಿ ಕೊಡಲಾಗುತ್ತಿದೆ ಎಂದು ಹೇಳಿದ್ದೀರಿ. ಬೆಳೆದವರಿಗೆ ಅದು ಗೊತ್ತಿರುತ್ತದೆ. ಇದಕ್ಕೆ ಜಿಲ್ಲಾ ಕೇಂದ್ರಗಳಲ್ಲಿ ಶೈತ್ಯಾಗಾರಗಳನ್ನು ಇಡುವ ವ್ಯವಸ್ಥೆ ಮಾಡಬೇಕು. ತರಕಾರಿ ಬೆಳೆದರೆ ಮಾರುಕಟ್ಟೆಯಲ್ಲಿ ಅರ್ಧ ಬೆಲೆಗೆ ಮಾರಾಟ ಮಾಡತಕ್ಕ ಪರಿಸ್ಥಿತಿ ಇದೆ. ಆದುದರಿಂದ ಇದನ್ನು ಕಾದಿಡುವಂಥ ಶಕ್ತಿ ಆತನಿಗೆ ಇರುವುದಿಲ್ಲ. ಎಲ್ಲೆಲ್ಲಿ ಹೆಚ್ಚಾಗಿ ತರಕಾರಿ ಬೆಳೆಯುತ್ತಾರೆ ಅಂತಹ ಕಡೆ ಶೈತ್ಯಾಗಾರಗಳನ್ನು ಇಡಬೇಕು. ಈ ದ್ರಾಕ್ಷಿ ಬೆಳೆಗಾರರ ಸಂಘ ಚೆನ್ನಾಗಿ ಕೆಲಸ ಮಾಡುವ ಹಾಗೆ ಕಾಣುತ್ತದೆ ಮತ್ತು ಇತರ ಸಂಘಗಳೂ ಇವೆ. ಈ ಬಗ್ಗೆ ಬಾನುಲಿಯಲ್ಲಿ ವಿಚಾರಗೋಷ್ಠಿ ಆಗಾಗ ಬರುತ್ತದೆ ಅದು ಯಾವಾಗಲೂ ಒಂದೇ ರೀತಿ ಇರುತ್ತದೆ. ಇವತ್ತು ಹೇಳಿದ್ದೂ ಒಂದೆ, ನಾಳೆ ಹೇಳಿದ್ದೂ ಒಂದೆ. ಈ ಬಗ್ಗೆ ವಿಶಿಷ್ಟವಾಗಿ ಭಿನ್ನಭಿನ್ನ ಹವಾಗುಣ ಇರುವ ಕಡೆ ಅಭ್ಯಾಸಮಾಡಿ, ತಿರುಗಾಡಿ ಬಂದು ಹೇಳುವಂತೆ ಮಾಡಬೇಕು ಎಂದು ನಾನು ತಮಗೆ ಸೂಚನೆ ಕೊಡುತ್ತೇನೆ. ಆಮೇಲೆ ಟಿ ಡಿ ತೆಂಗಿನ ಸಸಿಗಳು ನಮಗೆ ಯಾರಿಗೂ ಸಿಕ್ಕಬಾರದೇ ? ಬೇಕಾದವರಿಗೆ ಅವುಗಳು ಸಿಗುವಂತೆಮಾಡಿ. ನಮಗೆ ಇವತ್ತಿನವರೆಗೆ ಒಂದು ಗಿಡ ಕೂಡ ಸಿಕ್ಕಿಲ್ಲ. ಟಿ ಡಿ ಹೈಬ್ರಿಡ್ ತೆಂಗಿನ ಸಸಿಗಳನ್ನು ಎಲ್ಲಿ ಮಾಡುತ್ತಾರೆಂದು ತಮಗೆ ಗೊತ್ತಿದೆ. ಅವುಗಳನ್ನು ನಮಗೂ ಕೊಡಿಸುವ ಹಾಗೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಆಮೇಲೆ ಐಆರ್‌ಡಿಪಿಯಲ್ಲೂ ಸಾಲ ಕೊಡುತ್ತಾರೆ. ಆದರೆ ತೆಂಗಿನ ಸಸಿಗಳನ್ನು ನೆಡುವ ಸೀಸನ್ನಿನಲ್ಲಿ ಕೊಡುವುದಿಲ್ಲ. ಅಲ್ಲದೆ ಅವನಿಗೆ ಒಳ್ಳೆಯ ಸಸಿಗಳು ಸಿಕ್ಕುವುದಿಲ್ಲ, ಬೇಡದ, ಬೆಳೆಯಲಾಗದೇ ಇರುವ ಸಸಿಗಳನ್ನು ಕೊಡುತ್ತಾರೆ. ಇದಕ್ಕಾಗಿ ಕೊಟ್ಟಿರುವ ಸಾಲ ಉಳಿಯುತ್ತದೆಯೇ ಹೊರತು ತೆಂಗಿನ ಸಸಿ ಒಂದೂ ಇರುವುದಿಲ್ಲ. ಇದರಲ್ಲಿ ಉತ್ಪ್ರೇಕ್ಷೆ ಇಲ್ಲ. ಮನಸ್ಸು ಇಲ್ಲದೇ ಹೋದರೆ ಇಂತಹ ಯೋಜನೆಗಳು ಬೇಡ. ನಿಜವಾಗಿ ಮನಸ್ಸಿದ್ದರೆ ನಿಜವಾಗಿ ಬಡವರಬಗ್ಗೆ ಕಳಕಳಿ ಇದ್ದರೆ, ಕಾಲಕ್ಕೆ ಸರಿಯಾಗಿ ಆಗದೇ ಹೋದರೆ, ದುರುಪಯೋಗವಾಗಿದ್ದರೆ ಅದಕ್ಕೆ ಯಾರು ಜವಾಬ್ದಾರರೋ ಅವರನ್ನು ಶಿಕ್ಷೆ ಮಾಡಿ. ಆದುದರಿಂದ ಮನಃಪೂರ್ವಕವಾಗಿ ಕೆಲಸ ಮಾಡುವಂಥ ರೀತಿಯಲ್ಲಿ ಈ ಇಲಾಖೆಯನ್ನು ಸಜ್ಜುಗೊಳಿಸಬೇಕು ಎಂದು ಹೇಳುತ್ತೇನೆ.

ಇನ್ನು ಕೊಕೊ ಬಗ್ಗೆ ಹೇಳಬೇಕಾಗಿದೆ. ಇವತ್ತು ಚಾಕಲೇಟ್ ಫ್ಯಾಕ್ಟರಿ ಕೂಡ ಬರುತ್ತಿದೆ. ನಮ್ಮ ರಾಜ್ಯದಲ್ಲಿ ಕೊಕೊ ಬೆಳೆ ಕಡಿಮೆ ಇದೆ, ಕೇರಳವನ್ನು ಸೇರಿದರೂ ನಮ್ಮ ಫ್ಯಾಕ್ಟರಿಗೆ ಬೇಕಾದಷ್ಟು ಸಿಗುವುದಿಲ್ಲ, ಅಂತಹ ದೊಡ್ಡ ಫ್ಯಾಕ್ಟರಿ ಬರುತ್ತಿದೆ. ಹಿಂದೆ ಒಂದು ಸಲ ಪುಕ್ಕಟೆಯಾಗಿ ಕೊಕೊ ಸಸಿಗಳನ್ನು, ತೆಂಗಿನ ಸಸಿಗಳನ್ನು ರೈತರಿಗೆ ಇಲಾಖೆಯವರು ಕೊಟ್ಟಿದ್ದರು. ಅದನ್ನು ಏಕೆ ನಿಲ್ಲಿಸಿದರೂ ಗೊತ್ತಿಲ್ಲ, ಇಂತಹ ಸಸಿಗಳನ್ನು ಕೊಡುವುದಕ್ಕೆ ವಿಚಾರ ಮಾಡಬೇಕು. ಉಚಿತವಾಗಿ ಕೊಕೊ ಗಿಡಗಳನ್ನು ನೆಡಿಸಿಕೊಡುವುದಕ್ಕೆ ಲಕ್ಷಾಂತರ ರೂಪಾಯಿ ಬೇಕಾಗುವುದಿಲ್ಲ, ಮನಸ್ಸು ಬೇಕು ಅಷ್ಟೆ, ಅದನ್ನು ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಪಶುಸಂಗೋಪನಾ ಇಲಾಖೆಯ ಬಗ್ಗೆ ಹೇಳುವುದಾದರೆ, ಇದರ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ. ಏಕೆಂದರೆ ಜಿಲ್ಲಾ ಮಟ್ಟದಲ್ಲಿ ಹೇಗಿದೆಯೆಂದರೆ, ಜಿಲ್ಲಾ ಮಟ್ಟಕ್ಕೂ ಸಹಾಯಕ ನಿರ್ದೇಶಕರಿದ್ದಾರೆ, ತಾಲ್ಲೂಕು ಮಟ್ಟಕ್ಕೂ ಸಹಾಯಕ ನಿರ್ದೇಶಕರಿದ್ದಾರೆ. ಎಲ್ಲರೂ ಒಂದೇ ದರ್ಜೆಯ ಅಧಿಕಾರಿಗಳೇ. ಈ ರೀತಿಯಾಗಿದ್ದರೆ ಜಿಲ್ಲಾ ಮಟ್ಟದಲ್ಲಿ ಸರಿಯಾಗಿ ಕಂಟ್ರೋಲ್ ಇರುತ್ತದೆಯೇ ? ಕೋಆರ್ಡಿನೇಷನ್ ಇರುತ್ತದೆಯೇ ? ಇದರ ಬಗ್ಗೆ ತಾವು ವಿಚಾರ ಮಾಡಬೇಕು. ಹಿಂದಿನ ಸರ್ಕಾರದವರು ಆರ್.ವಿ.ಡಿ.ಗಳನ್ನು ಸ್ಯಾಂಕ್ಷನ್ ಮಾಡಿದ್ದಾರೆ, ಯಾರೇ ಆಗಲಿ ಜನರಿಗೆ ಅನುಕೂಲ ಮಾಡಿಕೊಡಬೇಕು. ಹಳ್ಳಿಗಳಲ್ಲಿ ರಾಸುಗಳನ್ನು ಕೊಡುತ್ತಾ ಇದ್ದಾರೆ. ಇದರಿಂದ ಎಷ್ಟು ಕೋಳಿ ಅಭಿವೃದ್ಧಿಯಾಗಿದೆ ಎಷ್ಟು ಕುರಿ ಅಭಿವೃದ್ಧಿಯಾಗಿದೆ, ವಿಶೇಷ ತಳಿಯ ಜಾನುವಾರುಗಳು ಅಭಿವೃದ್ಧಿ

ಯಾಗಿದೆಯೇ ? ಆರ್. ವಿ. ಡಿ. ಗಳನ್ನು ೮–೧೦ ರಾಜ್ಯಗಳಿರುವವರಿಗಾದರೂ ಕೊಡಬೇಕು. ತಾಲ್ಲೂಕು ಕೇಂದ್ರಗಳಲ್ಲಿ ಒಂದೆರಡು ಬಿಟ್ಟರೆ ಬೇರೆ ಎಲ್ಲಿದೆ ? ನೀವು ಒಂದವೇಳಾದರೂ ಅದನ್ನು ಪೂರೈಸಬಾರದೆ ? ಶ್ರೀಮಾನ್ ಪ್ರಕಾಶ್‌ರವರು ನಮಗೆ ಉತ್ತರ ಹೇಳುವಾಗ ಈ ಬಗ್ಗೆ ಹೇಳಿದರು. ಏಕೆ ಈ ತಾರತಮ್ಯ ? ರಾಜಕೀಯ ಉದ್ದೇಶದಿಂದ ಪ್ರತಿಯೊಂದಕ್ಕೂ ಚುಚ್ಚಿ ಮಾತನಾಡಬೇಡಿ. ಈ ವರ್ಷ ಎಷ್ಟು ಆರ್.ವಿ.ಡಿ.ಗಳನ್ನು ಮಾಡುತ್ತೀರಿ ? ತಾಲ್ಲೂಕಿಗೆ ಒಂದೊಂದು ಆರ್. ವಿ. ಡಿ. ಮಾಡಿ ಮಾಡಿಕೊಡುತ್ತೀರಾ. ಈ ಬಗ್ಗೆ ತಾವು ಉತ್ತರ ಕೊಡಬೇಕು ಎಂದು ಹೇಳುತ್ತೇನೆ. ಮತ್ತೆ ಎಲ್ಲಿ ಕೇಳಿದರೂ ಡಾಕ್ಟರ್ಸ್ ಇಲ್ಲ ಎಂದು ಹೇಳುತ್ತಾರೆ. ಆರ್ಟಿಫಿಷಿಯಲ್ ಇನ್ಸಿಮಿನೇಷನ್ ಸೆಂಟರ್ಸ್ ಮಾಡಿ ; ವೆಸ್ಟರ್ನ್ ಘಾಟ್‌ಗೆ ಕೊಟ್ಟರು. ಬರೀ ಕಟ್ಟಡ ಕಟ್ಟಿಬಿಟ್ಟಿದ್ದಾರೆ ಆಯಿತೆ ? ಕಾಂಪೌಂಡರ್ ಇಲ್ಲ. ಡಾಕ್ಟರ್ ಇಲ್ಲ, ಅಂದರೆ ಅದು ಹೇಗೆ ನಡೆಯಬೇಕು. ಮತ್ತೆ ಸಂಚಾರಿ ಘಟಕ ಎಂದು ಹೇಳಿದ್ದೀರಿ, ಸಂಚಾರಿ ಘಟಕಕ್ಕೆ ರಿಪೇರಿ ಇಲ್ಲ, ದುಡ್ಡಿಲ್ಲ ಎಂದು ಹೇಳುತ್ತಾರೆ. ಡ್ರೈವರನ್ನು ಕೇಳಿದರೆ ಅಲಾಟ್‌ಮೆಂಟ್ ಇಟ್ಟಿಲ್ಲ ಎಂದು ಹೇಳುತ್ತಾನೆ. ವೆಸ್ಟರ್ನ್ ಘಾಟ್‌ಗೆ ಸಂಚಾರಿ ಘಟಕ ಕೊಟ್ಟಮೇಲೆ ಅದನ್ನು ರಿಪೇರಿ ಮಾಡಿಕೊಡದಿದ್ದರೆ ಯಾವ ಉದ್ದೇಶಕ್ಕೆ ಕೊಟ್ಟಿದ್ದೀರೋ ಆ ಉದ್ದೇಶ ಸಫಲವಾಗುವ ರೀತಿಯಲ್ಲಿ ಮತ್ತು ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಿಕೊಡುವುದು ಇಲಾಖೆಯ ಜವಾಬ್ದಾರಿಯಲ್ಲವೇ ? ಔಷಧಿ ಕೊಟ್ಟಿದ್ದೀರಿ. ಕಾಂಪೌಂಡರ್ ಕೊಟ್ಟಿದ್ದೀರಿ. ಡಾಕ್ಟರನ್ನು ಇತ್ತೀಚೆಗೆ ಲಾಗಿ ಓಡಾಡಲಿಕ್ಕೆ ಬಿಟ್ಟಿದ್ದೀರಿ. ಈ ರೀತಿ ಏಕೆ ಇಟ್ಟಿದ್ದೀರಿ ಇದರ ಉಪಯೋಗ ರೈತರಿಗೆ ಸಿಕ್ಕಿದೆಯೋ ಎಂದು ಯೋಚನೆ ಮಾಡಿ ಇದರ ಬಗ್ಗೆ ಆಸಕ್ತಿಯಿಂದ ಕೆಲಸ ಮಾಡುವ ಹಾಗೆ ಮಾಡಬೇಕು. ಇನ್ನು ಮುಂದಾದರೂ ಮಾನ್ಯ ಮಂತ್ರಿಗಳು ಇವುಗಳ ಬಗ್ಗೆ ಗಮನ ಹರಿಸಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಔಷಧಿಗಳ ಬಗ್ಗೆ ಏನಾಗಿದೆ ಎಂದರೆ, ಜಾನುವಾರುಗಳಿಗೆ ಯಾವ ತರದ ರೋಗ ಬರುತ್ತದೋ ಅದನ್ನು ವಾಸಿಮಾಡತಕ್ಕ ಔಷದಿಗಳೇ ಇರುವುದಿಲ್ಲ. ದುಡ್ಡು ಕೊಟ್ಟು ವಾಸಿಮಾಡೋಣವೆಂದರೆ ಮೆಡಿಕಲ್ ಶಾಪ್‌ಗಳಲ್ಲೂ ಸಿಕ್ಕುವುದಿಲ್ಲ. ಅಲಾಟ್‌ಮೆಂಟ್‌ನಲ್ಲಿ ಯಾವ ಔಷದಿ ಬರುತ್ತದೋ ಆ ಔಷದಿಯನ್ನು ಕೇಳಿದರೆ ಅದನ್ನು ಕೊಡುವುದಕ್ಕೆ ಬರುವುದಿಲ್ಲ ಅಂತ ಹೇಳುತ್ತಾರೆ. ಆದ್ದರಿಂದ ಔಷದಿಯನ್ನು ಸರಬರಾಜು ಮಾಡುವಂತ ಸಂದರ್ಭದಲ್ಲಿ ಯಾವ ಯಾವ ಭಾಗಗಳಲ್ಲಿ ಯಾವ ಯಾವ ರೋಗ ಇರುತ್ತದೆಂದು ತಿಳಿದುಕೊಂಡು ಅದಕ್ಕೆ ಸಂಬಂಧಪಟ್ಟಂತಹ ಔಷದಿಗಳನ್ನು ಸರಬರಾಜು ಮಾಡಬೇಕೆಂದು ಸಲಹೆ ಮಾಡುತ್ತೇನೆ. ನಮ್ಮ ಮಲೆನಾಡು ಭಾಗದಲ್ಲಿ ವಿಶೇಷವಾಗಿ ಬರತಕ್ಕಂತಹ ರೋಗಗಳು ಅಂದರೆ ಕಾಲು ಬಾಯಿ ರೋಗ ಮತ್ತೆ ದೊಡ್ಡ ರೋಗ ಬರುತ್ತದೆ. ಇವಕ್ಕೆ ಸಂಬಂಧ ಪಟ್ಟ ಔಷದಿಗಳನ್ನು ಆ ಭಾಗಕ್ಕೆ ಸರಬರಾಜು ಮಾಡಬೇಕು. ಜೊತೆಗೆ ಆ ಔಷದಿಯನ್ನು ಆಸ್ಪತ್ರೆಯಲ್ಲೂ ಇಟ್ಟಿರಬೇಕು. ಮಂತ್ರಿಗಳು ಇದರ ಬಗ್ಗೆ ಆಲೋಚನೆ ಮಾಡಿದ್ದಾರೆಯೇ ಎಂದು ನಾನು ಕೇಳಬೇಕಾಗಿದೆ. ಮಂತ್ರಿಗಳು ಆ ರೀತಿ ಯಾವ ಯಾವ ಭಾಗದಲ್ಲಿ ಯಾವ ಯಾವ ರೋಗಗಳು ಇರುತ್ತವೋ ಆ ಭಾಗಕ್ಕೆ ಆಯಾ ಔಷದಿಗಳನ್ನು ಸರಬರಾಜು ಮಾಡುವುದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿ

(ಉಪಾಧ್ಯಕ್ಷರು–ಅಧ್ಯಕ್ಷರ ಸ್ಥಾನವನ್ನಲಂಕರಿಸಿದರು)

ಕೊಳ್ಳುತ್ತೇನೆ. ಯೋಗ್ಯ ಔಷದಿಗಳ ಸರಬರಾಜು ಈಗ ಇಲ್ಲ. ಕಾಲು ಬಾಯಿ ರೋಗ ಹಾಗೂ. ದೊಡ್ಡ ರೋಗ ಮಲೆನಾಡು ಪ್ರದೇಶದಲ್ಲಿ ಹೆಚ್ಚಾಗಿ ಇದೆ. ಆದರೆ ಮೈದಾನ ಪ್ರದೇಶವಾದ ತಮ್ಮ ಜಿಲ್ಲೆಯಲ್ಲಿ ಯಾವ ರೋಗ ಇದೆ ಎಂಬುದು ನನಗೆ ಗೊತ್ತಿಲ್ಲ. ಇಂತಹ ರೋಗ ಬಂದು ಜಾನುವಾರು ಸತ್ತು ಹೋದರೆ ಶೇಕಡ ೫೦ ರಷ್ಟು ಸಬ್‌ಸಿಡಿಯನ್ನು ಕೊಡಬೇಕೆಂದು ಹೇಳುತ್ತೇನೆ. ದೊಡ್ಡ ದೊಡ್ಡ ಜಾನುವಾರುಗಳಿಗೆ ೩–೪ ಸಾವಿರ ರೂಪಾಯಿಗಳನ್ನು ಕೊಟ್ಟು ಬಡ ರೈತನಿಗೆ ಐ. ಆರ್. ಡಿ. ಪಿ. ಯೋಜನೆಯಲ್ಲಿ ಎತ್ತುಗಳನ್ನು ಕೊಡಿಸಿರುತ್ತಾರೆ. ಅಂತಹವರಿಗೆ ಇದರಿಂದ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಒಳ್ಳೆಯ ಔಷಧಿಯನ್ನು ಕೊಡುವಂತಹ ವ್ಯವಸ್ಥೆ ಯಾಗಬೇಕು. ಈ ಎರಡು ಇಲಾಖೆಗಳ ಮುಖ್ಯವಾದವುಗಳು. ನಾನು ಈಗ ಮೊದಲೇ ಏನೊಂದು ಸಲಹೆಗಳನ್ನು ಕೊಟ್ಟಿದ್ದೇನೆ. ಅವುಗಳನ್ನು ತೆಗೆದುಕೊಂಡು ಹೈನುಗಾರಿಕೆ ಹಾಗೂ ತೋಟಗಾರಿಕೆ ಇಲಾಖೆಗಳನ್ನು ವೃದ್ಧಿಗೊಳಿಸುವ ಕಡೆಗೆ ಗಮನ ಹರಿಸಬೇಕು. ಕಾಲು ಬಾಯಿ ರೋಗಕ್ಕೆ ಸರಿಯಾದ ಔಷಧಿಯನ್ನು ಕಂಡುಹಿಡಿಯುವುದಕ್ಕೆ ಒಂದು ಸಂಶೋಧನೆ ಇಲ್ಲ. ಅಂತಹ ಒಂದು ಸಂಶೋಧನೆಯನ್ನು ಮಾಡಿ, ಅದರ ಬಗ್ಗೆ ಪ್ರಯತ್ನಗಳನ್ನು ಮಾಡುವಂತಹ ದಿಸೆಯಲ್ಲಿ ಕೂಡ ತಾವು ಪ್ರಯತ್ನ ಮಾಡಬೇಕೆಂಬ ಸಲಹೆಯನ್ನು ಕೊಡುತ್ತಾ ಇಷ್ಟೊಂದು ಕಾಲಾವಕಾಶವನ್ನು ನನಗೆ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಚನ್ನಬಸವನಗೌಡ(ಕೂಡ್ಲಿಗಿ).—ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ರಸ್ತೆ ಸಾರಿಗೆ ಮತ್ತು ತೋಟಗಾರಿಕೆ ಹಾಗೂ ಪಶು ಸಂಗೋಪನ ಮತ್ತು ಹೈನುಗಾರಿಕೆ ಇಲಾಖೆಗಳ ಬೇಡಿಕೆಗಳನ್ನು ಏನು ಇಟ್ಟಿದ್ದಾರೆ, ಈ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತಾ ಕೆಲವು ವಿಚಾರಗಳನ್ನು ಹೇಳುತ್ತೇನೆ, ಈ ಇಲಾಖೆಗಳು ಬಹಳ ಪ್ರಮುಖವಾದಂತಹ ಇಲಾಖೆಗಳು. ಏಕೆಂದರೆ ಇವು ಗ್ರಾಮಾಂತರ ಪ್ರದೇಶದಲ್ಲಿರುವ ಜನರಿಗೆ ಅನುಕೂಲವನ್ನು ಮಾಡಿಕೊಡುವಂತಹ ಒಂದು ಒಳ್ಳೆಯ ಇಲಾಖೆಗಳು ಅದರಲ್ಲೂ ಮೊದಲನೆಯದಾಗಿ ರಸ್ತೆ ಸಾರಿಗೆ ಇಲಾಖೆಯ ಬಗ್ಗೆ ಹೇಳುವುದಾದರೆ ಈ ರಸ್ತೆಸಾರಿಗೆ ಇಲಾಖೆಯ ಮಂತ್ರಿಗಳು ನಮ್ಮ ಜಿಲ್ಲೆಯವರೇ ಆಗಿದ್ದಾರೆ. ಇವರು ಮಂತ್ರಿಗಳಾಗಿ ಬಂದಮೇಲೆ ಬಹಳಷ್ಟು ಸಂಖ್ಯೆಯಲ್ಲಿ ಹೊಸ ಹೊಸ ಬಸ್ಸುಗಳನ್ನು ಕೊಟ್ಟಿದ್ದಾರೆ. ಬೆಂಗಳೂರು ನಗರದಲ್ಲಿ ಹಾಗೂ ಇತರೆ ಕಡೆಗಳಲ್ಲಿ ವೃದ್ಧರಿಗೆ ಫ್ರೀ ಪಾಸುಗಳನ್ನು ಕೊಟ್ಟಿದ್ದಾರೆ. ಅದೇ ರೀತಿ ಪತ್ರಿಕಾ ಕರ್ತರಿಗೂ ಫ್ರೀ ಪಾಸುಗಳನ್ನು ಕೊಟ್ಟಿದ್ದಾರೆ ಹೆಚ್ಚಿನ ಸಂಖ್ಯೆಯಲ್ಲಿರುವ ವಿದ್ಯಾರ್ಥಿಗಳಿಗೂ ಫ್ರೀ ಪಾಸುಗಳನ್ನು ಕೊಟ್ಟಿದ್ದಾರೆ. ಈ ರೀತಿ ಫ್ರೀ ಪಾಸುಗಳ ವ್ಯವಸ್ಥೆಯನ್ನು ಮಾಡಿಕೊಟ್ಟು ಎಲ್ಲ ಜನರಿಗೂ ಅನುಕೂಲ ಮಾಡಿಕೊಟ್ಟಿದ್ದಾರೆ ಇವರು ಬಂದಮೇಲೆ ಯಾವ ಯಾವ ಊರಿಗೆ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳು ಹಿಂದೆ ಹೋಗುತ್ತಿರಲಿಲ್ಲವೋ ಆ ಊರುಗಳಿಗೆಲ್ಲಾ ರಸ್ತೆ ಸಾರಿಗೆ ಬಸ್ಸುಗಳ ವ್ಯವಸ್ಥೆಯನ್ನು ಮಾಡಿದ್ದಾರೆ. ಇದಕ್ಕಾಗಿ ಅವರನ್ನು ನಾನು ಶ್ಲಾಘಿಸುತ್ತೇನೆ. ಹಿಂದೆ ಇಂತಹ ಮಂತ್ರಿಗಳು ಆ ರೀತಿ ಮಾಡಿರಲಿಲ್ಲ. ನಮ್ಮ ತಾಲ್ಲೂಕಿನಲ್ಲಿ ಡ್ರೈವರ್‌ಗಳಿಗೆ ತರಬೇತಿ ಶಾಲೆಯೊಂದನ್ನು ಪ್ರಾರಂಭ ಮಾಡಬೇಕೆಂದು ಬಹಳ ವರ್ಷದಿಂದಲೂ ಬೇಡಿಕೆ ಇತ್ತು. ಆದರೆ ಈ ಸಾರಿ ಅಂತಹ ಒಂದು ತರಬೇತಿ ಶಾಲೆಯನ್ನು ನಮ್ಮ ಹಗರಿ ಬೊಮ್ಮನಹಳ್ಳಿ ತಾಲ್ಲೂಕಿಗೆ ಸುಮಾರು ೬೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕೊಟ್ಟಿದ್ದಾರೆ. ಅದಕ್ಕಾಗಿ ಆ ತಾಲ್ಲೂಕಿನ ಜನತೆಯ ಪರವಾಗಿ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸಬೇಕಾಗಿದೆ. ಹಿಂದಿನ ಮಂತ್ರಿಗಳು ನಿದ್ರಾ ಸಚಿವರು ಎಂದು ಹೇಳುತ್ತಿದ್ದರು. ಆದರೆ ಈಗಿನ ಸಾರಿಗೆ ಮಂತ್ರಿಗಳಾಗಿರುವಂತಹ ಶ್ರೀಮಾನ್ ಎಂ.ಪಿ. ಪ್ರಕಾಶ್‌ರವರು ಬಹಳ ಚುರುಕು ಇದ್ದಾರೆ. ಹಾಗೂ ಮೇಧಾವಿಗಳಿದ್ದಾರೆ. ಜೊತೆಗೆ ಒಳ್ಳೆಯ ಕೆಲಸವನ್ನೂ ಮಾಡುತ್ತಿದ್ದಾರೆ. ಸಾರಿಗೆ ಸಂಸ್ಥೆಯಲ್ಲಿ ಲೋಪದೋಷ ಇಲ್ಲ ಅಂತ ಅಲ್ಲ. ಕೂಡ್ಲಗಿ ನಮ್ಮ ಕ್ಷೇತ್ರ ಇಡೀ ಜಿಲ್ಲೆಯಲ್ಲಿ ದೊಡ್ಡ ದೊಡ್ಡ ಗ್ರಾಮಗಳಿಗೆ ಬಸ್ ಸೌಕರ್ಯ ಇಲ್ಲ. ಇದಕ್ಕೆ ಕಾರಣ ರಸ್ತೆಗಳ ಸೌಕರ್ಯ ಇಲ್ಲ. ಆದ್ದರಿಂದ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯ ಸಚಿವರು ಮಾಡಿಕೊಟ್ಟು ದೊಡ್ಡ ದೊಡ್ಡ ಗ್ರಾಮಗಳಿಗಾದರೂ ಬಸ್ ಸೌಕರ್ಯವನ್ನು ಒದಗಿಸಿಕೊಟ್ಟರೆ ಅನುಕೂಲವಾಗುತ್ತದೆ. ಅದು ಹಿಂದುಳಿದ ಪ್ರದೇಶವಾಗಿರುವುದರಿಂದ ಅದಕ್ಕೆ ಆದ್ಯತೆಯನ್ನು ಕೊಡಬೇಕು. ಅದೇ ರೀತಿ ಸಾರಿಗೆ ಸಂಸ್ಥೆಯಲ್ಲಿ ಸೋರಿ ಹೋಗುತ್ತಿರುವ ಹಣವನ್ನು ತಪ್ಪಿಸುವುದಕ್ಕಾಗಿ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಕಂಡಕ್ಟರ್‌ಗಳು ಹಾಗೂ ಡ್ರೈವರ್‌ಗೆ ಆಗಾಗ್ಗೆ ಪ್ರಯಾಣಿಕರ ಜೊತೆಯಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದರ ಬಗ್ಗೆ ೩-೪ ತಿಂಗಳಿಗೊಮ್ಮೆ ತರಬೇತಿಯನ್ನು ಕೊಟ್ಟರೆ ಪರಿಸ್ಥಿತಿ ಸುಧಾರಣೆಯಾಗಬಹುದೆಂದು ನನಗನಿಸುತ್ತದೆ. ಡ್ರೈವರ್‌ಗಳು ಬಸ್ಸುಗಳನ್ನು ಬಸ್ ಡಿಪೋನಿಂದ ಹೊರಗೆ ತರಬೇಕೆಂದರೆ, ಅಲ್ಲಿರತಕ್ಕಂತಹ ಮ್ಯಾಕಾನಿಕ್‌ಗೆ ಮಾಮೂಲು ಕೊಡಬೇಕಾಗುತ್ತದೆ. ಮಾಮೂಲು ಕೊಡದಿದ್ದರೆ ಕೆಟ್ಟಿರುವ ಬಸ್‌ಗಳನ್ನೆಲ್ಲ ಒಳ್ಳೆಯ ಕಂಡೀಷನಲ್ಲಿವೆ ಎಂದು ಕಳುಹಿಸಿಬಿಡುತ್ತಾರೆ. ಇದರಿಂದ ಮೆಕ್ಯಾನಿಕ್‌ಗಳನ್ನು ಬದಲಾವಣೆ ಮಾಡಬೇಕು. ಕೆಲವು ಬಸ್‌ಗಳನ್ನು ರಿಪೇರಿ ಮಾಡಿದ್ದೇವೆಂದು ಹೇಳಿ ಹಾಗೆ ಕಳುಹಿಸಿಕೊಡುತ್ತಾರೆ. ಅದನ್ನು ನಂಬಿ ತೆಗೆದುಕೊಂಡು ಹೋದಂತಹ ಬಸ್ಸು ದಾರಿಯ ನಡುಮಧ್ಯೆ ನಿಂತು ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇದು ಆಗದ ರೀತಿಯಲ್ಲಿ ಮಾನ್ಯ ಮಂತ್ರಿಗಳು ಗಮನ ಹರಿಸಬೇಕು. ಬಸ್ ಡಿಪೋ ಮ್ಯಾನೇಜರ್ ಹಾಗೂ ಡಿವಿಜನಲ್ ಕಂಟ್ರೋಲರ್‌ಗಳನ್ನು ಗ್ರಾಮಾಂತರ ಪ್ರದೇಶದ ಕಡೆ ಹಾಕುವಾಗ ಜನರ ಕಷ್ಟಗಳನ್ನು ತಿಳಿದುಕೊಂಡಿರುವಂತಹವರನ್ನು ಹಾಕಿ. ನಗರದಲ್ಲೇ ಇದ್ದು, ಗ್ರಾಮಾಂತರ ಪ್ರದೇಶದ ಜನರ ಕಷ್ಟ ಗೊತ್ತಿಲ್ಲದವವರನ್ನು ಗ್ರಾಮಾಂತರ ಪ್ರದೇಶದ ಕಡೆಗೆ ಹಾಕುವುದರಿಂದ ಆ ಜನರಿಗೆ ತೊಂದರೆಯಾಗುತ್ತಿದೆ ಆದ್ದರಿಂದ ಗ್ರಾಮಾಂತರ ಪ್ರದೇಶದ ಜನರ ಬಗ್ಗೆ ಆಸಕ್ತಿ ಇರುವ ಜನರನ್ನೇ ಹಾಕಿ ಹಳ್ಳಿಯ ಪ್ರಯಾಣಿಕರಿಗೆ ತೊಂದರೆಯಾಗದ ಹಾಗೆ ನೋಡಿಕೊಳ್ಳಬೇಕೆಂದು ಸಲಹೆ ಮಾಡುತ್ತಿದ್ದೇನೆ. ತೋಟಗಾರಿಕೆ ಇಲಾಖೆ ಬಹಳ ಪ್ರಮುಖವಾದುದು ಬೆಂಗಳೂರು ನಗರ ಸುಂದರವಾದ ನಗರ ಎಂದು ಅನ್ನಿಸಿಕೊಂಡು ಬಂದಿದೆ. ಇದಕ್ಕೆ ಕಾರಣ ತೋಟಗಾರಿಕೆ ಇಲಾಖೆಯವರು ಎಲ್ಲಾ ಕಾಲಗಳಲ್ಲಿ ಹೂವುಗಳನ್ನು ಬಿಡತಕ್ಕ ಗಿಡಗಳನ್ನು ಹಾಕಿರುವುದರಿಂದ ನಗರ ನೋಡಲು ಚೆನ್ನಾಗಿ ಕಾಣುತ್ತದೆ.

ಈ ಇಲಾಖೆಯಿಂದ ರೈತರಿಗೆ ಕೂಡ ಅನುಕೂಲವಾಗುತ್ತದೆ. ಪ್ರತಿಯೊಂದು ಗ್ರಾಮದಲ್ಲಿ ತೋಟ ಮಾಡತಕ್ಕ ಕಾರ್ಯ ಜಾಗ್ರತೆ ಆಗಬೇಕು. ನಮ್ಮ ತಾಲ್ಲೂಕಿನಲ್ಲಿ ಬಾವಿ ತೋಡಿಸಿ ಕೊಟ್ಟರೆ ಬೇಕಾದಷ್ಟು ನೀರು ಬೀಳುತ್ತದೆ, ಆ ನೀರನ್ನು ಉಪಯೋಗಮಾಡಿ ಗಿಡಗಳನ್ನು ಚೆನ್ನಾಗಿ ಬೆಳಸಬಹುದು. ಹಗರಿ ಬೊಮ್ಮನಹಳ್ಳಿ ತಾಲ್ಲೂಕು ಕೆಂಪು ಮಣ್ಣಿನಿಂದ ಕೂಡಿದ ನೆಲ. ಆ ತಾಲ್ಲೂಕಿಗೆ ಯಾವ ಅನುಕೂಲಗಳನ್ನು ಈ ಇಲಾಖೆಯ ಮೂಲಕ ಕಲ್ಪಿಸಿಕೊಡದಿರುವುದು ಸರಿಯಲ್ಲ. ಗ್ರಾಮಾಂತರ ಪ್ರದೇಶದ ಜನರಿಗೆ ೧೦೦ ಬಾವಿಗಳನ್ನು ತೋಡಿಸಿಕೊಟ್ಟು ತೋಟಗಾರಿಕೆಯನ್ನು ಅಭಿವೃದ್ಧಿ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ. ಬರೀ ಹೂಗಿಡಗಳನ್ನು ಬೆಳೆಯುವುದು ಮಾತ್ರವಲ್ಲದೆ ತೆಂಗು ಬಾಳೆ ಅಡಿಕೆ ಮುಂತಾದವುಗಳನ್ನು ಬೆಳೆದರೆ ಅನುಕೂಲವಾಗುತ್ತದೆ. ಮತ್ತು ರೈತರ ಆರ್ಥಿಕ ಪರಿಸ್ಥಿತಿಯೂ ಸುಧಾರಿಸುತ್ತದೆ. ಜೊತೆಗೆ ಹೈನುಗಾರಿಕೆ ಕೂಡ ರೈತನಿಗೆ ಮುಖ್ಯವಾದುದು. ರೈತನಿಗೆ ಪೌಷ್ಟಿಕ ಆಹಾರವನ್ನು ಕೊಡತಕ್ಕ ಯೋಜನೆ ಅಂದರೆ ಹೈನುಗಾರಿಕೆ. ಒಳ್ಳೆಯ ಹಸುಗಳನ್ನು ಮತ್ತು ಹೋರಿಗಳನ್ನು ಅವರು ಸಾಕುತ್ತಾರೆ. ಅವುಗಳಿಂದ ಹಳ್ಳಿಗಾಡಿನ ಒಕ್ಕಲುತನಕ್ಕೆ ಬಹಳ ಉಪಯೋಗವಾಗುತ್ತದೆ. ಅಂಥ ಯೋಜನೆಯನ್ನು ಇಲಾಖೆಯವರು ಕೈಗೊಳ್ಳಬೇಕು. ಹಳ್ಳಿಗಳಲ್ಲಿ ಹಾಲನ್ನು ಉತ್ಪಾದನೆ ಮಾಡಿದರೂ ಅದನ್ನು ಪಟ್ಟಣದವರಿಗೆ ಮಾರಾಟಮಾಡುತ್ತಾರೆ. ಇದರಿಂದ ಹಳ್ಳಿಗರಿಗೆ ಹಾಲು ಸಿಗುವುದಿಲ್ಲ. ಅವರಿಗೆ ಒಳ್ಳೆಯ ಹಾಲು ಕೊಡತಕ್ಕ ಹಸುಗಳನ್ನು ಒದಗಿಸಬೇಕು. ಮತ್ತು ಒಳ್ಳೆಯ ಬೀಜದ ಹೋರಿಗಳನ್ನು ಕೂಡ ಕೊಡಿಸಿಕೊಡಬೇಕು ಮತ್ತು ಅವರಿಗೆ ಹೆಚ್ಚು ಹೆಚ್ಚಾಗಿ ಹಾಲನ್ನು ಉಪಯೋಗಿಸುವಂತೆ ತಿಳುವಳಿಕೆ ನೀಡಬೇಕು. ಏಕೆಂದರೆ ಹಳ್ಳಿಯ ಜನರು ಆರೋಗ್ಯವಂತರಾಗಿದ್ದರೆ ದೇಶ ಸುಖವಾಗಿರುತ್ತದೆ. ಶೆಕಡ ೮೦ ರಷ್ಟು ಜನರು ಹಳ್ಳಿಗಳಲ್ಲೇ ವಾಸಮಾಡುವವರು ಇರುವುದರಿಂದ ಅವರ ಬಗ್ಗೆ ಸರ್ಕಾರ ಹೆಚ್ಚಿನ ನಿಗಾವಹಿಸಿ ಅವರುಗಳಿಗೆ ಬೇಕಾದ ಯೋಜನೆಗಳನ್ನು ಕೈಗೊಳ್ಳಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜೆ ಡಿ. ಸೋಮಪ್ಪ (ಸಕಲೇಶಪುರ). ಮಾನ್ಯ ಅಧ್ಯಕ್ಷರೆ, ಈ ದಿವಸ ನಾನು ಸಾರಿಗೆ, ಪಶುಸಂಗೋಪನೆ ಮತ್ತು ತೋಟಗಾರಿಕೆ ಇಲಾಖೆಗಳ ಬೇಡಿಕೆಗಳ ಬಗ್ಗೆ ಮಾತನಾಡಲು ನಿಂತಿದ್ದೇನೆ. ಕಳೆದ ವರ್ಷ ಮಂತ್ರಿಗಳು ಹೊಸದಾಗಿ ಬಂದಿದ್ದಾರೆಂದು ಸುಲಭವಾಗಿ ಪಾಸ್ ಮಾಡಿಕೊಟ್ಟಿದ್ದೆವು. ಆದರೆ ಈ ಸಾರಿ ಅಷ್ಟು ಸುಲಭವಾಗಿ ಪಾಸ್ ಮಾಡಿಕೊಡುವುದು ಕಷ್ಟವಾಗಿದೆ ಎಂದು ಹೇಳಬಯಸುತ್ತೇನೆ. ರಸ್ತೆ ಸಾರಿಗೆ ಎಂಬುದು ಸಾರ್ವಜನಿಕರಿಗೆ ಸುಖ ಪ್ರಯಾಣದ ಸೌಕರ್ಯವನ್ನು ಒದಗಿಸತಕ್ಕ ಇಲಾಖೆ. ಆದರೆ ಇವತ್ತು ಏನಾಗಿದೆ ಎಂದರೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಎಂಬುದು ಕರ್ನಾಟಕ ರಾಕ್ಷಸ ರಸ್ತೆ ಸಾರಿಗೆ ಆಗಿದೆ. ಯಾವ ಬಸ್ಸುಗಳನ್ನು ನೋಡಿದರೂ ಫುಲ್ ರಶ್ ಇರುತ್ತದೆ. ಒಂದೊಂದು ಬಸ್ಸಿನಲ್ಲಿ ೧೨೦ ಜನರನ್ನು ತುಂಬಿರುತ್ತಾರೆ. ಆದರೆ ಕಲೆಕ್ಷನ್ ನೋಡಿದರೆ ಮಾತ್ರ ಇಲ್ಲವೇ ಇಲ್ಲ. ಈ ಸಾರಿಗೆ ಯಾರಿಗೋಸ್ಕರ ಇದೆ? ಡ್ರೈವರ್ ಕಂಡಕ್ಟರ್‌ಗಳು ಮೊಸಾಯಿಕ್ ಫ್ಲೋರಿಂಗ್ ಮನೆಗಳನ್ನು, ಅಧಿಕಾರಿಗಳು ಮಲ್ಟೀ ಸ್ಟೋರಿಡ್ ಬಿಲ್ಡಿಂಗ್‌ಗಳನ್ನು ಕಟ್ಟಿಕೊಂಡು ಇರುವುದಕ್ಕೆ ಇದೆಯೆ? ಅಥವಾ ಸಾರ್ವಜನಿಕರ ಹಿತದೃಷ್ಟಿಯಿಂದ ಇದೆಯೋ ಎಂಬುದನ್ನು ಮಂತ್ರಿಗಳು ಹೇಳಬೇಕು. ಶಾಸಕರಿಗೆ ಬಸ್ ಪಾಸ್ ಕೊಟ್ಟಿರುವ ಬಗ್ಗೆ ಕಳೆದ ಸಾರಿ ಹೇಳಿದ್ದೆ, ನಾವು ಬಸ್ಸಿನಲ್ಲಿ ಪ್ರಯಾಣ ಮಾಡುವಾಗ, ಅದು ಡ್ಯೂಟಿ ಪಾಸೇ ಎಂದು ಕಂಡಕ್ಟರ್ ಕೇಳುತ್ತಾನೆ. ಅಲ್ಲ ಅಂದಾಕ್ಷಣ ಮುಂದಕ್ಕೆ ಹೋಗುತ್ತಾನೆ. ಮತ್ತೆ ಬಂದು ಯಾವ ಇಲಾಖೆಯಲ್ಲಿ ಇದ್ದೀರಿ ಎಂದು ಕೇಳುತ್ತಾನೆ. ಆಗ ನಾವು ಎಂ.ಎಲ್.ಎ. ಅನ್ನುತ್ತೇವೆ. ಹೀಗಾಗಿ ನಾವು ಬಸ್ಸಿನಲ್ಲಿ ಪ್ರಯಾಣ ಮಾಡುವುದೂ ಕಷ್ಟವಾಗಿದೆ. ಕಂಡಕ್ಟರಿಂದ ಪಾರಾಗುವುದೂ ಒಂದೇ ಮತ್ತು ಬಾರ್ಬರ್ ಷಾಪಿನಲ್ಲಿ ಹಜಾಮನಿಗೆ ತಲೆ ಕೊಟ್ಟಾಗ ಆಗುವ ಅವಸ್ಥೆಯೂ ಒಂದೇ ಆಗಿದೆ. ಆದುದರಿಂದ ಶಾಸಕರಿಗೆ ಏನಾದರೂ ಒಂದು ಐಡೆಂಟಿಫಿಕೇಷನ್ ಕಾರ್ಡನ್ನು ಕೊಡಬೇಕು. ನಾವು ೫-೬ನೇ ಸೀಟುಗಳಲ್ಲಿ ಕುಳಿತಾಗ ಗೌರವವಾಗಿ ಮಾತನಾಡುವ ತರಬೇತಿಯನ್ನು ಮೊದಲು ಕಂಡಕ್ಟರ್‌ಗಳಿಗೆ ಕೊಡಬೇಕು. ಈ ಬಗ್ಗೆ ಅನೇಕ ಮಂದಿ ಸದಸ್ಯರು ಹೇಳಿದ್ದಾರೆ. ಸಾರ್ವಜನಿಕರಿಗೂ ಮತ್ತು ಕಂಡಕ್ಟರಿಗೂ ಒಂದು ರೀತಿಯ ಸೌಹಾರ್ದ ಭಾವನೆ ಇರುವಂತೆ ಒಂದು ತರಬೇತಿಯನ್ನು ಕೊಡುವ ಸಲುವಾಗಿ ತರಗತಿಗಳನ್ನು ನಡೆಸಿ ಒಂದೆರಡು ತಿಂಗಳಿಗೆ ಒಂದೊಂದು ಸಾರಿ ತರಬೇತಿ ಕೊಡಿ, ಅವರಿಗೆ ಸಾರ್ವಜನಿಕರೊಡನೆ ಯಾವ ರೀತಿ ಸೌಹಾರ್ದದಿಂದ ವರ್ತಿಸಬೇಕೆಂಬುದನ್ನು ತಿಳಿಸಿದರೆ ಬಹಳ ಅನುಕೂಲ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ವಾಗುತ್ತದೆಂದು ಹೇಳುತ್ತೇನೆ. ಇವತ್ತು ಏನು ಮೋಟಾರು ವಾಹನಗಳ ತೆರಿಗೆ ಇದೆ ಅದನ್ನು ಲಾರಿಗಳಿಗೆ ಮತ್ತು ಕಾರುಗಳಿಗೆ ಜಾಸ್ತಿ ಮಾಡಿದ್ದೀರಿ. ನಮ್ಮ ರಾಜ್ಯದಲ್ಲಿ ಮೊದಲಿದ್ದ ತೆರಿಗೆಯೇ ಜಾಸ್ತಿಯಾಗಿತ್ತು, ಅದರ ಮೇಲೆ ಶೇಕಡ ೧೦ರಷ್ಟು ಏರಿಸಿದ್ದೀರಿ.

ಶ್ರೀ ಎಂ.ಪಿ. ಪ್ರಕಾಶ್.—ಅದು ಸರ್‌ಚಾರ್ಜ್.

ಶ್ರೀ ಜೆ.ಡಿ. ಸೋಮಪ್ಪ.—ಒಟ್ಟಿನಲ್ಲಿ ಯಾವುದೋ ಒಂದು ರೂಪದಲ್ಲಿ ಹಾಕಿದ್ದೀರಿ. ಸರ್ ಚಾರ್ಜ್ ಅಂದರೂ ಹಣ ಏರುತ್ತದೆ. ತಿಂಗಳಿಗೆ ಹತ್ತು ರೂಪಾಯಿ ಅಂದರೂ ವರ್ಷಕ್ಕೆ ನೂರಿಪ್ಪತ್ತು ರೂಪಾಯಿ ಕೊಡಬೇಕು. ಇವತ್ತು ಬಿಡಿ ಭಾಗಗಳ ಬೆಲೆ ಕೂಡ ಜಾಸ್ತಿಯಾಗಿದೆ. ವಯಸ್ಸಾದವರಿಗೆ ಬಸ್ ಪಾಸ್ ಕೊಡುತ್ತೇವೆಂದು ಚನ್ನಬಸವನಗೌಡರು ಹೇಳಿದರು. ಅದೂ ಕೂಡ ೧೨ ರಿಂದ ೩ ಗಂಟೆಯವರೆಗೆ ತಿರುಗಾಡಬಹುದು ಎಂದು ಸಾಮಾನ್ಯವಾಗಿ ಗಾಳಿ ಸೇವನೆಗಾಗಿ ಸಂಜೆ ವೇಳೆ ಕಬ್ಬನ್ ಪಾರ್ಕ್ ಲಾಲ್‌ಬಾಗ್‌ಗಳಿಗೆ ಮುದುಕರು ಮೋಟರು ಹೋಗುತ್ತಾರೆ. ಅಂದಾಗ ೧೨ ಗಂಟೆಯಿಂದ ೩ ಗಂಟೆಯವರೆಗೆ ಅವರಿಗೆ ಏತಕ್ಕೆ ಪಾಸ್ ಬೇಕು? ಒಟ್ಟಿನಲ್ಲಿ ಅವರಿಗೆ ಪಾಸ್ ಕೊಟ್ಟಿದ್ದೇವೆಂಬುದು ನಿಮ್ಮ ದೃಷ್ಟಿಯಲ್ಲಿ ಆಗುತ್ತದೆ. ಅವರು ಆ ಸಮಯದಲ್ಲಿ ಯಾವ ಕೆಲಸಕ್ಕೆ ಎಲ್ಲಿಗೆ ಹೋಗುತ್ತಾರೆ? ತಾವು ಈಗ ಏನು ಪಾಸ್ ಕೊಟ್ಟಿದ್ದೀರಿ, ಸಂತೋಷ. ಆದರೆ ಅದನ್ನು ಸಂಜೆ ವೇಳೆಗೆ ಬದಲಾಯಿಸಿ ಕೊಡಿ. ಆಗ ಅವರಿಗೆ ಸ್ವಲ್ಪ ತಿರುಗಾಡುವುದಕ್ಕಾದರೂ ಅವಕಾಶವಾಗುತ್ತದೆ. ಬಹುಶಃ ಲಕ್ಷ್ಮೀ ಸಾಗರ್‌ರವರಿಗೆ ಅದರ ಬಗ್ಗೆ ಒಪ್ಪಿಗೆ ಇದೆ ಎಂದು ಕಾಣುತ್ತದೆ. ಇನ್ನು ಬಸ್ಸಿನ ಬಣ್ಣವನ್ನು ಬದ ಲಾಯಿಸಬೇಕೆಂದು ಕೆಲವರು ಹೇಳಿದರು. ಅದನ್ನು ನಾನೂ ಒಪ್ಪುತ್ತೇನೆ. ದೊಡ್ಡಬೋರೇಗೌಡರು ಹಸಿರು ಬಣ್ಣ ಹೊಡೆಯಿರಿ ಎಂದರು. ಒಂದು ಪಕ್ಷ ಹಸಿರು ಹೊಡೆದಾಗ ರೈತರು ಎಳೆದುಕೊಂಡು ಹೋದರೆ ಕಷ್ಟವಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು.—ಸೋಮಪ್ಪನವರೇ ಹಸಿರು ಬಟ್ಟೆ ಹಾಕಿದ್ದಾರೆ.

ಶ್ರೀ ಜೆ.ಡಿ. ಸೋಮಪ್ಪ —ನಾನು ರೈತನ ಮಗ, ಅದಕ್ಕೋಸ್ಕರ ಹಾಕಿದ್ದೇನೆ. ಅವರ ಹತ್ತಿರ ಮಾತು ಕೇಳಿ ಏಕೆ ಹಾಕಬೇಕೆಂದು ಮೊದಲೇ ಹಾಕಿದ್ದೇನೆ.

ಶ್ರೀ ಕೆ. ಬಿ. ಮಲ್ಲಪ್ಪ. —ನಾಟಕದಲ್ಲಿ ಬಟ್ಟೆ ಬದಲಾಯಿಸುವ ಹಾಗೆ ಸೋಮಪ್ಪನವರು ಬದಲಾಯಿಸುತ್ತಿದ್ದಾರೆ.

ಶ್ರೀ ಜೆ.ಡಿ. ಸೋಮಪ್ಪ.—ಆ ವಿಷಯ ಈಗ ಏಕೆ? ದೊಡ್ಡಬೋರೇಗೌಡರು ಮೊದಲು ಹಸಿರು ಶಾಲು ಹಾಕಿಕೊಂಡು ಬಂದರು. ಈಗ ಬದಲಾಯಿಸಿದ್ದಾರೆ. ನಿನ್ನೆ ನನಗೆ ರೈತರು ನೋಟೀಸ್ ಕೊಟ್ಟಿದ್ದಾರೆ, ಆದ್ದರಿಂದ ನಾನು ಹಾಕಿದ್ದೇನೆ. ಅಲ್ಲದೆ, ನಾನು ರೈತನ ಮಗನಾದ್ದ ರಿಂದ ಹಾಕಿದ್ದೇನೆ. ಆದುದರಿಂದ ಬಸ್ಸಿನ ಬಣ್ಣವನ್ನು ಬದಲಾಯಿಸುವುದನ್ನು ನಾನು ಒಪ್ಪುತ್ತೇನೆ. ಆದರೆ ಹಸಿರು ಬಣ್ಣವನ್ನು ಮಾತ್ರ ಹೊಡೆಯಬೇಡಿ. ಲಾರಿಗಳಿಗೆ ಮುಂದುಗಡೆ ಹಳದಿ ಬಣ್ಣವನ್ನೇ ಹೊಡೆಯಬೇಕೆಂದು ಸರ್ಕಾರ ಆಜ್ಞೆ ಮಾಡಿತ್ತು. ಆ ಬಣ್ಣವನ್ನೇ ಏಕೆ ಹೊಡೆಯಬೇಕು? ಅವರಿಗೆ ಯಾವ್ಯಾವ ಬಣ್ಣ ಇಷ್ಟ ಇರುತ್ತದೋ ಅದನ್ನು ಹೊಡೆದುಕೊಳ್ಳಲಿ. ರಾತ್ರಿ ವೇಳೆ ಲೈಟ್ ಬೀಳು ವುದಕ್ಕೆ ಹಳದಿ-ಕಪ್ಪನ್ನು ಹೊಡೆಯಬೇಕೆಂಬುದನ್ನು ಒಪ್ಪುತ್ತೇನೆ. ಲಾರಿಗಳಲ್ಲಿ ಮುಂದುಗಡೆ ಇರತಕ್ಕ ಹಳದಿ ಬಣ್ಣವನ್ನು ತೆಗೆಯುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಇನ್ನು ಟ್ರಾಕ್ಟರ್‌ಗಳಿಗೆ ಇನ್ಸ್‌ಪೆಕ್ಷನ್ ಎಂದು ಆರ್.ಟಿ.ಓ. ಕಛೇರಿಯವರು ಬಹಳ ತೊಂದರೆ ಕೊಡುತ್ತಾರೆ. ದೊಡ್ಡಬೋರೇಗೌಡರು ಇದು ಮಾಮೂಲಾಗಿ ಬಿಟ್ಟಿದೆ ಎಂದು ಹೇಳಿದರು. ಆದ್ದರಿಂದ. ಇದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗದೆ ಇದನ್ನು ತಪ್ಪಿಸುವುದಕ್ಕೆ ಕೂಡಲೇ ಕ್ರಮ ತೆಗೆದುಕೊಳ್ಳ ಬೇಕೆಂದು ಇಷ್ಟು ಮಾತ್ರ ಹೇಳುತ್ತೇನೆ. ಟ್ರ್ಯಾಕ್ಟರುಗಳಲ್ಲಿ ಜನರನ್ನು ಕರೆದುಕೊಂಡು ಹೋಗು ವಾಗ ಅನಾವಶ್ಯಕವಾಗಿ ಆರ್.ಟಿ.ಓ. ಕಛೇರಿಯವರು ಕೇಸ್ ಹಾಕುತ್ತಾರೆ. ಟ್ರ್ಯಾಕ್ಟರುಗಳಲ್ಲಿ ಇಷ್ಟು ಜನರನ್ನು ಕರೆದುಕೊಂಡು ಹೋಗಬಹುದು ಎಂದು ಪರ್ಮಿಟ್ ಕೊಟ್ಟರೆ ಇದರಿಂದ ರೈತರಿಗೆ ಅನುಕೂಲವಾಗುತ್ತದೆ. ಮಾಮೂಲಿ ಕೊಡುವುದು ತಪ್ಪುತ್ತದೆ. ೯೯ ಭಾಗ ರೈತರು ಟ್ರ್ಯಾಕ್ಟರು

೫-೩೦ ಪಿ.ಎಂ.

ಗಳನ್ನು ಇಟ್ಟುಕೊಂಡಿದ್ದಾರೆ. ಅವರಿಗೆ ಕಿರುಕುಳ ತಪ್ಪಿಸುವ ದೃಷ್ಟಿಯಿಂದ ೫ ವರ್ಷಕ್ಕೊಂದು ಸಾರಿ ಫಿಟ್‌ನೆಸ್ ಸರ್ಟಿಫಿಕೇಟ್ ಕೊಡುವ ವ್ಯವಸ್ಥೆ ಮಾಡುವುದಲ್ಲದೆ ಟ್ರ್ಯಾಕ್ಟರುಗಳಲ್ಲಿ ಇಷ್ಟು

ಜನರನ್ನು ಕರೆದುಕೊಂಡು ಹೋಗಬಹುದು ಎಂದು ಆಜ್ಞೆ ಮಾಡಬೇಕೆಂದು ಸೂಚನೆ ಕೊಡುತ್ತೇನೆ. ಇನ್ನು ಅಪಘಾತಗಳ ಬಗ್ಗೆ ಹೇಳುವುದಾದರೆ ಯಾರಿಗಾದರೂ ಅಪಘಾತವಾದರೆ ಅವರಿಗೆ ಸರಿಯಾದ ಪರಿಹಾರ ಕೊಡದೆ ಇಲಾಖೆಯವರು ಅಪೀಲ್ ಹಾಕುತ್ತಿದ್ದಾರೆ. ಇದು ಸರಿಯಲ್ಲ. ಅಪಘಾತವಾದಾಗ ಮಾನವೀಯತೆ ದೃಷ್ಟಿಯಿಂದ ನೋಡಿ ಹೆಚ್ಚಿನ ಪರಿಹಾರ ಕೊಡಬೇಕು. ಗಂಗಣ್ಣ ಎಂದು ಒಬ್ಬರು ಮಾಜಿ ಎಂ.ಎಲ್.ಎ. ಇದ್ದಾರೆ. ಅವರು ಅಂಗವಿಕಲರಾಗಿದ್ದಾರೆ. ಲಕ್ಷ್ಮೀಸಾಗರ್ ಅವರಿಗೂ ಗೊತ್ತಿದೆ. ಅವರೇ ಅಪೀಲ್ ಹಾಕುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಅವರು ಮೊದಲು ಲಕ್ಷಣವಾಗಿ ಓಡಾಡಿಕೊಂಡಿದ್ದರು. ತುಮಕೂರು ಜಿಲ್ಲೆಯ ಶಿರಾ ಹತ್ತಿರ ಕೆ.ಎಸ್.ಆರ್.ಟಿ.ಸಿ. ಬಸ್ ಅಪಘಾತವಾದಾಗ ಅವರ ಕಾಲಿಗೆ ಏಟು ಬಿದ್ದು ಇವತ್ತು ನಡೆಯುವುದಕ್ಕಾಗದಂತೆ ಆಗಿದ್ದಾರೆ. ಅವರಿಗೆ ೭೫ ಸಾವಿರ ರೂಪಾಯಿ ಪರಿಹಾರ ಕೊಡಬೇಕೆಂದು ತೀರ್ಮಾನವಾಗಿತ್ತು. ಆದರೆ ಅದು ಜಾಸ್ತಿ ಎಂದು ಸಾರಿಗೆ ಸಂಸ್ಥೆಯವರು ಹೈಕೋರ್ಟಿಗೆ ಅಪೀಲ್ ಹೋಗಿದ್ದಾರೆ. ನ್ಯಾಯವಾಗಿ ನೋಡಿದರೆ ಈಗ ಕೊಟ್ಟಿರುವುದೂ ಕಡಿಮೆ. ಇನ್ನೂ ಜಾಸ್ತಿ ಕೊಡಬೇಕು. ಕಂಡಕ್ಟರುಗಳು ಎರಡು ಮೂರು ಲಕ್ಷ ರೂಪಾಯಿ ಬೆಲೆಯ ಮೊಜಾಯಿಕ್ ಫ್ಲೋರ್ ಮನೆ ಕಟ್ಟಿಕೊಂಡಿರುತ್ತಾರೆ. ಅಂಥವರಲ್ಲಿ ಶಾಸಕರಾಗಿದ್ದವರು ಅಪಘಾತವಾಗಿ ಸರ್ವಸ್ವವನ್ನೂ ಕಳೆದುಕೊಂಡು ಮಾನಸಿಕವಾಗಿ ವ್ಯಥೆ ಪಡುತ್ತಿರುವಾಗ ೭೫ ಸಾವಿರ ರೂಪಾಯಿ ಜಾಸ್ತಿ ಎಂದು ಹೇಳುವುದು ಯಾವ ನ್ಯಾಯ? ಮಾನವೀಯತೆ ದೃಷ್ಟಿಯಿಂದ ಇಂಥದ್ದನ್ನು ನೋಡಬೇಕು. ಅಪಘಾತದಲ್ಲಿ ತೊಂದರೆಯಾಗಿರುವವರಿಗೆ ಧಾರಾಳವಾಗಿ ಕೊಡಿ. ೧೫ ಕೋಟಿ ರೂಪಾಯಿ ಜೊತೆಗೆ ಇನ್ನೂ ಅರ್ಧ ಕೋಟಿ ಬೇಕಾದರೆ ನಷ್ಟವಾಗಲಿ. ಅದನ್ನೂ ಇದೇ ರೀತಿ ಸಣ್ಣ ಅಕ್ಷರದಲ್ಲಿ ಪ್ರಿಂಟ್ ಮಾಡಿ ಕೊಡುತ್ತಾರೆ. ಈಗ ಪ್ರಿಂಟ್ ಮಾಡಿರುವ ಅಕ್ಷರಗಳನ್ನು ನೋಡಬೇಕಾದರೆ ಕನ್ನಡಕ ಹಾಕಿಕೊಂಡು ಓದಬೇಕು. ಮುಂದೆ ಇನ್ನು ಯಾವ ಗ್ಲಾಸ್ ತೆಗೆದುಕೊಂಡು ಓದಬೇಕೋ ಗೊತ್ತಿಲ್ಲ. ಆದ್ದರಿಂದ ಅಪಘಾತದಲ್ಲಿ ತೊಂದರೆಯಾದವರಿಗೆ ತೊಂದರೆಕೊಡದೆ ಮಾನವೀಯತೆ ದೃಷ್ಟಿಯಿಂದ ಉಪಕಾರ ಮಾಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಸ್ಥಳೀಯ ಸಂಸ್ಥೆಗಳಿಗೆ ಮೋಟಾರ್ ವೆಹಿಕಲ್ ಟ್ಯಾಕ್ಸಿನಿಂದ ಕೊಡುತ್ತಿರುವ ಹಣ ಬಹಳ ಕಡಿಮೆ ಇದೆ. ಇದರ ಬಗ್ಗೆ ೧೯೫೨ನೇ ಇಸವಿಯಲ್ಲಿ ಕಾಯಿದೆಯಾಗಿದ್ದು ಆಗ ಎಷ್ಟು ಕೊಡುತ್ತಿದ್ದರೋ ಅಷ್ಟೇ ಇವತ್ತೂ ಕೊಡುತ್ತಿದ್ದಾರೆ. ಆಗ ನಾಲ್ಕೈದು ಟನ್ ಲೋಡ್ ಹಾಕುತ್ತಿದ್ದರು. ಈಗ ೨೦ ಟನ್ ಲೋಡ್ ಹಾಕಿಕೊಂಡು ವಾಹನಗಳನ್ನು ಓಡಿಸುತ್ತಾರೆ. ಇದರಿಂದ ಮುನಿಸಿಪಲ್ ರಸ್ತೆಗಳೆಲ್ಲಾ ಹಾಳಾಗುತ್ತಿದೆ. ಅದರ ರಿಪೇರಿಗೆ ಹೆಚ್ಚು ಹಣ ಬೇಕು. ಆದ್ದರಿಂದ ಸ್ಥಳೀಯ ಸಂಸ್ಥೆಗಳಿಗೆ ಮೋಟಾರ್ ವೆಹಿಕಲ್ಸ್ ಟ್ಯಾಕ್ಸಿನಿಂದ ಹೆಚ್ಚು ಹಣ ಕೊಡುವ ವ್ಯವಸ್ಥೆ ಮಾಡಬೇಕು. ನಮ್ಮಲ್ಲಿ ಒಂದು ಬಸ್ ಸ್ಟ್ಯಾಂಡ್ ಕಟ್ಟಬೇಕೆಂದು ಮಂತ್ರಿಗಳಿಗೆ ಹೇಳಿದ್ದೆ. ಅವರು ಬಂದು ನೋಡುತ್ತೇನೆ ಎಂದು ಹೇಳಿದರೂ ಇದುವರೆಗೂ ಬಂದಿಲ್ಲ. ಮುಂದಿನ ತಿಂಗಳು ಬರಬಹುದೋ ಏನೋ. ತಾವು ತಮ್ಮ ಜಿಲ್ಲೆಯಲ್ಲಿ ಮಾತ್ರ ಟೂರ್ ಮಾಡಿದರೆ ಆಗುವುದಿಲ್ಲ. ಎಲ್ಲಾ ಕಡೆ ಓಡಾಡಬೇಕು. ಮೊದಲು ಸದ್ಯೋಜಾತಪ್ಪನವರು ಸಾರಿಗೆ ಮಂತ್ರಿಗಳಾಗಿದ್ದರು. ಅವರು ಸದ್ದಿಲ್ಲದೆ ಬಳ್ಳಾರಿಗೆ ಹೋಗಿ ಬರುತ್ತಿದ್ದರು. ಕೊನೆಗೆ ಸದ್ದಿಲ್ಲದೆ ಹೋಗಿಬಿಟ್ಟರು. ನೀವು ಹಾಗೆ ಮಾಡಬೇಡಿ. ದಕ್ಷತೆಯಿಂದ ಕೆಲಸ ಮಾಡಿ ಎಂದು ಹೇಳುತ್ತೇನೆ. ರಾಮದುರ್ಗದಲ್ಲಿ ಡಿಪೋ ಮಾಡಬೇಕೆಂದು ಕೊಪ್ಪಳ ಕ್ಷೇತ್ರದ ಶಾಸಕರು ಕೇಳಿದ್ದಾರಂತೆ. ಅದನ್ನು ಕೊಡುತ್ತೇನೆ ಎಂದು ಮಂತ್ರಿಗಳು ಹೇಳಿದ್ದರಂತೆ. ಇನ್ನೂ ಕೊಟ್ಟಿಲ್ಲ ಎಂದು ಅವರು ಹೇಳುತ್ತಿದ್ದರು.

ಶ್ರೀ ಎಂ.ಪಿ. ಪ್ರಕಾಶ್.—ಯಾರು ಹೇಳಿದ್ದರು ?

ಶ್ರೀ ಜಿ.ಡಿ. ಸೋಮಪ್ಪ.—ಏನೋ ಮಾತನಾಡುವಾಗ ಹೇಳಿರಬಹುದು. ಅವರು ಕಾಂಗ್ರೆಸ್ ಶಾಸಕರಿರಬಹುದು. ಆದರೆ ಅಲ್ಲಿ ಬಸ್ ಸ್ಟ್ಯಾಂಡ್ ಕಟ್ಟಿದರೆ ಕಾಂಗ್ರೆಸ್ಸಿನವರೇ ಕುಳಿತುಕೊಂಡು ಓಡಾಡುವುದಿಲ್ಲ. ಎಲ್ಲರೂ ತಿರುಗಾಡುತ್ತಾರೆ. ಅದನ್ನು ಪರಿಶೀಲನೆ ಮಾಡಿ ಕೊಪ್ಪಳ ಕ್ಷೇತ್ರದ ರಾಮದುರ್ಗದಲ್ಲಿ ಬಸ್ ಡಿಪೋ ಮಾಡಬೇಕೆಂದು ಹೇಳುತ್ತೇನೆ. ಬಸ್ ದರ ಏರಿಕೆ ವಿಚಾರ ಹೇಳುತ್ತೇನೆ. ದರ ಏರಿಸುವ ಬಗ್ಗೆ ನಮ್ಮ ಅಭ್ಯಂತರ ಇಲ್ಲ. ಆದರೆ ಏರಿಸುವಾಗ ಎಷ್ಟು ಏರಿಸಬೇಕು ಎಂಬುದಕ್ಕೂ ಒಂದು ಮಿತಿ ಇರುತ್ತದೆ. ೨೦ ಪರ್ಸೆಂಟ್ ದರವನ್ನು ಏರಿಸಿದ್ದಾರೆ. ಇಷ್ಟು ದರ ಯಾವ ಕಾಲದಲ್ಲೂ ಏರಿಸಿರಲಿಲ್ಲ. ದೇವರಾಜ ಅರಸ್ ಅವರ ಸರ್ಕಾರ ಇದ್ದಾಗ ಏಳು ಪರ್ಸೆಂಟ್ ಏರಿಸಿದ್ದರು. ಆದರೆ ಈಗ ಏಕಾಏಕಿ ೨೦ ಪರ್ಸೆಂಟ್ ಏರಿಸಿ ನಂತರ ರಿಯಾಯಿತಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ ಇವರು ಕೊಟ್ಟಿರುವ ರಿಯಾಯಿತಿ ೧೦ ಪೈಸೆ ೧೫ ಪೈಸೆ. ಬೆಂಗಳೂರಿನಿಂದ ತುಮಕೂರಿಗೆ ಹೋದರೆ ೨೫ ಪೈಸೆ ಉಳಿತಾಯವಾಗುತ್ತದೆ. ಅಷ್ಟು ರಿಯಾಯಿತಿ ಕೊಟ್ಟರೆ ಏನು ಪ್ರಯೋಜನ? ಕುಣಿಗಲ್‌ನಲ್ಲಿ ಹೋಗುತ್ತಿದ್ದಾಗ ಕಡ್ಲೆಕಾಯಿ ತಗೊಳ್ಳಿ ಎಂದು ಒಬ್ಬ ಹಿಂಸೆ

ಮಾಡಿದ. ಆಗ ೧೦ ಪೈಸೆಗೆ ಕೊಡು ಎಂದು ಹೇಳಿದ್ದಕ್ಕೆ ಕಡ್ಲೆಕಾಯಿ ವ್ಯಾಪಾರ ಮಾಡುವವನು ಹೇಳಿದ ''ಈ ಸರ್ಕಾರದಲ್ಲಿ ೧೦ ಪೈಸೆಗೆ ಏನು ಸಿಗುತ್ತದೆ ಸ್ವಾಮಿ'' ಎಂದು. ಹಾಗೆ ೧೦ ಪೈಸೆ ಇಳಿಸಿದರೆ ಏನು ಪ್ರಯೋಜನ? ಮತ್ತೊಮ್ಮೆ ವಿಮರ್ಶೆ ಮಾಡಿ ಬಸ್ ದರವನ್ನು ಇಳಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಪ್ರಯಾಣ ಮಾಡುವುದನ್ನು ಜನ ನಿಲ್ಲಿಸುವು ದಕ್ಕಾಗುವುದಿಲ್ಲ. ಜನ ದುಡ್ಡು ಕೊಟ್ಟು ಹೋಗಲೇಬೇಕಾಗುತ್ತದೆ. ಇಷ್ಟೊಂದು ದುಬಾರಿ ಹಣ ಕೊಟ್ಟು ಹೋಗುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಬಸ್ ದರ ಇಳಿಸುವ ಬಗ್ಗೆ ಪುನರ್ಪರಿಶೀಲನೆ ಮಾಡಬೇಕೆಂದು ಹೇಳಿ ಇನ್ನು ತೋಟಗಾರಿಕೆ ಮತ್ತು ಪಶುಸಂಗೋಪನೆ ಇಲಾಖೆ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಪಶುಸಂಗೋಪನೆ ಮತ್ತು ತೋಟಗಾರಿಕೆ ಮಂತ್ರಿಗಳು ರುಷಿ ಮಂತ್ರಿಗಳು ಎಂದು ಆಗಲೇ ಮಾನ್ಯ ಸದಸ್ಯರು ಹೇಳಿದರು. ಹಾಲಿನ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಐ.ಆರ್.ಡಿ.ಪಿ. ಮತ್ತು ಡಿ.ಆರ್.ಡಿ.ಎಸ್. ಕಾರ್ಯಕ್ರಮದ ಮೇರೆಗೆ ಹಸು ಗಳನ್ನು ಕೊಂಡುಕೊಳ್ಳುವುದಕ್ಕೆ ಸಾಲ ಕೊಡುತ್ತೀರಿ. ಅವರು ಹಸುಗಳನ್ನು ಸಾಕಿ ಹಾಲನ್ನು ಸಂಗ್ರಹಿಸುತ್ತಾರೆ. ಕಳೆದ ವರ್ಷ ೩೫ ರೂಪಾಯಿ ಇದ್ದ ಬೂಸಾ ಈಗ ೭೫–೮೦ ರೂಪಾಯಿ ಆಗಿದೆ. ಆದರೆ ಅವರಿಗೆ ಹಾಲಿಗೆ ಕೊಡುವ ಬೆಲೆ ಮಾತ್ರ ೨ ರೂಪಾಯಿ ೨೦ ಪೈಸೆ ಇದೆ. ಒಂದು ತೆಂಗಿನ ಕಾಯಿ ಬೆಲೆ ಒಂದೂವರೆ ರೂಪಾಯಿ ಇದ್ದದ್ದು ಆರು ರೂಪಾಯಿ ಆಗಿದೆ. ಅಕ್ಕಿ ಎರಡು ರೂಪಾಯಿ ಇದ್ದದ್ದು ೬ ರೂಪಾಯಿ ಆಗಿದೆ. ಆದರೆ ರೈತರು ಉತ್ಪಾದನೆ ಮಾಡುವ ಹಾಲಿಗೆ ಮಾತ್ರ ಎರಡು ರೂಪಾಯಿ ೨೦ ಪೈಸೆ ಒಂದು ಲೀಟರ್‌ಗೆ ಇದೆ. ಕೊನೆಪಕ್ಷ ಒಂದು ಲೀಟರ್‌ಗೆ ೩ ರೂಪಾಯಿ ಯಾದರೂ ಕೊಡಬೇಕು. ಗ್ರಾಮಾಂತರ ಪ್ರದೇಶಗಳಿಂದ ಆರಿಸಿಬಂದ ಮಂತ್ರಿಗಳಿದ್ದಾರೆ. ರೈತರ ಬಗ್ಗೆ ಮತ್ತು ಬಡವರ ಬಗ್ಗೆ ಕಳಕಳಿ ಇರತಕ್ಕ ಸರ್ಕಾರ ಎಂದು ಹೇಳಿಕೊಳ್ಳುತ್ತಿದ್ದಾರೆ. ಆದ್ದರಿಂದ ಈ ಸಾರಿ ಹಾಲಿನ ಬೆಲೆ ಜಾಸ್ತಿ ಮಾಡದಿದ್ದರೆ ನಿಮ್ಮ ಮನೆ ಮುಂದೆ ಬಂದು ಘೇರಾವೊ ಮಾಡುತ್ತಾರೆ. ಅಥವಾ ೩೫ ರೂಪಾಯಿಗೆ ಬೂಸಾ ಕೊಡಿಸಿ. ಇಲ್ಲದಿದ್ದರೆ ಕನಿಷ್ಟ ಮೂರು ರೂಪಾಯಿಗಳನ್ನಾದರೂ ಒಂದು ಲೀಟರ್‌ಗೆ ಕೊಡಿ. ಇನ್ನು ತೋಟಗಾರಿಕೆ ಬಗ್ಗೆ ಹೇಳಬೇಕೆಂದರೆ ಹಣ್ಣುಹಂಪಲುಗಳು ಮೊದಲು ಶ್ರೀಮಂತರ ಆಹಾರವಾಗಿತ್ತು. ಎರಡನೆಯದಾಗಿ ಮಾವು, ದ್ರಾಕ್ಷಿ, ಸೇಬು, ಕಿತ್ತಳೆ ಮುಂತಾದ ಹಣ್ಣುಗಳನ್ನು ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಕೊಡುವ ಪದ್ಧತಿ ಇತ್ತು. ಆದರೆ ಆಹಾರ ಪದಾರ್ಥಗಳಲ್ಲಿ ಈಗ ವಿಟಮಿನ್‌ಗಳು ಇಲ್ಲದಿರುವುದರಿಂದ ಸಾಮಾನ್ಯ ಜನರೂ ಹಣ್ಣುಹಂಪಲು ತಿನ್ನ ಬೇಕಾಗಿದೆ. ಹಣ್ಣುಹಂಪಲಿನಲ್ಲೂ ವಿಟಮಿನ್‌ಗಳು ಕಡಿಮೆಯಾಗಿದೆ. ಆದರೂ ಬದುಕಬೇಕಾದರೆ ಹಣ್ಣುಹಂಪಲುಗಳನ್ನು ತಿನ್ನಬೇಕಾಗಿದೆ. ಆದ್ದರಿಂದ ಅವನ್ನು ಕಡಿಮೆ ಬೆಲೆಯಲ್ಲಿ ಜನರಿಗೆ ಸಿಗುವಂತೆ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ, ಜನತಾ ಮನೆಗಳನ್ನು ಕಟ್ಟಿರುವ ಜಾಗದಲ್ಲಿ, ಕೂಲಿ ಕಾರ್ಮಿಕರು ವಾಸಿಸುವ ಜಾಗದಲ್ಲಿ ಹಲಸಿನ ಗಿಡ, ಕಿತ್ತಳೆ ಗಿಡ, ತೆಂಗಿನ ಗಿಡಗಳನ್ನು ಬೆಳೆಸುವ ವ್ಯವಸ್ಥೆಗಳನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನೂ ಅನೇಕ ವಿಚಾರಗಳನ್ನು ಮಾತನಾಡ ಬೇಕಾಗಿತ್ತು. ಆದರೆ ಅಧ್ಯಕ್ಷರು ಬೆಲ್ ಹೊಡೆಯುತ್ತಿದ್ದಾರೆ. ಮಂತ್ರಿಗಳೂ ಬೆಳಗ್ಗಿನಿಂದ ಕುಳಿ ತಿದ್ದಾರೆ. ನನಗೆ ಅದೇ ಸಂತೋಷ. ಅವರು ಕೆಲಸ ಮಾಡಲಿ, ಮಾಡದೇ ಇರಲಿ, ಇಬ್ಬರು ಮಂತ್ರಿಗಳೂ ಅಲ್ಲಾಡದೆ ಕುಳಿತಿದ್ದಾರೆ. ಆದ್ದರಿಂದ ಅವರಿಗೆ ಹೆಚ್ಚಿನ ತ್ರಾಸ ಕೊಡದೆ ಉತ್ತರ ಕೊಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ಇಷ್ಟು ಮಾತ್ರ ಹೇಳಿ ಈ ಇಲಾಖೆ ಮೇಲೆ ಮಾತ ನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೂ ಸಾವಧಾನದಿಂದ ಕೇಳಿದ ಎಲ್ಲ ಸ್ನೇಹಿತರಿಗೂ ವಂದನೆ ಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಆರ್. ಎನ್. ನಾಯಕ್ (ಭಟ್ಕಳ್).—ಸನ್ಮಾನ್ಯ ಅಧ್ಯಕ್ಷರೇ, ಸಾರಿಗೆ ಖಾತೆಯ ಬೇಡಿಕೆಯ ಮೇಲೆ ನಾನು ವಿರೋಧವನ್ನು ವ್ಯಕ್ತಪಡಿಸುತ್ತೇನೆ. ಇದರ ಅರ್ಥ ಮಂತ್ರಿಗಳ ಮೇಲೆ ವಿರೋಧ ಅಲ್ಲ. ಬೇಡಿಕೆಯ ಮೇಲೆ ವಿರೋಧ ವ್ಯಕ್ತಪಡಿಸುತ್ತಾ ಮಾತನಾಡುವುದಾದರೆ, ಈ ಬಗ್ಗೆ ಈ ಮನೆಯ ಹಿರಿಯ ಸದಸ್ಯರು ಮಾತನಾಡಿದ್ದಾರೆ. ಬಸ್ ದರ ಏರಿಸಿರುವ ಬಗ್ಗೆ ಈ ಸದನದ ಎರಡೂ ಕಡೆಯ ಸದಸ್ಯರೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಸಲವೂ ಸಹ ಸಾರಿಗೆ ಸಂಸ್ಥೆ ಹಾನಿಯನ್ನು ಅನುಭವಿಸಿದೆ ಎಂದು ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯ ಗಳನ್ನು ವ್ಯಕ್ತಪಡಿಸಿದ್ದಾರೆ. ಖಾಸಗೀ ಬಸ್‌ಗಳು ಹೆಚ್ಚಿನ ಟ್ಯಾಕ್ಸ್ ಕೊಟ್ಟು, ಡೀಸಲ್ ಕೊಂಡು ಕೊಂಡು, ಇತರ ವೆಚ್ಚಗಳನ್ನು ಭರಿಸಿಯೂ ಸಹಾ ಹೆಚ್ಚು ಲಾಭ ಮಾಡುತ್ತಿದ್ದು, ನಮ್ಮ ರಾಜ್ಯ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ರಸ್ತೆ ಸಾರಿಗೆ ಮಾತ್ರ ಏಕೆ ಹಾನಿಯಲ್ಲಿ ಇದೆ ಎಂದು ಮಾನ್ಯ ಸದಸ್ಯರು ಅನೇಕರು ಹೇಳಿದ್ದಾರೆ. ಈ ದೋಷಕ್ಕೆ ಕಾರಣ ಏನು ಎಂಬುದನ್ನು ಕಂಡುಹಿಡಿಯಬೇಕು. ಈ ಸಾರಿಗೆ ಸಂಸ್ಥೆಯ ರಚನೆಯಲ್ಲಿ ಏನಾದರೂ ದೋಷ ಇದೆಯೇ ಎಂಬುದನ್ನು ಕಂಡುಹಿಡಿಯಬೇಕು. ಈಗ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಮಂತ್ರಿಗಳ ಹತೋಟಿ ಯಾವ ಪ್ರಮಾಣದಲ್ಲಿ ಇದೆ ಎಂಬುದನ್ನು ನೋಡಬೇಕಾಗುತ್ತದೆ. ಮಾನ್ಯ ಸಾರಿಗೆ ಮಂತ್ರಿಗಳು ಸಮಾಜವಾದ ತತ್ವವನ್ನು ಅನುಸರಿಸಿಕೊಂಡು ಬಂದಿದ್ದಾರೆ. ಅವರ ಬಗ್ಗೆ ಆ ಕಡೆಯಾಗಲೀ ಈ ಕಡೆಯಾಗಲೀ ಯಾರೂ ಒಂದು ಅಂಶದಷ್ಟೂ ದೋಷ ತೋರಿಸಿಲ್ಲ. ನಾನೂ ಕೂಡಾ ಅದೇ ಅಭಿಪ್ರಾಯವುಳ್ಳವನಾಗಿದ್ದೇನೆ. ಇವರು ದಕ್ಷ ಮಂತ್ರಿಗಳಾಗಿದ್ದರೂ ಕೂಡಾ ಈ ಹಾನಿಯನ್ನು ತಡೆಗಟ್ಟುವುದಕ್ಕೆ ಇವರು ಕೂಲಂಕಷವಾಗಿ ವಿಚಾರ ಮಾಡಿದ್ದಾರೆಯೆಂದು ಕೇಳಬೇಕಾಗುತ್ತದೆ, ಬಹುಶಃ ಈ ಮಂತ್ರಿಗಳಿಗೆ ಸಂಸ್ಥೆಯ ಮೇಲೆ ಹತೋಟಿ ಇಲ್ಲ ಎಂದು ನನಗೆ ಕಂಡು ಬರುತ್ತಾ ಇದೆ. ಈ ಸಂಸ್ಥೆಯಲ್ಲಿ ಯಾರು ಯಾರು ಸದಸ್ಯರು ಇರಬೇಕು, ಯಾರು ಅಧ್ಯಕ್ಷರಾಗಬೇಕು ಹಾಗೂ ಯಾರು ಜನರಲ್ ಮ್ಯಾನೇಜರ್ ಇರಬೇಕು ಎನ್ನುವ ಬಗ್ಗೆ ಮಾನ್ಯ ಮಹೇಶ್ವರಪ್ಪನವರು ಹೇಳಿದ್ದಾರೆ. ಇವತ್ತು ಅಲ್ಲಿ ಐ.ಎ.ಎಸ್. ಹಾಗೂ ಐ.ಸಿ.ಎಸ್. ಅಧಿಕಾರಿಗಳು ಇದ್ದಾರೆಂದು ಅವರು ಹೇಳಿದರು. ಅವರು ಇರಲಿ. ಅವರು ಇರಬಾರದೆಂದು ನಾನು ಹೇಳುವುದಿಲ್ಲ. ಇವತ್ತು ಅಲ್ಲಿ ಯಾರು ಅಧ್ಯಕ್ಷರು ಇದ್ದಾರೆ ಅವರ ಮೇಲೆ ಹಾಗೂ ಆ ಸಂಸ್ಥೆಯ ಮೇಲೆ ಸರಿಯಾದ ಹತೋಟಿ ಮಂತ್ರಿಗಳಲ್ಲಿ ಇಲ್ಲ ಎನ್ನುವ ಸಂಶಯ ಬರುತ್ತಿದೆ. ಈ ಕಾರಣದಿಂದಲೇ ಈ ಸಂಸ್ಥೆ ಹಾನಿಯನ್ನು ಅನುಭವಿಸುತ್ತಿದೆ ಎನ್ನುವ ಒಂದು ವಿಚಾರವನ್ನು ನಾನು ಟೀಕೆಯ ದೃಷ್ಟಿಯಿಂದ ಹೇಳುತ್ತಾ ಇಲ್ಲ. ಬಹುಶಃ ಈ ಬಗ್ಗೆ ಎಲ್ಲಾ ಕಡೆಯ ಸದಸ್ಯರೂ, ಹಾಗೂ ಜನತಾ ಪಕ್ಷದ ಸದಸ್ಯರೂ ಕೂಡ ಆಳವಾಗಿ ಅಧ್ಯಯನ ಮಾಡಬೇಕಾಗುತ್ತದೆ. ಇವತ್ತು ಮಂತ್ರಿಗಳ ಹತೋಟಿ ಹೆಚ್ಚು ಅಲ್ಲಿ ಇರಬೇಕಾದರೆ ಕಾನೂನು ಪ್ರಕಾರ ಹೆಚ್ಚು ಅಧಿಕಾರವನ್ನು, ಹತೋಟಿಯನ್ನು ಸಂಬಂಧಪಟ್ಟ ಮಂತ್ರಿಗಳು ತಗೆದುಕೊಳ್ಳಬೇಕಾಗುತ್ತದೆ. ಈ ಬಗ್ಗೆ ನಾವು ಒಂದು ವಿಚಾರವನ್ನು ಮಾಡಬೇಕಾಗುತ್ತದೆ. ಈ ಒಂದು ಸಂಸ್ಥೆಯಲ್ಲಿ ಒಂದು ಬದಲಾವಣೆಯನ್ನು ತರಬೇಕಾಗುತ್ತದೆ. ಇವತ್ತು ಮಾನ್ಯ ಪ್ರಕಾಶ್ ಅವರು ಮಂತ್ರಿಗಳು ಆಗಿರಬಹುದು ನಾಳೆ ಇನ್ನೊಬ್ಬರು ಇದಕ್ಕೆ ಮಂತ್ರಿಯಾಗಿ ಬರಬಹುದು. ಆಗ ಆ ಮಂತ್ರಿಗಳಿಗೆ ಸಹಾ ಆ ಇಲಾಖೆ ಮೇಲೆ ಹತೋಟಿ ಇರಬೇಕಾಗುತ್ತದೆ. ಇವತ್ತು ಅಲ್ಲಿನ ಅಧ್ಯಕ್ಷರು ಐ.ಎ.ಎಸ್. ಅಧಿಕಾರಿಗಳು ಆಗಿದ್ದು ಅವರು ನಾವು ಹೇಳಿದ್ದನ್ನು ಮನಸ್ಸಿಗೆ ಹಾಕಿಕೊಳ್ಳುವುದಿಲ್ಲ, ಇವತ್ತು ಅವರು ಅಲ್ಲಿ ಅಧಿಕಾರಿಗಳಾಗಿದ್ದು ನಾಳೆ ಮತ್ತೊಂದು ದೊಡ್ಡ ಹುದ್ದೆಗೆ ಹೋಗುತ್ತಾರೆ. ಆದರೆ ಮಂತ್ರಿಗಳು ಹಾಗೆ ಅಲ್ಲ. ಇವರು ಜನರಿಂದ ಆರಿಸಿ ಬಂದ ಪ್ರತಿನಿಧಿಗಳಾಗಿರುತ್ತಾರೆ. ಅವರಿಗೆ ನಮ್ಮ ನೋವು ನಲಿವು ಗೊತ್ತಿರುತ್ತದೆ. ಸದಸ್ಯರ ತೊಡಕುಗಳು ಮತ್ತು ತೊಂದರೆಗಳು ಗೊತ್ತಿರುತ್ತದೆ. ಆದ್ದರಿಂದ ನಾನು ಈ ಬಗ್ಗೆ ಒಂದು ವಿಷಯವನ್ನು ತಿಳಿಸುತ್ತೇನೆ. ಇವತ್ತಿನ ದಿವಸ ಯಾರು ರಾಜ್ಯದಲ್ಲಿ ಸಾರಿಗೆ ಮಂತ್ರಿಗಳು ಇದ್ದಾರೆ ಅವರು ಇವತ್ತಿನ ದಿವಸ ಆ ಸಂಸ್ಥೆಯ ಅಧ್ಯಕ್ಷರೂ ಆಗಬೇಕೆನ್ನುವ ಸಲಹೆಯನ್ನು ನಾನು ಕೊಡುತ್ತಿದ್ದೇನೆ. ಇವತ್ತು ವಿರೋಧಪಕ್ಷದ ಕ್ರಾಂತಿರಂಗದ ಸದಸ್ಯರಿಂದ ಈ ಸಲಹೆ ಬಂತು ಎಂದು ತಾವು ತಳ್ಳಿಹಾಕಬೇಡಿ. ಈ ಬಗ್ಗೆ ಜನತಾ ಪಕ್ಷದ ಸದಸ್ಯರು ಹಾಗೂ ಮುಖ್ಯಮಂತ್ರಿಗಳೂ ಸಹಾ ಯೋಚನೆ ಮಾಡಬೇಕು. ಇವತ್ತಿನ ದಿವಸ ಆ ಬಸ್‌ಗಳಲ್ಲಿ ಯಾರು ಸಾರ್ವಜನಿಕರು ಪ್ರಯಾಣ ಮಾಡುತ್ತಾರೆ ಅವರಿಗೆ ಅವರ ಕಷ್ಟ ಏನು ಎಂಬುದು ಗೊತ್ತಾಗುತ್ತದೆ. ಇವತ್ತು ನಾವು ಬಸ್‌ನಲ್ಲಿ ಹೋಗುವಾಗ ನಮಗೆ ಸಂಪರ್ಕ ಇರುವವರು ಕಂಡಕ್ಟರುಗಳು ಆ ನಂತರ ಡ್ರೈವರ್‌ಗಳು. ಇವತ್ತು ಬಸ್ ಏಕೆ ಚೆನ್ನಾಗಿ ಇಲ್ಲ ಎಂದು ಕೇಳಿದರೆ ಅವರು ಮೆಕ್ಯಾನಿಕ್ ಬಗ್ಗೆ ಹೇಳುತ್ತಾರೆ. ಈ ಬಗ್ಗೆ ಮೆಕ್ಯಾನಿಕ್ ಹತ್ತಿರ ಕೇಳಿದರೆ ಏನು ಮಾಡುವುದು ಸ್ಪೇರ್ ಪಾರ್ಟ್ಸ್ ಇಲ್ಲ ಎಂದು ಹೇಳುತ್ತಾರೆ. ಹೀಗೆ ಒಬ್ಬರಿಂದಲೂ ನಮಗೆ ಸರಿಯಾದ ಉತ್ತರ ಸಿಗುವುದಿಲ್ಲ. ಇವತ್ತಿನ ದಿವಸ ಆ ಸಂಸ್ಥೆಯಲ್ಲಿನ ಲಂಚಗುಳಿತನದ ವಿಷಯದ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತಿನ ದಿವಸ ಸುಮಾರು ಶೇಕಡಾ 20-25ರಷ್ಟು ಬಸ್ ದರವನ್ನು ಏರಿಸಿದ್ದೀರಿ. ಇವತ್ತು ಏನು ಬೆಲೆಯನ್ನು ಹೆಚ್ಚು ಮಾಡಿದ್ದೀರೋ ಆ ಪ್ರಕಾರ ಜನರಿಗೆ ಸೌಕರ್ಯವನ್ನು ಹೆಚ್ಚು ಮಾಡಬೇಕಾಗುತ್ತದೆ. ಈ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳದಿದ್ದರೆ ತಾವು ಸಾರ್ವಜನಿಕರಿಂದ ಬೈಸಿಕೊಳ್ಳುವುದು ತಪ್ಪುವುದಿಲ್ಲ. ಈ ಒಂದು ಸಾರಿಗೆ ವ್ಯವಸ್ಥೆ ಬಗ್ಗೆ ಉತ್ತರ ಕನ್ನಡ ಜಿಲ್ಲೆಯವರು ಯಾವ ಪಾಪವನ್ನು ಮಾಡಿದ್ದಾರೋ ಗೊತ್ತಾಗುತ್ತಾ ಇಲ್ಲ. ಅಲ್ಲಿ ಸರ್ಕಾರಿ ಬಸ್‌ಗಳು ಬರದಿದ್ದರೆ ಪ್ರೈವೇಟ್ ಬಸ್‌ನಲ್ಲಿ ಹೋಗುವಂತಹಾ ಒಂದು ವ್ಯವಸ್ಥೆ ಕೂಡಾ ಇಲ್ಲ. ಅಲ್ಲಿ ಅತ್ಯಂತ ಕಡಿಮೆ ವೆಹಿಕಲ್‌ಗಳು ಇದ್ದು, ಅಲ್ಲಿ ಟ್ಯಾಕ್ಸಿ ವ್ಯವಸ್ಥೆ ಇರುವುದಿಲ್ಲ ನಮ್ಮ ಉತ್ತರ ಕನ್ನಡ ಜಿಲ್ಲೆಗೆ ಈ ಸರ್ಕಾರಿ ಬಸ್ ವ್ಯವಸ್ಥೆ ಬಿಟ್ಟರೆ, ಬೇರೆ ಏರೋಪ್ಲೇನ್ ಇರುವುದಿಲ್ಲ, ರೈಲ್ವೆ ವ್ಯವಸ್ಥೆ ಇರುವುದಿಲ್ಲ. ಈ ಕೆಂಪು ಬಸ್‌ನಲ್ಲಿ ಕುಳಿತು ಬಹುಶಃ ನಾವು ಶಾಸಕರಾಗಿ ಯಾವ ಪಾಪ

ವನ್ನು ಮಾಡಿರುವೆವೋ ಎಂದೆನಿಸುತ್ತದೆ. ಬಹಳ ಸಲ ನಮ್ಮ ಭಾಗಕ್ಕೆ ಒಂದು ಸೂಪರ್ ಡಿಲಕ್ಸ್ ಬಸ್ ಕೊಡಿ ಎಂದು ಹೇಳಿದ್ದೇನೆ. ನಮ್ಮ ಭಾಗ ಸುಮಾರು ೫೦೦ ಕಿಲೋಮೀಟರ್ ದೂರದಲ್ಲಿ ಇದೆ ಎಂದು ಹೇಳಿದ್ದೇನೆ. ಅವರು ಏಕೆ ಇವತ್ತು ನಮಗೆ ಸೂಪರ್ ಡಿಲಕ್ಸ್ ಕೊಟ್ಟಿಲ್ಲ ಎಂದು ಗೊತ್ತಾಗಿದೆ. ಏಕೆಂದರೆ ಅವರಿಗೆ ಸಂಸ್ಥೆಯ ಮೇಲೆ ಹಿಡಿತ ಇಲ್ಲದೇ ಇರುವುದೇ ಆಗದೆ. ಇವತ್ತು ಅಲ್ಲಿ ಅಧ್ಯಕ್ಷರಾಗಿರುವವರು ಎಲ್ಲಾ ಜಿಲ್ಲೆಗಳಿಗೂ ಹೋಗಿ ಅಲ್ಲಿನ ಕಷ್ಟ ಸುಖಗಳನ್ನು ನೋಡಬೇಕಾಗುತ್ತದೆ. ಇವತ್ತು ಈ ರೀತಿ ತೊಂದರೆ ಇರುವುದು ಉತ್ತರ ಕನ್ನಡ ಜಿಲ್ಲೆಯಲ್ಲಿ ಅಷ್ಟೇ ಅಲ್ಲ, ಬೇರೆ ಜಿಲ್ಲೆಗಳಲ್ಲೂ ಸಹಾ ಇಂತಹ ಅವ್ಯವಸ್ಥೆ ಇದೆ. ಇವತ್ತು ಬಹುಶಃ ದೊಡ್ಡ ದೊಡ್ಡ ಬಸ್ ನಿಲ್ದಾಣಗಳಲ್ಲಿ ಯಾವ ರೀತಿಯ ಶೌಚಾಲಯ ವ್ಯವಸ್ಥೆ ಇದೆ ಎಂಬುದನ್ನು ನೋಡಬೇಕಾಗುತ್ತದೆ. ಇವತ್ತು ಬಸ್ ನಿಲ್ದಾಣದಿಂದ ಸುಮಾರು ಅರ್ಧ ಫರ್ಲಾಂಗ್ ದೂರದಲ್ಲಿ ಶೌಚಾಲಯ ಇದ್ದರೂ ಕೂಡಾ ಅಲ್ಲಿಂದ ಬರತಕ್ಕಂತಹ ಸುವಾಸನೆ, ಸುಗಂಧ ವಾಸನೆಯನ್ನು ಅಲ್ಲಿ ಪ್ರಯಾಣಿಕರು ಯಾವ ರೀತಿ ಸಹಿಸಿಕೊಂಡು ಇರಲು ಸಾಧ್ಯ ? ಇಂತಹದ್ದನ್ನೆಲ್ಲಾ ಅಲ್ಲಿನ ಐ.ಎ.ಎಸ್. ಅಧಿಕಾರಿಗಳು ಹೋಗಿ ನೋಡಬೇಕು. ಈ ಜನ ಹಳ್ಳಿಗಳಲ್ಲಿ ಹುಟ್ಟಿರುವುದಿಲ್ಲ. ಈ ವಿಷಯದ ಬಗ್ಗೆ ನಾನು ಒಂದು ಸೂಚನೆಯನ್ನು ಕೊಡುತ್ತೇನೆ, ಬಹುಶಃ ಇದನ್ನು ಮಾನ್ಯ ಮಂತ್ರಿಗಳು ಕಾರ್ಯಗತ ಮಾಡುವುದಿಲ್ಲವೆಂದು ಕಾಣುತ್ತದೆ. ಇವತ್ತು ಈ ಐ.ಎ.ಎಸ್. ಅಧಿಕಾರಿಗಳು ಯಾರು ಇದ್ದಾರೆ ಇವರಿಗೆ ಕಾರುಗಳನ್ನು ಕೊಡಬೇಡಿ. ಇವರೂ ಕೂಡಾ ಬಸ್ ಸ್ಟ್ಯಾಂಡ್‌ನಲ್ಲಿ ಕಾದು ನಿಂತು ಈ ಬಸ್‌ಗಳಲ್ಲಿ ಪ್ರಯಾಣ ಮಾಡಲಿ. ಕೇವಲ ೧ ತಿಂಗಳು ಈ ರೀತಿ ಅವರು ಎಲ್ಲಾ ಜಿಲ್ಲೆಗಳಲ್ಲಿ ಓಡಾಡಿದರೆ ಈ ಒಂದು ವ್ಯವಸ್ಥೆ ಸರಿಹೋಗಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಕೇವಲ ೨ ಅಥವಾ ೩ ತಿಂಗಳು ಐಷಾರಾಮ ವ್ಯವಸ್ಥೆ ಬಿಟ್ಟು ಈ ಬಸ್‌ಗಳಲ್ಲಿ ಓಡಾಡಲಿ. ಇಲ್ಲಿನ ಕಷ್ಟ ಅವರಿಗೆ ಗೊತ್ತಾಗುತ್ತದೆ. ನಾವು ಹೇಗೆ ವಾರದಲ್ಲಿ ನಾಲ್ಕು ಸಲ ಇಲ್ಲಿಂದ ಅಲ್ಲಿಗೆ ಓಡಾಡುತ್ತೇವೆ ಆ ರೀತಿ ಅವರು ನಾಲ್ಕು ಸಲ ಓಡಾಡಿದರೆ ಕಷ್ಟ ಎಷ್ಟು ಎಂಬುದು ಗೊತ್ತಾಗುತ್ತದೆ. ಈ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ. ಅಧ್ಯಕ್ಷರೆ ಇವೊತ್ತು ಮಾನ್ಯ ತಿಮ್ಮಪ್ಪ ಹೆಗಡೆಯವರು ಉತ್ತಮವಾಗಿ ಹೇಳಿದ್ದಾರೆ. ಮಾನ್ಯ ಪಶುಸಂಗೋಪನ ಮಂತ್ರಿಗಳ ಬಗ್ಗೆ ನೇರವಾಗಿ ಆಪಾದನೆ ಇದೆ. ಅವರು ಮಂತ್ರಿಗಳಾಗಿ ಬಂದಕೂಡಲೆ ವಯಸ್ಸಾದವರಾಗಿದ್ದರೂ ಉತ್ಸಾಹಿ ಋಷಿಗಳ ತರಹ ಜೀವನದಲ್ಲಿ ಸಂಸಾರದ ಬಗ್ಗೆ ಕಾಳಜಿ ಇಲ್ಲ, ರಾಜ್ಯದ ಬಗ್ಗೆ ಕಾಳಜಿ ಇದೆ ಎನ್ನುವ ಭಾವನೆ ಇತ್ತು. ಅವರು ಮಂತ್ರಿಗಳಾದ ಮೇಲೆ ಎಲ್ಲಾ ಜಿಲ್ಲೆಗಳಲ್ಲೂ ಪ್ರವಾಸ ಮಾಡಿದರು ಆದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರವಾಸ ಮಾಡಲಿಲ್ಲ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಉತ್ತರ ಕನ್ನಡ ಜಿಲ್ಲೆಯಲ್ಲೂ ಪ್ರವಾಸ ಮಾಡಿದ್ದೇನೆ.

ಶ್ರೀ ಆರ್.ಎನ್. ನಾಯಕ್.—ಬಹುಶಃ ಮಾನ್ಯ ಮಂತ್ರಿಗಳು ಘಾಟ್ ಸೆಕ್ಷನ್‌ಗೆ ಇಳಿಯಲಿಲ್ಲ ಎಂದು ಕಾಣುತ್ತದೆ. ಅವರು ಅಂಬಾಸಿಡರ್ ಕಾರಿನಲ್ಲಿ ಕುಳಿತು, ಜನತಾ ಪಕ್ಷದ ಶಾಸಕರು ಗೆದ್ದಿರುವ ಶಿರಸಿ, ಹಳಿಯಾಳ ಕಡೆ ಪ್ರವಾಸ ಮಾಡಿರಬಹುದು. ನಿಮ್ಮ ತೋಟಗಾರಿಕೆ ಇಲಾಖೆ ಅಧಿಕಾರಿಗಳು ಅಲ್ಲಿ ವಿಶೇಷವಾಗಿ ಕೆಲಸ ಮಾಡುತ್ತಿಲ್ಲ. ತನಗೆ ತಾನೇ ಬೆಳೆಯತಕ್ಕ ಮಿಡಿ ಉಪ್ಪಿನಕಾಯಿ ಮರ, ನೇರಳೆ ಮರ, ಇತ್ಯಾದಿ ಮರಗಳು ಬೆಳೆಯುತ್ತಿವೆ. ಬಾಳೆಗಿಡ ಎಲ್ಲಾ ಕ್ಲೋಸ್ ಆಗಿವೆ. ಮೆಣಸಿಕಾಯಿ ಗಿಡಗಳು ಎಲ್ಲಾ ಹೋಗಿವೆ. ತೆಂಗಿನ ಗಿಡಕ್ಕೆ ರೋಗ ಬಂದಿದೆ. ಒಂದು ತೆಂಗಿನ ಕಾಯಿ ಬೆಲೆ ಆರು ರೂಪಾಯಿ ಆಗಿದೆ. ತೆಂಗಿನ ಗಿಡಗಳಿಗೆ ಔಷಧಿಯನ್ನು ಸಿಂಪಡಿಸದೇ ಹೋದರೆ ಆ ಗಿಡಗಳು ಹಾಳಾಗುತ್ತವೆ. ತೋಟಗಾರಿಕೆ ಇಲಾಖೆ ಆಫೀಸ್ ಎಲ್ಲಿದೆ ಎಂದು ಅನೇಕ ಜನರಿಗೆ ಗೊತ್ತಿಲ್ಲ. ಉತ್ತರ ಕನ್ನಡ ಜಿಲ್ಲೆಯಲ್ಲಿ ಎಲ್ಲಾ ತೋಟಗಳು ಕಾಣೆಯಾಗುತ್ತಿವೆ. ನ್ಯಾಚುರಲ್ ಆಗಿ ಬೆಳೆದಿರತಕ್ಕ ಗಿಡಮರಗಳು ಕಾಣುತ್ತಿವೆಯೋ ಹೊರತು ತೋಟಗಾರಿಕೆ ಇಲಾಖೆಯವರು ಬೆಳೆಸಿರತಕ್ಕ ಗಿಡಮರಗಳು ಎಲ್ಲಿಯೂ ಕಾಣುವುದಿಲ್ಲ. ತನಗೆ ತಾನೇ ಬೆಳೆಯುವ ಒಳ್ಳೆಯ ಒಳ್ಳೆಯ ಮಾವಿನ ಮರಗಳು, ಹಲಸಿನ ಮರಗಳು, ಏನು ಬೆಳೆಯುತ್ತವೆ ಅವುಗಳಿಗೆ ಒಳ್ಳೆಯ ಮಾರ್ಕೆಟ್ ಹುಡುಕಬೇಕು. ಅದೇ ರೀತಿ ಹಣ್ಣು ಸಂಸ್ಕರಣ ಮಾಡತಕ್ಕದ್ದು ಮಾಡಬೇಕು. ಉತ್ತರ ಕನ್ನಡ ಜಿಲ್ಲೆಯಲ್ಲಿ ಫಿಷರೀಸ್ ಡಿಪಾರ್ಟ್‌ಮೆಂಟಿನವರು ಮೀನು ಸಂಸ್ಕರಣ ವ್ಯವಸ್ಥೆ ಇಟ್ಟುಕೊಂಡು ಮಾಡಿದ್ದಾರೆ. ಅದೇ ರೀತಿಯಲ್ಲಿ ಹಣ್ಣು ಸಂಸ್ಕರಣ ಮಾಡತಕ್ಕದ್ದು ಮಾಡಬೇಕು. ಒಂದು ಜಿಲ್ಲೆಯಲ್ಲಿ ಬೆಳೆಯುತಕ್ಕ ಹಣ್ಣುಗಳ ರುಚಿ ಇತರೆ ಜಿಲ್ಲೆಯವರಿಗೂ ಸಿಕ್ಕುವಂಥ ವ್ಯವಸ್ಥೆ ಮಾಡ ಮಾಡಬೇಕು. ಇನ್ನು ವೆಟರ್‌ನರಿ ಕಾಲೇಜು ತೆರೆಯುವ ಬಗ್ಗೆ, ಪಶುವೈದ್ಯರನ್ನು ನಿರ್ಮಾಣ ಮಾಡುವುದು ಅವಶ್ಯಕತೆ ಇದೆ ಎಂದು ಹಲವಾರು ಸದಸ್ಯರು ಹೇಳಿದರು. ಪಶುವೈದ್ಯರು ನಮ್ಮಲ್ಲಿ ಇಲ್ಲದೆ ಇದ್ದರೆ ಬೇರೆ ರಾಜ್ಯಗಳಿಂದ ಆಮದು ಮಾಡಿಕೊಂಡು ಅವರಿಗೆ ಪಗಾರ ಜಾಸ್ತಿ ಕೊಡಿ.

ಹಾಗೆ ಆ ಹುದ್ದೆಗಳನ್ನು ಖಾಲಿ ಬಿಟ್ಟರೆ ದನಗಳು ಉಳಿಯುವುದಿಲ್ಲ. ಅದ್ದರಿಂದ, ಪಶುವೈದ್ಯರು ಇಲ್ಲದಂತೆ ಮಾತ್ರ ಮಾಡಬೇಡಿ. ಮನುಷ್ಯ ವೈದ್ಯರು ಇಲ್ಲದಂತೆ ಮಾಡಿದರೆ, ಅವರು ಪ್ರೈವೇಟ್ ಡಾಕ್ಟರ ಬಳಿ ಹೋಗುತ್ತಾರೆ. ಇವೊತ್ತು ಪ್ರೈವೇಟ್ ದನಗಳ ಡಾಕ್ಟರುಗಳು ಇಲ್ಲ. ಅದ್ದರಿಂದ ಎಲ್ಲಾ ಆಸ್ಪತ್ರೆಗಳಲ್ಲೂ ದನಗಳ ಡಾಕ್ಟರುಗಳನ್ನು ನೇಮಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಕೊಟ್ಟ ಕೆಲವು ಸೂಚನೆಗಳನ್ನು ಗಂಭೀರವಾಗಿ ಗಣನೆಗೆ ತೆಗೆದುಕೊಂಡು ಕಾರ್ಯಗತ ಮಾಡು ತ್ತಾರೆಂದು ಭಾವನೆ ಇಟ್ಟುಕೊಂಡಿದ್ದೇನೆ. ನನಗೆ ಇವೊತ್ತು ಸ್ವಲ್ಪ ಹೊತ್ತು ಜಾಸ್ತಿ ಮಾತ ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ರುಕ್ಮಯ್ಯ ಪೂಜಾರಿ (ವಿಠಲ್).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು, ರಸ್ತೆ ಸಾರಿಗೆ, ತೋಟಗಾರಿಕೆ, ಪಶುಸಂಗೋಪನೆ, ಹೈನುಗಾರಿಕೆ ಇಲಾಖೆಯ ಬೇಡಿಕೆಗಳನ್ನು ಮಂಡಿ ಸಿದ್ದಾರೆ, ಆ ಬೇಡಿಕೆಗಳ ಬಗ್ಗೆ ಒಂದೆರಡು ಸಲಹೆಗಳನ್ನು ಹೇಳಬಯಸುತ್ತೇನೆ. ನಾನು ಒಂದು ವಾರದ ಹಿಂದೆ ಮಂಗಳೂರಿಗೆ ಕೆ.ಎಸ್.ಆರ್.ಟಿ.ಸಿ ಬಸ್ಸಿನಲ್ಲಿ ಪ್ರಯಾಣ ಮಾಡುವಾಗ ಬಸ್ಸಿನ ಚಾಲಕ ಅಡ್ಡಾದಿಡ್ಡಿ ಬಸ್ಸು ಓಡಿಸುತ್ತಿದ್ದುದನ್ನು ನೋಡಿ ನಾನು ಕಂಡಕ್ಟರ್‌ನ್ನೂ ಕರೆದು ಬಸ್ಸಿನಲ್ಲಿ ೪೦ ಜನ ಇದ್ದಾರೆ, ಡ್ರೈವರ್‌ಗೆ ಸರಿಯಾಗಿ ಹೋಗುವಂತೆ ತಿಳಿಸು ಎಂದು ಹೇಳಿದಾಗ, ಕಂಡಕ್ಟರ್ ಹೋಗಿ ಹೇಳಿದಾಗ ಆತ ಒರಟು ವರ್ತನೆ ಮಾಡಿದ ಶಾಸಕರು ಪ್ರಯಾಣ ಮಾಡುವಾಗ ಸೂಚನೆ ನೀಡಿದರು ಸರಿಯಾಗಿ ವರ್ತನೆ ಮಾಡದೇ ಇದ್ದರೆ, ಇನ್ನು ಶ್ರೀಸಾಮಾನ್ಯರು ಓಡಾಡುವಾಗ ಯಾವ ರೀತಿ ವರ್ತನೆ ಮಾಡಬಹುದೆಂದು ತಾವೇ ಯೋಚನೆ ಮಾಬೇಕು. ಇಲಾಖೆಯು ಕಂಡಕ್ಟರ್ ಮತ್ತು ಡ್ರೈವರ್‌ಗಳಲ್ಲಿ ಒಂದು ಕಾರ್ಯದಕ್ಷತೆ, ಪ್ರಾಮಾಣಿಕತೆ ಹೆಚ್ಚಿಸುವ ದೃಷ್ಟಿಯಿಂದ, ವಿಭಾಗ ಮಟ್ಟದಲ್ಲಿ ಅವರಿಗೆ ಒಂದು ತರಬೇತಿ ಕೇಂದ್ರ ಮಾಡುವುದು ಒಳ್ಳೆಯದು. ಅವರಿಗೆ ಸರಿಯಾದ ಶಿಕ್ಷಣ, ತರಬೇತಿ ಕೊಟ್ಟರೆ, ಅವರ ಪ್ರಾಮಾಣಿಕತೆಯನ್ನು ಹೆಚ್ಚಿಸುವಂತಹದು ಮಾಡಿದರೆ. ಇಲಾಖೆಯ ದಕ್ಷತೆ ಹೆಚ್ಚಾಗುತ್ತದೆ. ಪ್ರಯಾಣಿಕರಿಗೆ ಅನುಕೂಲವಾಗುತ್ತದೆ, ಸರ್ಕಾರಕ್ಕೂ ಆದಾಯ ಜಾಸ್ತಿ ಯಾಗುವ ಸಂಭವ ಇವೆ. ನಾನು ರಾಷ್ಟ್ರೀಕರಣಕ್ಕೆ ವಿರೋಧಿಯಲ್ಲ. ಮೊದಲು ಖಾಸಗಿ ಸಂಸ್ಥೆ ಯವರ ಕೈಯಲ್ಲಿದ್ದಾಗ ಸಮಯಕ್ಕೆ ಸರಿಯಾಗಿ ಬಸ್ಸುಗಳು ಬರುತ್ತಿದ್ದವು. ರೇಟು ಸಹ ಕಡಿಮೆ ಇತ್ತು. ಪ್ರಯಾಣಿಕರಿಗೆ ತುಂಬಾ ಅನುಕೂಲವಾಗುತ್ತಿತ್ತು. ರಾಷ್ಟ್ರೀಕರಣವಾದ ಮೇಲೆ ಸಂಪೂರ್ಣ ಅವ್ಯವಸ್ಥೆಯಾಗಿದೆ. ಟಿಕೆಟ್ ದರಗಳೂ ಸಹ ಜಾಸ್ತಿಯಾಗಿದೆ. ಮಂಗಳೂರಿನಿಂದ ಉಡುಪಿಗೆ ೩೫ ಮೈಲಿ ಇದೆ. ಮಂಗಳೂರಿನಿಂದ ಪುತ್ತೂರಿಗೆ ೩೧ ಮೈಲಿ ಇದೆ. ಮಂಗಳೂರಿನಿಂದ ಉಡುಪಿ ಮಾರ್ಗ ರಾಷ್ಟ್ರೀಕರಣ ಮಾಡಿಲ್ಲ. ಮಂಗಳೂರಿನಿಂದ ಪುತ್ತೂರಿಗೆ ರಾಷ್ಟ್ರೀಕರಣವಾಗಿದೆ. ಮಂಗಳೂರಿನಿಂದ ಉಡುಪಿಗೆ ಹೋಗತಕ್ಕ ಖಾಸಗಿ ಬಸ್ಸಿನಲ್ಲಿ ರೇಟ್ ಕಡಿಮೆ ಇದೆ. ಮಂಗಳೂರಿ ನಿಂದ, ಪುತ್ತೂರಿಗೆ ಕೆ.ಎಸ್.ಆರ್.ಟಿ.ಸಿ ಬಸ್ಸಿನಲ್ಲಿ ಜಾಸ್ತಿ ಇದೆ. ಈ ಅವ್ಯವಸ್ಥೆಯನ್ನು ಹೋಗ ಲಾಡಿಸಬೇಕಾದರೆ. ದೊಡ್ಡ ದೊಡ್ಡ ರೂಟುಗಳನ್ನು ಸರ್ಕಾರ ಇಟ್ಟುಕೊಂಡು, ಸಣ್ಣ, ಸಣ್ಣ ರೂಟು ಗಳನ್ನು ನಿರುದ್ಯೋಗ ಯುವಕರಿಗೆ ಕೊಡುವುದರಿಂದ ಅಲ್ಲಿ ಪ್ರಾಮಾಣಿಕತೆ ಮತ್ತು ದಕ್ಷತೆಯನ್ನು ಹೆಚ್ಚಿಸಬಹುದು. ಈ ರೀತಿ ಮಾಡಿದರೆ ನಿರುದ್ಯೋಗಿಗಳಿಗೆ ಉದ್ಯೋಗ ಸಿಕ್ಕಿದಂತಾಗುತ್ತದೆ. ಸರ್ಕಾರಕ್ಕೆ ಆಗತಕ್ಕ ನಷ್ಟವನ್ನು ತುಂಬಿಸಿದಂತೆ ಆಗುತ್ತದೆ. ಅದೇ ರೀತಿ ಜನರಿಗೂ ಅನುಕೂಲ ವಾಗುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಅದೇ ರೀತಿ, ನಮ್ಮ ತಾಲ್ಲೂಕು ಕೇಂದ್ರ ಗಳಿಂದ. ಗ್ರಾಮಾಂತರ ಪ್ರದೇಶಗಳ ಕಡೆಗೆ ಬಸ್ಸುಗಳನ್ನು ಓಡಿಸಲಿಕ್ಕೆ ಪ್ರಯತ್ನ ಮಾಡಿದರೆ. ಪ್ರಯಾಣ ಮಾಡುವಂಥ ಜನರಿಗೆ ತುಂಬಾ ಅನುಕೂಲವಾಗುತ್ತದೆ. ಇನ್ನು ಬಂಟವಾಳದಲ್ಲಿ ಮುನಿಸಿಪಾಲಿಟಿ ಏರಿಯಾದಲ್ಲಿ ನಾಲ್ಕು ವರ್ಷದಿಂದ ರಿಕ್ಷಾಗಳಿಗೆ ಪರ್‌ಮಿಟ್ ಕೊಡುವುದನ್ನು ನಿಲ್ಲಿಸಿ ದ್ದಾರೆ. ೨೫೦ ಪರ್‌ಮಿಟ್ ಮಾತ್ರ ಕೊಟ್ಟಿದ್ದಾರೆ. ಸ್ವಉದ್ಯೋಗ ಶಿಕ್ಷಣ ಪಡೆದುಕೊಂಡು ಅವನು ರಿಕ್ಷಾ ತೆಗೆದುಕೊಂಡಾಗ ಆತನಿಗೆ ಪರ್‌ಮಿಟ್ ಕೊಡದೇ ಹೋದರೆ ಅವನ ನಿರುದ್ಯೋಗ ಸಮಸ್ಯೆ ಪರಿಹರಿಸಿದಂತಾಗುವುದಿಲ್ಲ. ಅವನು ರಿಕ್ಷಾ ಕೊಂಡು ಕೊಂಡರೂ ಪ್ರಯೋಜನವಾಗು ವುದಿಲ್ಲ. ಅದ್ದರಿಂದ ಈ ಬಗ್ಗೆ ಗಮನಹರಿಸಿ, ಇನ್ನು ಮುಂದಾದರೂ ಬಂಟವಾಳದಲ್ಲಿ ರಿಕ್ಷಾಗಳಿಗೆ ಪರ್‌ಮಿಟ್ ಕೊಡಲಿಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ರೈತರ ಮನೆ ಬಾಗಿಲಿಗೆ ಪಶುವೈದ್ಯ ಸೇವೆಯನ್ನೊದಗಿಸುವುದಕ್ಕಾಗಿ ಸಂಚಾರಿ ಪಶುವೈದ್ಯ ಔಷಧಾಲಯಗಳನ್ನು ಸ್ಥಾಪಿಸಲಾಗಿದೆ. ಒಟ್ಟು ೬೧ ಸಂಚಾರಿ ಪಶುವೈದ್ಯ ಔಷಧಾಲಯಗಳು, ಈ

---

† ಈ ಚಿನ್ಹೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ವರ್ಷದಲ್ಲಿ ೨೨ ಹೊಸ ಘಟಕಗಳನ್ನು ಮಂಜೂರು ಮಾಡಲಾಗಿದೆ. ಎಂದು ಹೇಳಿದ್ದೀರಿ. ಅದನ್ನು ಹೆಚ್ಚು ಮಂಜೂರು ಮಾಡುವುದಕ್ಕೆ ಮುಂಚೆ ಇದ್ದ ಪಶುವೈದ್ಯಶಾಲೆಗಳಿಗೆ ಔಷಧಿಗಳನ್ನು ಕೊಟ್ಟು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡರೆ ತುಂಬಾ ಪ್ರಯೋಜನವಾಗುತ್ತದೆ. ಮಂಗಳೂರಿನಲ್ಲಿ ೮ ಸಂಚಾರಿ ಆಸ್ಪತ್ರೆಗಳು ಇವೆ. ಅದರಲ್ಲಿ ೫ ಆಸ್ಪತ್ರೆಗಳು ನಿಷ್ಕ್ರಿಯವಾಗಿವೆ. ಇವುಗಳನ್ನು ಸಕ್ರಿಯ ಗೊಳಿಸಬೇಕು. ಹೆಚ್ಚು ಔಷಧಗಳು ಸಿಕ್ಕುವಂತೆ ಮಾಡಬೇಕು ಇನ್ನು ನಮ್ಮ ಜಿಲ್ಲೆಯ ಪುತ್ತೂರು, ಕೊಯ್ಲ, ಜಾನುವಾರುಗಳ ಸಾಗಾಣಿಕೆ ಕೇಂದ್ರಗಳಲ್ಲಿ ದನಗಳನ್ನು ಕಂಡಾಗ ನೋವಾಗುತ್ತದೆ. ಅದರ ಮಧ್ಯದಲ್ಲಿಯೇ ಹೊಳೆ ಹರಿಯುತ್ತಿದೆ. ಅಲ್ಲಿ ನೀರಿಗೆ ಏನೂ ತೊಂದರೆಯಿಲ್ಲ, ಅಲ್ಲಿ ಹುಲ್ಲು ಬೆಳೆಸುವಂಥಾದ್ದು ಮಾಡಬೇಕು. ಆ ಕೇಂದ್ರದ ಬಗ್ಗೆ ಮುತುವರ್ಜಿವಹಿಸಿ ಕೆಲಸ ಮಾಡುವ ದೃಷ್ಟಿಯಿಂದ ಅದರ ಬಗ್ಗೆ ಸ್ಫೂರ್ತಿಯಿಂದ, ಪ್ರಾಮಾಣಿಕತೆಯಿಂದ, ಕೆಲಸ ಮಾಡತಕ್ಕ ದಕ್ಷ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಬೇಕು. ಅಲ್ಲದೇ, ಜಿಲ್ಲಾಮಟ್ಟದಲ್ಲಿ, ಮತ್ತು ತಾಲ್ಲೂಕುಮಟ್ಟದಲ್ಲಿ ಅವರಿಗೆ ಒಂದು ಸಮಿತಿಯನ್ನು ಮಾಡಿಕೊಟ್ಟರೆ, ಅದರಿಂದ ಜನರಿಗೆ ಪ್ರಯೋಜನವಾಗುತ್ತದೆ

೬ ಪಿ. ಎಂ.

ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ತೋಟಗಾರಿಕೆ ಇಲಾಖೆಯ ವತಿಯಿಂದ ನಮ್ಮ ಜಿಲ್ಲೆಯಲ್ಲಿರತಕ್ಕ ಹರಿಜನರಿಗೆ ಕಳೆದ ಜೂನ್ ತಿಂಗಳಲ್ಲಿ ತಲಾ ೩೦ ರಂತೆ ತೆಂಗಿನ ಸಸಿಗಳನ್ನು ಕೊಟ್ಟಿದ್ದಾರೆ. ಅವುಗಳನ್ನು ಬೆಳೆಸುವುದಕ್ಕೆ ಹಣವನ್ನು ಕೊಡಬೇಕು. ಕೆಲವು ಜನರಿಗೆ ಕೊಟ್ಟಿದ್ದಾರೆ. ಇನ್ನು ಕೆಲವು ಜನರಿಗೆಕೊಟ್ಟಿಲ್ಲ. ಏತಕ್ಕೆ ಈ ರೀತಿ ಮಾಡಿದ್ದಾರೆಂಬುದು ಗೊತ್ತಿಲ್ಲ, ಈ ಸಸಿಗಳನ್ನು ಬೆಳೆಸುವುದಕ್ಕೆ ೩೫೦–೪೦೦ ರೂಪಾಯಿಗಳನ್ನು ಕೊಡುತ್ತಾರೆ. ಆದರೆ ಕೊಟ್ಟಿಲ್ಲ. ನಾವು ಯಾವುದೇ ಒಂದು ಕಾರ್ಯಕ್ರಮವನ್ನು ಹಾಕಿ ಕೊಂಡರೂ ಅದನ್ನು ಸರಿಯಾಗಿ ಜಾರಿಗೆ ಕೊಡದಿದ್ದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಪ್ರತಿಯೊಂದು ಕಾರ್ಯಕ್ರಮವೂ ಜನರಿಗೆ ಅದರಲ್ಲೂ ಗ್ರಾಮಾಂತರ ಜನರಿಗೆ ಮುಟ್ಟುವಂತಿರಬೇಕು, ಮತ್ತು ಅದು ಅರ್ಹ ವ್ಯಕ್ತಿಗಳಿಗೆ ಸಿಕ್ಕುವಂತಿರಬೇಕು. ಈ ವಿಚಾರವನ್ನು ತಾವು ಗಮನದಲ್ಲಿಟ್ಟು ಕೊಳ್ಳಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೋರಯ್ಯ (ರಾಮನಗರ).—ಸನ್ಮಾನ್ಯ ಅಧ್ಯಕ್ಷರೆ, ಸಾರಿಗೆ, ಪಶುಸಂಗೋಪನೆ, ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟಂತೆ ಸದನದ ಮುಂದೆ ಬೇಡಿಕೆಗಳನ್ನು ಮಾನ್ಯ ಸಚಿವರು ಏನು ಮಂಡಿಸಿದ್ದಾರೆ ಈ ಎಲ್ಲ ಬೇಡಿಕೆಗಳನ್ನೂ ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ ಒಂದೆರಡು ಮಾತುಗಳನ್ನು ಮಾತ್ರ ಹೇಳಬಯಸುತ್ತೇನೆ.

ಮೊದಲನೆಯದಾಗಿ ಸಾರಿಗೆ ಸಂಸ್ಥೆಯ ಬಗ್ಗೆ ಹೇಳುವುದಾದರೆ ನನ್ನ ತಾಲ್ಲೂಕಿನಲ್ಲಿ ಕೆಲವು ಬಸ್ಸುಗಳನ್ನು ಕೆಲವು ಹಳ್ಳಿಗಳ ಕಡೆ ಏನು ಓಡಿಸುತ್ತಿದ್ದಾರೆ ಅವುಗಳನ್ನು ಇನ್ನೂ ಸ್ವಲ್ಪ ಮುಂದಿನ ಊರುಗಳಿಗೆ ಹೋಗಿಬರುವಂತೆ ವ್ಯವಸ್ಥೆ ಮಾಡಿ ಅಲ್ಲಿ ಇರತಕ್ಕ ಜನರಿಗೆ ಪ್ರಯಾಣ ಸೌಲಭ್ಯವನ್ನು ಒದಗಿಸಿಕೊಡಬೇಕೆಂದೂ ಇಷ್ಟೇ ಅಲ್ಲದೆ ಆ ಊರುಗಳಲ್ಲಿ ಬೆಳೆಯತಕ್ಕ ಹಣ್ಣು ಹಂಪಲು, ತರಕಾರಿ ಮುಂತಾದುವನ್ನು ಮಾರುಕಟ್ಟೆಗೆ ತಂದು ಮಾರಾಟ ಮಾಡಲು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಈ ಹಿಂದೆಯೇ ಮಾನ್ಯ ಸಾರಿಗೆ ಸಚಿವರಲ್ಲಿ ಕೇಳಿಕೊಂಡಿದ್ದೆ. ಆದರೆ ಇದುವರೆಗೂ ಅದನ್ನು ಮಾಡಲಿಲ್ಲ. ಈಗಲಾದರೂ ಇದನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ರಾಮನಗರದಲ್ಲಿ ಒಂದು ಬಸ್ ನಿಲ್ದಾಣ ಇದೆ. ಆದರೆ ಅಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಪ್ರಯಾಣಿಕರಿಗೆ ಶೌಚಕ್ಕೆ ಸರಿಯಾದ ವ್ಯವಸ್ಥೆ ಇಲ್ಲ. ಬಸ್‌ನಲ್ಲಿ ಬಂದಂಥ ಜನರು ಶೌಚಕ್ಕೆ ಹೋಗಬೇಕಾದರೆ ಇಲ್ಲಿ ಬಸ್ಸುಗಳನ್ನು ನಿಲ್ಲಿಸಿ ಹತ್ತಿರ ಇರತಕ್ಕ ಯಾವುದಾದರೂ ಮನೆಗಳಿಗೆ ಹೋಗಿಬರಬೇಕಾಗಿದೆ. ಅಲ್ಲಿ ಕುಡಿಯುವ ನೀರಿಗೋಸ್ಕರ ಬೋರ್‌ವೆಲ್ ಹಾಕಿದ್ದೀರಿ. ಆದರೆ ಅದಕ್ಕೆ ಪಂಪ್ ಹಾಕಿಲ್ಲ. ಆದ್ದರಿಂದ ಈ ಎರಡು ವಿಷಯಗಳ ಕಡೆಗೆ ಸರ್ಕಾರ ಗಮನಕೊಟ್ಟು ಸೂಕ್ತ ವ್ಯವಸ್ಥೆ ಮಾಡಬೇಕು. ಇದರ ಜೊತೆಗೆ ನಮ್ಮ ತಾಲ್ಲೂಕಿನಲ್ಲಿ ಇನ್ನೂ ಒಂದೆರಡು ಬಸ್ ಲೈನ್‌ಗಳನ್ನು ಹೊಸದಾಗಿ ಹಾಕಬೇಕೆಂದು ಕೇಳಿಕೊಂಡಿದ್ದೇನೆ. ಅದನ್ನು ಮಾನ್ಯ ಸಾರಿಗೆ ಸಚಿವರು ಮಂಜೂರು ಮಾಡಿಕೊಡಬೇಕು. ನಮ್ಮ ಬಿಡದಿಯಲ್ಲಿ ಒಂದು ಜಾಗ ಇದೆ. ಅಲ್ಲಿ ಒಂದು ಬಸ್‌ಸ್ಟ್ಯಾಂಡ್‌ನ್ನು ಕಟ್ಟಿಸಿಕೊಡಬೇಕೆಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಅಷ್ಟೇ ಅಲ್ಲ ಬಿಡದಿಯಲ್ಲಿ ಬಸ್ ಟ್ರಾಫಿಕ್ ಜಾಸ್ತಿ ಇರುವುದರಿಂದ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.

ಅಲ್ಲಿ ಒಂದು ಆಫೀಸನ್ನು ತೆರೆದು ಟ್ರಾಫಿಕ್ ಕಂಟ್ರೋಲರ್‌ನ್ನು ನೇಮಿಸಬೇಕೆಂದು ಕೇಳಿಕೊಂಡಿದ್ದೆ. ಅದೂ ಕೂಡ ಆಗಿಲ್ಲ. ಈಗಲಾದರೂ ಇದರ ಬಗ್ಗೆ ಗಮನಹರಿಸಿ ಸೂಕ್ತ ಕಾರ್ಯಕ್ರಮ ತೆಗೆದು ಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪಶುಸಂಗೋಪನೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಾದರೆ, ನಮ್ಮ ತಾಲ್ಲೂಕಿನಲ್ಲಿ ಈಗಾಗಲೇ ೨ ವೆಟರಿನರಿ ಆಸ್ಪತ್ರೆಗಳನ್ನು ಹುಲಿಕೆರೆ, ರಂಗನಕ್ಯಾತಾಪುರದಲ್ಲಿ ಮಂಜೂರು ಮಾಡಿ ೨ ವರ್ಷವಾಯಿತು. ಅಲ್ಲಿಗೆ ವೈದ್ಯರನ್ನು ನೇಮಕ ಮಾಡಿಲ್ಲ. ಇನ್ನೊಂದು ಕಡೆ ವೈದ್ಯ ರಿದ್ದರೂ ಅವರಿಗೆ ಬೇಕಾದ ಔಷಧಿಗಳು ಇಲ್ಲ. ಈ ಒಂದು ಕುಂದುಕೊರತೆಯನ್ನು ನಿವಾರಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ತೋಟಗಾರಿಕೆ ಇಲಾಖೆಯ ಬಗ್ಗೆ ಹೇಳುವುದಾದರೆ ನಮ್ಮಲ್ಲಿ ೧೦ ಎಕರೆಯಲ್ಲಿ ಗೋಡಂಬಿಯ ಮರಗಳನ್ನು ಬೆಳೆಸಿದ್ದಾರೆ. ಇವತ್ತು ಅವು ಫಲ ಬಿಡುವ ಹಂತಕ್ಕೆ ಬಂದಿವೆ. ಈ ಜಮೀನು ತೋಟಗಾರಿಕೆ ಇಲಾಖೆಗೆ ಸೇರಿದ್ದೋ ಅಥವಾ ಲೋಕೋಪಯೋಗಿ ಇಲಾಖೆಗೆ ಸೇರಿದ್ದೋ ಎಂಬುದು ಗೊತ್ತಾಗುತ್ತಿಲ್ಲ. ಜನರು ಬಂದು ಇದನ್ನು ಹಿಡಿದುಕೊಂಡು ಹೋಗುತ್ತಿದ್ದಾರೆ. ಮೊದಲು ಈ ಗೋಡಂಬಿ ಮರಗಳನ್ನು ತೋಟಗಾರಿಕೆ ಇಲಾಖೆಯವರು ನೆಟ್ಟಿದ್ದರು. ಆದರೆ ಇವತ್ತು ಅದನ್ನು ಯಾರೂ ನೋಡಿಕೊಳ್ಳುವವರೇ ಇಲ್ಲ. ಇದು ಯಾರಿಗೆ ಸೇರಿದ್ದು ಎಂಬುದನ್ನು ತಿಳಿದು ಇದಕ್ಕೆ ಒಂದು ಸೂಕ್ತ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಪಂಪಾಪತಿ.— ಮಾನ್ಯ ಅಧ್ಯಕ್ಷರೆ......

ಉಪಾಧ್ಯಕ್ಷರು.—ಈಗಾಗಲೇ ಸಾಕಷ್ಟು ಸಮಯವಾಗಿದೆ. ಆದ್ದರಿಂದ ಮೊದಲು ಮಾನ್ಯ ಮಂತ್ರಿಗಳ ಉತ್ತರ ಮುಗಿಯಲಿ. ಅನಂತರ ನಿಮಗೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಪಂಪಾಪತಿ.—ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಮತ್ತು ನಾನು ಹೇಳುವುದನ್ನೆಲ್ಲಾ ಕೇವಲ ಒಂದೆರಡು ಮಾತುಗಳಲ್ಲಿ ಮುಗಿಸಿಬಿಡುತ್ತೇನೆ.

ಉಪಾಧ್ಯಕ್ಷರು.—ಮೊದಲು ರಿಪ್ಲೈ ಮುಗಿದಮೇಲೆ ವಿವರಣೆಯನ್ನು ಕೇಳಿ.

ಶ್ರೀ ಪಂಪಾಪತಿ.— ವಿವರಣೆ ಕೇಳುವುದಕ್ಕಿಂತ ನಾನು ಹೇಳಿದರೇ ಚೆನ್ನಾಗಿ ಇರುತ್ತದೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರಾದ ಕೃಷ್ಣನ್‌ರವರೇ ೧ ಗಂಟೆ ೨೦ ನಿಮಿಷವನ್ನು ತೆಗೆದು ಕೊಂಡಿದ್ದಾರೆ. ಸಮಯ ಇಲ್ಲದಿರುವುದರಿಂದ ಕ್ಲಾರಿಫಿಕೇಷನ್ ಕೇಳುವುದಕ್ಕೆ ತಮಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಪಂಪಾಪತಿ.—ದಾವಣಗೆರೆ ಮತ್ತು ಹರಿಹರ ನಗರಗಳ ವಿಚಾರದಲ್ಲಿ ಮಾತ್ರ ಒಂದೆರಡು ಮಾತುಗಳನ್ನು ಹೇಳಿ ಬಿಡುತ್ತೇನೆ. ಕೇವಲ ಒಂದು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸಿಬಿಡು ತ್ತೇನೆ. ನಮ್ಮಂಥವರಿಗೆ ತಾವು ಅವಕಾಶವನ್ನು ಕೊಡದಿದ್ದರೆ ಹೇಗೆ ಸ್ವಾಮಿ ?

ಉಪಾಧ್ಯಕ್ಷರು.—ಇಷ್ಟು ಹಠ ಹಿಡಿದರೆ ಕಾನೂನು ಪ್ರಕಾರ ನಾನು ಹೋಗಬೇಕಾಗುತ್ತದೆ. ನೀವು ನಮಗೆ ಸಹಕಾರ ಕೊಡಬೇಕು. ನೀವು ಸಹಕಾರ ಕೊಡದಿದ್ದರೆ ನಾನು ಯಾರ ಹತ್ತಿರ ಸಹಕಾರ ವನ್ನು ತೆಗೆದುಕೊಳ್ಳಬೇಕು.

ಶ್ರೀ ಪಂಪಾಪತಿ.—ನೀವು ಈ ರೀತಿ ಹೇಳುವುದಾದರೆ ನಾನು ಮಾತನಾಡುವುದಿಲ್ಲ. ಹೋಗಲಿ ಬಿಡಿ ಸ್ವಾಮಿ. ನಮ್ಮನ್ನು ಜನರು ಆರಿಸಿ ಕಳುಹಿಸಿದ್ದಾರೆ. ಅವರ ಕುಂದು ಕೊರತೆಗಳ ಬಗ್ಗೆ ನಾವು ಮಾತನಾಡಬೇಕಾಗಿತ್ತು.

ಉಪಾಧ್ಯಕ್ಷರು.—ಅದು ಏನು ಹೇಳಬೇಕೆಂದಿದ್ದೀರಿ, ದಯವಿಟ್ಟು ಕೇವಲ ಎರಡು ನಿಮಿಷದಲ್ಲಿ ಹೇಳಿ ಮುಗಿಸಿಬಿಡಿ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಪಂಪಾಪತಿ.—ಮಾನ್ಯ ಉಪಾಧ್ಯಕ್ಷರೆ, ಈ ದಿವಸ ಸಾರಿಗೆ ಸಚಿವರು ತೋಟಗಾರಿಕೆ ಸಚಿವರು, ಮತ್ತು ಪಶುಸಂಗೋಪನಾ ಖಾತೆಯ ಸಚಿವರುಗಳು ಸದನದ ಮುಂದೆ ಮಂಡಿಸಿರತಕ್ಕ ಬೇಡಿಕೆಯ ಸಂಖ್ಯೆ ೨೬, ೨ ಮತ್ತು ೩ ಇವುಗಳನ್ನು ಬೆಂಬಲಿಸುತ್ತಾ ಒಂದೆರಡು ಮಾತುಗಳನ್ನು ತೋಟಗಾರಿಕೆ ಮತ್ತು ಪಶುಸಂಗೋಪನಾ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ನಮ್ಮ ಪಶುಸಂಗೋಪನಾ ಖಾತೆಗೆ ಸಂಬಂಧಪಟ್ಟಂತೆ ನಾನು ಚುಕ್ಕೆ ಇಲ್ಲದೆ ಇರತಕ್ಕ ಒಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಮಾನ್ಯ ಮಂತ್ರಿಯವರು ಈರೀತಿ ಉತ್ತರವನ್ನು ಕೊಟ್ಟಿದ್ದಾರೆ. ಪಶುಸಂಗೋಪನಾ ಇಲಾಖೆಯಲ್ಲಿ ಕುರಿ, ಕೋಳಿ, ಜಾನುವಾರುಗಳ ಸಾಕಾಣಿಕೆಯ ಕೆಲಸ ಮಾಡತಕ್ಕ ಕೆಲಸಗಾರರ ಸಂಖ್ಯೆ ಅಂದರೆ ನೌಕರರು ಎಷ್ಟು ಎಂದರೆ ೫೫೮ ಜನ ಎಂದೂ ದಿನಗೂಲಿಯವರು ೨೮೦ ಜನ ಎಂದು ಹೇಳಿದ್ದಾರೆ. ಅವರಿಗೆ ಸಂಬಳ ಎಷ್ಟು ಎಂದು ನಾನು ಕೇಳಿರುವ ಪ್ರಶ್ನೆಗೆ ೫೫೨ ಜನರಿಗೆ ೪೩,೦೫,೬೦೦ ರೂಪಾಯಿ ಎಂದೂ ದಿನಗೂಲಿಯಲ್ಲಿರುವ ೨೮೦ ಜನರಿಗೆ ಕೇವಲ ೧೮,೨೫,೦೦೦ ರೂಪಾಯಿ ಎಂದೂ ಹೇಳಿದ್ದಾರೆ. ಅಂದರೆ ೫೫೮ ಜನ ಯಾರು ಹೆಚ್ಚು ಸಂಬಳವನ್ನು ತೆಗೆದು ಕೊಳ್ಳುವವರಿದ್ದಾರೆ ಈ ಜನರೂ ಒಂದೇ ಅಂಗಡಿಗೆ ಹೋಗಬೇಕು, ದಿನಗೂಲಿ ತೆಗೆದುಕೊಳ್ಳತಕ್ಕ ೨೮೦ ಜನ ಏನಿದ್ದಾರೆ ಇವರೂ ಕೂಡ ಅದೇ ಅಂಗಡಿಗೆ ಸಾಮಾನುಗಳನ್ನು ಕೊಂಡುಕೊಳ್ಳಲು ಹೋಗ ಬೇಕು. ಇವರಿಗೆ ಬೆಲೆಯಲ್ಲಿ ಏನೂ ವ್ಯತ್ಯಾಸ ಇರುವುದಿಲ್ಲ. ದಿನಗೂಲಿಯವರಿಗೆ ಕೇವಲ ೬ ರೂಪಾಯಿ ಕೂಲಿ ಕೊಟ್ಟು ದುಡಿಸಿಕೊಳ್ಳುತ್ತಿದ್ದೀರಿ. ಈ ಒಂದು ತಾರತಮ್ಯವನ್ನು ನೋಡಿ ಈ ಬಡಪಾಯಿ ಗಳಿಗೂ ಹೆಚ್ಚಿನ ಹಣವನ್ನು ಕೊಟ್ಟು ಅನುಕೂಲಮಾಡಿ ಕೊಡುವುದಕ್ಕಾಗುವುದಿಲ್ಲವೆ ? ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ತಮ್ಮ ಇಲಾಖೆಯ ಮತಿಯಿಂದ ಅವರಿಗೆ ಸಹಾಯವನ್ನು ಮಾಡಬೇಕು. ಅವರಿಗೆ ಸಂಬಳವನ್ನು ಹೆಚ್ಚು ಮಾಡಬೇಕು, ಅವರಿಗೆ ಕನಿಷ್ಟ ಮುನ್ನೂರು ರೂಪಾ ಯಿಗಳ ಸಂಬಳವನ್ನಾದರೂ ಮಾಡಿದರೆ ತಮ್ಮ ಇಲಾಖೆಗೆ ಏನು ತೊಂದರೆಯಾಗುವುದಿಲ್ಲ, ಈಗ ಬಿ.ಡಿ.ಓ. ಮುಖಾಂತರ ತಹಸೀಲ್‌ದಾರರ ಮುಖಾಂತರ ಹಿಂದುಳಿದ ಜನಾಂಗಕ್ಕೆ, ಬಡವರಿಗೆ ಕುರಿ ಎಮ್ಮೆ ಕೋಳಿ ಇವೆಲ್ಲ ಕೊಡಿಸುತ್ತೀರಿ ಇವೆಲ್ಲವೂ ಸಾಲದ ರೂಪದಲ್ಲಿ ಅವರಿಗೆ ಕೊಡತಕ್ಕಂಥದು ಇರುತ್ತದೆ. ಇದರಲ್ಲಿ ಎಷ್ಟು ಅವ್ಯವಹಾರವಾಗತ್ತಿದೆ. ಎಂದು ಅದನ್ನು ಹೇಳುವುದಕ್ಕೆ ಹೋಗು ವುದಿಲ್ಲ, ಸರ್ಕಾರದ ಮತಿಯಿಂದ ಬೇಕಾದಷ್ಟು ಫಾರಮ್‌ಗಳು ಇರುತ್ತವೆ, ಚಳ್ಳಕೆರೆಯಲ್ಲಿ ಇರ ತಕ್ಕಂತ ಒಂದು ಫಾರಮ್ ಬಗ್ಗೆ ಮಾತ್ರ ಹೇಳುತ್ತೇನೆ. ಇಲ್ಲಿ ೯ ಸಾವಿರ ೭೩೫ ಎಕರೆ ಇದೆ. ಇದರಲ್ಲಿ ಕುರಿ ಸಾಕಾಣಿಕೆ ಎಷ್ಟು ಮಾಡುತ್ತಿದ್ದಾರೆ ಎಂದರೆ ೩.೭೫೫ ಅಂದರೆ ಮೂರು ಎಕರೆಗೆ ಒಂದು ಆಯಿತು ಇಲ್ಲಿ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಕುರಿಸಾಕಾಣಿಕೆ ಮಾಡಿದರೆ ಒಳ್ಳೆಯದು, ಹಾಗೆ ಪಶು ಸಂಪತನ್ನು ರಕ್ಷಣೆ ಮಾಡಬೇಕು, ಎಮ್ಮೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಸಾಕಬೇಕು. ಈ ರೀತಿ ಸಾಕಿ ಹೆಚ್ಚಿನ ಉತ್ತಮವಾದ ತಳಿಗಳನ್ನು ಬಡವರಿಗೆ ಕೊಟ್ಟರೆ ಖಂಡಿತವಾಗಿಯೂ ಅವರು ಅದರ ಮೂಲಕ ತಮ್ಮ ಜೀವನವನ್ನು ಉತ್ತಮಪಡಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಈ ದಿಕ್ಕಿನಲ್ಲಿ ಎಲ್ಲಾ ಫಾರಮ್ ಗಳಲ್ಲೂ ಕೂಡ ಕೋಳಿ. ಎಮ್ಮೆ, ಹಸುಗಳನ್ನು ಅಭಿವೃದ್ಧಿ ಪಡಿಸಿ ಸಹಾಯ ರೂಪದಲ್ಲಿ, ಸಬ್‌ಸಿಡಿ ರೂಪದಲ್ಲಿ ಸಾಮಾನ್ಯವಾಗಿ ಹಿಂದುಳಿದ ಜನಗಳಿಗೆ ತಾವು ಸಾಲದ ರೂಪದಲ್ಲಿ ಕೊಟ್ಟರೆ ಪಶುಸಂಪತ್ತು ಹೆಚ್ಚುತ್ತದೆ ಮತ್ತು ಬಡ ಕುಟುಂಬಗಳು ಜೀವನ ಮಾಡುವುದಕ್ಕೂ ಒಂದು ದಾರಿಯಾಗುತ್ತದೆಂದು ಹೇಳುತ್ತೇನೆ.

ಇನ್ನು ದಾವಣಗೆರೆ ನಗರ ಬಹಳ ತೀವ್ರವಾಗಿ ಬೆಳೆಯುತ್ತಿರತಕ್ಕಂಥ ಒಂದು ನಗರವಾಗಿದೆ. ಇಲ್ಲಿ ಬೇಕಾದಷ್ಟು ಹುಲ್ಲುಗಾವಲು ಪ್ರದೇಶ ಇರುತ್ತದೆ. ಬೇಕಾದಷ್ಟು ಹಸು ಎಮ್ಮೆಗಳನ್ನು ಸಾಕು ವುದಕ್ಕೆ ಅವಕಾಶ ಇರುತ್ತದೆ. ತಾವು ಒಂದು ಡೈರಿ ಫಾರಮ್ ತೆಗೆದರೆ ಬಡವರಿಗೆ ಅನುಕೂಲ ವಾಗುತ್ತದೆ. ಹೈನುಗಾರಿಕೆಯನ್ನು ಅಭಿವೃದ್ಧಿ ಪಡಿಸಿದಂತಾಗುತ್ತದೆ. ಇಲ್ಲಿ ಈಗಾಗಲೇ ಒಂದು ಕೋಆಪರೇಟೀವ್ ಡೈರಿ ಇದೆ. ಅಲ್ಲಿ ಹಣವಿಲ್ಲ ಅಲ್ಲಿರತಕ್ಕಂಥ ಅಧಿಕಾರಿಗಳೇನೋ ಬಹಳ ಒಳ್ಳೆಯ ವರಿದ್ದಾರೆ. ಅವರು ಏನು ಮಾಡಲಿಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿಯಲ್ಲಿದ್ದಾರೆ. ನಗರ ಬಹಳ ಅಭಿವೃದ್ಧಿಯಾಗುತ್ತಿರಬೇಕಾದರೆ ಅದಕ್ಕೆ ತಕ್ಕಂಥ ಹೈನು ಉತ್ಪಾದನೆಯಾಗತಕ್ಕಂಥದ್ದು ಬಹಳ ಅಗತ್ಯ ವಿರುತ್ತದೆ. ಆದ್ದರಿಂದ ಈ ಭಾಗದಲ್ಲಿ ಒಂದು ಡೈರಿ ಫಾರಮ್‌ನ್ನು ಪ್ರಾರಂಭಿಸಿ ತಮ್ಮ ಇಲಾಖೆ ಯನ್ನು ಅಭಿವೃದ್ಧಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ತೋಟಗಾರಿಕೆ ಇಲಾಖೆಯ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ತಾವು ಅನೇಕ ಹಣ್ಣುಹಂಪಲುಗಳನ್ನು ಬೆಳೆಸುತ್ತಾ ಇದ್ದೀರಿ. ಈ ರೀತಿ ಬೆಳೆದದ್ದನ್ನು ಉಚಿತವಾಗಿ ಏನು ಕೊಡುವುದಿಲ್ಲ. ತಾವು ಮಾರಾಟ ಮಾಡುತ್ತೀರಿ. ಇದರಿಂದ ತಮ್ಮ ಇಲಾಖೆ ಏನು ಲುಕ್ಸಾನು

ಆಗುವುದಿಲ್ಲ. ನಮ್ಮ ದಾವಣಗೆರೆಯಲ್ಲೂ ಒಂದು ಫಾರಮ್ ಇದೆ. ರೆಗ್ಯುಲೇಟೆಡ್ ಮಾರ್ಕೆಟ್ ಪಕ್ಕದಲ್ಲಿಯೇ ಇದೆ. ಇದಕ್ಕೆ ಸೇರಿದಂತೆ ಸುಮಾರು ೨೫ ಎಕರೆ ಜಮೀನು ಇರುತ್ತದೆ. ರೆಗ್ಯುಲೇಟೆಡ್ ಮಾರ್ಕೆಟ್‌ಗೆ ವ್ಯಾಪಾರಕ್ಕೆ ಬರತಕ್ಕಂಥ ರೈತರು ಇಲ್ಲಿ ಒಂದು ಫಾರಮ್ ಇದೆ. ಇಲ್ಲಿ ಒಳ್ಳೆಯ ತಳಿಗಳು ದೊರೆಯುತ್ತವೆ. ಎಂಬ ಒಂದು ಭಾವನೆಯಿಂದ ಬರುತ್ತಾರೆ. ಆದುದರಿಂದ ಅವರಿಗೆ ಅಲ್ಲಿ ಉತ್ತಮವಾದ ತಳಿಗಳು ದೊರೆಯುವಂತೆ ವ್ಯವಸ್ಥೆ ಮಾಡಬೇಕು. ತಾವು ಮಾದರಿಯಾಗಿ ಇರಬೇಕು. ಅವರು ಕೊಂಡು ಹೋದ ತಳಿಗಳಿಂದ ಹೆಚ್ಚಿನ ಆದಾಯವನ್ನು ಪಡೆಯುವಂಥ ಸಾಧ್ಯತೆ ಇರಬೇಕು. ಹಾಗಾದರೆ ತೋಟಗಾರಿಕೆ ಅಭಿವೃದ್ಧಿಯಾಗುವುದಕ್ಕೆ ಅವಕಾಶವಾಗುತ್ತದೆ. ಫಲಸಂಪತ್ತು ಅಭಿವೃದ್ಧಿ ಹೊಂದಿ ಜನರಿಗೂ ಸುಲಭದರದಲ್ಲಿ ದೊರಕುವಂತಾಗುತ್ತದೆ. ಆದ್ದರಿಂದ ತೋಟಗಾರಿಕೆ ಇಲಾಖೆಗೆ ಅವರಿಗೆ ಬೇಕಾದಂಥ ಸಹಕಾರವನ್ನು ಮತ್ತು ಸಲಕರಣೆಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ರಸ್ತೆ ಸಾರಿಗೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತಾ ದಾವಣಗೆರೆ ಹರಿಹರದಿಂದ ಬರತಕ್ಕಂಥ ಅನೇಕ ಜನರು ರಸ್ತೆ ಸಾರಿಗೆ ಬಗ್ಗೆ ಕೇಳುತ್ತಲೇ ಇರುತ್ತಾರೆ. ಈ ಇಲಾಖೆಯಲ್ಲಿ ಬಹಳವಾಗಿ ಹಣ ಸೋರಿಹೋಗುತ್ತದೆಂದು ಹೇಳುತ್ತಲೇ ಇರುತ್ತಾರೆ. ಇದಕ್ಕೆ ಅನೇಕ ಕಾರಣಗಳು ಇರುತ್ತವೆ. ಎಲ್ಲಾ ಕಡೆ ಬಸ್‌ಸ್ಟಾಂಡ್‌ಗಳನ್ನು ನಿರ್ಮಾಣ ಮಾಡಿರುತ್ತಾರೆ. ಪ್ರೈವೇಟ್ ಬಸ್‌ಗಳನ್ನು ಇಟ್ಟುಕೊಂಡಿರತಕ್ಕಂಥವರು ಕೋಟಿಗಟ್ಟಲೆ ಹಣವನ್ನು ಸಂಪಾದನೆ ಮಾಡುತ್ತಾರೆ. ಆದರೆ ಸರ್ಕಾರ ನಡೆಸುತ್ತಿರುವ ಸಾರಿಗೆ ಸಂಸ್ಥೆಯು ಲಕ್ಷಾಂತರ ಕೋಟ್ಯಾಂತರ ರೂಪಾಯಿಗಳ ನಷ್ಟವನ್ನು ಅನುಭವಿಸಿರುತ್ತದೆ. ಇದಕ್ಕೆ ಒಂದು ಉದಾಹರಣೆಯನ್ನು ಕೊಡುವುದಾದರೆ ಖಾಸಗಿ ಬಸ್ ಇಟ್ಟಿರತಕ್ಕಂತವರು ಹೆಚ್ಚು ಜನಸಂಖ್ಯೆ ಇರತಕ್ಕಂಥ ಕಡೆಯಲ್ಲಿ ಬಸ್‌ಗಳನ್ನು ಓಡಿಸುವುದರಿಂದ ಹೆಚ್ಚಿನ ಆದಾಯವನ್ನು ಸಂಪಾದನೆ ಮಾಡುತ್ತಾರೆ. ಆದರೆ ಸರ್ಕಾರದವರು ಓಡಿಸತಕ್ಕಂಥ ಸ್ಥಳಗಳಲ್ಲಿ ಜನರೇ ಇರುವುದಿಲ್ಲ. ಜನಸಂಖ್ಯೆಯೂ ಕಡಿಮೆ ಇರತಕ್ಕಂಥ ಸ್ಥಳಗಳಲ್ಲಿ ಬಸ್‌ಗಳನ್ನು ಬಿಡುತ್ತಿರುವುದು ಈ ಒಂದು ಲುಕ್ಸಾನಿಗೆ ಕಾರಣವಾಗಿರುತ್ತದೆ. ನಮ್ಮ ದಾವಣಗೆರೆ ನಗರ ಬಹಳವಾಗಿ ಬೆಳೆಯುತ್ತಿರತಕ್ಕಂಥ ನಗರವಾಗಿವೆ. ವ್ಯಾಪಾರಿ ಸಂಸ್ಥೆಯಾಗಿ ಬೆಳೆದಿದೆ. ಕೈಗಾರಿಕೆಯಲ್ಲಿ ಮತ್ತು ವಿದ್ಯಾ ಶೈಕ್ಷಣಿಕ ಸಂಸ್ಥೆಗಳು ಬಹಳವಾಗಿ ಬೆಳೆದಂಥ ನಗರವಾಗಿದ್ದರೂ ಸಂಪರ್ಕ ಸಾಧನೆಯಲ್ಲಿ ಬಹಳ ವಂಚಿತವಾಗಿದೆ. ಈ ಸಂಪರ್ಕ ಸಾಧನೆಯ ಬಗ್ಗೆ ಮಾನ್ಯ ಸಚಿವರಲ್ಲಿ ವೈಯಕ್ತಿಕವಾಗಿ ಹಲವಾರು ಬಾರಿ ಮನವಿಗಳನ್ನು ಸಲ್ಲಿಸಿರುತ್ತೇನೆ, ೧೫ ಕಿಲೋಮೀಟರ್ ದಾವಣಗೆರೆ ವಿಸ್ತೀರ್ಣಕ್ಕೆ ಒಂದು ಸಬರಬನ್ ಬಸ್‌ಸ್ಟಾಂಡ್ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಅನೇಕ ದಿವಸಗಳಿಂದ ಕೇಳಿಕೊಳ್ಳುತ್ತಿದ್ದೇನೆ. ಈ ವರ್ಷವಾದರೂ ಅದನ್ನು ತೆಗೆದುಕೊಂಡು ಪ್ರಾರಂಭಿಸಬೇಕೆಂದು ತಮ್ಮ ಮೂಲಕ ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆಸ

† ಶ್ರೀ ಎಂ. ಜಿ. ನಾಯಕ್ (ಮೊಳಕಾಲ್ಮೂರು).—ಸನ್ಮಾನ್ಯ ಅಧ್ಯಕ್ಷರೇ, ನನ್ನ ಎಲ್ಲಸ ಮಿತ್ರರು ಎಲ್ಲ ಇಲಾಖೆಗಳ ಬಗ್ಗೆ ಮಾತನಾಡಿದ್ದಾರೆ. ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಬಯಸದೆ. ನನ್ನ ಕ್ಷೇತ್ರವಾದ ಮೊಳಕಾಲ್ಮೂರು ಬಗ್ಗೆ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ, ನನ್ನ ಕ್ಷೇತ್ರವು ಚಳ್ಳಕೆರೆ ಮತ್ತು ಕಂಪ್ಲಿ ಬಳ್ಳಾರಿ ನಡುವೆ ಬರುತ್ತದೆ, ಇದು ಒಂದು ರಾಷ್ಟ್ರೀಕೃತ ಮಾರ್ಗವಾಗಿರುತ್ತದೆ, ಚಳ್ಳಕೆರೆಯಿಂದ ಬಸ್ ಕಂಪ್ಲಿ ಮತ್ತು ಬಳ್ಳಾರಿಗೆ ಹೋಗತಕ್ಕಂಥ ಬಸ್‌ಗಳು ಇರುತ್ತವೆ. ಚಳ್ಳಕೆರೆಯಿಂದ ಹಾನ್‌ಗಲ್ ಮಾರ್ಗವಾಗಿ ಕಂಪ್ಲಿ ಬಳ್ಳಾರಿಗೆ ಹೋಗಬೇಕಾದರೆ ಹಾನ್‌ಗಲ್‌ನಿಂದ ೫ ಕಿಲೋಮೀಟರ್ ದೂರದಲ್ಲಿರತಕ್ಕಂಥ ಮೊಳಕಾಲ್ಮೂರುವಿಗೆ ಯಾವ ಬಸ್‌ಗಳು ಓಡಾಡುವುದಿಲ್ಲ. ರಾತ್ರಿ ಹೊತ್ತು ಚಳ್ಳಕೆರೆಯಲ್ಲಿ ಹತ್ತಿ ಮೊಳಕಾಲ್ಮೂರುವಿಗೆ ಹೋಗಬೇಕಾದರೆ ಹಾನ್‌ಗಲ್‌ನಲ್ಲಿ ಇಳಿದು ನಡೆದುಕೊಂಡು ಹೋಗತಕ್ಕಂತ ಪರಿಸ್ಥಿತಿ ಇರುತ್ತದೆ. ಅನೇಕ ಸಂದರ್ಭಗಳಲ್ಲಿ ಬಸ್‌ನಲ್ಲಿ ನಿಂತುಕೊಂಡೇ ಪ್ರಯಾಣ ಮಾಡಬೇಕಾಗುತ್ತದೆ. ನಾನು ಎಂ.ಎಲ್.ಎ. ಆಗಿ ಎಷ್ಟೋ ಸಂದರ್ಭಗಳಲ್ಲಿ ರಿಕ್ವೆಸ್ಟ್ ಮಾಡಿಕೊಂಡು ಮೊಳಕಾಲ್ಮೂರುವರೆವಿಗೆ ಹೋಗಬೇಕೆಂದು ಕೇಳಿಕೊಂಡರೂ ಸಹಕರಿಸುತ್ತಿಲ್ಲ. ಹತ್ತು ಗಂಟೆ ರಾತ್ರಿಯಾಗಿದ್ದರು ಜನರನ್ನು ಅಲ್ಲೇ ಇಳಿಸಿಬಿಟ್ಟು ಹೋಗುತ್ತಾರೆ. ಆದ್ದರಿಂದ ತಮ್ಮಲ್ಲಿ ಅನೇಕಬಾರಿ ಮನವರಿಕೆ ಮಾಡಿಕೊಂಡಿದ್ದರೂ ತಾವು ಮನಸು ಮಾಡಿಲ್ಲ. ನನ್ನ ಕ್ಷೇತ್ರದಲ್ಲಿ ಬಡವರೇ ಜಾಸ್ತಿ ಇರುತ್ತಾರೆ. ಅವರು ಚಳ್ಳಕೆರೆ ಸಮೀಪದಲ್ಲಿರುವುದರಿಂದಲೂ ಮತ್ತು ವ್ಯಾಪಾರಸ್ಥಳವಾಗಿರುವುದರಿಂದಲೂ ಅಲ್ಲಿಗೆ ಬರಬೇಕಾಗುತ್ತದೆ. ಜನರಿಗೆ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಸಾರಿಗೆ ಸಂಪರ್ಕ ಇಲ್ಲದೆ ಇರುವುದರಿಂದ ಬಹಳವಾಗಿ ತೊಂದರೆಯನ್ನು ಪಡುತ್ತಿರುತ್ತಾರೆ. ಜನರಿಗೆ ಸಂಚಾರವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಮಾನ್ಯ ಸಾರಿಗೆ ಸಚಿವರಲ್ಲಿ ಮನವಿ ಮಾಡಿ ಕೊಳ್ಳುತ್ತೇನೆ.

ಇನ್ನು ನಮ್ಮ ಮೊಳಕಾಲ್ಮೂರು ರೇಷ್ಮೆ ಉದ್ಯಮದಲ್ಲಿ ಬಹಳ ಪ್ರಸಿದ್ಧಿಯಾದ ಸ್ಥಳವಾಗಿರುತ್ತದೆ ಇಲ್ಲಿ ತಯಾರು ಮಾಡತಕ್ಕಂಥ ರೇಷ್ಮೆ ಸೀರೆಗಳು ಬಹಳ ಪ್ರಸಿದ್ಧವಾಗಿರುತ್ತದೆ. ಮೊಳಕಾಲ್ಮೂರುವಿನ ರಾಯದುರ್ಗದಿಂದ ರೇಷ್ಮೆ ಸೀರೆ ವ್ಯಾಪಾರಿಗಳು ಬರುತ್ತಾರೆ. ರಾತ್ರಿ ಹೊತ್ತು ಪ್ರಯಾಣ ಮಾಡ ಬೇಕೆಂದರೆ ಬಸ್ ಸೌಕರ್ಯವಿರುವುದಿಲ್ಲ ಬೆಂಗಳೂರಿನಿಂದ ಬಳ್ಳಾರಿಗೆ ಹೋಗತಕ್ಕಂಥ ಬಸ್‌ಗಳು ೫ ಕಿಲೋಮೀಟರ್ ದೂರದಲ್ಲಿರತಕ್ಕಂಥ ಮೊಳಕಾಲ್ಮೂರುವಿಗೆ ಬಂದು ಹೋಗುವಂಥ ಒಂದು ವ್ಯವಸ್ಥೆ ಯನ್ನು ಮಾಡಬೇಕು. ಮಾನ್ಯ ಮಂತ್ರಿಗಳೇ ಯಾವಾಗಲಾದರೂ ಒಂದು ಬಾರಿ ಸರ್‌ಪ್ರೈಸ್ ವಿಸಿಟ್ ಮಾತಿ ಇಲ್ಲಿಯ ಸಾರಿಗೆ ಸೌಕರ್ಯವನ್ನು ನೋಡಿ ಸರಿಪಡಿಸುತ್ತಾರೆಂದು ನಾನು ತಿಳಿದು ಕೊಂಡಿರುತ್ತೇನೆ. ಮಾನ್ಯ ಗಂಗಪ್ಪನವರು ಸಾಹುಕಾರರು ಖಾಸಗಿ ಬಸ್ ಮಾಲೀಕರು ಸ್ವಂತ ಕಾರನ್ನು ಇಟ್ಟುಕೊಂಡು ಸರ್‌ಪ್ರೈಸ್ ವಿಸಿಟ್‌ಕೊಟ್ಟು ಬಸ್‌ಗಳನ್ನು ಚೆಕ್ ಮಾಡುತ್ತಾರೆ.ಆದ್ದರಿಂದ ಬಹಳಲಾಭ ಗಳಿಸುತ್ತಿದ್ದಾರೆ. ಹಾಗೆಯೇ ನಮ್ಮ ಮಾನ್ಯ ಸಚಿವರು ಸರ್‌ಪ್ರೈಸ್ ವಿಸಿಟ್ ಮಾಡಿದರೆ ಅದರಲ್ಲೇನು ತಪ್ಪಿರುವುದಿಲ್ಲ, ಅವರಿಗೂ ಒಂದು ರೀತಿಯಾದ ಭಯವಿರುತ್ತದೆಂದು ನಾನು ಸಲಹೆ ಮಾಡುತ್ತೇನೆ. ಈ ಇಲಾಖೆಗೆ ಮಾನ್ಯ ಮಂತ್ರಿಗಳು ಯಜಮಾನರಿದ್ದಂತೆ. ಆದ್ದರಿಂದ ದಯಮಾಡಿ ಈ ಒಂದು ಕೆಲಸವನ್ನು ಮಾಡಬೇಕೆಂದು ತಮಗೆ ಸಲಹೆ ಮಾಡುತ್ತೇನೆ.

ಇನ್ನು ಪಶುಸಂಗೋಪನಾ ಇಲಾಖೆಯ ಬಗ್ಗೆ ಹೇಳಬೇಕಾಗಿದೆ. ಈ ಇಲಾಖೆಯ ಮಂತ್ರಿಗಳನ್ನು ನೋಡಿದಾಗ ರವೀಂದ್ರನಾಥ ಠಾಕೂರ್ ಅವರ ನೆನಪು ಬರುತ್ತದೆ. ಎಷ್ಟೋ ಕಡೆಗಳಿಗೆ ಪಶುವೈದ್ಯ ಶಾಲೆಗಳನ್ನು ಕೊಟ್ಟಿದ್ದೇನೆಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಆದರೆ ನನ್ನ ಕ್ಷೇತ್ರದ ಯಾವ ಹಳ್ಳಿಗಳಿಗೂ ಸಹ ಕೊಟ್ಟಿಲ್ಲ. ನಮ್ಮದು ಬಡವರು ಇರುವಂತಹ ಕ್ಷೇತ್ರವಾದ ಕಾರಣ ನಮ್ಮ ಭಾಗದ ಹಳ್ಳಿಯ ರೈತರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಹೆಚ್ಚಿನ ಪಶುವೈದ್ಯ ಶಾಲೆಗಳನ್ನು ಮಂಜೂರು ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಹಿಂದೆ ಇಲಾಖೆಯವರೇ ಕೆಲವು ಹಳ್ಳಿಗಳಲ್ಲಿ ಪಶುವೈದ್ಯ ಶಾಲೆಗಳನ್ನು ತೆರೆಯುವ ಬಗ್ಗೆ ಶಿಫಾರಸ್ ಮಾಡಿಲ್ಲವೇ ಎಂದು ನಾನು ಒಂದು ಪ್ರಶ್ನೆ ಕೇಳಿದಾಗ ಮಾನ್ಯ ಮಂತ್ರಿಗಳು ''ಇಲ್ಲ'' ಎಂದು ಉತ್ತರ ಕೊಟ್ಟರು. ಈ ಉತ್ತರ ಬಹಳ ಉತ್ಪ್ರೇಕ್ಷೆಯಿಂದ ಕೂಡಿದ್ದಾಗಿದೆ. ಏಕೆಂದರೆ, ಕೆಲವು ಕಡೆ ಪಶುವೈದ್ಯ ಶಾಲೆಗಳ ಅವಶ್ಯಕತೆ ಇದೆ ಎಂಬುದು ಅಧಿಕಾರಿಗಳ ಗಮನಕ್ಕೆ ಬಂದಿಲ್ಲವೇ? ನನ್ನ ಕ್ಷೇತ್ರದ ಹಳ್ಳಿಗಳಲ್ಲಿ ಸಾವಿರಾರು ದನಗಳು ಮತ್ತು ಹಸುಗಳು ಇವೆ. ಇವು ಮೂಕ ಪ್ರಾಣಿಗಳು. ಇವುಗಳಿಗೆ ಏನಾದರು ಆದರೆ ಯಾರು ಔಷಧ ಕೊಡಬೇಕು? ತಮಗೇನಾದರು ಜ್ವರ ಬಂದರೆ ಆಸ್ಪತ್ರೆಗಳಿಗೆ ಹೋಗಿ ಔಷಧ ತೆಗೆದುಕೊಳ್ಳುತ್ತೀರಿ. ಅದೇ ರೀತಿ ಈ ಮೂಕ ಪ್ರಾಣಿಗಳಿಗೆ ಸಂಬಂಧಪಟ್ಟಂತೆ ಪಶುವೈದ್ಯ ಶಾಲೆಗಳಿರಬೇಕೆಂದು ತಾವು ಆಲೋಚನೆ ಮಾಡುವುದು ಬೇಡವೇ? ಇನ್ನು ಮುಂದೆ ಈ ರೀತಿ ಉತ್ತರ ಕೊಡಬೇಡಿ. ಆದಷ್ಟು ಜಾಗ್ರತೆ ನಮ್ಮ ಹಳ್ಳಿಗಳಿಗೆ ಒಂದೆರಡು ಪಶುವೈದ್ಯ ಶಾಲೆಗಳನ್ನು ಮಂಜೂರು ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ನನ್ನ ಕ್ಷೇತ್ರದಲ್ಲಿ ಒಂದು ಕುರಿ ಫಾರಂ ಇದೆ. ಮಾನ್ಯ ಮಂತ್ರಿಗಳು ನನಗೆ ತಿಳಿಸದಂತೆ ನನ್ನ ಕ್ಷೇತ್ರದಲ್ಲಿರುವ ನಾಯಕನಹಟ್ಟಿ ಕುರಿ ಫಾರಂಗೆ ಹೋಗಿ ನೋಡಿಕೊಂಡು ಬಂದಿದ್ದಾರೆ. ಇಲ್ಲಿ ಹತ್ತು ಸಾವಿರ ಎಕರೆಗೆ ಮೇಲ್ಪಟ್ಟು ಜಮೀನು ಇದೆ. ಇಲ್ಲಿ ಬೇರೆ ದೇಶಗಳ ಕೆಂಪು ಕುರಿಗಳಿವೆ. ಇವುಗಳ ಸಂಖ್ಯೆಯನ್ನು ಜಾಸ್ತಿ ಮಾಡಲು ಸರ್ಕಾರದವರು ಸೂಕ್ತ ವ್ಯವಸ್ಥೆ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ. ಸುಮಾರು ೫೦೦ ಜಿಂಕೆಗಳು ನಮ್ಮ ಭಾಗದಲ್ಲಿವೆ. ಯಾವ ಕಾಡಿನಲ್ಲಿಯೂ ನಾನು ಇಷ್ಟೊಂದು ಜಿಂಕೆಗಳನ್ನು ನೋಡಿಲ್ಲ. ಆದ್ದರಿಂದ ಈ ಜಿಂಕೆಗಳಿಗೆ ಸರಿಯಾದ ರಕ್ಷಣೆ ಕೊಟ್ಟರೆ ಇದೊಂದು ಗೇಮ್‌ಸ್ಯಾಂಕ್‌ಚುಯರಿ ಆಗುತ್ತದೆ. ಆಗ ಪ್ರವಾಸಿಗರು ಅಲ್ಲಿಗೆ ಬಂದು ನೋಡು ತ್ತಾರೆ ಮಾನ್ಯ ಮಂತ್ರಿಗಳು ಋಷಿಗಳಂತೆ ಇದ್ದಾರೆ. ಆದ್ದರಿಂದ ತಮ್ಮ ಕಾಲದಲ್ಲಿ ಈ ಕೆಲಸ ಆಗಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಚರ್ಚೆ ಇಲ್ಲಿಗೆ ಮುಗಿಯಿತು. ಈಗ ಶಿಕ್ಷಣ ಸಚಿವರು ಬಂದು ಹೇಳಿಕೆ ಕೊಡುತ್ತಾರೆ.

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ಪಶುಸಂಗೋಪನಾ ಇಲಾಖೆಗೆ ಸಂಬಂಧಪಟ್ಟಂತೆ ಎರಡು ವಿಚಾರಗಳನ್ನು ನಾನು ಹೇಳಬೇಕಾಗಿದೆ. ಆದ್ದರಿಂದ ನನಗೂ ಎರಡು ನಿಮಿಷಗಳ ಕಾಲ ಮಾತನಾಡಲು ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು.—ಕ್ಲಾರಿಫಿಕೇಷನ್ ಕೇಳುವ ಸಮಯದಲ್ಲಿ ತಮಗೆ ಅವಕಾಶ ಮಾಡಿಕೊಡುತ್ತೇನೆ. ಈಗ ಶಿಕ್ಷಣ ಮಂತ್ರಿಗಳು ಒಂದು ಹೇಳಿಕೆ ಕೊಟ್ಟ ನಂತರ ಮಾನ್ಯ ಸಾರಿಗೆ ಮಂತ್ರಿಗಳು ಇಲಾಖಾ ಬೇಡಿಕೆಯ ಮೇಲೆ ಉತ್ತರ ಕೊಡುತ್ತಾರೆ.

STATEMENT BY THE MINISTER

Reg: Strike by Graduate and post-Gratuate teachers or regional Institute of English

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ವಿರೋಧಪಕ್ಷದ ನಾಯಕರು ಈ ದಿನ ಬೆಳಗ್ಗೆ ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲೀಷ್, ಬೆಂಗಳೂರು, ಇದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದರು. ಆದ್ದರಿಂದ ಇದಕ್ಕೆ ಸಂಬಂಧಪಟ್ಟಂತೆ ನಾನು ಈ ಕೆಳಕಂಡ ಹೇಳಿಕೆಯನ್ನು ತಮ್ಮ ಅಪ್ಪಣೆ ಮೇರೆಗೆ ಕೊಡುತ್ತಿದ್ದೇನೆ.

ಬೆಂಗಳೂರಿನಲ್ಲಿರುವ ದಕ್ಷಿಣ ಭಾರತ ಆಂಗ್ಲ ಭಾಷಾ ಸಂಸ್ಥೆ ಸೊಸೈಟಿ ನೋಂದಣಿ ಕಾಯ್ದೆಯ ಅನ್ವಯ ನೋಂದಾಯಿಸಲ್ಪಟ್ಟಿರುವ ಒಂದು ಸಂಸ್ಥೆ. ಇದರ ಆವರ್ತಕ ಹಾಗೂ ಅನಾವರ್ತಕ ವೆಚ್ಚಗಳನ್ನು ದಕ್ಷಿಣದ ನಾಲ್ಕು ರಾಜ್ಯಗಳೂ ಸಮಾನವಾಗಿ ಭರಿಸುತ್ತವೆ.

ಸಂಸ್ಥೆಯ ನಿಯಮಾವಳಿಗಳ ಪ್ರಕಾರ ಇದರ ಆಡಳಿತ ಮೇಲ್ವಿಚಾರಣೆ, ಮತ್ತು ಎಲ್ಲ ವ್ಯವಹಾರಗಳನ್ನು ಬೋರ್ಡ್ ಆಫ್ ಗವರ್ನರ್ಸ್ ನಿಯಂತ್ರಿಸುತ್ತದೆ. ಈ ಬೋರ್ಡಿನಲ್ಲಿ ಇತರೇ ಸದಸ್ಯರ ಜೊತೆಗೆ, ದಕ್ಷಿಣದ ನಾಲ್ಕು ರಾಜ್ಯಗಳ ವಿದ್ಯಾ ಕಾರ್ಯದರ್ಶಿಗಳು ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಇರುತ್ತಾರೆ. ಬೋರ್ಡಿನಿಂದ ನೇಮಕಗೊಳ್ಳುವ ಸಂಸ್ಥೆಯ ನಿರ್ದೇಶಕರು ಸಂಸ್ಥೆಯ ಆಡಳಿತಾತ್ಮಕ ಅಧಿಕಾರಿಯಾಗಿದ್ದು, ಶಿಕ್ಷಕರಿಗೆ ಕ್ರಮವಾದ ತರಬೇತಿ ಹಾಗೂ ಶಿಸ್ತಿಗೆ ಜವಾಬ್ದಾರರಾಗಿರುತ್ತಾರೆ.

ಸಂಸ್ಥೆಯಲ್ಲಿ ತರಬೇತಿ ಪಡೆಯುತ್ತಿರುವ ಹಲವು ಶಿಕ್ಷಕರು, ಹಾಸ್ಟೆಲ್‌ಗಾಗಿ ದೊರೆತ ಹಂಗಾಮಿ ಪಡಿತರ ಚೀಟಿಯನ್ನು ತರಬೇತಿದಾರರ ಹಾಗೂ ಉಳಿದ ಶಿಕ್ಷಕರ ಸಮಾಲೋಚನೆ ಇಲ್ಲದೆ ವಾಪಸ್ಸು ಮಾಡಿದರೆಂದು ಕಾರಣ ಕೊಟ್ಟು, ನಿರ್ದೇಶಕರ ಕ್ರಮವನ್ನು ಪ್ರತಿಭಟಿಸಿ, ಮಾರ್ಚಿ ನಾಲ್ಕನೇ ತಾರೀಖಿನಿಂದ ಸತ್ಯಾಗ್ರಹ ನಡೆಸುತ್ತಿದ್ದಾರೆ.

ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರಾದ ಶಿಕ್ಷಣ ಕಾರ್ಯದರ್ಶಿಯವರು ಸದಸ್ಯರಲ್ಲೊಬ್ಬರಾದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರೂ ೭-೩-೮೪ರಂದು ಸಂಸ್ಥೆಯ ನಿರ್ದೇಶಕರು ಶಿಕ್ಷಕರು ಮತ್ತು ತರಬೇತಿದಾರರನ್ನು ಸಂಸ್ಥೆಯಲ್ಲಿ ಪ್ರತ್ಯೇಕವಾಗಿ ಭೇಟಿ ಮಾಡಿ ವಿವರಗಳನ್ನು ಪಡೆದರು. ನಿರ್ದೇಶಕರ ಹೇಳಿಕೆಯಂತೆ, ಆಹಾರ ಸಾಮಗ್ರಿಗಳ ಬಳಕೆಯಲ್ಲಿ ಅಕ್ರಮ ವ್ಯವಹಾರಗಳು ಕಂಡು ಬಂದಿದ್ದು, ಸಂಸ್ಥೆಯ ಹೆಸರಿಗೆ ಕಳಂಕ ಬರಬಹುದಾದ ಸಾಧ್ಯತೆ ಇದ್ದುದರಿಂದ ಪಡಿತರ ಚೀಟಿಯನ್ನು ಹಿಂತಿರುಗಿಸಲಾಯಿತು. ನಿರ್ದೇಶಕರ ಮೇಲೆ ಮಾಡಿರುವ ಕೆಲವು ಆಪಾದನೆಗಳನ್ನು ಆಡಳಿತ ಮಂಡಲಿಯೇ ಪರೀಕ್ಷಿಸಿ, ಕ್ರಮ ತೆಗೆದುಕೊಳ್ಳಬೇಕಾದ್ದರಿಂದ, ಆಡಳಿತ ಮಂಡಳಿ ಸಭೆಯನ್ನು ಅತೀ ಶೀಘ್ರದಲ್ಲಿಯೇ ಕರೆಯಲಾಗುವುದು.

ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆಯವರನ್ನು ಸಂಪರ್ಕಿಸಿದಾಗ, ಸಂಸ್ಥೆಯ ಪಡಿತರ ಚೀಟಿಯನ್ನು ೭-೩-೧೯೮೪ರಂದೇ ಮರಳಿ ನೀಡಲಿರುವುದಾಗಿ ತಿಳಿಸಿರುತ್ತಾರೆ. ವಿಚಾರಣೆ ಮತ್ತು ಸೂಕ್ತ ಕ್ರಮ ಕೈಗೊಳ್ಳಲು ಅನುಕೂಲವಾಗುವಂತೆ, ಚಳುವಳಿಯನ್ನು ನಿಲ್ಲಿಸಲು ತರಬೇತಿದಾರರಿಗೆ ಸೂಚಿಸಲಾಗಿದ್ದು, ಅವರು ಶೀಘ್ರವಾಗಿ ನಿರ್ಧಾರ ತೆಗೆದುಕೊಳ್ಳುವುದಾಗಿ ತಿಳಿಸಿದ್ದಾರೆ.

ಯಾರಿಗೂ ತೊಂದರೆ ಇಲ್ಲವೇ ಅನ್ಯಾಯ ಆಗದಂತೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು

FINANCIAL BUSINESS (contd..)

DEMAND NO. 26, 2 & 3

೬-೩೦ ಪಿ. ಎಂ.

ಶ್ರೀ ಎಂ. ಪಿ. ಪ್ರಕಾಶ್ (ಸನ್ಮಾನ್ಯ ಸಾರಿಗೆ ರಾಜ್ಯ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ ಇದುವರೆಗೂ ಎರಡೂ ಕಡೆಯಿಂದ ಸುಮಾರು ೧೭ ಜನ ಮಾನ್ಯ ಸದಸ್ಯರು ಸುಮಾರು ೨೫೨ ನಿಮಿಷಗಳ ಕಾಲ ನಮ್ಮ ಸಾರಿಗೆ ಸಂಸ್ಥೆಯ ಬಗ್ಗೆ ಮಾತನಾಡಿದ್ದಾರೆ. ಅವರಲ್ಲಿ ಕೆಲವು ಜನ ಮಾನ್ಯ ಸದಸ್ಯರು ಕೆಲವಾರು ಉಪಯುಕ್ತವಾದಂಥ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇನ್ನು ಕೆಲವು ಜನ ಮಾನ್ಯ ಸದಸ್ಯರು ಕಟುವಾದ ಟೀಕೆಗಳನ್ನು ಸಹ ಮಾಡಿದ್ದಾರೆ. ಮತ್ತೆ ಕೆಲವು ಜನ ಮಾನ್ಯ ಸದಸ್ಯರು ಸ್ವಾಗತ ಮಾಡುತ್ತಾ ಕೆಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಸನ್ಮಾನ್ಯ ಅಧ್ಯಕ್ಷರೇ ಯಾವುದೇ ಒಬ್ಬ ಮಾನ್ಯ ಸದಸ್ಯರು ಯಾವುದೇ ರೀತಿಯಲ್ಲಿ ಸಲಹೆಗಳನ್ನು ಕೊಟ್ಟಿರಲಿ ಅವರ ಸಲಹೆಗಳನ್ನು ನಾನು ಮನದಟ್ಟು ಮಾಡಿಕೊಂಡಿದ್ದೇನೆ. ಕೆಲವು ಜನ ಮಾನ್ಯ ಸದಸ್ಯರು ಮಾತನಾಡುವಾಗ ತಮ್ಮದೇ ಆದಂಥ ಸ್ವಂಥ ಅನುಭವದಲ್ಲಿ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದರೆ ನಮ್ಮ ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಈ ಇಲಾಖೆಯಲ್ಲಿ ಏನೇನು ಸಾಧನೆ ಮಾಡಿದೆ ಎಂಬುದರ ಬಗ್ಗೆ ನಾನು ಕೆಲವಾರು ವಿಷಯಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ. ನಮ್ಮ ಸಾರಿಗೆ ಸಂಸ್ಥೆಗೆ ಬರುವ ತೆರಿಗೆ ವಿನಾಯಿತಿಯ ಚೌಕಟ್ಟಿನಲ್ಲಿ ನಮಗೆ ಇರತಕ್ಕಂಥ ಅನುಕೂಲಗಳಲ್ಲಿ ನಾವು ಸಾರ್ವಜನಿಕರಿಗೆ ಒಳ್ಳೆಯ ಸೌಕರ್ಯಗಳನ್ನು ಒದಗಿಸಿಕೊಡುವುದೇ ನಮ್ಮ ಮೂಲ ಉದ್ದೇಶವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಾವು ನಮ್ಮ ಉದ್ದೇಶಕ್ಕೆ ಅನುಗುಣವಾಗಿ ಕೆಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಮತ್ತು ಇದುವರೆಗೂ ಮಾತನಾಡಿದಂಥ ಮಾನ್ಯ ಸದಸ್ಯರಲ್ಲಿ ಕೆಲವರು ನಮ್ಮ ಸಾರಿಗೆ ಸಂಸ್ಥೆಯ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಮತ್ತೆ ಕೆಲವರು ಕಟುವಾಗಿ ಟೀಕಿಸಿದ್ದಾರೆ. ಮತ್ತೆ ಅನೇಕ ಜನ ಮಾನ್ಯ ಸದಸ್ಯರು ಭ್ರಷ್ಟಾಚಾರದ ಬಗ್ಗೆ ಕೂಡ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೇ ನಾನು ಮೊಟ್ಟ ಮೊದಲನೆಯ ಬಾರಿಗೆ ಒಂದು ಮಾತನ್ನು ಹೇಳುವುದಾದರೆ ನಮ್ಮ ಈ ಸಾರಿಗೆ ಸಂಸ್ಥೆಗೆ ನಾವು ಈ ಸಾರಿ ಸುಮಾರು ೧೭ ಕೋಟಿ ರೂಪಾಯಿಗಳ ಒಂದು ಆದಾಯವನ್ನು ಮಾಡಿಕೊಟ್ಟಿದ್ದೇವೆ. ಅದೂ ತೆರಿಗೆಯ ಬಾಬಿನಿಂದ ಮಾತ್ರ. ಇದು ನಾವು ನಮ್ಮ ಸಾರಿಗೆ ಸಂಸ್ಥೆಯಲ್ಲಿ ಮೊಟ್ಟಮೊದಲನೆಯ ಬಾರಿಗೆ ಮಾಡಿದ ಪ್ರಯತ್ನವೆಂದು ಹೇಳಬಹುದು. ನಾನು ಈ ಮಾತನ್ನು ಬಹಳ ಹೆಮ್ಮೆಯಿಂದ ಹೇಳುತ್ತೇನೆ. ೧೯೭೯–೮೦ನೇ ಸಾಲಿನಲ್ಲಿ ಯಾವ ಪ್ರಮಾಣದಲ್ಲಿ ತೆರಿಗೆ ವಸೂಲು ಮಾಡುತ್ತಿದ್ದರೋ ಅದಕ್ಕಿಂತ ಸ್ವಲ್ಪ ಮಟ್ಟಿಗೆ ನಾವು ತೆರಿಗೆಯನ್ನು ವಸೂಲು ಮಾಡಿದ್ದೇವೆ. ಸ್ವಾಮಿ ನಾವು ಈ ೧೭ ಕೋಟಿ ರೂಪಾಯಿಗಳಲ್ಲಿ ಅನೇಕ ಕಡೆಗಳಲ್ಲಿ ಸರಿಯಾದಂಥ ಕಟ್ಟಡಗಳು ಇಲ್ಲದೆ ಇದುದ್ದರಿಂದ ಕಟ್ಟಡಗಳನ್ನು ಕಟ್ಟಿಸಿಕೊಡಬೇಕೆಂದು ಹೇಳಿ ಆ ಹಣವನ್ನು ಆ ಉದ್ದೇಶಕ್ಕಾಗಿ ಉಪಯೋಗಿಸಿಕೊಂಡಿದ್ದೇವೆ. ಇದರಲ್ಲಿ ನಾವು ಈ ವರ್ಷದಿಂದ ಮೈಸೂರು ನಗರದಲ್ಲಿ ಕಟ್ಟಡಗಳನ್ನು ಕಟ್ಟಿಸಿಕೊಟ್ಟಿದ್ದೇವೆ. ಮತ್ತೆ ಮಂಗಳೂರಿನಲ್ಲಿ ಕಟ್ಟಡವನ್ನು ಕಟ್ಟಿಸಿದ್ದೇವೆ. ಅದೇ ರೀತಿಯಲ್ಲಿ ಮಂಡ್ಯ ಜಿಲ್ಲೆಯಲ್ಲಿ ಕಟ್ಟಡಗಳನ್ನು ಕಟ್ಟಿಸಿಕೊಟ್ಟಿದ್ದೇವೆ. ಮತ್ತೆ ಬಳ್ಳಾರಿಯಲ್ಲಿ ಕಟ್ಟಿಸಿಕೊಟ್ಟಿದ್ದೇವೆ. ಈ ಎಲ್ಲಾ ಕಟ್ಟಡಗಳಿಗೆ ನಾವು ಸುಮಾರು ಹಣವನ್ನು ಕೊಟ್ಟಿದ್ದೇವೆ. ಈಗ ನಾನು ಉದಾಹರಣೆಗೆ ಹೇಳುವುದಾದರೆ ಮಂಗಳೂರಿನಲ್ಲಿ ಕಟ್ಟಿಸಿಕೊಟ್ಟಿರುವ ಕಟ್ಟಡಕ್ಕೆ ೫೪ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಬಳ್ಳಾರಿಯಲ್ಲಿ ಕಟ್ಟಿಸಿಕೊಟ್ಟಿರುವಂಥ ಕಟ್ಟಡಕ್ಕೆ ಸುಮಾರು ೨೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಮೈಸೂರಿನಲ್ಲಿ ಕಟ್ಟಿಸಿಕೊಟ್ಟಿರುವ ಕಟ್ಟಡಕ್ಕೆ ಸುಮಾರು ೫೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಮತ್ತೆ ಈ ವರ್ಷದಲ್ಲಿ ರಾಯಚೂರಿನಲ್ಲಿ ಬಸ್ ಕಟ್ಟಡವನ್ನು ಕಟ್ಟಿಸಿ ಕೊಡಬೇಕೆಂದು ಹೇಳಿ ಸುಮಾರು ಏಳೂವರೆ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಹಾಸನದಲ್ಲಿ ಕಟ್ಟಿಸಿಕೊಡಬೇಕೆಂದು ಹೇಳಿ ಸುಮಾರು ೧೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಕೋಲಾರದಲ್ಲಿ ಸುಮಾರು ೨೧ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಡವನ್ನು ಕಟ್ಟಿಸಿಕೊಟ್ಟಿದ್ದೇವೆ. ತುಮಕೂರಿನಲ್ಲಿ ಬಸ್ ಕಟ್ಟಡವನ್ನು ಕಟ್ಟಿಸಿಕೊಡಬೇಕೆಂದುಹೇಳಿ ಸುಮಾರು ೨೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಈ ರೀತಿಯಾಗಿ ನಾವು ನಾನಾ ಕಡೆಗಳಲ್ಲಿ ಕಟ್ಟಡಗಳನ್ನು ಕಟ್ಟಿಸಿಕೊಡುತ್ತಿದ್ದೇವೆ. ಇನ್ನು ೧೯೮೪–೮೫ನೇ ಸಾಲಿನಲ್ಲಿ ನಿರುದ್ಯೋಗಿಗಳಿಗೆ ಆಟೋರಿಕ್ಷಗಳನ್ನು ಒದಗಿಸಿಕೊಬೇಕೆಂದು ಹೇಳಿ ನಾವು ಬಜಾಜ್ ಮತ್ತು ಇನ್ನಿತರ ಕಂಪನಿಗಳವರಿಗೆ ತಿಳಿಸಿ ಸುಮಾರು ೩ ತಿಂಗಳಲ್ಲಿ ೭೫ ಬಜಾಜ್ ಆಟೋ ರಿಕ್ಷಾಗಳನ್ನು ಒದಗಿಸಿ ಕೊಟ್ಟಿದ್ದೇವೆ. ಮತ್ತೆ ಅದೇ ರೀತಿಯಲ್ಲಿ ೩೧–೧೨–೮೩ರಲ್ಲಿ ಸುಮಾರು ೨೫೫ ಆಟೋರಿಕ್ಷಗಳು ಬೇಕೆಂದು ಹೇಳಿ ನಾವು ಬಜಾಜ್ ಕಂಪನಿಯವರಿಗೆ ತಿಳಿಸಿದ್ದೇವೆ. ಇದರಲ್ಲಿ ಸುಮಾರು ೬೦ ಆಟೋ ರಿಕ್ಷಗಳನ್ನು ರಿಯಾಯಿತಿ ದರದಲ್ಲಿ ಹರಿಜನ ಮತ್ತು ಗಿರಿಜನರಿಗೆ ಹಂಚಿಕೆಯನ್ನು ಮಾಡಿದ್ದೇವೆ. ಸ್ವಾಮಿ ಅನೇಕ ಜನ ಮಾನ್ಯ ಸದಸ್ಯರು ಮಾತನಾಡುವಾಗ ಹೇಳಿದರು ಈ ಆಟೋ ರಿಕ್ಷಗಳನ್ನು ಕೊಳ್ಳುವಾಗ ಬ್ರೋಕರ್ಸ್ ಮತಿಯಿತಿಯಿಂದ ಕೊಂಡುಕೊಳ್ಳುತ್ತಾರೆಂದು, ಆದರೆ ಸರ್ಕಾರದವರು ಏನು ಮಾಡುವುದಕ್ಕೆ ಆಗುತ್ತದೆ.

ಸ್ವಾಮಿ ಇವತ್ತು ವಿದ್ಯಾವಂತರು ಕೂಡ ಬ್ರೋಕರ್ಸ್ ಹತ್ತಿರ ಹೋಗಿ ವ್ಯವಹಾರ ಮಾಡುತ್ತಾರೆ. ನಮ್ಮ ಸಾರಿಗೆ ಸಂಸ್ಥೆಯ ನಿಯಮಗಳನ್ನು ಯಾರೂ ಕೂಡ ಅರ್ಥ ಮಾಡಿಕೊಳ್ಳುವುದಕ್ಕೆ ಹೋಗುವುದಿಲ್ಲ. ವಿದ್ಯಾವಂತರೇ ನೇರವಾಗಿ ಬ್ರೋಕರ್ಸ್ ಹತ್ತಿರ ಹೋಗಿ ವ್ಯವಹಾರ ಮಾಡುತ್ತಾರೆ. ಇದು ತಪ್ಪಬೇಕೆಂದು ನಾನು ಕೂಡ ಹೇಳುತ್ತೇನೆ. ಮತ್ತೆ ನಮ್ಮ ಸಾರಿಗೆ ಸಂಸ್ಥೆಯಲ್ಲಿ ಸುಮಾರು ಭ್ರಷ್ಟಾಚಾರ ಕೂಡ ಕಡಿಮೆಯಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದರೆ ಸಂಪೂರ್ಣವಾಗಿ ಭ್ರಷ್ಟಾಚಾರ ಕಡಿಮೆಯಾಗಿದೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ನಾವು ಈಗಾಗಲೇ ಹೇಳಿದ ಹಾಗೆ ಸುಮಾರು ೧೭ ಕೋಟಿ ರೂಪಾಯಿಗಳ ತೆರಿಗೆಯನ್ನು ನಮ್ಮ ಇತಿಮಿತಿಯ ಬಜೆಟ್ಟಿನಲ್ಲಿ ನಾವು ವಸೂಲು ಮಾಡಿದ್ದೇವೆ. ಇದು ನಿಜವಾಗಿಯೂ ಕೂಡ ನಾವು ಸಾಧಿಸಿದ ಸಾಧನೆ ಎಂದು ಹೇಳಬೇಕು. ಇದರಲ್ಲಿ ನಾವು ಸುಮಾರು ೩ ಪರ್ಸೆಂಟ್ ಕಟ್ಟಡಗಳ ಮೇಲೆ ಖರ್ಚು ಮಾಡಿದ್ದೇವೆ. ಮತ್ತೆ ಇದರಲ್ಲಿ ಸುಮಾರು ೨.೭೭ ರೂಪಾಯಿಗಳನ್ನು ಸಿಬ್ಬಂದಿ ವರ್ಗಕ್ಕೆ ಖರ್ಚು ಮಾಡಿದ್ದೇವೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಕಡಿಮೆ ಖರ್ಚಿನಲ್ಲಿ ಹೆಚ್ಚು ವರಮಾನವನ್ನು ಸಂಸ್ಥೆಯಲ್ಲಿಮಾಡಿದ್ದೇವೆ. ಇನ್ನು ನಾವು ಕಾನೂನು ಪ್ರಕಾರ ಸುಮಾರು ೩೬ ಪರವಾನಿಗೆಗಳನ್ನು ಕೊಟ್ಟಿದ್ದೇವೆ. ಇವರಲ್ಲಿ ಕೆಲವರು ಹೈಕೋರ್ಟಿಗೆ ಹೋದರು. ಆದರೆ ಹೈಕೋರ್ಟಿನಲ್ಲಿ ನಾವೇ ಕೇಸನ್ನು ಗೆದ್ದುಕೊಂಡಿದ್ದೇವೆ. ಮತ್ತೆ ಬಸ್ಸಿನ ಮಾಲಿಕರು ಸುಪ್ರಿಂ ಕೋರ್ಟಿಗೆ ಹೋದರು. ಸುಪ್ರಿಂ ಕೋರ್ಟಿಗೆ ಹೋಗಿ ಅಲ್ಲಿಂದ ಅವರು ತಡೆಯಾಜ್ಞೆಯನ್ನು ಕೂಡ ತಂದಿದ್ದಾರೆ. ಮತ್ತು ಪರವಾನಿಗೆಯನ್ನು ಕೊಡಬೇಕೆಂದು ಸಹ ಕೇಳಿಕೊಂಡಿದ್ದಾರೆ. ಇವತ್ತು ಸರಾಸರಿ ೨೫೦ ಜನರು ಸುಪ್ರಿಂ ಕೋರ್ಟಿಗೆ ಹೋಗಿದ್ದಾರೆ. ಅದರಲ್ಲಿ ನಾವು ಸುಮಾರು ೧೯೮ ಕೇಸುಗಳನ್ನು ಈಗಾಗಲೇ ಗೆದ್ದುಕೊಂಡಿದ್ದೇವೆ. ಮತ್ತೆ ನಾವು ಗೆಜೆಟ್‌ನಲ್ಲಿ ನೋಟಿಫಿಕೇಷನ್ ಮಾಡಿಲ್ಲ ಎನ್ನುವ ಒಂದು ಕಾರಣವನ್ನು ಮುಂದಿಟ್ಟುಕೊಂಡು ಸುಪ್ರಿಂ ಕೋರ್ಟಿನಲ್ಲಿ ಅಪೀಲು ಹಾಕಿದ್ದರಿಂದ ಏಪ್ರಿಲ್‌ವರೆಗೆ ಅವರು ತಡೆಯಾಜ್ಞೆಯನ್ನು ಕೊಟ್ಟರು. ಆದರೆ ದಿನಾಂಕ ೨-೩-೮೪ರಂದು ಸುಪ್ರಿಂ ಕೋರ್ಟಿನಲ್ಲಿ ಕೇಸು ಇತ್ತು. ಆ ದಿವಸ ನಾವು ಅವರಿಗೆ ಕೊಟ್ಟಂತಹ ತಡೆಯಾಜ್ಞೆಯನ್ನು ರದ್ದು ಮಾಡಿ ಎಲ್ಲಾ ಬಸ್ಸುಗಳನ್ನು ನಮ್ಮ ವಶಕ್ಕೆ ತೆಗೆದುಕೊಂಡಿದ್ದೇವೆ. ಇದನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ಇನ್ನು ನಮ್ಮ ರಾಜ್ಯದಲ್ಲಿ ನಾನಾ ಕಡೆಗೆ ರಾಷ್ಟ್ರೀಯ ಪರ್ಮಿಟ್‌ಗಳನ್ನು ಕೊಟ್ಟಿದ್ದರು. ಇದರಲ್ಲಿ ಸುಮಾರು ೧೦೫೫ ತಮಿಳುನಾಡಿನ ಸರ್ಕಾರಕ್ಕೆ ಸೇರಿವೆ. ಮತ್ತೆ ೧೦೩೫ ಆಂಧ್ರ ಪ್ರದೇಶಕ್ಕೆ ಸೇರಿವೆ. ಮತ್ತೆ ಮಹಾರಾಷ್ಟ್ರಕ್ಕೆ ೪೦೦ ಪರ್ಮಿಟ್‌ಗಳು ಸೇರಿವೆ. ಇದರಲ್ಲಿ ಯಾರ್ಯಾರು ಪರಿಶಿಷ್ಟ ಜಾತಿ ಮತ್ತು ಪಂಗಡದವರು ಅರ್ಜಿ ಹಾಕಿಕೊಂಡಿದ್ದರು ಅವರೆಲ್ಲರಿಗೂ ಪರ್ಮಿಟ್‌ಗಳನ್ನು ಕೊಟ್ಟಿದ್ದೇವೆ. ಹಿಂದುಳಿದ ಜಿಲ್ಲೆಗಳಿಗೆ ಹೆಚ್ಚಿನ ಪರ್ಮಿಟ್‌ಗಳನ್ನು ಕೊಡಬೇಕೆನ್ನುವುದರ ಜೊತೆಗೆ ಭ್ರಷ್ಟಾಚಾರವನ್ನು ಕಡಿಮೆ ಮಾಡಬೇಕೆನ್ನುವ ರೀತಿಯಲ್ಲಿ ಪ್ರಾಧಿಕಾರವೂ ತೆಗೆದುಕೊಂಡಿರತಕ್ಕ ನಿರ್ಣಯವೂ ಕೂಡ ಒಂದು. ಅರ್ಜಿ ಹಾಕಿಕೊಂಡಿರತಕ್ಕವರು ಯಾರೇ ಆಗಿದ್ದರೂ ಸಹಿತ ತಾತ್ಕಾಲಿಕ ಪರವಾನಗಿ ತೆಗೆದುಕೊಂಡಿರತಕ್ಕ ಅರ್ಜಿದಾರರು ಯಾರ್ಯಾರು ಇದ್ದಾರೆ ಅವರೆಲ್ಲರಿಗೂ ರಾಷ್ಟ್ರೀಯ ಪರ್ಮಿಟ್ ಕೊಟ್ಟಿದ್ದೇವೆ. ಯಾವ ಪಕ್ಷದವರೇ ಆಗಿರಲಿ ಯಾವ ಜಾತಿಯವರೇ ಆಗಿರಲಿ ಯಾವ ಜಿಲ್ಲೆಯವರೇ ಆಗಿರಲಿ ಯಾವ ಪೂರ್ವಗ್ರಹ ದೃಷ್ಟಿಯನ್ನು ಇಟ್ಟುಕೊಳ್ಳದೆ ಯಾರ್ಯಾರು ೮ ಪರ್ಮಿಟ್‌ಗಳನ್ನು ತಾತ್ಕಾಲಿಕವಾಗಿ ತೆಗೆದುಕೊಂಡಿರುತ್ತಾರೆ ಅವರೆಲ್ಲರಿಗೂ ೪೦೦ ಪರ್ಮಿಟ್‌ಗಳನ್ನು ಕೊಟ್ಟಿದ್ದೇವೆ. ಆದರೆ ಇದರಲ್ಲಿ ವಿನಾಯಿತಿ ತೋರಿಸತಕ್ಕದ್ದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ. ಅವರು ಪ್ರಥಮಬಾರಿಗೆ ಅರ್ಜಿ ಹಾಕಿಕೊಂಡಿದ್ದರೂ ಸಹಿತ ಅವರಿಗೆ ಪ್ರಥಮಬಾರಿಗೆ ಪರ್ಮಿಟ್‌ಗಳನ್ನು ಕೊಟ್ಟಿದ್ದೇವೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇದರ ಜೊತೆಗೆ ನಾವು ಮಾಡಿರತಕ್ಕ ವ್ಯವಸ್ಥೆಯಿಂದ ಹಣವನ್ನು ಒಂದೇ ಕಂತಿನಲ್ಲಿ ಕಟ್ಟುವುದಕ್ಕೆ ಅನುಕೂಲವಾಗುತ್ತದೆ. ಭ್ರಷ್ಟಾಚಾರ ಕೂಡ ಕಡಿಮೆಯಾಗುತ್ತದೆ. ಈ ಒಂದು ಸರಳೀಕೃತವಾದ ವ್ಯವಸ್ಥೆಯಿಂದ ಬಹಳ ಅನುಕೂಲವಾಗಿದೆ. ಇದು ಬಹಳ ಜನಪ್ರಿಯವಾಗಿದೆ. ಇದರ ಜೊತೆಗೆ ಡ್ರೈವಿಂಗ್ ಲೈಸೆನ್ಸ್ ಅನ್ನು ಹೊರಗಡೆ ಹೋದಾಗ ಜೇಬಿನಲ್ಲಿಟ್ಟುಕೊಂಡು ಹೋಗುವುದಕ್ಕೆ ಸಹಾಯವಾಗುವಂತೆ ನವೀನ ರೀತಿಯಲ್ಲಿ ಮಾಡಬೇಕೆಂದು ಮಾಡಿದ್ದೇವೆ. ಯಾರ್ಯಾರು ಟ್ರ್ಯಾಕ್ಟರುಗಳನ್ನು ಮತ್ತು ಟ್ರೈಲರುಗಳನ್ನು ಇಟ್ಟುಕೊಂಡಿದ್ದಾರೆ ಅವರಿಗೆ ತೆರಿಗೆ ವಿನಾಯಿತಿ ಇತ್ತು. ವ್ಯವಸಾಯ ಸೇವಾ ಸಹಕಾರ ಸಂಘಗಳಿಗೆ ವಿನಾಯಿತಿ ಇರಲಿಲ್ಲ. ವ್ಯವಸಾಯ ಸೇವಾ ಸಹಕಾರ ಸಂಘಗಳಿಗೆ ರಿಯಾಯಿತಿಯನ್ನು ಮುಂದುವರಿಸಿದ್ದೇವೆ. ಉಪ ಸಾರಿಗೆ ಪ್ರಾದೇಶಿಕ ಕಚೇರಿಗಳು ಇರುವ ಕಡೆ ಸುಮಾರು ೧೨ ಟ್ರೆಸರಿಗಳನ್ನು ಪ್ರಾರಂಭಮಾಡಿದ್ದೇವೆ. ಎಲ್ಲರಿಗೂ ಅನುಕೂಲವಾಗುವಂತೆ ಟ್ರೆಸರಿಗಳನ್ನು ಪ್ರಾರಂಭಮಾಡಿ, ಅವರು ಬೇರೆ ಬೇರೆ ಕಡೆ ಹೋಗತಕ್ಕದನ್ನು ತಪ್ಪಿಸಿದ್ದೇವೆ. ಬ್ಯಾಂಕ್‌ಡ್ರಾಫ್ಟ್‌ಗಳ ಮೂಲಕ ಹಣ ತೆಗೆದುಕೊಳ್ಳತಕ್ಕ ಅವಕಾಶವಿದೆ. ಬಹಳ ಮುಖ್ಯವಾದ ವಿಚಾರವೆಂದರೆ ಕರ್ನಾಟಕ

ರಾಜ್ಯದಲ್ಲಿರತಕ್ಕ ಬಸ್ಸುಗಳ ಅರ್ಧದಷ್ಟು ಬಸ್ಸುಗಳು ಬೆಂಗಳೂರು ನಗರದಲ್ಲಿವೆ. ರಾಜ್ಯದಲ್ಲಿರುವ ಅರ್ಧದಷ್ಟು ಬಸ್ಸುಗಳು ನಗರದಲ್ಲಿರುವುದರಿಂದ ಅಷ್ಟೊಂದು ತೃಪ್ತಿಕರವಾಗಿ ಕಾರ್ಯನಿರ್ವಹಣೆ ಆಗುವುದಿಲ್ಲ. ಕೆಲಸಕಾರ್ಯಗಳು ವಿಳಂಬವಾಗುವ ಅಪಾಯ ಕೂಡ ಇತ್ತು. ಎರಡು ಪ್ರಾದೇಶಿಕ ಕಚೇರಿಗಳನ್ನು ಪ್ರಾರಂಭ ಮಾಡಲಿಕ್ಕೆ ಸರ್ಕಾರದ ಪತಿಯಿಂದ ಆಜ್ಞೆಯಾಗಿದೆ. ಈ ಪ್ರಾದೇಶಿಕ ಕಚೇರಿಗಳು ಆಗುವುದರಿಂದ ಹೆಚ್ಚು ದಕ್ಷತೆಯಿಂದ ಶೀಘ್ರವಾಗಿ ಕೆಲಸವಾಗುತ್ತದೆ ಎನ್ನತಕ್ಕ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನು ಮೋಟಾರು ವೆಹಿಕಲ್ಸ್ ಇಲಾಖೆಯ ಬಗ್ಗೆ ಅನೇಕ ಸದಸ್ಯರು ತೃಪ್ತಿಕರವಾದ ಮಾತುಗಳನ್ನು ಹೇಳಿದ್ದಾರೆ. ಭ್ರಷ್ಟಾಚಾರ ಕಡಿಮೆ ಮಾಡುವ ಪ್ರಯತ್ನಕ್ಕೆ ವಾಹನಗಳ ಮಾಲೀಕರು ಹೆಚ್ಚಿನ ರೀತಿಯಲ್ಲಿ ಸಹಕಾರ ಕೊಡಬೇಕು. ರಸ್ತೆ ಸಾರಿಗೆ ನಿಗಮದ ಬಗ್ಗೆ ಅನೇಕ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಸಭೆಯ ಮುಂದಿಟ್ಟಿದ್ದಾರೆ. ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಹೇಳುವಂತೆ ನಾವು ಸುಮಾರು ೨೭೭ ಬಸ್ಸುಗಳಿಗೆ ಪರವಾನಗಿಯನ್ನು ಕೊಟ್ಟಿದ್ದೇವೆ. ಇದರಿಂದ ಖಾಸಗಿ ಮಾಲೀಕರಿಗೆ ಅವಕಾಶ ಕಲ್ಪಿಸಿಕೊಡುವುದು ಆಗಬಹುದು, ಈ ಒಂದು ಅಪಾಯವನ್ನು ಕೂಡ ನಾವು ಹೇಳಿದ್ದೇವೆ. ಅಪಾಯವಿರತಕ್ಕ ಪ್ರಶ್ನೆ ಇಷ್ಟೆ, ಅಂತರರಾಜ್ಯ ಬಸ್ಸುಗಳನ್ನು ಕೊಡತಕ್ಕದ್ದರಲ್ಲಿ ಈಗಾಗಲೇ ಇರತಕ್ಕ ಬಸ್ಸುಗಳು. ಯಾರನ್ನು ನಾವು ಘೋಷಣೆ ಮಾಡಿದ್ದೇವೆ. ಗೆಜೆಟ್‌ನಲ್ಲಿ ಅದರ ಬಗ್ಗೆ ಪ್ರಕಟಣೆ ಮಾಡಿದ್ದೇವೆ ಅವುಗಳಲ್ಲಿ ಕೆಲವು ವ್ಯತ್ಯಾಸಗಳನ್ನು ಮಾಡಿ ಈಗಾಗಲೇ ಒಂದು ಟ್ರಿಪ್ ಇರತಕ್ಕವರಿಗೆ ಜನಗಳ ಅನುಕೂಲತೆಯ ದೃಷ್ಟಿಯಿಂದ ಎರಡು ಟ್ರಿಪ್‌ಗೆ ಅನುಕೂಲವಾಗುವಂತೆ ಅಂತರರಾಜ್ಯ ಒಪ್ಪಂದದ ಮೂಲಕ ಖಾಸಗಿ ಮಾಲೀಕರಿಗೆ ಅನಿವಾರ್ಯವಾಗಿ ಕಾನೂನಿನ ಸಮ್ಮತಿ ಇರುವುದರಿಂದ ಕೆಲವು ಬಸ್ಸುಗಳನ್ನು ನಾವು ಕೊಡಬೇಕಾಗಿದೆ. ಮೂರು ವರ್ಷಗಳ ಒಪ್ಪಂದದ ಪೂರ್ಣ ನಿರ್ಣಯವಾಗಿಲ್ಲ. ಸುಮಾರು ೨೭೭ ಬಸ್ಸುಗಳ ಮಾಲೀಕರು ಕೆಲವರು ಹೈಕೋರ್ಟ್‌ಗೆ ಹೋಗಿ ಆದೇಶಗಳನ್ನು ತಂದಿದ್ದಾರೆ. ಕೆಲವರು ಸುಪ್ರೀಂ ಕೋರ್ಟಿನಿಂದ ಆದೇಶ ತಂದಿದ್ದಾರೆ. ಆ ಆದೇಶಗಳನ್ನು ಕೂಡ ಪ್ರಾದೇಶಿಕ ಪ್ರಾಧಿಕಾರದ ಅಧಿಕಾರದಿಂದ ರದ್ದು ಮಾಡಿದ್ದೇವೆ. ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆ ಬಸ್ಸುಗಳನ್ನು ಓಡಿಸುವುದಕ್ಕೆ ಸಾಧ್ಯವಾಗುವುದದಿಲ್ಲಿ. ಅಂತರರಾಜ್ಯ ಒಪ್ಪಂದ ಅಡ್ಡಿ ಬರುತ್ತದೆ. ಹೆಚ್ಚಿನ ಜನಸಾಂದ್ರತೆಯ ಬೇಡಿಕೆಗೆ ಅನುಗುಣವಾಗಿ ನಾವು ೨೭೭ ಬಸ್ಸುಗಳಿಗೆ ಪರವಾನಗಿ ಕೊಟ್ಟಿದ್ದೇವೆ. ಪರವಾನಗಿ ಕೊಟ್ಟಿದ್ದರೂ ಸಹಿತ ಮಾನ್ಯ ಕೃಷ್ಣನ್‌ರವರು ಯಾವುದೇ ರೀತಿಯ ಸಂಶಯ ಇಟ್ಟುಕೊಳ್ಳಬಾರದು. ಈ ಒಂದು ಸರ್ಕಾರ ರಾಷ್ಟ್ರೀಕರಣಕ್ಕೆ ಬದ್ಧವಾಗಿರತಕ್ಕ ಸರ್ಕಾರ. ಅನೇಕ ಸಂದರ್ಭಗಳಲ್ಲಿ ನಮ್ಮ ತಾತ್ವಿಕವಾದ ಹಿನ್ನೆಲೆಯಲ್ಲಿ ವೈಚಾರಿಕವಾಗಿ ಒಂದೊಂದು ರೀತಿಯಲ್ಲಿ ಗೊಂದಲವಾಗುತ್ತದೆ. ನನಗೆ ವೈಯಕ್ತಿಕವಾಗಿ ಯಾವುದೇ ರೀತಿಯ ಗೊಂದಲವಿಲ್ಲ, ಸರ್ಕಾರಕ್ಕೂ ಕೂಡ ಇಲ್ಲ. ರಾಷ್ಟ್ರೀಕರಣವಾದಮೇಲೆ ಪ್ರಯಾಣಿಕರಿಗೆ ಅನುಕೂಲಮಾಡಿಕೊಡಬೇಕು ಇದರಲ್ಲಿ ಲಾಭ ನಷ್ಟದ ಪ್ರಶ್ನೆ ಬರುವುದಿಲ್ಲ. ಸಮಾಜದಲ್ಲಿ ಒಬ್ಬ ವ್ಯಕ್ತಿಯ ಕೈಯಲ್ಲಿ ಹಣ ಶೇಖರಣೆಯಾದರೆ, ಅಧಿಕಾರ ಶೇಖರಣೆಯಾದರೆ ಅದರ ವಿರುದ್ಧ ನಾವೆಲ್ಲರೂ ಕೂಡ ಎದ್ದು ನಿಲ್ಲಬೇಕು. ಒಬ್ಬ ಖಾಸಗಿ ಮಾಲೀಕ ರಾಷ್ಟ್ರೀಕರಣಕ್ಕೆ ಒಳಪಡದೆ ಇರತಕ್ಕವನು ರಾಷ್ಟ್ರೀಕರಣದ ಬಸ್ಸುಗಳಿಗೆ ಸಮಾನವಾಗಿರಲು ಸಾಧ್ಯವಿಲ್ಲ. ಖಾಸಗಿ ಮಾಲೀಕ ಅಲ್ಲಿ ದುಡಿಯತಕ್ಕ ಜನಗಳ ಬೆವರು ರಕ್ತದಿಂದ ಹಣ ಸಂಪಾದನೆ ಮಾಡುತ್ತಿರುತ್ತಾನೆ. ಶೋಷಣೆ ಮಾಡತಕ್ಕ ಒಂದು ವರ್ಗ ಇದ್ದರೆ, ತಮ್ಮದೇ ಆದ ಸಾಮಾಜಿಕ ವ್ಯವಸ್ಥೆ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಿಕೊಡತಕ್ಕ ಒಂದು ಸಂಸ್ಥೆ ಇದೆ. ಸೇವಾಸಂಸ್ಥೆ ಯಾವುದು, ಬೆಳಿಗ್ಗೆ ೧೦ ಗಂಟೆಗೆ ಬರತಕ್ಕ ಬಸ್ಸು ಸಾಯಂಕಾಲ ೪ ಗಂಟೆಗೆ ಬರುತ್ತದೆ ಇದು ಸೇವಾ ಸಂಸ್ಥೆಯೇ, ನಿಮ್ಮ ಬಸ್ಸುಗಳನ್ನು ತೋಳಿದಿರುವುದಿಲ್ಲವೆಂದು ಹೇಳುತ್ತಾರೆ. ಇರತಕ್ಕ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರುವುದರಲ್ಲಿ ಕೆಲವೊಂದು ಲೋಪದೋಷಗಳು ಇರಬಹುದು. ಸಮಾಜದಲ್ಲಿ ಲೋಪದೋಷಗಳು ಇರತಕ್ಕದ್ದು ಇದ್ದೆ ಇದೆ. ಇವಕ್ಕಿಂತಲೂ ಮೂಲಭೂತವಾದ ದೊಡ್ಡ ವ್ಯತ್ಯಾಸವೆಂದರೆ ರಾಷ್ಟ್ರೀಕರಣಕ್ಕೆ ಒಳಪಡುವುದರ ಮೂಲಕ ನಾವು ಎಲ್ಲಾ ಸೌಲಭ್ಯಗಳನ್ನು ಒದಗಿಸಿ ಕೊಡುವುದಕ್ಕೆ ಸಾಧ್ಯವಿದೆ, ಖಾಸಗೀ ಮಾಲೀಕರು ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಿಕೊಡುವುದಕ್ಕೆ ಆಗುವುದಿಲ್ಲ. ಖಾಸಗಿ ಮಾಲೀಕರು ತೋರಿಕೆಗೆ ಮಾತ್ರ ಕೆಲವೊಂದು ಗುಣಮಟ್ಟಗಳನ್ನು ತೋರಿಸಿ ಕೊಡುತ್ತಾರೆಯೇ ವಿನಹ ಎಲ್ಲಾ ಸೌಲಭ್ಯಗಳನ್ನು ದೊರಕಿಸಿಕೊಡಲಿಕ್ಕೆ ಅವರಿಂದ ಸಾಧ್ಯವಿಲ್ಲ. ಕೆಲವೇ ಜನರ ಕೈಯಲ್ಲಿ ಅಧಿಕಾರ ಶೇಖರಣೆಯಾಗತಕ್ಕದನ್ನು ನಾವು ತೊಡೆದು ಹಾಕಲು ಸರ್ವರೂ ಕೂಡ ಪ್ರಯತ್ನ ಮಾಡಬೇಕು. ಇದೊಂದು ಅಪಾಯವಿರುವುದರಿಂದ ಹೆಚ್ಚು ಹೆಚ್ಚು ರಾಷ್ಟ್ರೀ

ಕರಣಕ್ಕೆ ಒಳಪಡಿಸಬೇಕಾಗುತ್ತದೆ. ಇದನ್ನು ಸರಿಪಡಿಸುವುದಕ್ಕೆ ಪ್ರತಿಯೊಬ್ಬರೂ ಪ್ರಯತ್ನವಾದ ಮಾಡಬೇಕು. ಸುಮ್ಮನೆ ತೋರಿಕೆಗೆ ಉದ್ಧಾರದ ಮಾತನ್ನು ಹೇಳಿದರೆ ಅದು ಆಗಲಾರದು ಎನ್ನತಕ್ಕ ಮಾತನ್ನು ಹೇಳುತ್ತೇನೆ. ರಾಜಕೀಯವಾಗಿ ವೈಚಾರಿಕವಾಗಿ ನಾವು ರಾಷ್ಟ್ರೀಕರಣಕ್ಕೆ ಬದ್ಧರಾಗಿದ್ದೇವೆ. ಬಹಳ ದಿವಸಗಳ ಹಿಂದೆ ರಾಷ್ಟ್ರೀಕರಣದ ಪ್ರಕರಣ ಮಾಡಿ ಅದು ಗುಲ್ಬರ್ಗದಲ್ಲಿರಬಹುದು, ರಾಯಚೂರಿನಲ್ಲಿರಬಹುದು, ಕೊಪ್ಪಳ ಪ್ರದೇಶದಲ್ಲಿರಬಹುದು ಇವೆಲ್ಲವನ್ನು ಕೂಡ ನಾನು ಅಧಿಕಾರಕ್ಕೆ ಬಂದನಂತರ ರಾಷ್ಟ್ರೀಕರಣದ ಆಕ್ಷೇಪಣೆಗಳನ್ನು ಕೇಳತಕ್ಕ ಅಧಿಕಾರವನ್ನು ಮಾನ್ಯ ಮುಖ್ಯಮಂತ್ರಿಗಳು ಕೃಪೆಮಾಡಿ ನನಗೆ ಕೊಟ್ಟಿದ್ದಾರೆ. ಇದರ ಜೊತೆಗೆ ವಿಚಾರಣೆಗಳನ್ನು ತೆಗೆದುಕೊಂಡಿದ್ದೇನೆ. ಮೂರ್‍ನಾಲ್ಕು ಮಾಯಿದೆಗಳನ್ನು ಕೂಡ ಮಾಲೀಕರು ತೆಗೆದುಕೊಂಡಿದ್ದಾರೆ. ಖಾಸಗಿ ಮಾಲೀಕರು ಬೇರೆ ತರಹ ಬದಲಾಯಿಸುತ್ತಾರೆ ಎನ್ನುವ ಅಪಾಯ ಕೂಡ ಇರುವುದರಿಂದ ಬಹಳ ಎಚ್ಚರಿಕೆಯಿಂದ ಕೆಲಸಮಾಡಬೇಕಾಗಿದೆ. ರಾಷ್ಟ್ರೀಕರಣದ ಆಕ್ಷೇಪಣೆಗಳನ್ನು ಕೇಳತಕ್ಕ ಒಬ್ಬ ಅರೆ ನ್ಯಾಯಾಧೀಶನಾಗಿ, ಇಲ್ಲಿ ನಾವು ರಾಷ್ಟ್ರೀಕರಣಕ್ಕೆ ಬದ್ಧರಾಗಿರುತ್ತೇವೆ. ನಾನು ಸರ್ಕಾರದ ಮಂತ್ರಿಯಾಗಿ ತೆಗೆದುಕೊಳ್ಳತಕ್ಕ ನಿರ್ಣಯವನ್ನು ಉಚ್ಚಾರಣೆ ಮಾಡಿದರೆ ಹೈಕೋರ್ಟ್‌ನಲ್ಲಿ ತಡೆಯಾಜ್ಞೆ ತರುವ ಒಂದು ಪಿತೂರಿ ನಡೆಯುತ್ತದೆ. ಇಂತಹ ವಾದವನ್ನು ಮಂಡಿಸುವ ಅಪಾಯವಿದೆ. ಅದನ್ನು ಮನಗಂಡು ಈಗ ನಾನು ಹೇಳುವಂತಹ ಮಾತನ್ನು ಮಂತ್ರಿಯಾಗಿ ಹೇಳಿದರೂ ಕೂಡ, ಅಲ್ಲಿ ನ್ಯಾಯಾಧೀಶನಾಗಿ ವಿಚಾರಣೆ ಮಾಡುವಾಗ ಯಾವುದೇ ನಿರ್ಣಯದಲ್ಲಿ ಬಯಾಸ್ ಇರುವುದಿಲ್ಲ. ಈ ವಿಷಯವನ್ನು ಹೆಚ್ಚು ಲಬಿಸದೆ ಮಾನ್ಯ ಸದಸ್ಯರಾದ ಕೃಷ್ಣನ್‌ರವರಿಗೆ ಮನವರಿಕೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಬಗ್ಗೆ ಮಾನ್ಯ ಸದಸ್ಯರುಗಳು ಅನೇಕ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಅನೇಕ ಸದಸ್ಯರಿಗೆ ಸಾರಿಗೆ ಸಂಸ್ಥೆಯ ಬಗ್ಗೆ ತೃಪ್ತಿ ಇದೆ. ಸಾರಿಗೆ ಸಂಸ್ಥೆ ನಮ್ಮದೇ ಎನ್ನುವ ಒಂದು ಮನೋಭಾವನೆ ಇದೆ, ಈ ಮಾತನ್ನು ಹೇಳುವಾಗ ಬಹಳ ಮುಖ್ಯವಾದ ಒಂದು ವಿಚಾರವನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ೧೯೬೧ ರಿಂದ ೧೯೮೧ರ ವರೆಗೆ ೩೭ ಕೋಟಿ ಕಿಲೋಮೀಟರ್ ದೂರ ಬಸ್ಸುಗಳನ್ನು ಓಡಿಸಿರತಕ್ಕ ವಿವರ ಇದೆ. ಸುಮಾರು ೨೦ ವರ್ಷಗಳ ಅವಧಿಯಲ್ಲಿ ೩೭ ಕೋಟಿ ಕಿಲೋಮೀಟರ್ ದೂರ ಬಸ್ಸುಗಳನ್ನು ಓಡಿಸಿರತಕ್ಕದ್ದು ಇದೆ. ಈಗ ಅಂದರೆ ೧೯೮೧-೮೨, ೧೯೮೨-೮೩ ಮತ್ತು ೧೯೮೩-೮೪ರಲ್ಲಿ ಈ ಮೂರು ವರ್ಷಗಳ ಅವಧಿಯಲ್ಲಿ ಸುಮಾರು ೫೪ ಕೋಟಿ ಕಿಲೋಮೀಟರ್ ದೂರ ಬಸ್ಸುಗಳನ್ನು ಓಡಿಸಿದ್ದೇವೆ. ನಾವು ಎಷ್ಟೊಂದು ದೊಡ್ಡ ಪ್ರಮಾಣದಲ್ಲಿ ಜಗಿತ ಮಾಡಿದ್ದೇವೆ ಎನ್ನುವುದನ್ನು ತಾವು ನೋಡಬೇಕಾಗುತ್ತದೆ. ಪ್ರಾರಂಭದಲ್ಲಿ ಡೀಸಲ್ ಎಣ್ಣೆ, ಬಿಡಿಭಾಗಗಳ ಬೆಲೆಗಳು ಏರುವ ಪೂರ್ವದಲ್ಲಿ ರಾಷ್ಟ್ರೀಕರಣವಾದ ಸಂಸ್ಥೆ ಲಾಭವನ್ನು ಮಾಡುತ್ತಿತ್ತು. ಮಾನ್ಯ ಬೋರೇಗೌಡರು ಹೇಳಿದರು ಇದು ''ಹಾಡಿದ್ದೇ ಹಾಡೋ ಕಿಸುಬಾಯಿದಾಸ'' ತರಹ ಆಗುತ್ತದೆ ಎಂದು. ಆದರೂ ಕೂಡ ಇದನ್ನು ಪುನರಾಲೋಚನೆ ಮಾಡಬೇಕಾಗುತ್ತದೆ. ಸುಮಾರು ಐದೂವರೆ ಕೋಟಿ ರೂಪಾಯಿಗಳನ್ನು ಡಿಪ್ರಿಸಿಯೇಷನ್ ಬಾಬತ್ತು ಇಟ್ಟಿದ್ದು ಇದೆ ಶೇಕಡಾ ೧೧ರಷ್ಟು ಬಿಡಿ ಭಾಗಗಳ ಬೆಲೆ ಜಾಸ್ತಿಯಾಗಿದೆ. ಸುಮಾರು ಆರೂವರೆ ಕೋಟಿ ದುಡ್ಡನ್ನು ದುರ್ಬಲ ವರ್ಗಗಳಿಗೆ ಮುಖ್ಯವಾಗಿರತಕ್ಕಂಥ ಸಾಮಾಜಿಕ ಅಂಗಗಳಿಗೆ ಕೊಡಬೇಕಾಗಿರತಕ್ಕಂಥ ಪರಿಸ್ಥಿತಿ ಇದೆ. ಕೊಡಬೇಕಾಗಿರತಕ್ಕದ್ದು ನಮ್ಮ ಕರ್ತವ್ಯ ಆಗಿರುವುದರಿಂದ ಈ ರಿಯಾಯಿತಿಯನ್ನು ಬೇರೆ ತರಹ ಕೊಡುತ್ತಿಲ್ಲ. ಸರ್ಕಾರ ಕೊಡಬೇಕಾಗಿತ್ತು ನಿಜ. ಆದರೆ ಸರ್ಕಾರ ಮತ್ತು ರಸ್ತೆ ಸಾರಿಗೆ ಸಂಸ್ಥೆ ಒಂದೇ ಆಗಿರುವುದರಿಂದ ಇವುಗಳ ಮೂಲಕ ಕೊಡತಕ್ಕ ಆರೂವರೆ ಕೋಟಿ ರೂಪಾಯಿಗಳನ್ನು ಸಮಾಜದ ವಿವಿಧ ವರ್ಗಕ್ಕೆ ಕೊಡಬೇಕಾದ ರಿಯಾಯಿತಿ ಮತ್ತು ಹೆಚ್ಚಾಗಿರತಕ್ಕಂಥ ಬಿಡಿ ಭಾಗಗಳ ಬೆಲೆ ಇದರ ಮೂಲಕವಾಗಿ ಎಂಟೂವರೆ ಕೋಟಿಯಷ್ಟು ನಗರ ಸಾರಿಗೆ ವ್ಯವಸ್ಥೆಯಲ್ಲಿ ಆಗಿರತಕ್ಕ ನಷ್ಟ. ಇದನ್ನು ಯೋಚನೆ ಮಾಡಿದರೆ ಮೇಲ್ನೋಟಕ್ಕೆ ಇದು ನಷ್ಟವೆಂದು ಕಂಡು ಬರುತ್ತದೆ. ಇದಕ್ಕೆ ಕಾರಣವಾಗಿರತಕ್ಕಂಥ ವಿಚಾರಗಳನ್ನು ಮಾನ್ಯ ಕೃಷ್ಣನ್ ಅವರು ಪ್ರಸ್ತಾಪ ಮಾಡುತ್ತಿದ್ದರೇನೋ, ಸಮಯಾವಕಾಶ ಇಲ್ಲವೆಂದು ಬಹುಶಃ ಅವರು ಮಾತನಾಡಿರಲಿಕ್ಕಿಲ್ಲ. ಮೂರು ಕೋಟಿ ಎಪ್ಪತ್ತೊಂದು ಲಕ್ಷ ಅಂದಾಜಿನ ಬಡ್ಡಿಯನ್ನು ನಾವು ಕೊಡುತ್ತಿದ್ದೇವೆ. ಅದರ ಜೊತೆಗೆ ಹದಿನೈದು ಕೋಟಿಯನ್ನು ಆಡಿಟ್‌ನಲ್ಲಿ ಡಿಪ್ರಿಷಿಯೇಷನ್ ತೋರಿಸುತ್ತಿದ್ದೇವೆ. ಸನ್ಮಾನ್ಯ ಉಪಾಧ್ಯಕ್ಷರೇ, ತಮ್ಮ ಮೂಲಕ ನಾನು ಮಾನ್ಯ ಶಾಸಕ ಮಿತ್ರರನ್ನು ಕೇಳಿಕೊಳ್ಳುವುದೇನೆಂದರೆ ಇಡೀ ಸುಭಾಶ್‌ನಗರದಲ್ಲಿ ಎರಡು ಬಸ್ ನಿಲ್ದಾಣಗಳನ್ನು ಕಟ್ಟಿಸಿದರೆ ಜಾಗ ಎಲ್ಲಾ ಸೇರಿ ಇವುಗಳ ಒಟ್ಟು ಮೌಲ್ಯ ನಮ್ಮ ಪುಸ್ತಕ ಪ್ರಕಾರ ನಾಲ್ಕು ಕೋಟಿ ಆಗುತ್ತದೆ. ಈ ವರ್ಷ ನಾವು ಆಯವ್ಯಯದಲ್ಲಿ ಲೆಕ್ಕ ಮಾಡಿದ ಸಮಯದಲ್ಲಿ ಎರಡೂವರೆ ಕೋಟಿಯನ್ನು ಡಿಪ್ರಿಶಿಯೇಷನ್ ತೆಗೆದಿದ್ದೇವೆ. ಕೊಟ್ಟಿರತಕ್ಕಂಥ ಅಂಕಿಅಂಶಗಳ ಪ್ರಕಾರ ೧೪ ಕೋಟಿ ನಷ್ಟ ಆಗುತ್ತಿರುವಲ್ಲಿ ೧೫ ಕೋಟಿ ೩೫ ಲಕ್ಷ ಡಿಪ್ರಿಸಿಯೇಷನ್ ತೆಗೆದಿದ್ದು, ಮೂರು ಕೋಟಿ ಎಪ್ಪತ್ತೊಂದು ಲಕ್ಷದಷ್ಟು ಕೇಂದ್ರ ಸರ್ಕಾರಕ್ಕೆ

ಮತ್ತು ರಾಜ್ಯ ಸರ್ಕಾರಕ್ಕೆ ಕೊಡತಕ್ಕಂಥ ಬಡ್ಡಿಯನ್ನು ತೆಗೆದರೆ ಉಳಿದಿರತಕ್ಕದ್ದು ಹದಿನಾಲ್ಕು ಕೋಟಿ ನಷ್ಟವಾಗುತ್ತದೆಂದು ಮಾತನ್ನು ಹೇಳುವಾಗ ನಿಜವಾಗಿರತಕ್ಕಂಥ ನಷ್ಟ ಇದು ಆಗಿಲ್ಲ. ಈ ದೃಷ್ಟಿಯಿಂದ ಸ್ವಲ್ಪ ಸಹಾನುಭೂತಿಯಿಂದ, ಕರುಣೆಯಿಂದ ಇದನ್ನು ನೋಡಬೇಕೆಂದು ನಾನು ಹೇಳುತ್ತೇನೆ ಈ ಮಾತನ್ನು ಹೇಳತಕ್ಕಂಥ ಸಂದರ್ಭದಲ್ಲಿ ನಾನು ನಮ್ಮ ಸಂಸ್ಥೆಯಲ್ಲಿರಬಹುದಾದ ಆಲಕ್ಷ್ಯತನ, ಅಪ್ರಮಾಣಿಕತೆಯನ್ನು ಕ್ಷಮಿಸಿರಿ ಎಂದು ಕೇಳುವುದಿಲ್ಲ. ಇಲ್ಲಿಯೂ ಕೂಡ ದೊಡ್ಡ ಪ್ರಮಾಣದ ಜಗಿತವನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮಾಡಿದೆಯೆಂದು ಕೆಲವು ಸದಸ್ಯರು ಮಾತನಾಡಿದ್ದಾರೆ. ಮಾನ್ಯ ಉಪಾಧ್ಯಕ್ಷರೇ, ಹಿಂದೆ ನಾನು ಇದೇ ಸದನದಲ್ಲಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಈ ಸಂಸ್ಥೆಯ ಆಡಳಿತ ಮಂಡಲಿಯಲ್ಲಿ ಕಾರ್ಮಿಕರಿಗೆ ಪ್ರಾತಿನಿಧ್ಯ ಕೊಡುತ್ತೇವೆ, ಮತ್ತು ಅಧಿಕಾರೇತರ ಸದಸ್ಯರನ್ನು ನಾಮಕರಣ ಮಾಡುತ್ತೇವೆ ಎನ್ನುವ ಭರವಸೆಯನ್ನು ಕೊಟ್ಟಿದ್ದೆ. ಕೆಲವು ಅನಿವಾರ್ಯ ಕಾರಣಗಳಿಂದಾಗಿ ಇದನ್ನು ಮಾಡಲಿಕ್ಕೆ ಆಗಲಿಲ್ಲವೆಂದು ವಿಷಾದದಿಂದ, ನಾಚಿಕೆಯಿಂದ ಕೂಡ ನಾನು ಹೇಳುತ್ತಿದ್ದೇನೆ. ಖಂಡಿತವಾಗಿ ಇನ್ನು ಒಂದು ತಿಂಗಳೊಳಗಾಗಿ ಅಧಿಕಾರಿಯೇತರ ಸದಸ್ಯರನ್ನು ಕೂಡ ನಾಮಕರಣ ಮಾಡುತ್ತೇವೆ. ಇದು ಅಸಮ್ಯವಾಗಿರತಕ್ಕಂಥ ಅಪರಾಧ. ನಮ್ಮ ಭರವಸೆಗೆ ತಕ್ಕಂತೆ ಯಾವುದಾದರೂ ನಿರ್ಣಯ ಮಾಡಬೇಕಾಗಿದ್ದರೆ ಅದಕ್ಕೆ ನಾವು ಬದ್ಧರಾಗಿದ್ದೇವೆ. ಕಾರ್ಮಿಕರು ಒಂದು ಪ್ರಮುಖವಾದ ವರ್ಗ. ದುಡಿಯತಕ್ಕಂಥ ವರ್ಗ. ಇವರ ಮೂಲಕವಾಗಿ ಈ ರಸ್ತೆ ಸಾರಿಗೆ ಸಂಸ್ಥೆ ನಡೆಯಬೇಕಾಗಿರುವುದರಿಂದ ಅವರನ್ನು ಎಲ್ಲಾ ವ್ಯವಹಾರಗಳಲ್ಲೂ ನಾವು ಅವಲಂಬಿಸಬೇಕಾಗುತ್ತದೆ. ಇದು ಅವರ ಮೇಲೆ ಉಪಕಾರ ಮಾಡುವುದಕ್ಕೆ ಅಂತ ಅಲ್ಲ. ಸಾಮಾಜಿಕ ವ್ಯವಸ್ಥೆ ಹೊತ್ತಿರತಕ್ಕಂಥ ಯಾವುದೇ ನಾಗರೀಕ ಸರ್ಕಾರವಾದರೂ ಕೂಡ ಇದು ಅದರ ಕರ್ತವ್ಯವಾಗಿರುವುದರಿಂದ, ಕಾರ್ಮಿಕರಿಗೆ ಆಡಳಿತ ಮಂಡಳಿಯಲ್ಲಿ ಪ್ರಾತಿನಿಧ್ಯವನ್ನು ನಾವು ಸಹ ಕೊಡುತ್ತೇವೆ. ಅಧಿಕಾರಿಯೇತರ ಸದಸ್ಯರನ್ನು ನೇಮಿಸಿಕೊಳ್ಳಲು ಕಾನೂನು ಪ್ರಕಾರ ಅವಕಾಶ ಇರುವುದರಿಂದ ಇನ್ನು ಒಂದು ತಿಂಗಳಿನೊಳಗಾಗಿ ಇವರನ್ನು ಭರ್ತಿಮಾಡುತ್ತೇವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಎಲ್ಲಾ ವಿಭಾಗಗಳಲ್ಲೂ ಸಲಹಾ ಸಮಿತಿಗಳನ್ನು ಮಾಡುತ್ತೇವೆ ಎನ್ನುವ ಮಾತನ್ನುಕೊಟ್ಟಿದ್ದೆ. ಅದರ ಪ್ರಕಾರ ಮಂಗಳೂರು ಮತ್ತು ಧಾರವಾಡ ವಿಭಾಗಗಳನ್ನು ಬಿಟ್ಟು ಉಳಿದ ವಿಭಾಗಗಳಲ್ಲಿ ಇದನ್ನು ಮಾಡಲಾಗಿದೆ. ಈ ಎರಡು ವಿಭಾಗಗಳಲ್ಲಿ ಈಗಾಗಲೇ ಘೋಷಣೆ ಮಾಡುವ ಮಟ್ಟಕ್ಕೆ ಹೋಗಿದೆ. ಈ ಎಲ್ಲಾ ೧೩ ವಿಭಾಗಗಳಲ್ಲಿ ಎರಡು ವಿಭಾಗಗಳನ್ನು ಬಿಟ್ಟು ಉಳಿದ ಹನ್ನೊಂದು ವಿಭಾಗಗಳಲ್ಲಿ ಸಲಹಾ ಸಮಿತಿಗಳನ್ನು ಮಾಡಿದ್ದೇವೆ. ಈ ಸಮಿತಿಗಳು ಎರಡು–ಮೂರು ಸಲ ಕಲಿತು ಅಧಿಕಾರೇತರ ಸದಸ್ಯರ ಜೊತೆಗೆ ಸಹಕಾರ ಕೊಡುತ್ತಿದ್ದಾರೆ. ಇನ್ನು ಬಹಳ ಮುಖ್ಯವಾಗಿರತಕ್ಕಂಥಾದ್ದು ಸುಮಾರು ೩೮ ಸಾವಿರ ಜನ ಕೆಲಸಗಾರರು ಇರುವ, ೬,೦೪೫ ವಾಹನಗಳನ್ನು ಹೊಂದಿರತಕ್ಕ ಮತ್ತು ಎರಡು ನೂರು ಕೋಟಿ ರೂಪಾಯಿ ಬಂಡವಾಳ ಪಡೆದಿರತಕ್ಕಂಥ ಸಂಸ್ಥೆಯಾಗಿರುವ ಇಲ್ಲಿ ಕೆಲವು ಸಂದರ್ಭದಲ್ಲಿ ಅಧಿಕಾರ ಕೇಂದ್ರಿಕೃತ ಗೊಳಿಸತಕ್ಕ ಅಪಾಯ ಕೂಡ ಇದೆ. ಪ್ರಾದೇಶಿಕ ವ್ಯವಸ್ಥೆ ಇರಬೇಕೆಂದು ಹಿಂದೆ ಸುಮಾರು ಐದು ಪ್ರಾದೇಶಿಕ ಕಛೇರಿಗಳನ್ನು ಮಾಡಿದ್ದರು. ಇದಕ್ಕೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳನ್ನು ನೇಮಿಸಲಾಗಿತ್ತು. ಆದರೆ ಇವರು ಸಂಪೂರ್ಣವಾದ ರೀತಿಯಲ್ಲಿ ಅಧಿಕಾರಿ ವಿಕೇಂದ್ರೀಕರಣ ಮಾಡಲಿಲ್ಲ. ತೋರಿಕೆಯ ಭವ್ಯತೆಗೋಸ್ಕರ ಇವರು ಅಧಿಕಾರಿಗಳು ಆಗಿದ್ದರೇ ಹೊರತು ಅಧಿಕಾರ ವಿಕೇಂದ್ರೀಕರಣವನ್ನು ಮಾಡಲಿಲ್ಲ. ಇದರ ಮೂಲಕ ಗಣನೀಯವಾದ ರೀತಿಯಲ್ಲಿ ಹತೋಟಿಯನ್ನು ಇಟ್ಟುಕೊಳ್ಳುವುದು ಸಾಧ್ಯವಿಲ್ಲವೆಂಬ ಆಪಾದನೆ ಇರುವುದರಿಂದ ಇವುಗಳನ್ನು ತಮಿಳುನಾಡಿನ ರೀತಿಯಲ್ಲಿ ವಿಕೇಂದ್ರೀಕರಣ ಮಾಡಬೇಕೆಂದು ಮತ್ತೊಂದು ಯೋಚನೆ ಮಾಡಿ ಇದಕ್ಕಾಗಿ. ಕರ್ನಾಟಕ ರಾಜ್ಯದಲ್ಲಿ ಪ್ರಖ್ಯಾತವಾಗಿರತಕ್ಕಂಥ ಕನ್‌ಸಲ್ಟೆನ್ಸಿ ಏಜೆನ್ಸಿಗೆ–ಇದಕ್ಕೆ ಅಪೆಕ್ಸ್ ಮ್ಯಾನೇಜ್‌ಮೆಂಟ್ ಎಂದು ಕರೆಯುತ್ತಾರೆ. ಅದರ ಸರಿಯಾದ ಹೆಸರನ್ನು ಮರೆತಿದ್ದೇನೆ. ಅವರಿಗೆ ವಹಿಸಿಕೊಟ್ಟಿದ್ದು ಅವರು ಇನ್ನು ಮೂರುಅಥವಾ ನಾಲ್ಕು ತಿಂಗಳೊಳಗಾಗಿ ವರದಿಯನ್ನು ಕಳಿಸಿಕೊಡುತ್ತಾರೆ. ಅದಕ್ಕೆ ಸುಮಾರು ಎಂಭತ್ತು ಸಾವಿರ ಖರ್ಚು ಬರುತ್ತದೆ. ಇದು ಬಹಳ ಪ್ರಸಿದ್ಧವಾಗಿರತಕ್ಕಂಥ ಸಂಸ್ಥೆ. ನಿಷ್ಪಕ್ಷಪಾತವಾಗಿ, ವೈಜ್ಞಾನಿಕವಾಗಿ, ಇದರಲ್ಲಿ ಇರಬಹುದಾದ ಎಲ್ಲಾ ಬಗೆಯ ಕಾನೂನಿನ ತೊಡಕುಗಳನ್ನು, ತಡೆಗಟ್ಟಲು ಒಂದು ವಿವರವಾದ ನಿರ್ಭಿತವಾದ ವರದಿಯನ್ನು ಇವರು ಕೊಟ್ಟ ಮೇಲೆ ಇಲ್ಲಿನ ಎಲ್ಲಾ ಸದಸ್ಯರ ಅಭಿಪ್ರಾಯಗಳನ್ನು ತೆಗೆದುಕೊಂಡು ಸರ್ಕಾರ ಸೂಕ್ತ ನಿರ್ಣಯವನ್ನು ಮಾಡುತ್ತದೆ. ಏಕೆಂದರೆ ಇಲ್ಲಿ ಅಪಾಯ ಇದೆ. ಈಗಿರುವ ಪದ್ಧತಿಯಲ್ಲಿ ಅನೇಕ ವಿಭಾಗಗಳು ನಷ್ಟದಲ್ಲಿ ನಡೆಯುತ್ತಿವೆ. ಕೆಲವು ಮಾತ್ರ ಲಾಭದಲ್ಲಿ ನಡೆಯುತ್ತವೆ. ಇವುಗಳು ನಷ್ಟದಲ್ಲಿ ನಡೆಯುತ್ತಿದ್ದರೆ ಜೀವವಿಮಾ ಕಾರ್ಪೊರೇಷನ್ ಮತ್ತು ಕೇಂದ್ರ ಸರ್ಕಾರದವರು ದುಡ್ಡು ಕೊಡಲಿಕ್ಕಿಲ್ಲ. ನಿಗದಿಯಾದ ಸಂಪನ್ಮೂಲಗಳು ಇಲ್ಲದೇ ಇರುವಾಗ ಸಹಾಯ ಕೊಡುವುದು ಹೇಗೆ ಎಂದು ಅವರು ಕೇಳಬಹುದು. ನಷ್ಟದಲ್ಲಿ ಮುಂದು

ಪರೆದಿರತಕ್ಕಂಥ ಗುಲ್ಬರ್ಗಾ, ಬೀದರ್, ರಾಯಚೂರು ವಿಭಾಗಗಳಲ್ಲಿ ಇವುಗಳು ಯಾವಾಗಲೂ ನಷ್ಟದಲ್ಲಿ ಇರುವುದರಿಂದ ಸಹಾಯ ಏಕೆ ಕೊಡಬೇಕೆಂದು ವಾಣಿಜ್ಯೋದ್ಯಮ ಬ್ಯಾಂಕುಗಳು ಕೇಳ ಬಹುದು. ಈ ಅಪಾಯಗಳನ್ನು ತಪ್ಪಿಸಿಕೊಂಡು ಹೇಗೆ ನಷ್ಟದಿಂದ ಹೊರಬರಬಹುದೆಂಬುದನ್ನು ಕಾರ್ಯರೂಪಕ್ಕೆ ತರಲು ನಾಲ್ಕು ತಿಂಗಳ ನಂತರ ಅದರಿಂದ ವರದಿ ಬಂದಮೇಲೆ ಸೂಕ್ತವಾಗಿರ ತಕ್ಕಂಥ ನಿರ್ಣಯವನ್ನು ತೆಗೆದುಕೊಳ್ಳುವಾಗ ಸದನದ ಎಲ್ಲಾ ಸದಸ್ಯರ ಸಹಕಾರ ಮತ್ತು ಅಭಿ ಪ್ರಾಯಗಳನ್ನು ತೆಗೆದುಕೊಳ್ಳುತ್ತೇವೆ. ಇದರಲ್ಲಿ ಮುಂಚೆ ಯಾವುದೇ ತೀರ್ಮಾನವನ್ನು ತೆಗೆದು ಕೊಳ್ಳುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ಸರ್ಕಾರ ಅಧಿಕಾರ ವಿಕೇಂದ್ರೀಕರಣಕ್ಕೆ ಬದ್ಧವಾಗಿದೆ. ಮಾನ್ಯ ಕೃಷ್ಣನ್ ಅವರು ಈ ಅಭಿಪ್ರಾಯಕ್ಕೆ ಹೇಗೆ ಬದ್ಧರಾಗಿರುತ್ತಾರೋ ಗೊತ್ತಿಲ್ಲ. ಅವರ ಅಭಿಪ್ರಾಯ ಬೇರೆ ಇರಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ವಿಕೇಂದ್ರೀಕರಣಕ್ಕೆ ನನ್ನ ವಿರೋಧ ಇಲ್ಲ. ಆದರೆ ನೀವು ಹೇಳಿದ ವಿಕೇಂದ್ರೀಕರಣಕ್ಕೆ ಸ್ಪಷ್ಟತೆ ಬೇಕು. ಬೇರೆ ಕಾರ್ಪೊರೇಷನ್ನಿನ ತರಹ; ತಮಿಳುನಾಡಿನ ತರಹ ಮಾಡಿದರೆ ತೊಡಕು ಆಗಬಹುದು.

ಶ್ರೀ ಎಂ. ಪಿ. ಪ್ರಕಾಶ್.—ತಮಿಳುನಾಡಿನಲ್ಲಿ ಕೂಡ ಎರಡು ವಿಭಾಗಗಳಲ್ಲಿ ಲಾಭ ಆಗಿದೆಯೇ ಹೊರತು ಉಳಿದವು ಲಾಭ ಮಾಡಿಕೊಳ್ಳುತ್ತಿಲ್ಲ. ಆದರೆ ಕೆಲವು ಅಂಶಗಳನ್ನು ಪರಿಗಣಿಸಬೇಕಾಗಿದೆ. ಅಲ್ಲಿ ಬಸ್ಸುಗಳನ್ನು ಹೊರತರುವಾಗ ಶುಚಿಯಾಗಿ ಇಟ್ಟುಕೊಳ್ಳುತ್ತಾರೆ. ಅಲ್ಲಿಯ ನಿರ್ವಾಹಕರು ಪ್ರಯಾಣಿಕರೊಡನೆ ಸೌಜನ್ಯಪೂರ್ಣವಾಗಿ ವರ್ತಿಸುತ್ತಾರೆ. ಆದ್ದರಿಂದ ವರದಿ ಹೇಗೆ ಬರುತ್ತದೆ ಎಂಬುದನ್ನು ನೋಡೋಣ. ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಈ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಉಪಾಧ್ಯಕ್ಷರೇ, ಹಿಂದೆ ಗ್ರಾಮಾಂತರ ಸಾರಿಗೆ ವ್ಯವಸ್ಥೆಯನ್ನು ಮಾಡಿಯೆಂದು ಸಲಹೆ ಕೊಟ್ಟಿದ್ದರು. ಅನೇಕರು ಬಣ್ಣ ಬದಲಾವಣೆ ಮಾಡಬೇಕೆಂದು ಹೇಳಿದ್ದರು. ಕೆಂಪು ಬಣ್ಣದ ಬದಲು ಬೇರೆ ಬಣ್ಣ ಇರಬೇಕೆಂದು ಸೂಚಿಸಿದ್ದರು. ಕೆಂಪು ಬಣ್ಣದ ಬದಲು ಹಸಿರು ಬಣ್ಣ, ರೈತರ ಸಮೃದ್ಧಿಯ ಸಂಕೇತವೆಂದು ಧಾರವಾಡ ಜಿಲ್ಲೆಯ ೧೭ ತಾಲ್ಲೂಕುಗಳಲ್ಲಿ ಮತ್ತು ಬಳ್ಳಾರಿ ಜಿಲ್ಲೆಯ ಎಂಟು ತಾಲ್ಲೂಕುಗಳಲ್ಲಿ ಗ್ರಾಮಾಂತರ ಸಾರಿಗೆ ಬಸ್ಸುಗಳನ್ನು ಓಡಿಸುತ್ತಿದ್ದೇವೆ. ಇವುಗಳು ಲಾಭ ದಾಯಕವಾಗಿ ನಡೆಯುತ್ತಿಲ್ಲ. ಇವುಗಳ ಇಡೀ ಆದಾಯ ಬಹುಶಃ ಒಂದು ಕಿಲೋಮೀಟರ್‌ಗೆ ಎರಡು ರೂಪಾಯಿ ಎಪ್ಪತ್ತು ಪೈಸೆ. ಆದರೆ ನಮ್ಮ ಪರಿಕಲ್ಪನೆ ಇರತಕ್ಕದ್ದು ಜಾತ್ರೆ, ಸಂತೆ ಸಮಯದಲ್ಲಿ ಹೆಚ್ಚು ಟ್ರಿಪ್‌ಗಳನ್ನು ಹಾಕಲು ಹೋಬಳಿ ಮಟ್ಟದಲ್ಲಿ ಎರಡು ಬಸ್ಸು ಇರಬೇಕೆಂದು. ಈ ಹಸಿರು ಬಸ್ಸುಗಳು ಲಾಭದಾಯಕವಾಗಿ ನಡೆಯುತ್ತಿಲ್ಲ ಆದರೆ ಈ ಬಸ್ಸುಗಳು ಬಹಳ ಜನ ಪ್ರಿಯತೆಯನ್ನು ಪಡೆದಿವೆ. ಹಳ್ಳಿಯ ಜನರು ಈ ಬಸ್ಸುಗಳನ್ನು ಸಂತೋಷದಿಂದ ಸ್ವಾಗತ ಮಾಡಿದ್ದಾರೆಂದು ಹೇಳಿದರೆ ಪ್ರಾಯಶಃ ಇಲ್ಲಿ ಲಾಭನಷ್ಟವನ್ನು ನೋಡುವುದಕ್ಕಿಂತ ಜನರ ಅನುಕೂಲವನ್ನು ಪರಿಗಣಿಸಬೇಕಾಗುತ್ತದೆ. ಇಡೀ ಕರ್ನಾಟಕದಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಈ ವ್ಯವಸ್ಥೆಯನ್ನು ತರ ಬೇಕೆಂಬ ಯೋಚನೆ ನಮಗೆ ಇದೆ. ಮತ್ತು ನಿರ್ವಾಹಕರಿಗೆ ತರಬೇತಿ ಕೊಡಬೇಕು. ಚಾಲಕರಿಗೆ ಮತ್ತು ನಿರ್ವಾಹಕರಿಗೆ ಕೊಡುವ ಶಿಕ್ಷಣ ಸರಿಯಾಗಿಲ್ಲವೆಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಮಾನ್ಯ ಸದಸ್ಯರೊಬ್ಬರು ವಿದ್ಯಾವಂತರಾಗಿರತಕ್ಕಂಥವರೇ ಈ ದೇಶದಲ್ಲಿ ತೊಂದರೆ ಮಾಡುತ್ತಾರೆ ಎಂದು ಹೇಳಿದರು. ಹಾಗೆ ನೋಡಿದರೆ ತರಬೇತಿ ನೀಡುವುದಕ್ಕಿಂತಲೂ ನಾಗರಿಕವಾಗಿ ಇರತಕ್ಕಂಥ ಸಂಸ್ಕೃತಿಯನ್ನು ಬೆಳೆಸಿಕೊಂಡರೆ, ಸಾಮಾಜಿಕ ವ್ಯವಸ್ಥೆಯಲ್ಲಿ ಯೋಗ್ಯ ರೀತಿಯ ದೃಷ್ಟಿಕೋನ ಇಟ್ಟುಕೊಂಡು ಅದರ ಮೂಲಕವಾಗಿ ಬೆಳೆಯಬೇಕೇ ವಿನಹ, ತರಬೇತಿಯನ್ನು ಕೊಟ್ಟರೆ ಅವರನ್ನು ಬುದ್ಧಿವಂತರನ್ನಾಗಿ ಮಾಡಬಹುದು. ಆದರೆ ಅವರನ್ನು ಹಿಂಸಾಚಾರಿಗಳಾಗಿ ಕುಟಿಲರನ್ನಾಗಿ ಮಾಡು ವಂಥ ಅಪಾಯ ಕೂಡ ಇದೆ. ತರಬೇತಿಯಿಂದ ಎಷ್ಟು ಮಾತ್ರಕ್ಕೆ ಅವರ ಪ್ರವೃತ್ತಿಯಲ್ಲಿ ಸುಧಾರಣೆ ಯಾಗುತ್ತದೆ ಎನ್ನುವುದು ಬೇರೆ ವಿಚಾರ. ಆದರೆ ಅವರು ತಮ್ಮ ಕೆಲಸದಲ್ಲಿ ದಕ್ಷರಾಗುತ್ತಾರೆ, ಮತ್ತು ಇದರಿಂದ ಅಪಘಾತಗಳನ್ನು ತಪ್ಪಿಸುವುದಕ್ಕೆ ಸಾಧ್ಯವಾಗಬಹುದು ಎಂಬ ಕಾರಣದಿಂದ ಅವರಿಗೆ ತರಬೇತಿ ನೀಡುವುದಕ್ಕಾಗಿ ಅರವತ್ತು ಲಕ್ಷ ರೂಪಾಯಿಗಳನ್ನು ಮೂರು ವರ್ಷಗಳ ಕಾಲ ಖರ್ಚು ಮಾಡುವಂತಹ ರೀತಿಯಲ್ಲಿ ದೇಶದಲ್ಲೇ ಒಂದು ಹೊಸಬಗೆಯ ನಿರ್ವಾಹಕರಿಗೆ ತರಬೇತಿ ಕೇಂದ್ರವನ್ನು ಹಗರಿಬೊಮ್ಮನ ಹಳ್ಳಿಯಲ್ಲಿ ಇದೇ ಏಪ್ರಿಲ್ ತಿಂಗಳಿನಲ್ಲಿ ಇದನ್ನು ಪ್ರಾರಂಭ ಮಾಡು ತ್ತೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

೭-೦೦ ಪಿ.ಎಂ.

ಇದರಲ್ಲಿ ಸದೃಢವಾಗಿರತಕ್ಕಂಥ, ವಿದ್ಯಾವಂತರಾಗಿರತಕ್ಕಂಥ ಯುವಕರನ್ನು ಪ್ರಪ್ರಥಮವಾಗಿ ತೆಗೆದುಕೊಂಡಿದ್ದೇವೆ. ನಿಗಮದವರೇ ಅವರ ಖರ್ಚುವೆಚ್ಚಗಳನ್ನು ಕೊಟ್ಟು ಅವರಿಗೆ ತರಬೇತಿ ಕೊಡುತ್ತಾರೆ. ಈ ವರ್ಷ ರಸ್ತೆ ಸಾರಿಗೆ ಸಂಸ್ಥೆ ಈ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದೆ.

ಇನ್ನೊಂದು ಪ್ರಾಮುಖ್ಯವಾದ ವಿಷಯ ಏನೆಂದರೆ ನಮ್ಮ ಬಸ್ಸುಗಳಿಗೆ ಬಾಡಿಯನ್ನು ಇಲ್ಲೇ ಏತಕ್ಕೆ ಕಟ್ಟುವುದಿಲ್ಲ ಎಂದು ಒಂದು ವರ್ಷದಿಂದಲೂ ಕೇಳುತ್ತಿದ್ದರು. ನಾವು ಇದಕ್ಕೆ ಸೂಕ್ತವಾದ ಕಾರ್ಯಕ್ರಮವನ್ನು ಈ ವರ್ಷ ಏಪ್ರಿಲ್‌ನಿಂದಲೇ ಜಾರಿಗೆ ತರುತ್ತೇವೆ. ಇದಕ್ಕೆ ಸಂಬಂಧಪಟ್ಟ ಯಂತ್ರಗಳನ್ನೂ ಸಹ ಮತ್ತು ಇವಕ್ಕೆ ಸಂಬಂಧಪಟ್ಟ ಸಿಬ್ಬಂದಿಯನ್ನೂ ಸಹ ತೆಗೆದುಕೊಂಡಿದ್ದೇವೆ. ಇದಕ್ಕಾಗಿ ಈ ಸಂಸ್ಥೆಯಲ್ಲಿರತಕ್ಕಂಥ ಮೂರನೇ ಎರಡು ಭಾಗದ ಸಿಬ್ಬಂದಿಯನ್ನು ತೆಗೆದುಕೊಂಡು ಇನ್ನು ಉಳಿದ ಮೂರನೇ ಒಂದು ಭಾಗ ಸಿಬ್ಬಂದಿಯನ್ನು ಬೇರೆ ಬೇರೆ ರಸ್ತೆ ಸಾರಿಗೆ ನಿಗಮದಿಂದ ನೇಮಕ ಮಾಡಿಕೊಳ್ಳುತ್ತೇವೆ.

ಒಬ್ಬ ಮಾನ್ಯ ಸದಸ್ಯರು.—ಹುಬ್ಬಳ್ಳಿಯ ವರ್ಕ್‌ಷಾಪ್ ಬಗ್ಗೆ ಏನು ಮಾಡುತ್ತೀರಾ ?

ಶ್ರೀ ಎಂ.ಪಿ. ಪ್ರಕಾಶ್.—ಬೆಂಗಳೂರು ಮತ್ತು ಹುಬ್ಬಳ್ಳಿ ಈ ಎರಡು ವಿಭಾಗದಲ್ಲೂ ಸಹ ಫೇಬ್ರಿಕೇಟೆಡ್ ಐಟಂಸ್ ಅನ್ನು ತೆಗೆದುಕೊಂಡು ಹೋಗಿ ಬಸ್ ಬಾಡಿಯನ್ನು ಬಿಲ್ಟ್ ಮಾಡುತ್ತೇವೆ. ತಿಂಗಳಿಗೆ ೫೦ ಬಾಡಿಯಂತೆ ಬಿಲ್ಟ್ ಮಾಡುವ ವ್ಯವಸ್ಥೆ ಮಾಡಿದರೆ ಒಂದು ವರ್ಷಕ್ಕೆ ೬೦೦ ಬಸ್ಸುಗಳಿಗೆ ಬಾಡಿ ಬಿಲ್ಟ್ ಮಾಡಿದ ಹಾಗಾಯಿತು. ಈ ಒಂದು ಗುರಿಯನ್ನು ನಾವು ಮುಟ್ಟುವುದಾದರೆ ಸುಮಾರು ಒಂದು ಬಸ್ಸಿಗೆ ೧೫ ಸಾವಿರ ರೂಪಾಯಿನವರೆಗೆ ಉಳಿತಾಯವಾಗುತ್ತದೆ. ಬೇರೆ ಖಾಸಗಿ ಮಾಲೀಕರಿಗೆ ಈಗ ಏನು ಕೊಡುತ್ತಿದ್ದೆವೋ ಅದನ್ನೂ ಸಹ ಕಡಿಮೆ ಮಾಡಿದರೆ ನಮಗೆ ಓವರ್ ಹೆಡ್ ಛಾರ್ಜಸ್ ವಾಣಿಜ್ಯ ತೆರಿಗೆ ಎಲ್ಲಾ ಸೇರಿದರೂ ಕೂಡ ಒಂದು ಬಸ್ಸಿಗೆ ೧೨ ರಿಂದ ೧೫ ಸಾವಿರ ರೂಪಾಯಿನವರೆಗೆ ಉಳಿತಾಯವಾದರೆ ೬೦೦ ಬಸ್ಸುಗಳಿಗೆ ಎಷ್ಟೋ ಲಕ್ಷಾಂತರ ರೂಪಾಯಿ ಉಳಿತಾಯವಾಗುತ್ತದೆ. ಈ ಒಂದು ಕಾರ್ಯಕ್ರಮವನ್ನು ಬರುವ ಏಪ್ರಿಲ್ ತಿಂಗಳಿನಿಂದ ಪ್ರಾರಂಭ ಮಾಡುತ್ತೇವೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಡಾ।। ಸಂಗಮೇಶ್ವರ್ ಸರ್ದಾರ್.—ರಾಯಚೂರು ಭಾಗದ ರಾಷ್ಟ್ರೀಕರಣದ ಬಗ್ಗೆ ಹೇಳಲಿಲ್ಲ.

ಶ್ರೀ ಎಂ. ಪಿ. ಪ್ರಕಾಶ್.—ಇನ್ನು ರಾಯಚೂರು ಕೊಪ್ಪಳದ ಭಾಗದ ರಾಷ್ಟ್ರೀಕರಣ ದಬಗ್ಗೆ ಹೇಳುವುದಾದರೆ ಈ ಬಗ್ಗೆ ೨೭-೧-೮೪ರಲ್ಲಿಕ್ಕೆ ಒಂದು ಸಭೆಕರೆದಿದ್ದೆ. ಅದನ್ನು ೩೦-೩-೮೪ರಲ್ಲಿಕ್ಕೆ ಮುಂದೂಡಿದೆ. ಇನ್ನೊಂದು ಪ್ರಮುಖವಾದ ವಿಷಯ ಏನೆಂದರೆ ಹಿಂದೆ ಕಾಂಟ್ರಾಕ್ಟ್ ಕ್ಯಾರೇಜ್‌ನಲ್ಲಿ ರತಕ್ಕಂಥ ನೌಕರರನ್ನು ಈ ಸಾರಿಗೆಸಂಸ್ಥೆಗೆ ನೇಮಕ ಮಾಡುವುದರ ವಿಷಯದಲ್ಲಿ ಬಹಳ ಜನ ಕೋರ್ಟಿಗೆ ಹೋಗಿದ್ದರು. ಈ ಬಗ್ಗೆ ಹೊರಡಿಸಿದಂಥ ಆರ್ಡಿನೆನ್ಸ್‌ನಲ್ಲಿ ಒಂದು ಬಸ್ಸಿಗೆ ೮ ಜನ ಇರಬೇಕುಎಂದು ಇತ್ತು. ಮತ್ತೆ ಸುಪ್ರೀಂ ಕೋರ್ಟಿನವರೆಗೂ ಆ ಕೇಸ್ ಹೋಯಿತು. ಸುಪ್ರೀಂ ಹೈ ಕೋರ್ಟಿನ ಆರ್ಡರ್ ಪ್ರಕಾರ ಒಂದು ಬಸ್ಸಿಗೆ ೪.೬೫ ಇರಬೇಕು ಎಂದು ಆಯಿತು. ನಂತರ ಸರ್ಕಾರದವರು ಆಲೋಚನೆ ಮಾಡಿ ಮಾನವೀಯತೆ ದೃಷ್ಟಿಯಿಂದ ಇವರ ವಯೋಮಿತಿಯನ್ನು ಸಡಿಲಿಸಿ ನಿಷ್ಪಕ್ಷಪಾತವಾಗಿ ಒಟ್ಟು ೭೭೮ ಜನರನ್ನು ನೇಮಕ ಮಾಡಿಕೊಂಡಿದ್ದೇವೆ. ಇದರಲ್ಲಿ ಹೆಲ್ಪರ್ಸ್, ಡ್ರೈವರ್ಸ್ ಮತ್ತು ಕಂಡಕ್ಟರ್ಸ್ ಎಲ್ಲಾ ಸೇರಿದ್ದಾರೆ. ಇನ್ನು ಅನೇಕ ಮಾನ್ಯ ಸದಸ್ಯರುಗಳು ಬಸ್ ನಿಲ್ದಾಣದ ಶುಚಿತ್ವದ ಬಗ್ಗೆ ಹೇಳಿದ್ದಾರೆ.

ಶ್ರೀ ಎಂ.ಎಸ್. ಕೃಷ್ಣನ್. – ಸ್ವಾಮಿ, ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ ಮಾನ್ಯ ಪ್ರಕಾಶ್‌ರವರು ಅವರ ಮೇಲೆ ಕರುಣೆ ಇಟ್ಟು, ಮಾನವೀಯತೆ ದೃಷ್ಟಿಯಿಂದ ನೋಡಿ ೭೭೮ ಜನರನ್ನು ಕೆಲಸಕ್ಕೆ ನೇಮಿಸಿಕೊಂಡರು. ಹಾಗೆಯೇ ಮಾನ್ಯ ವಿದ್ಯಾ ಮಂತ್ರಿಗಳಾದ ಶ್ರೀಮಾನ್ ರಾಚಯ್ಯನವರೂ ಕೂಡ ಕರುಣೆ ಇಟ್ಟು ೭ ಸಾವಿರ ಜನ ಉಪಾಧ್ಯಾಯರನ್ನು ನೇಮಕ ಮಾಡಿ ಕೆಲಸಕೊಟ್ಟರೆ ಒಳ್ಳೆಯದು.

ಶ್ರೀ ಬಿ. ರಾಚಯ್ಯ.—ಅದರಲ್ಲಿ ರಿಸರ್ವೇಷನ್ ಮಾಡಿ ಕೊಡಬೇಕಾಗುತ್ತದೆ.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಕೃಷ್ಣನ್‌ರವರು ಹೇಳಿದ ಹಾಗೆ ಮಾನವೀಯತೆ ದೃಷ್ಟಿಯಿಂದ ನಾನೇನೋ ಕೊಟ್ಟಿದ್ದೇನೆ. ಹಾಗೆಯೇ ಬೇರೆ ಬೇರೆ ಇಲಾಖೆಯವರೂ ಸಹ ಮಾನವೀಯತೆ ದೃಷ್ಟಿಯಿಂದ ಕೊಡುವುದಾದರೆ ಅದರಲ್ಲಿ ಅವರು ಹೇಳಿದ ಹಾಗೆ ಮೀಸಲಾತಿ ಕ್ರಮ ಅಡ್ಡ ಬರುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳಿಗೆ ಮೀಸಲಾತಿ ಕೊಡಬೇಕೆನ್ನುವುದು ಗೊತ್ತಿದೆ.

ಡಾ|| ವಿ.ಎಸ್. ಆಚಾರ್.—ಮೀಸಲಾತಿಯನ್ನು ಸಹ ಮಾನವೀಯತೆ ಅಲ್ಲವೇ ?

ಶ್ರೀ ಎಂ.ಪಿ. ಪ್ರಕಾಶ್.—ಸ್ಥಳೀಯ ಅಭ್ಯರ್ಥಿಗಳನ್ನು ತೆಗೆದುಕೊಳ್ಳುವಾಗ ನೇಮಕ ಮಾಡುವಾಗ ಅದರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಬ್ಯಾಕ್‌ವರ್ಡ್ ಕ್ಲಾಸ್ ಇವರಿಗೆ ಇಂತಿಷ್ಟು ಕೊಡಬೇಕು ಎನ್ನುವ ಉದ್ದೇಶದಿಂದಲೇ ಈ ಮೀಸಲಾತಿಯನ್ನು ಜಾರಿಗೆ ತಂದಿರುವ ಉದ್ದೇಶವಾಗಿದೆ. ಈ ಒಂದು ಮೀಸಲಾತಿಯನ್ನು ಮಾನವೀಯತೆ ದೃಷ್ಟಿಯಿಂದಲೇ ಮಾಡಿರುವುದು.

ಶ್ರೀ ಕೆ. ಬಿ. ಮಲ್ಲಪ್ಪ.—ಮಾನವೀಯತೆ ದೃಷ್ಟಿಯಿಂದ ಅವರಿಗೆ ನಿವೃತ್ತಿ ವೇತನವನ್ನು ಜಾರಿಗೆ ತರುತ್ತೀರಾ ?

ಶ್ರೀ ಎಂ.ಪಿ. ಪ್ರಕಾಶ್.—ನಿವೃತ್ತಿ ವೇತನದ ಪ್ರಶ್ನೆ ಇವರಲ್ಲಿ ಬರುವುದಿಲ್ಲ. ಯಾವ ನಿಗಮದಲ್ಲೇ ಆಗಲಿ, ಯಾವ ಕಾರ್ಖಾನೆಯಲ್ಲೇ ಆಗಲಿ ಅವರನ್ನು ಕೆಲಸಕ್ಕೆ ತೆಗೆದುಕೊಂಡಾಗ ನಿವೃತ್ತಿ ವೇತನ ಕೊಡುವುದಿಲ್ಲ. ಆದರೆ ಇದರಲ್ಲಿರುವುದು ಹೇಗೆ ಎಂದರೆ ಆ ನೌಕರ ಆರು ತಿಂಗಳೊಳಗಾಗಿ ಏನಾದರೂ ಅಸು ನೀಗಿದರೆ ೫೦ ಸಾವಿರ ರೂಪಾಯಿನವರೆಗೆ ಪರಿಹಾರ ಸಿಕ್ಕುತ್ತದೆ. ಹೇಗೆಂದರೆ ಕಲ್ಯಾಣ ನಿಧಿಯಿಂದ ೨೦ ಸಾವಿರ ರೂಪಾಯಿ, ಡೆತ್ ರಿಲೀಫ್ ಫಂಡ್‌ನಿಂದ ೨೦ ಸಾವಿರ ರೂಪಾಯಿ ಇನ್ನೊಂದು ಪರಿಹಾರದಿಂದ ೧೦ ಸಾವಿರ ರೂಪಾಯಿ ಹೀಗೆ ೫೦ ಸಾವಿರ ರೂಪಾಯಿನವರೆಗೆ ಬರುತ್ತದೆ. ತಮಗೆ ಹೇಳಬೇಕಾದರೆ ಅನೇಕ ಸಂದರ್ಭದಲ್ಲಿ ಡ್ರೈವರ್‌ಗಳು ರೀಜನಲ್ ಮ್ಯಾನೇಜರ್‌ಗಿಂತಲೂ ಹೆಚ್ಚು ಸಂಬಳ ಪಡೆಯುತ್ತಾರೆ. ಡ್ರೈವರ್ಸ್ ಓವರ್‌ಟೈಂ ಭತ್ಯಕ್ಕಾಗಿ ೫ ಕೋಟಿ ರೂಪಾಯಿಯಷ್ಟನ್ನು ಇಟ್ಟಿದ್ದೇವೆ. ಇತರೇ ಸರ್ಕಾರೀ ನೌಕರರಿಗಿಂತಲೂ ಇವರಿಗೆ ಹೆಚ್ಚು ಅನುಕೂಲ ಇದರಲ್ಲಿ ದೊರೆಯುತ್ತದೆ.

ಇನ್ನು ಬಸ್ ನಿಲ್ದಾಣದ ಶುಚಿತ್ವದ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಾನು ಸಾರಿಗೆ ಮಂತ್ರಿಯಾಗಿದ್ದರೂ ಸಹ ಎಲ್ಲವೂ ಶ್ಲಾಘನೀಯವಾದ ರೀತಿಯಲ್ಲಿ ನಡೆದಿದೆ ಎಂದು ಹೇಳುವುದಿಲ್ಲ. ಈ ಬಸ್ ನಿಲ್ದಾಣದಲ್ಲಿ ಕಸ ಗುಡಿಸುವುದು, ಶೌಚಗೃಹವನ್ನು ಚೊಕ್ಕಟ ಮಾಡುವುದು ಈ ಕೆಲಸಕ್ಕೆ ಕೆ.ಎಸ್.ಆರ್.ಟಿ.ಸಿ ಯಿಂದಲೇ ನೇಮಕ ಮಾಡಿಕೊಂಡಿದ್ದರೆ ಅನೇಕರಿಗೆ ಕೆಲಸ ಸಿಕ್ಕುತ್ತಿತ್ತು, ಅನೇಕರಿಗೆ ಕೆಲಸದ ಭದ್ರತೆ ಬರುತ್ತಿತ್ತು. ಆದರೆ ನಾವು ಹಾಗೆ ಮಾಡಲಿಲ್ಲ. ಇದನ್ನು ಕಾಂಟ್ರಾಕ್ಟ್ ರೀತಿಯಲ್ಲಿ ಗುತ್ತಿಗೆಗೆ ಕೊಟ್ಟೆವು. ಪ್ರಾರಂಭದಲ್ಲಿ ಹೀಗೆ ಕೊಡುವುದು ಬೇಡ ಎಂದು ಈ ಯೂನಿಯನ್‌ನವರು ಕಾರ್ಮಿಕ ಸಂಘದ ಪ್ರತಿಯೊಬ್ಬರೂ ಕೂಡ ಬಹಳ ಅಪೋಸ್ ಮಾಡಿದರು. ಆದರೂ ಸಹ ನಾವು ಅದಕ್ಕೆ ಮಣಿಯದೆ ಬೆಂಗಳೂರಿನ ಬಸ್ ನಿಲ್ದಾಣದ ಶೌಚಗೃಹದ ವ್ಯವಸ್ಥೆ ಮತ್ತು ಕಸ ಗುಡಿಸುವ ವ್ಯವಸ್ಥೆಯನ್ನು ಗುತ್ತಿಗೆಗೆ ಕೊಟ್ಟಮೇಲೆ ನಾವು ನೋಡಿದೆವು. ಈ ವ್ಯವಸ್ಥೆ ಈಗ ಬಹಳ ತೃಪ್ತಿಕರವಾಗಿ ಚೆನ್ನಾಗಿ ನಡೆದುಕೊಂಡು ಹೋಗುತ್ತಾ ಇದೆ.

ಇನ್ನು ಈ ಬಸ್ ದರವನ್ನು ಏನು ಏರಿಕೆ ಮಾಡಿದ್ದೇವೋ ಇದರ ಬಗ್ಗೆ ಸಾರ್ವಜನಿಕರಿಂದ ಈ ದರವನ್ನು ಕಡಿಮೆ ಮಾಡಬೇಕೆನ್ನುವ ಕೋರಿಕೆ ಬಂದ ಮೇಲೆ ಪ್ರತಿ ಸ್ಟೇಜ್‌ಗೂ ೧೦–೨೦ ಪೈಸೆಯ ವರೆಗೆ ಕಡಿಮೆ ಮಾಡಿದ್ದೇವೆ. ನಾನು ಮೊದಲೇ ಹೇಳಿದ ಹಾಗೆ ಈ ಬಸ್ ನಿಲ್ದಾಣದ ಶುಚಿತ್ವದ ಬಗ್ಗೆ ಗುತ್ತಿಗೆಗೆ ಏನು ಕೊಟ್ಟೆವೋ ಈಗ ಸಾರ್ವಜನಿಕರಿಂದಲೂ ಕೂಡ ಇದು ಒಳ್ಳೆಯದು ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅಲ್ಲದೆ ನಾವೇ ಸ್ವಂತವಾಗಿ ಪ್ರತಿ ತಿಂಗಳಿಗೆ ೫೦ ರಂತೆ ವರ್ಷಕ್ಕೆ ೬೦೦ ಬಸ್ಸುಗಳ ಬಾಡಿಯನ್ನು ಕಟ್ಟುವ ಕೆಲಸವನ್ನೂ ಕೂಡ ಬರುವ ಏಪ್ರಿಲ್ ತಿಂಗಳಿನಿಂದ ಪ್ರಾರಂಭ ಮಾಡುತ್ತೇವೆ ಎನ್ನುವ ಮಾತನ್ನೂ ಸಹ ಹೇಳಬಯಸುತ್ತೇನೆ.

ಇನ್ನು ಸ್ಟ್ರೈಕ್ಸ್ ಬಗ್ಗೆ ಹೇಳುವುದಾದರೆ ಯಾವುದೇ ರೀತಿಯಲ್ಲಿ ಮುನ್ಸೂಚನೆ ಕೊಡದೆ ಸತ್ಯಾಗ್ರಹ ಮಾಡುವುದೇ ಆಗಲಿ ಯಾವುದೇ ಚಳುವಳಿ ಆಗಲಿ ಇಡೀ ರಾಜ್ಯದ ಸಾರಿಗೆ ಸಂಸ್ಥೆಯನ್ನು ಗೊಂದಲ ಮಾಡುವಂಥ ಕೆಲಸ ಮಾಡಿದರೆ ಅದು ಅಪಾಯಕಾರಿ ಎನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಗಳೂ ಸಹ ಹೇಳಿದ್ದಾರೆ. ಇದರ ಬಗ್ಗೆ ಸ್ಪಷ್ಟೀಕರಣ ಕೊಟ್ಟಿದ್ದಾರೆ. ಈ ರೀತಿ ಮಾಡತಕ್ಕಂಥವರ ಬಗ್ಗೆ ನಾವು ಖಂಡನೆ ಮಾಡುವುದಲ್ಲದೆ ಕಾರ್ಮಿಕ ನಾಯಕರಲ್ಲಿ ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ ಇಂಥಾ ಒಂದು ಪರಿಸ್ಥಿತಿಗೆ, ಇಂಥಾ ಒಂದು ಮುತ್ಸದ್ದಿತನಕ್ಕೆ ಅವಕಾಶ ಕೊಡಬೇಡಿ ಎಂದು ಹೇಳುತ್ತೇನೆ. ಅಲ್ಲದೆ ಚುನಾವಣೆಯಲ್ಲಿ ರಾಜಕಾರಣಿಗಳು ಈ ಕಾರ್ಮಿಕ ಮುಖಂಡರನ್ನು ಅನಿವಾರ್ಯವಾಗಿ ಯಾವ ರೀತಿಯಾಗಿ ಉಪಯೋಗಿಸಿ ಕೊಳ್ಳುತ್ತಾರೋ ಎನ್ನುವುದನ್ನು ಹೇಳುವುದಕ್ಕಾಗುವುದಿಲ್ಲ. ಈ ಮಧ್ಯೆ ನಿಷ್ಠೂರವಾದ ಸತ್ಯ ಹೇಳುವಂತಹ ಸಂದರ್ಭದಲ್ಲಿ ಕೆಲವೊಂದು ಪಟ್ಟಭದ್ರ ಹಿತಾಸಕ್ತಿಗಳು ಇವುಗಳನ್ನು ದಾರಿ ತಪ್ಪಿಸುವಂತಹ ಸಂದರ್ಭವಿರುವುದರಿಂದ ಬಹಳ ಮುತ್ಸದ್ದಿತನದಿಂದ ಹೋಗಬೇಕಾಗಿದೆ. ಮುಂದೆ ಈ ರೀತಿ ಆಗದ ಹಾಗೆ ನೋಡಿಕೊಳ್ಳಬೇಕಾಗಿದೆ. ಸರ್ಕಾರ ಖಂಡಿತವಾಗಿಯೂ ಕೂಡ ಕಾರ್ಮಿಕರಿಂದ ಜನಗಳಿಗೆ ತೊಂದರೆಯಾಗುವುದನ್ನು ಬಯಸುವುದಿಲ್ಲ. ಕಾರ್ಮಿಕರು ತಮ್ಮ ಸಾಂಕೇತಿಕ ಶಕ್ತಿಯನ್ನು ಉಪಯೋಗಿಸಿಕೊಂಡು ಮಾಡತಕ್ಕ ಈ ಪ್ರಯತ್ನ ಏನಿದೆ ಅದು ಖಂಡನೀಯ. ಅವರು ಇಂತಹ ಪ್ರಯತ್ನವನ್ನು ನಾನು ವಿರೋಧಿಸುತ್ತೇನೆ. ಇದಕ್ಕೆ ಕಾರ್ಮಿಕ ಮುಖಂಡರು ಸಹಕಾರ ಕೊಡುತ್ತಾರೆಂದು ತಿಳಿದುಕೊಂಡಿದ್ದೇನೆ.

ಶ್ರೀ ಕೆ. ಮಲ್ಲಪ್ಪ.—ಅಗತ್ಯ ಸೇವಾ ನಿಯಮದ ಪ್ರಕಾರ ಕ್ರಮ ತೆಗೆದುಕೊಳ್ಳಬಹುದು. ಈ ರೀತಿ ಕಾರ್ಮಿಕರು ಮಾಡುವುದರಿಂದ ಜನಗಳಿಗೆ ಬಹಳ ತೊಂದರೆಯಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್.—ಅಗತ್ಯ ಸೇವಾ ನಿಯಮ ಈಗ ಇದೆ. ಆದರೆ ಬಂದಿರತಕ್ಕ ಪ್ರಶ್ನೆ ಇಷ್ಟೆ, ಯಾವುದೇ ಒಂದು ವ್ಯವಸ್ಥೆಯಲ್ಲಿ ಸಾಂಘಿಕೃತ ಶಕ್ತಿಯನ್ನು ಮುರಿಯುವ ಪ್ರಯತ್ನ ಮಾಡಿದರೆ ಹಾಗೆ ಅಧಿಕಾರ ಮಾಡಲಿಕ್ಕೆ ಸಾಧ್ಯವೇ ಎನ್ನುವುದನ್ನು ಯೋಚನೆ ಮಾಡಬೇಕು. ಎರಡನೆಯದಾಗಿ ನಮ್ಮದೇ ಆಗಿರತಕ್ಕ ಕಾರ್ಮಿಕರ ಜೊತೆಗೆ ನಾವು ಸಂಘರ್ಷಕ್ಕೆ ಇಳಿದರೆ, ಮಿಲಿಟರಿ ಡ್ರೈವರ್ಸ್‌ಗಳನ್ನು ತರಬೇಕಾಗುತ್ತದೆ, ಆ ಸಂದರ್ಭದಲ್ಲಿ ಕಾನೂನು ಪರಿಸ್ಥಿತಿ ಹೇಗಿರುತ್ತದೆ? ಮಿಲಿಟರಿ ಡ್ರೈವರ್ಸ್‌ಗಳು ಬೇಕಾದರೆ ನಾವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳಬೇಕಾಗುತ್ತದೆ. ಕೇಂದ್ರ ಸರ್ಕಾರದ ಜೊತೆಯಲ್ಲಿ ಮಾತುಕತೆ ನಡೆಸಿ ನಾವು ಡ್ರೈವರ್ಸ್‌ಗಳನ್ನು ಪಡೆದುಕೊಳ್ಳುವುದರೊಳಗೆ ಇಲ್ಲಿಯ ಪರಿಸ್ಥಿತಿ ಹದಗೆಟ್ಟಿರುತ್ತದೆ. ಇಲ್ಲಿ ಅವರು ಸತ್ಯಾಗ್ರಹ ಮಾಡುತ್ತಾರೆ. ಪ್ರಕ್ಷುಬ್ಧ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಅವರು ಇಲ್ಲಿ ಏನಾದರೂ ಮುಷ್ಕರ ಮಾಡಿದ ತಕ್ಷಣ ನಾವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳಬೇಕಾಗುತ್ತದೆ. ನಾವು ಪದೇ ಪದೇ ಸೈನಿಕ ಚಾಲಕರನ್ನು ತರಲಿಕ್ಕೆ ಆಗುವುದಿಲ್ಲ, ಇಂತಹ ಕೆಲವೊಂದು ವಾಸ್ತವಿಕ ಕಷ್ಟಗಳು ಇರುವುದರಿಂದ ನಾವು ಕಾನೂನಿನ ಚೌಕಟ್ಟಿನೊಳಗಡೆ ಬೇರೆ ವ್ಯವಸ್ಥೆ ಮಾಡಲಿಕ್ಕೆ ಆಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಕಾರ್ಮಿಕರು ಮೂಲಭೂತವಾಗಿ ಏತಕ್ಕೋಸ್ಕರ ಸಾಂಘೀಕ ಶಕ್ತಿಯನ್ನು ಉಪಯೋಗಿಸುತ್ತಾರೆ. ಮುಷ್ಕರ ಮಾಡುತ್ತಾರೆ, ಕಾರ್ಮಿಕರು ಕೆಲವು ವಿಷಯಗಳನ್ನು ಹೇಳಿದ್ದಾರೆ ಅದರ ಬಗ್ಗೆ ತಾವು ಗಮನಹರಿಸಬೇಕೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್.—ಸನ್ಮಾನ್ಯ ಉಪಾಧ್ಯಕ್ಷರೆ, ಮೂಲಭೂತವಾಗಿ ಅನೇಕ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ ಎನ್ನುವ ಮಾತನ್ನು ನಾನು ಒಪ್ಪುತ್ತೇನೆ. ಸಾಮಾಜಿಕ ವ್ಯವಸ್ಥೆಯಲ್ಲಿ ಒಂದು ನಿಯಮಗಳನ್ನು ನಾವು ಒಪ್ಪಿದ್ದೇವೆ. ಈ ಪ್ರಜಾಪ್ರಭುತ್ವದ ನಿಯಮಗಳಲ್ಲಿ ಅನೇಕ ಸಂದರ್ಭಗಳಲ್ಲಿ ಸಂಶಯವಾಗಿರತಕ್ಕ ಕೆಲವೊಂದು ನಿಯಮಗಳ ಒಳಗೆ ನಾವು ಬದುಕಬೇಕಾಗಿರುತ್ತದೆ. ಯಾವುದೋ ಮಾನಸಿಕ ಒತ್ತಡಕ್ಕೆ ಒಳಗಾಗಿ ಒಬ್ಬ ಪ್ರಯಾಣಿಕ ಒಬ್ಬ ನಿರ್ವಾಹಕನನ್ನು ಹೊಡೆದದ್ದು ನಡೆದಿರತಕ್ಕ ಘಟನೆ ಸಣ್ಣದು ಆಗಿದ್ದರೂ ಕೂಡ, ೩೨ ಲಕ್ಷ ಜನರನ್ನು ಒತ್ತೆ ಇಡತಕ್ಕ ಸಾಂಘೀಕಶಕ್ತಿ ಉಪಯೋಗವಾಗಿದೆ, ಈ ರೀತಿ ಉಲ್ಬಣವಾಗಿರತಕ್ಕ ರೋಗಕ್ಕೆ ಚಿಕಿತ್ಸೆ ಇದೆ. ಕಾನೂನಿನ ಚೌಕಟ್ಟಿನೊಳಗಡೆ ಏನೇ ತೊಂದರೆಯಾಗಿದ್ದರೂ ಅದನ್ನು ಪರಿಹಾರ ಮಾಡತಕ್ಕದ್ದು ಇದೆ. ಕೆಲವೊಂದು ಸದಸ್ಯರುಗಳನ್ನು ಬಿಟ್ಟರೆ, ಎಲ್ಲಾ ಸದಸ್ಯರು ಕೂಡ ಬಸ್ಸುಗಳು ಸರಿಯಾದ ವೇಳೆಗೆ ಬರುವುದಿಲ್ಲವೆಂದು ಹೇಳಿದ್ದಾರೆ. ಉದಾಹರಣೆಗೆ ಗೃಹಿಣಿ ಬೆಳಿಗ್ಗೆ ೬ ಗಂಟೆಗೆ ಕಾಫಿ, ೧೦ ಗಂಟೆಗೆ ಊಟೋಪಚಾರಮಾಡಿ ಆಥರಾತಿಥ್ಯ ತೋರುತ್ತಿದ್ದಾಳೆಂದು ಗಂಡನ ಮನಸ್ಸಿಗೆ ಬಂದರೆ ಆಕೆಯ ಬಗ್ಗೆ ಗಂಡ ಪ್ರತಿಕ್ರಿಯೆ ತೋರುವುದಿಲ್ಲ. ಕಾಫಿ ವೇಳೆಗೆ ಕಾಫಿ, ತಿಂಡಿ ವೇಳೆಗೆ ತಿಂಡಿ, ಊಟದ ವೇಳೆಗೆ ಊಟ ಬರದಿದ್ದರೆ

ಗಂಡನ ಕೋಪಕ್ಕೆ ಗೃಹಿಣಿ ಗುರಿಯಾಗಬೇಕಾಗುತ್ತದೆ. ಅದೇ ರೀತಿ ಬಸ್ಸುಗಳು ಸಹ ಸರಿಯಾದ ವೇಳೆಗೆ ಬಂದರೆ ಯಾರೂ ಕೂಡ ಮಾತನಾಡುವುದಿಲ್ಲ. ಸ್ವಲ್ಪ ತಡವಾದರೆ ಎಲ್ಲರೂ ಕೂಡ ಪ್ರತಿಕ್ರಿಯೆ ತೋರುತ್ತಾರೆ. ಬೆಳಿಗ್ಗೆ ೧೦ ಗಂಟೆಗೆ ಬರುವ ಬಸ್ಸು ೧೦ ಗಂಟೆಗೆ ಬಂದರೆ ಆ ಬಗ್ಗೆ ಯಾರೂ ಕೂಡ ಮಾತನಾಡುವುದಿಲ್ಲ. ಬೆಳಿಗ್ಗೆ ೧೦ ಗಂಟೆಗೆ ಬರುವ ಬಸ್ಸು ಸಾಯಂಕಾಲ ೪ ಗಂಟೆಗೆ ಬಂದರೆ ಎಲ್ಲರೂ ಕೂಡ ಮಾತನಾಡುತ್ತಾರೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ನೀವು ಸರಿಯಾಗಿ ಊಟೋಪಚಾರ ಮಾಡಿದರೆ ನಾವು ನಿಮ್ಮನ್ನು ಹೊಗಳುತ್ತೇವೆ.

ಡಾ|| ವಿ.ಎಸ್. ಆಚಾರ್ಯ.—ಮಾನ್ಯ ಸಾರಿಗೆ ಮಂತ್ರಿಗಳು ರಸವತ್ತಾಗಿ ಹೇಳುತ್ತಿದ್ದಾರೆ. ಬಹುಶಃ ಅವರಿಗೆ ಇನ್ನು ಹೆಚ್ಚು ಸಮಯ ಕೊಟ್ಟರೆ ಇನ್ನು ಬಹಳ ಚೆನ್ನಾಗಿ ಹೇಳುತ್ತಾರೆ.

ಶ್ರೀ ಎಂ.ಪಿ. ಪ್ರಕಾಶ್.—ಇನ್ನು ಹೆಚ್ಚು ಲಂಬಿಸದೆ ಕೆಲವಾರು ವಿಷಯಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ರಸ್ತೆ ಸಾರಿಗೆ ಸಂಸ್ಥೆ ನಾಲ್ಕನೇ ಗುಣಮಟ್ಟದಲ್ಲಿದೆ. ಹರಿಯಾಣ, ತಮಿಳುನಾಡು, ಗುಜರಾತ್ ಇವುಗಳನ್ನು ಬಿಟ್ಟರೆ ಗುಜರಾತ್ ರಸ್ತೆಸಾರಿಗೆ ಮತ್ತು ನಮ್ಮ ರಸ್ತೆ ಸಾರಿಗೆಯನ್ನು ಒಂದೇ ಕಂಸದಲ್ಲಿ ಹಾಕಿದ್ದಾರೆ. ನಾವು ನಾಲ್ಕನೇ ಮಟ್ಟದಲ್ಲಿದ್ದೇವೆ. ಗುಜರಾತ್, ತಮಿಳುನಾಡು, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ನಮ್ಮ ರಾಜ್ಯವನ್ನು ಹೋಲಿಸಿದರೆ ಅವರು ೬ ರಿಂದ ೧೦ ಸಾವಿರ ಸಂಖ್ಯೆ ಬಸ್ಸುಗಳನ್ನು ಇಟ್ಟುಕೊಂಡಿದ್ದಾರೆ. ಹರಿಯಾಣ ಮತ್ತು ಪಂಜಾಬ್ ರಾಜ್ಯಗಳು ೧ ಸಾವಿರ ಬಸ್ಸುಗಳನ್ನು ಇಟ್ಟುಕೊಂಡಿದ್ದಾರೆ. ಅವರು ನಮ್ಮ ಮಟ್ಟಕ್ಕೆ ಬರುವುದಕ್ಕೆ ಆಗುವುದಿಲ್ಲ. ಕಡಿಮೆ ಬಸ್ಸುಗಳನ್ನು ಇಟ್ಟುಕೊಂಡಿರತಕ್ಕವರು ದೊಡ್ಡ ಕೆಲಸವನ್ನು ಮಾಡಿದ್ದಾರೆಂದು ಹೇಳುವುದು ಸರಿಯಲ್ಲ. ಒಬ್ಬ ಮಾನ್ಯ ಸದಸ್ಯರು ಟಿಕೆಟ್‌ಗಳ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ಸಿ. ಒ. ಡಿ. ಎನ್‌ಕ್ವೈಯರಿ ನಡೆಯುತ್ತಿದೆ. ಈ ಹೊಸ ವರ್ಷದಲ್ಲಿ ಅನೇಕ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿರತಕ್ಕದ್ದು ಇದೆ. ಇನ್ನು ಬಸ್ಸಿನ ಪ್ರಯಾಣದ ದರವನ್ನು ಏರಿಸಿದರು ಒಮ್ಮೆಲೇ ಇಳಿಸಿದರೂ ಎನ್ನುವ ಟೀಕೆಗಳು ಬಂದಿವೆ. ಇದರ ಬಗ್ಗೆ ಪತ್ರಿಕೆಗಳಲ್ಲೂ ಸಹ ಕೆಲವು ವರದಿಗಳು ಬಂದಿವೆ. ೮ ಕೋಟಿ ರೂಪಾಯಿ ನಷ್ಟವಾಗುತ್ತದೆಂದು ಹೇಳಿರುತ್ತಾರೆ. ಕೇವಲ ೧೦ ಪೈಸೆ ಮಾತ್ರ ಇಳಿಸಲಾಗಿದೆ ಎನ್ನುವ ಅಗ್ರಲೇಖನಗಳು ಕೂಡ ಪತ್ರಿಕೆಗಳಲ್ಲಿ ಬಂದವು. ಇದರ ಬಗ್ಗೆ ನನ್ನ ಸ್ಪಷ್ಟ ನಿಲುವನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಒಬ್ಬ ಪ್ರಯಾಣಿಕನಿಗೆ ೧೦ ಪೈಸೆ ರಿಯಾಯಿತಿ ತೋರಿಸಿರತಕ್ಕದ್ದು ಯಃಕಶ್ಚಿತ್ ರೂಪಾಯಿಯ ಮೌಲ್ಯ ೧೭ ಪೈಸೆ ಇರುವುದರಿಂದ ೧೦ ಪೈಸೆ ರಿಯಾಯಿತಿ ತೋರಿಸಿರುವುದರಿಂದ ಎಷ್ಟು ಬೆಲೆ ಬಾಳುತ್ತದೆ ಎನ್ನುವುದನ್ನು ತಾವು ನೋಡಬೇಕಾಗುತ್ತದೆ. ಕರ್ನಾಟಕ ರಾಜ್ಯ ರಸ್ತೆಸಾರಿಗೆ ಸಂಸ್ಥೆ ಬಸ್ಸಿನಲ್ಲಿ ೩೨ ಲಕ್ಷ ಪ್ರಯಾಣಿಕರನ್ನು ಪ್ರತಿ ದಿವಸ ಕೊಂಡೊಯ್ಯುತ್ತೇವೆ. ಹೊರವಲಯದಲ್ಲಿರತಕ್ಕ ಬಸ್ಸುಗಳು ಸುಖಾಸೀನ ಬಸ್ಸುಗಳು, ಅರೆ ಸುಖಾಸೀನ ಬಸ್ಸುಗಳು ೧೦ ಲಕ್ಷ ಜನರನ್ನು ಕೊಂಡೊಯ್ಯುವುದನ್ನು ಬಿಟ್ಟರೆ, ೨೨ ಲಕ್ಷ ಪ್ರಯಾಣಿಕರನ್ನು ಕೊಂಡೊಯ್ಯತಕ್ಕ ಬಸ್ಸುಗಳಲ್ಲಿ ನಾವು ಮೊದಲನೆಯ ಹಂತದಲ್ಲಿ ೨೦ ಪೈಸೆ ರಿಯಾಯಿತಿಯನ್ನು ತೋರಿಸಿ ಎರಡನೆಯ ಹಂತದಲ್ಲಿ ೧೦ ಪೈಸೆ ರಿಯಾಯಿತಿ ತೋರಿಸಿರುವುದರಿಂದ ಎಲ್ಲಾ ಪ್ರಯಾಣಿಕರಿಗೂ ರಿಯಾಯಿತಿ ದೊರೆಯುತ್ತದೆ. ಅಂದರೆ ೨೦ ಲಕ್ಷ ಇಂಟು ೧೦ ಪೈಸೆ ಆದರೆ ಪ್ರತಿ ದಿವಸಕ್ಕೆ ೨ ಲಕ್ಷ ಆಗುತ್ತದೆ. ಅದನ್ನು ೩೬೫ ದಿವಸಗಳಿಗೆ ಹೆಚ್ಚಿಸಿದರೆ ಅದರಿಂದ ೭.೬೫ ಕೋಟಿ ನಷ್ಟವುಂಟಾಗುತ್ತದೆ. ಇದು ಸರಳ ಅಂಕಗಣಿತ. ಅವಷ್ಟುಮಟ್ಟಿಗೆ ನಾವು ಮೊದಲನೆಯ ಹಂತದಲ್ಲಿ ೨೦ ಪೈಸೆ ಕಡಿಮೆ ಮಾಡಿದ್ದೇವೆ. ನಗರದಲ್ಲಿರತಕ್ಕ ಪ್ರಯಾಣಿಕರಿಗೆ ಹೆಚ್ಚಿನ ರೀತಿಯಲ್ಲಿ ಅನುಕೂಲಗಳು ಆಗಿವೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ನಾನು ಇಷ್ಟು ಹೇಳಿದ ಮೇಲೆ ಮಾನ್ಯ ಸದಸ್ಯರುಗಳು ವಿವರಗಳನ್ನು ಕೇಳುವುದಕ್ಕೆ ಇಷ್ಟಪಡುವುದಿಲ್ಲವೆಂದು ಕಾಣುತ್ತದೆ.

ಡಾ|| ವಿ. ಎಸ್. ಆಚಾರ್ಯ.—ಏರಿಸುವಾಗ ದರಗಳನ್ನು ತುಂಬಾ ಏರಿಸಿ, ದರಗಳನ್ನು ಇಳಿಸುವಾಗ ೧೦ ಪೈಸೆ ಇಳಿಸಿದ್ದರಿಂದ ೭ ಕೋಟಿ ರೂಪಾಯಿ ನಷ್ಟವಾಯಿತು ಎಂದು ಹೇಳುತ್ತೀರಿ. ಏರಿಸಿದ್ದರಿಂದ ನಿಮಗೆ ಎಷ್ಟು ಕೋಟಿ ರೂಪಾಯಿ ಬರಬೇಕಾಗಿತ್ತು?

ಶ್ರೀ ಎಂ.ಪಿ. ಪ್ರಕಾಶ್.—ನಾವು ಏರಿಸಿರತಕ್ಕ ದರ ೧ ಕಿಲೋಮೀಟರ್‌ಗೆ ೧.೫೦ ಪೈಸೆ. ಇಳಿಸಿರತಕ್ಕದ್ದು ೧ ಕಿಲೋಮೀಟರ್‌ಗೆ ೧.೨೫ ಪೈಸೆ ಇಳಿಸಿದ್ದೇವೆ.

ಶ್ರೀ ಎಂ.ಎಸ್. ಕೃಷ್ಣನ್.—ದರಗಳನ್ನು ಏರಿಸಿದ್ದರಿಂದ ನಿಮ್ಮ ಅಂದಾಜು ವರಮಾನವೆಷ್ಟು? ದರಗಳನ್ನು ಇಳಿಸಿದ್ದರಿಂದ ನಿಮ್ಮ ಅಂದಾಜು ವರಮಾನ ಎಷ್ಟು ಕಡಿಮೆಯಾಯಿತು?

ಶ್ರೀ ಎಂ.ಪಿ. ಪ್ರಕಾಶ್.—ದರಗಳನ್ನು ದಿನಾಂಕ ೧೦–೧೧–೧೯೮೩ ರಿಂದ ಪರಿಷ್ಕೃತವಾದ ದರದಲ್ಲಿ ನಮ್ಮ ಆದಾಯ ೧೮ ಕೋಟಿ ರೂಪಾಯಿ. ದರಗಳನ್ನು ಇಳಿಸಿದ್ದರಿಂದ ೮ ಕೋಟಿ ರೂಪಾಯಿ ನಷ್ಟವಾಗುತ್ತದೆ. ತಮ್ಮ ಪ್ರಶ್ನೆ ನನಗೆ ಅರ್ಥವಾಗುತ್ತದೆ, ನಮಗೆ ನಷ್ಟವೇ ಖಾಯಂ ಆಗಿರುವುದರಿಂದ ನಾವು ಹಾಕಿಕೊಂಡಿರತಕ್ಕ ಅಂದಾಜಿನ ಪ್ರಕಾರ ನಮ್ಮ ಆದಾಯದ ಅಂದಾಜು ಸ್ವಲ್ಪ ತಪ್ಪಿದೆ. ನಾವು ೧೦ ಪೈಸೆ ರಿಯಾಯಿತಿ ಕೊಟ್ಟಿರತಕ್ಕದ್ದು ಕೂಡ ದೊಡ್ಡ ರಿಯಾಯಿತಿ ಯೆಂದು ಈ ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಬಸ್ ಟಿಕೆಟ್ ದರವನ್ನು ಏರಿಸಿದ್ದರಿಂದ ೧೮ ಕೋಟಿ ರೂಪಾಯಿ ವರಮಾನ ಬರುತ್ತದೆಂದು ಹೇಳಿದ್ದೀರಿ. ಆದರೆ ೧೫ ಕೋಟಿ ರೂಪಾಯಿ ಬಂತು ಅಂದಿರಿ. ಆದರೆ ೧೦ ಪೈಸೆ ಇಳಿಸಿದ್ದರಿಂದ ಎಷ್ಟು ಕಡಿಮೆ ಆಯಿತು ?

ಶ್ರೀ ಎಂ. ಪಿ. ಪ್ರಕಾಶ್.—ಈಗ ನಾನು ಹೇಳಿರತಕ್ಕದ್ದು ೧೦ ಪೈಸೆಗೆ ಸಂಬಂಧಪಟ್ಟದ್ದು. ೧೦ ಸ್ಟೇಜಿಗೆ ಬರಬೇಕಾದರೆ ೨೦ ಪೈಸೆ ಹೋಗುತ್ತದೆ. ಒಂದನೇ ಹಂತದಲ್ಲಿ ೫೦ ಪೈಸೆ ಇದ್ದದ್ದು ೬೦ ಪೈಸೆ ಆಗಿತ್ತು. ಅದನ್ನು ಅಷ್ಟೇ ಇಟ್ಟು ಎರಡನೇ ಹಂತದಲ್ಲಿ ೧೦೦ ಇದ್ದದ್ದು ೧೨೦ ಆಗಿದ್ದುದನ್ನು ಇಳಿಸಿದೆವು. ಅದರ ಪ್ರಕಾರ ೨೦–೩೦–೫೦ ಪೈಸೆಯವರೆಗೆ ಇಳಿಯಿತು. ಅದೇ ರೀತಿ ಎಕ್ಸ್‌ಪ್ರೆಸ್ ಬಸ್ಸುಗಳಲ್ಲಿ ಕೂಡ ಆಗಿದೆ. ಆದರೆ ದೊಡ್ಡ ಪ್ರಮಾಣದಲ್ಲಿ ಆಗುವುದಿಲ್ಲ. ವೇಗದೂತ ಬಸ್ಸಿನಲ್ಲಿ ೬೦ ಪೈಸೆ ಇದ್ದುದನ್ನು ೧೦೦ ಪೈಸೆ ಮಾಡಲಾಗಿತ್ತು. ಅದನ್ನು ಈಗ ೮೦ ಪೈಸೆಗೆ ಇಳಿಸಲಾಗಿದೆ. ಅಂದಾಗ ೨೦ ಪೈಸೆ ಉಳಿಯಿತು. ೧೦ನೇ ಹಂತದಲ್ಲಿ ಓಡಾಡತಕ್ಕ ಗ್ರಾಮೀಣ ಮನುಷ್ಯ ಏನಿದ್ದಾನೆ ಅವನಿಗೆ ೨೦ ಪೈಸೆ ಇಳಿಸಿದ್ದರಿಂದ ಹೆಚ್ಚು ಅನುಕೂಲವಾಗಿದೆ. ಅವನು ಸಾಮಾನ್ಯವಾಗಿ ತನ್ನ ಊರಿನಿಂದ ೬೦–೬೫ ಕಿಲೋಮೀಟರ್ ದೂರದಲ್ಲಿರುವ ತಾಲ್ಲೂಕು ಕೇಂದ್ರಕ್ಕೆ ತನ್ನ ವ್ಯವಹಾರದ ಸಲುವಾಗಿ ಹೋಗುತ್ತಿರುತ್ತಾನೆ. ಈ ಪ್ರಕಾರ ೧೦ನೇ ಹಂತದಲ್ಲಿ ಬರತಕ್ಕವನಿಗೆ ಹೆಚ್ಚು ಅನುಕೂಲ ವಾಗಿದೆ. ಒಂದು ದಿವಸಕ್ಕೆ ೨ ಲಕ್ಷ ಆದರೆ ೩೬೫ ದಿವಸಕ್ಕೆ ೭ ಕೋಟಿ ೬೫ ಲಕ್ಷ ರೂಪಾಯಿ ಆಗುತ್ತದೆ. ಇದು ಸಣ್ಣದಾದರೂ ಕೂಡ ಆಗಾಧತೆಯಲ್ಲಿ ದೊಡ್ಡ ಪ್ರಮಾಣದ ಹೊಡೆತವನ್ನು ನಿಗಮಕ್ಕೆ ಕೊಡು ತ್ತದೆಂದು ಹೇಳುತ್ತೇನೆ. ಈಗಾಗಲೇ ಅನೇಕ ಸದಸ್ಯರು ಹೇಳಿದಂತೆ ಅದರಲ್ಲೂ ಶ್ರೀ ಚಿಕ್ಕೇಗೌಡರು, ಶ್ರೀ ದೊಡ್ಡಬೋರೇಗೌಡರು. ಶ್ರೀ ಸೂರ್ಯನಾರಾಯಣರಾವ್‌ರವರು, ಶ್ರೀ ಗಂಗಾಧರನ್‌ರವರು, ಶ್ರೀ ಮಹೇಶ್ವರಪ್ಪನವರು, ಶ್ರೀ ಕೃಷ್ಣನ್‌ರವರು ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇವರೆಲ್ಲರ ವಿಚಾರಗಳ ಬಗ್ಗೆ ವೈಯಕ್ತಿಕವಾಗಿ ಹೇಳುತ್ತಾಹೋದರೆ ಸದನದಲ್ಲಿ ಯಾರೂ ಇರುವುದಿಲ್ಲ, ಆದುದರಿಂದ ಅವರ ಎಲ್ಲಾ ಸೂಚನೆಗಳನ್ನು ಗಮನಿಸಿ, ಮುಂದಿನ ವರ್ಷ ಆದಷ್ಟು ಮಟ್ಟಿಗೆ ಸುಧಾರಣೆ ಮಾಡತಕ್ಕ ಪ್ರಯತ್ನ ಮಾಡುತ್ತೇನೆ ಮತ್ತು ಈಗಾಗಲೇ ಕೆಲವು ಹೊಸ ಹೊಸ ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ಟೈರ್ ಮತ್ತು ಫ್ಯೂಯಲ್ ವಿಚಾರದಲ್ಲಿ ಹೊಸ ಯೋಜನೆಗಳನ್ನು ತಂದಿದ್ದೇ ವೆಂದು ಅರಿಕೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಮಲಪ್ಪ.—ಈಗಾಗಲೇ ನಾನು ಸಚಿವರಲ್ಲಿ ಕೋರಿಕೊಂಡಿದ್ದುದು ಏನೆಂದರೆ, ಅಂಗ ವಿಕಲರು ಅಥವಾ ಇನ್ನೊಬ್ಬರ ಮೇಲೆ ಅವಲಂಬಿಸಿರುವವರಿಗೆ ರಿಯಾಯಿತಿ ದರದಲ್ಲಿ ಬಸ್‌ನಲ್ಲಿ ಸಂಚಾರ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು. ಸಚಿವರು ಅದರ ಬಗ್ಗೆ ಹೇಳಬೇಕು. ಬಳ್ಳಾರಿ ಮತ್ತು ಗುಲ್ಬರ್ಗದಲ್ಲಿ ಪ್ರತಿ ಹಳ್ಳಿಯಲ್ಲೂ ಸಾರಿಗೆ ಸಂಪರ್ಕದ ವ್ಯವಸ್ಥೆ ಮಾಡಿದ್ದೇವೆಂದು ಹೇಳಿದರು. ಅದೇ ರೀತಿ, ಹರಿಹರದಲ್ಲಿ ಕೂಡ ಏನು ಸರ್ವೆ ಮಾಡಿದ್ದಾರೆ ಅಲ್ಲಿ ಕೂಡ ಸಂಪರ್ಕ ವ್ಯವಸ್ಥೆ ಮಾಡಿಕೊಡಬೇಕೆಂದು ಹೇಳುತ್ತೇನೆ. ಚಿತ್ರದುರ್ಗದಿಂದ ಉಳುವಿಗೆ ಬಸ್ ಹೋಗತಕ್ಕ ವ್ಯವಸ್ಥೆ ಮಾಡಬೇಕು. ಅದೇ ರೀತಿ, ಹರಿಹರದಿಂದ ಶ್ರೀಶೈಲಕ್ಕೆ ಯಾತ್ರಾರ್ಥಿಗಳು ಜಾಸ್ತಿ ಹೋಗುವುದರಿಂದ ಅಲ್ಲಿಗೂ ಕೂಡ ಬಸ್ಸುಗಳನ್ನು ಹಾಕತಕ್ಕ ಏರ್ಪಾಡು ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಎಫ್. ಎ. ಕೊಪ್ಪದ್.—ನಮ್ಮಲ್ಲಿ ೧೧೪ ಹಳ್ಳಿಗಳಿಗೆ ಬಸ್ಸಿನ ತೊಂದರೆ ಇದೆ. ಅಲ್ಲಿಗೆ ಬಸ್ಸಿನ ಸೌಕರ್ಯ ಕೊಡಬೇಕೆಂಬ ಬೇಡಿಕೆ ಕೂಡ ಬಹಳ ದಿವಸಗಳಿಂದ ಸರ್ಕಾರದ ಮುಂದೆ ಇದೆ. ಹಿಂದಿನ ವರ್ಷ ಕೊಡುತ್ತೇವೆಂದರು. ಈಗ ನೋಡೋಣವೆಂದು ಹೇಳುತ್ತಿದ್ದಾರೆ. ಇದರ ಬಗ್ಗೆ ನಮಗೆ ಸ್ಪಷ್ಟವಾದ ಅಭಿಪ್ರಾಯ ಬೇಕಾಗಿದೆ. ಎರಡನೆಯದಾಗಿ ನಮ್ಮ ರಾಮದುರ್ಗಕ್ಕೆ ಒಂದು ಡಿಪೋವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹೊಸ ಜನತಾ ಸರ್ಕಾರ ಈ ನಿಟ್ಟಿನಲ್ಲಿ ಕೆಲಸ ಮಾಡಿ ಒಳ್ಳೆಯ ಹೆಸರು ಪಡೆಯುತ್ತದೆಂದು ನಾನಾದರೂ ಆಶಿಸಿದ್ದೇನೆ.

ಶ್ರೀ ಪಿ. ರಾಮದೇವ್.—ಬೆಂಗಳೂರಿನ ಲಕ್ಷಾಂತರ ಪ್ರಯಾಣಿಕರ ಪರವಾಗಿ ಸರ್ಕಾರ ಆಟೋರಿಕ್ಷಾದಲ್ಲಿ ೩ ಜನ ಪ್ರಯಾಣ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಒತ್ತಾಯಪೂರ್ವಕವಾಗಿ ಕೇಳಿಕೊಂಡಿದ್ದೆವು. ಇದರ ಬಗ್ಗೆ ಆಟೋರಿಕ್ಷಾ ಸಂಘದ ಅಧ್ಯಕ್ಷರಾದ ಸೂರ್ಯನಾರಾಯಣರಾವ್ ಅವರು ವಿರೋಧ ಮಾಡಿದ್ದಾರೆ. ಆದರೂ ಸರ್ಕಾರ, ಆಟೋರಿಕ್ಷಾದಲ್ಲಿ ೩ ಜನ ಪ್ರಯಾಣಿಕರು ಪ್ರಯಾಣ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ, ಹೆಲ್ಮೆಟ್ ಹಾಕಿಕೊಂಡು ತಲೆ ಎಲ್ಲಾ ಬೆಳ್ಳಗಾಗಿದೆ. ಬೇರೆ ಯಾವ ರಾಜ್ಯದಲ್ಲೂ ಈ ಒಂದು ಪದ್ಧತಿ ಇಲ್ಲ. ಬಹುಶಃ ಮಂತ್ರಿಗಳು ತಲೆಗೆ ಬಣ್ಣ ಹಾಕಿಕೊಳ್ಳುತ್ತಾರೆಂದು ಕಾಣುತ್ತದೆ. ಏಕೆಂದರೆ ಅವರ ತಲೆ ಬೆಳ್ಳಗಾಗಿಲ್ಲ. ದಯಮಾಡಿ ಹೆಲ್ಮೆಟ್ ಬಳಸತಕ್ಕ ಪದ್ಧತಿಯನ್ನು ತೆಗೆದುಹಾಕಬೇಕೆಂದು ಲಕ್ಷಾಂತರ ಜನ ಹೆಲ್ಮೆಟ್‌ದಾರರ ಪರವಾಗಿ ಕೇಳಿಕೊಳ್ಳುತ್ತೇನೆ. ಆ ಒಂದು ಪದ್ಧತಿಯನ್ನು ತಕ್ಷಣ ರದ್ದು ಮಾಡಬೇಕೆಂದು ಮತ್ತೊಮ್ಮೆ ಒತ್ತಾಯಿಸುತ್ತೇನೆ.

ಡಾ। ವಿ. ಎಸ್. ಆಚಾರ್ಯ.—ಇಡೀ ರಾಜ್ಯದ ವಾಹನಗಳಲ್ಲಿ ಅರ್ಧಾಂಶ ವಾಹನಗಳು ಬೆಂಗಳೂರಿನಲ್ಲಿ ಇವೆ ಎಂದು ಹೇಳಿದರು. ಮಂಗಳೂರು ೭ನೇ ಸ್ಥಾನದಲ್ಲಿ ಬರುತ್ತದೆ. ಆದ್ದರಿಂದ, ಮಂಗಳೂರಿಗೆ ಡೆಪ್ಯೂಟಿ ಟ್ರಾನ್ಸ್‌ಪೋರ್ಟ್ ಕಛೇರಿಯನ್ನು ಕೊಡುತ್ತೇವೆಂದು ಒಪ್ಪಿದ್ದೇವೆಂದು ಹೇಳಿರುವುದು ಸಂತೋಷ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಕರ್ನಾಟಕ ರಾಜ್ಯದಲ್ಲಿ ಬಿಜಾಪುರ ಜಿಲ್ಲೆಯ ಬಾದಾಮಿ ಡಿಪೋ ಹೆಚ್ಚಿನ ಲಾಭ ಕೊಡತಕ್ಕದ್ದಾಗಿದೆ. ಅಲ್ಲಿಗೆ ಹೆಚ್ಚಿನ ಬಸ್ಸುಗಳನ್ನು ಕೊಡುತ್ತೇವೆಂದು ಕಳೆದ ಬಾರಿ ಒಪ್ಪಿದ್ದರೂ ಇನ್ನೂ ಕೊಡಲಿಲ್ಲ. ಎರಡನೆಯದಾಗಿ, ಧಾರವಾಡ ಜಿಲ್ಲೆಗೆ ರೂರಲ್ ಬಸ್ ಫೆಸಲಿಟೀಸ್ ಕೊಟ್ಟಿದ್ದರೂ ಅದರ ಪಕ್ಕದ ತಾಲ್ಲೂಕಾದ ನಮ್ಮ ಬಾದಾಮಿಗೆ ಕೊಟ್ಟಿಲ್ಲ. ಆದ್ದರಿಂದ, ನಮ್ಮಲ್ಲಿ ಕೂಡ ತಮ್ಮ ಬಸ್ಸುಗಳನ್ನು ಓಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಪಂಪಾಪತಿ.—ನಮ್ಮ ದಾವಣಗೆರೆ ನಗರದ ೧೫ ಕಿಲೋಮೀಟರ್ ವಿಸ್ತೀರ್ಣದಲ್ಲಿ ಸಬರ್ಬನ್ ಬಸ್ಸುಗಳನ್ನು ಓಡಿಸುವುದಕ್ಕೆ ಏನು ಯೋಜನೆ ಮಾಡಿದ್ದೀರಿ ? ಎಷ್ಟು ದಿನಗಳಲ್ಲಿ ಈ ಯೋಜನೆಯನ್ನು ಕಾರ್ಯಗತ ಮಾಡುತ್ತೀರಿ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಸಚಿವರು ಉತ್ತರ ಕೊಡತಕ್ಕ ಕಾಲದಲ್ಲಿ ಮೋಟಾರು ವಾಹನಗಳ ತೆರಿಗೆ ೧೭ ಕೋಟಿ ರೂಪಾಯಿ ಹೆಚ್ಚಳವಾಗಿದೆ ಎಂದು ಹೇಳಿದ್ದರು. ಅವರ ಅಡ್ಮಿನಿಸ್ಟ್ರೇಟೀವ್ ರಿಪೋರ್ಟ್ ನನ್ನ ಹತ್ತಿರ ಇದೆ. ಅದರ ಪ್ರಕಾರ ೩೧ನೇ ಡಿಸೆಂಬರ್ ೧೯೮೩ಕ್ಕೆ ೫೫.೯೪ ಕೋಟಿ ರೂಪಾಯಿ ಎಂದು ಇರುವುದು. ಒಂದೊಂದು ಕ್ವಾರ್ಟರಿಗೆ ಸರಾಸರಿ ೧೮ ಕೋಟಿ ರೂಪಾಯಿ ವಸೂಲಾಗುತ್ತದೆ. ಅಂದರೆ ೮೦ ಕೋಟಿ ಬದಲಿಗೆ ೭೨ ಕೋಟಿ ರೂಪಾಯಿ ಆಗುತ್ತದೆ ೭೨ ಕೋಟಿ ರೂಪಾಯಿ ಆದರೂ ಹೆಚ್ಚಳ ೮ ಕೋಟಿ ರೂಪಾಯಿ ಮಾತ್ರ ಆಗುತ್ತದೆಂದು ಹೇಳಿದ್ದೀರಿ. ಆ ರೀತಿ ಲೆಕ್ಕ ಹಾಕಿದರೆ ಹೋದ ವರ್ಷಕ್ಕಿಂತ ಮೊದಲು ೯ ಕೋಟಿ ರೂಪಾಯಿ ಹೆಚ್ಚಳವಾಗಿತ್ತು. ೧೯೮೧–೮೨ರಲ್ಲಿ ೧೩ ಕೋಟಿ ಆಗಿತ್ತು. ಅದನ್ನು ಹೆಚ್ಚು ಮಾಡಿದರೆ ಸ್ವಾಗತ. ಆದರೆ ನಿಮ್ಮ ಅಡ್ಮಿನಿಸ್ಟ್ರೇಟೀವ್ ರಿಪೋರ್ಟ್‌ನಲ್ಲಿ......

ಶ್ರೀ ಎಂ. ಪಿ. ಪ್ರಕಾಶ್.—ನಾನು ಅದನ್ನು ಸರಿಪಡಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸರಿಪಡಿಸುವುದು ಅಲ್ಲ. ತಮಗೆ ಅಡಿಷನಲ್ ಇನ್‌ಫಾರ್ಮೇಷನ್ ಬಂದಿರಬಹುದು. ಆದುದರಿಂದ ಅದನ್ನು ಕ್ಲಾರಿಫೈ ಮಾಡಬೇಕು.

೭–೩೦ ಪಿ. ಎಂ.

ಶ್ರೀ ಬಿ. ಆರ್. ಪಾಟೀಲ್.—ತಮ್ಮ ಭಾಷಣದಲ್ಲಿ ರಾಯಚೂರು ವಿಭಾಗವನ್ನು ರಾಷ್ಟ್ರೀಕರಣ ಮಾಡುವ ಸಲುವಾಗಿ ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಿದ್ದೀರಿ. ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಯಲ್ಲಿ ರಾಷ್ಟ್ರೀಕರಣ ಮಾಡುವ ಬಗ್ಗೆ ಸರ್ಕಾರದ ನಿಲುವನ್ನು ತಿಳಿಸಬೇಕು. ಮತ್ತೆ ಬಸವಕಲ್ಯಾಣದಲ್ಲಿ ಬಸ್ ಸ್ಟ್ಯಾಂಡ್ ಮಾಡುವ ಬಗ್ಗೆ ಕೇಳುತ್ತಾ ಇದ್ದೇನೆ. ಈ ವರ್ಷದ ಕಾರ್ಯಕ್ರಮದಲ್ಲಿ ಬಸವ ಕಲ್ಯಾಣದಲ್ಲಿ ಬಸ್ ಸ್ಟ್ಯಾಂಡ್ ಮಾಡುವುದು ಇದೆಯೋ ಇಲ್ಲವೋ ಎನ್ನುವುದರ ಬಗ್ಗೆ ಸ್ಪಷ್ಟವಾದ ವಿವರಣೆ ಕೊಡಬೇಕು.

ಶ್ರೀ ಸೋಮಶೇಖರ್.—ಅಧ್ಯಕ್ಷರೇ, ನಾನು ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ. ಪ್ರತಿ ತಾಲ್ಲೂಕಿನಲ್ಲೂ ಒಂದು ಟೈಲರಿಂಗ್ ಸೆಂಟರ್ ಇದೆ. ಅಲ್ಲಿ ಬರೀ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಹೆಣ್ಣು ಮಕ್ಕಳು ಬರುತ್ತಾರೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಆ ಕೇಂದ್ರಕ್ಕೆ ಅಕ್ಕಪಕ್ಕದ ಹಳ್ಳಿಗಳಿಂದ ಬರತಕ್ಕ ಈ ವರ್ಗದ ಹೆಣ್ಣು ಮಕ್ಕಳಿಗೆ ಕೇವಲ ೫೦–೭೫ ರೂಪಾಯಿ ಸಂಬಳ ಕೊಡುತ್ತಾರೆ. ಈ ಸಂಬಳದಲ್ಲಿ ಅವರು ಬಸ್ ಚಾರ್ಜ್, ಮಧ್ಯಾಹ್ನದ ಊಟ ತಿಂಡಿ ವಗೈರೆ ಮಾಡಿಕೊಳ್ಳುವುದಕ್ಕೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ನಾನಾವರ್ಗದ ಜನರಿಗೆ ಬಸ್‌ಗಳಲ್ಲಿ ಏನು ರಿಯಾಯಿತಿ ಕೊಟ್ಟಿದ್ದೀರಿ ಅದೇ ರಿಯಾಯಿತಿಯನ್ನು ಈ ಕೇಂದ್ರಗಳಿಗೆ ಬರತಕ್ಕಂಥ ಈ ವರ್ಗದ ಹೆಣ್ಣು ಮಕ್ಕಳಿಗೂ ಮಾನವೀಯ ದೃಷ್ಟಿಯಿಂದ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಸ್. ಕಾಳಮರಿಗೌಡ.—ಟ್ರಾಕ್ಟರ್ ಟ್ಯಾಕ್ಸ್ ಎಕ್ಸಂಪ್‌ಷನ್ ಮಾಡಿದ್ದೇವೆಂದು ಹೇಳಿದ್ದೀರಿ. ಕೋ–ಆಪರೇಟೀವ್ ಸೊಸೈಟಿ ಮತ್ತು ಅಗ್ರಿಕಲ್ಚರಲ್ ಸೊಸೈಟಿಗಳಲ್ಲಿ ಇದು ಮುಂಚಿನಿಂದಲೇ ಬಂದಿದೆ. ಆದರೆ ನೀವು ಈ ವರ್ಷ ಎಕ್ಸಂಪ್‌ಷನ್ ಮಾಡಿದ್ದೇವೆಂದು ಹೇಳಿದ್ದೀರಿ. ೧೯೮೦–೮೧ ರಿಂದ ಟ್ಯಾಕ್ಸ್ ಕೊಟ್ಟಿರಲಿಲ್ಲ, ೧೯೮೧–೮೨ ರಲ್ಲಿ ಟ್ಯಾಕ್ಸ್ ಎಕ್ಸಂಪಷನ್ ಇರಲಿಲ್ಲ. ಈಗ ಆರ್.ಟಿ.ಒ. ಅಧಿಕಾರಿಗಳು ಈ ವರ್ಷ ಮಾತ್ರ ಎಕ್ಸಂಪಷನ್ ಆಗಿರುವುದು ಹಿಂದಿನ ವರ್ಷಕ್ಕೆಲ್ಲಾ ಪೆನಾಲ್ಟಿ ಸಹ ಕೊಡಬೇಕು ಎಂದು ಹೇಳುತ್ತಾ ಇದ್ದಾರೆ. ಒಂದೊಂದು ಸಹಕಾರ ಸಂಘದವರು ಟ್ರ್ಯಾಕ್ಟರುಗಳನ್ನು ಇಟ್ಟುಕೊಂಡು ಮೇಂಟೇನ್ ಮಾಡುತ್ತಾ ಇದ್ದಾರೆ. ಅವರೆಲ್ಲಾ ಈಗ ಸಾವಿರಾರು ರೂಪಾಯಿಗಳನ್ನು ಕೊಡಬೇಕಾಗಿದೆ. ಈಗ ಪ್ರಾಸ್ಪೆಕ್ಟೀವ್ ಎಫೆಕ್ಟ್ ಮಾತ್ರ ಇದೆ, ಪೂರ್ವಾನ್ವಯವಾಗಿ ಎಲ್ಲಾ ಕೊಡಬೇಕು, ಇಲ್ಲದೇ ಹೋದರೆ ಸಾಧ್ಯವಿಲ್ಲ ಎಂದು ಅಧಿಕಾರಿಗಳು ಹೇಳುತ್ತಾರೆ. ಆದುದರಿಂದ ತಾವು ಭರವಸೆ ಕೊಡಬೇಕು. ಕೋಆಪರೇಟೀವ್ ಸೊಸೈಟಿಗಳಿಗೆ ಪೂರ್ವಾನ್ವಯವಾಗಿ ಟ್ಯಾಕ್ಸ್ ಎಕ್ಸಂಪಷನ್ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ವಿ. ಕರಿಗೌಡ.—ಹಾಸನದಲ್ಲಿ ರೀಜನಲ್ ವರ್ಕ್‌ಷಾಪ್‌ಗೆ ಶಿಲಾನ್ಯಾಸ ಮಾಡಿದ್ದಾರೆ. ಅದನ್ನು ಪ್ರಾರಂಭ ಮಾಡುತ್ತೀರಾ ಅಥವಾ ಬರೀ ಶಿಲೆ ನೋಡಿಕೊಂಡು ಕೂರಬೇಕೇ ?

ಶ್ರೀ ಕೆ. ಜಿ. ಮಹೇಶ್ವರಪ್ಪ.—ಟ್ಯಾಕ್ಸ್ ವಿಚಾರದಲ್ಲಿ ಸಿಟಿ ಬಸಸ್, ಸಬರ್ಬನ್ ಬಸಸ್, ಮತ್ತು ಮಫ್ಯುಸಲ್. ಬಸಸ್ ಎಂದು ಮೂರು ಕ್ಯಾಟಗರಿ ಇದೆ. ಸಿಟಿ ಬಸಸ್‌ಗೆ ೧೮%, ಮುಫ್ಯುಸ್‌ಗೆ ೨೫%ರ ಮೇಲಿರುತ್ತದೆ. ಸಬರ್ಬನ್ ಬಸಸ್ ಸಿಟಿಯಿಂದ ೧೦–೧೫ ಮೈಲಿ ಹೋಗುವುದರಿಂದ ಲಾಸ್‌ನಲ್ಲಿ ನಡೆಯುತ್ತದೆ ಆದುದರಿಂದ ಇದಕ್ಕೆ ಟ್ಯಾಕ್ಸ್ ತೆಗೆದರೆ ಕಾರ್ಪೊರೇಷನ್‌ಗೆ ಹೆಚ್ಚಿನ ಅನುಕೂಲವಾಗುತ್ತದೆ. ಇದು ಪರಿಶೀಲನೆಮಾಡಿ. ಆಮೇಲೆ ಲಾರಿ ಮಾಲೀಕರು ತಮಗೆ ಮನವಿ ಕೊಟ್ಟಿದ್ದಾರೆ, ಚಳುವಳಿ ಮಾಡಿದ್ದಾರೆ. ಇಡೀ ಸೌತ್ ಇಂಡಿಯಾದಲ್ಲಿರುವುದಕ್ಕಿಂತ ನಮ್ಮ ಕರ್ನಾಟಕ ರಾಜ್ಯದಲ್ಲಿರತಕ್ಕ ಲಾರಿಗಳ ಮೇಲಿರತಕ್ಕ ಟ್ಯಾಕ್ಸ್ ಜಾಸ್ತಿ ಇದೆ, ಅದರ ಮೇಲೆ ೧೦% ಪರ್ಸೆಂಟ್ ಸರ್ಚಾರ್ಜ್ ಹಾಕಿದ್ದಾರೆ. ಇದನ್ನು ಪರಿಶೀಲನೆ ಮಾಡಿ, ಉತ್ತರ ಹೇಳುವಾಗ ಹೇಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಜಿ. ರಾಮಲಿಂಗಯ್ಯ.—ಸ್ವಾಮಿ, ನಾವು ಬಸ್‌ನಲ್ಲಿ ಪ್ರಯಾಣ ಮಾಡುತ್ತಾ ಇರಬೇಕಾದರೆ ಚಕ್ಕಿಂಗ್ ನಡೆಯುತ್ತದೆ. ಚಕ್ಕಿಂಗ್ ನಡೆದಾಗ ಕಂಡಕ್ಟರ್‌ರದು ಏನಾದರೂ ಲೋಪದೋಷ ಇದ್ದರೆ ಸೌಹಾರ್ದಯುತವಾಗಿ ಹೋಗುತ್ತಾರೆ. ಒಂದುವೇಳೆ ಅವನು ಅಚ್ಚುಕಟ್ಟಾಗಿ ಟಿಕೆಟ್ ಇಶ್ಯು ಮಾಡಿದ್ದರೆ ಬಿಲ್ಲನ್ನು ಅವನ ಮುಖದ ಮೇಲೆ ಎಸೆದು ಹೋಗುತ್ತಾರೆ. ಇದರ ರಹಸ್ಯವೇನು ?

ಉಪಾಧ್ಯಕ್ಷರು.—ಇದು ಕ್ಲಾರಿಫಿಕೇಷನ್ನೇ, ಕುಳಿತುಕೊಳ್ಳಿ.

ಶ್ರೀ ಜಿ. ಎಸ್. ಬಾಗಲಕೋಟೆ.—ಬಿಜಾಪುರ ಜಿಲ್ಲೆಗೆ ಈ ವರ್ಷ ೭೫ ಲಕ್ಷ ರೂಪಾಯಿಗಳ ಹಣವನ್ನು ಇಟ್ಟಿದ್ದೀರಿ. ಅದಕ್ಕಾಗಿ ಮಾನ್ಯ ಮಂತ್ರಿಗಳನ್ನು ವಂದಿಸುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ರಬಕವಿ ಬನಹಟ್ಟಿ ದೊಡ್ಡ ಶಹರ, ಅದು ೭–೮ ಕಿಲೋಮೀಟರ್ ಉದ್ದವಾದ ನಗರ. ಅಲ್ಲಿ ೭೦ ಸಾವಿರ ಜನಸಂಖ್ಯೆ ಇದೆ. ಅಲ್ಲಿ ಕೂಲಿಗಾರರು, ನೌಕರರು ಅನೇಕರಿದ್ದಾರೆ. ಆದುದರಿಂದ ಸನ್ಮಾನ್ಯ ಮಂತ್ರಿಗಳು ಅಲ್ಲಿ ಸಿಟಿ ಬಸ್ ಹಾಕಬೇಕು ಎಂದು ಕೇಳಿಕೊಳ್ಳುತ್ತೇನೆ

ಡಾ।। ಸಂಗಮೇಶ್ವರ ಸರ್ದಾರ್.—ನಮ್ಮಲ್ಲಿ ಹಳೇ ಬಸ್‌ಗಳನ್ನು ಹಾಕಿದ್ದಾರೆ, ಅದು ಸರಿಯಲ್ಲ. ಇದು ಒಂದನೆಯದು, ಎರಡನೆಯದು, ಒಂದು ಡಿವಿಜನ್‌ನಿಂದ ಇನ್ನೊಂದು ಡಿವಿಜನ್‌ಗೆ ಕಂಡಕ್ಟರ್ಸ್ ಮತ್ತು ಡ್ರೈವರ್ಸ್‌ನ್ನು ಬದಲಿ ವರ್ಗಾವರ್ಗಿ ಏಕೆ ಮಾಡುವುದಿಲ್ಲ.

ಶ್ರೀ ನಾರಾಯಣರಾವ್.—ಈಗತಾನೆ ಮಾನ್ಯ ಸಚಿವರು ಸೈದ್ಧಾಂತಿಕವಾಗಿ ಸರ್ಕಾರ ರಾಷ್ಟ್ರೀಕರಣಕ್ಕೆ ಬದ್ಧವಾಗಿದೆ ಎಂದು ಹೇಳಿದರು. ಅದೇ ಸಮಯದಲ್ಲಿ ಶೌಚಗೃಹಗಳನ್ನು ಶುಚಿ ಮಾಡುವುದಕ್ಕೆ ಬಸ್ ಸ್ಟ್ಯಾಂಡ್ ಶುಚಿ ಮಾಡುವುದಕ್ಕೆ ಕಂಟ್ರಾಕ್ಟ್ ಕೊಡುತ್ತೇವೆಂದು ಹೇಳಿದರು. ಇದು ರಾಷ್ಟ್ರೀಕರಣದ ಸಿದ್ಧಾಂತಕ್ಕೆ ವಿರೋಧವಾಗುವುದಿಲ್ಲವೇ ? ಈ ರೀತಿ ಕಂಟ್ರಾಕ್ಟ್ ಕೊಡುವುದರಿಂದ ಮತ್ತಷ್ಟು ಶೋಷಣೆಗೆ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಈಗ ಬಸ್ ಸ್ಟ್ಯಾಂಡನ್ನು ಶುಚಿ ಮಾಡುವುದಕ್ಕೆ ಕೊಟ್ಟರೆ, ನಾಳೆ ಬಸ್‌ಗಳನ್ನು ಶುಚಿ ಮಾಡುವುದಕ್ಕೆ ಕಂಟ್ರಾಕ್ಟ್ ಕೊಡಬೇಕಾಗುತ್ತದೆ. ಆಮೇಲೆ ಕೆಲವು ರೂಟ್‌ಗಳನ್ನು ಕಂಟ್ರಾಕ್ಟ್ ಕೊಡುವುದಕ್ಕೆ ಶುರು ಮಾಡುತ್ತಾರೆ. ಇದು ಸಿದ್ಧಾಂತಕ್ಕೆ ವಿರೋಧವಾಗುವುದಿಲ್ಲವೇ ಎಂದು ಕೇಳುತ್ತೇನೆ.

ಶ್ರೀ ಎಸ್. ಪುಟ್ಟಸ್ವಾಮಿ.—ನಮ್ಮ ಮೈಸೂರು ಜಿಲ್ಲೆಯ ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸಿನಲ್ಲಿ ಕೆಲಸದ ಒತ್ತಡ ಬಹಳ ಹೆಚ್ಚಾಗಿದೆ. ಈ ಬಗ್ಗೆ ಅಲ್ಲಿಂದ ಮನವಿಗಳು ಕೂಡ ಬಂದಿವೆ. ಅಲ್ಲಿ ಒಂದು ಉಪ ವಿಭಾಗ ಕಛೇರಿ ಕೊಡಬೇಕು ಎಂದು ರಿಪೋರ್ಟ್ ತರಿಸಿಕೊಂಡಿದ್ದಾರೆ. ಅದನ್ನು ಚಾಮರಾಜನಗರದಲ್ಲಿ ತೆರೆಯಬೇಕು ಎಂದು ರಿಪೋರ್ಟ್ ಬಂದಿದೆ, ಅದನ್ನು ಕೂಡಲೇ ತೆರೆಯತಕ್ಕ ಆಜ್ಞೆ ಹೊರಡಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ವಿ. ಪುಡಕಲ ಕಟ್ಟಿ.—ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಡಿಪೋ ಇದೆ. ನಮ್ಮ ತಾಲ್ಲೂಕಿ ಬಸ್ ಇಲ್ಲ. ಆದಕಾರಣ ಅಲ್ಲಿ ಹೊಸ ಬಸ್ ಕೊಡಬೇಕು ಎಂದು ನಾನು ಸರ್ಕಾರಕ್ಕೆ ಮತ್ತು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎನ್ . ಜಿ. ನಾಯಕ್.—ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರ ಹೇಳಲಿಲ್ಲ.

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ವಿರೋಧಪಕ್ಷದ ನಾಯಕರು ಈ ಅಂಕಿಅಂಶಗಳ ಬಗ್ಗೆ ಹೇಳಿದರು ಈಗಾಗಲೇ ಸುಮಾರು ೮೦ ಕೋಟಿಗಳಿಸುತ್ತೇವೆಂಬ ಭರವಸೆ ಇರುವುದರಿಂದ ಉಳಿದ ವರ್ಷದ ೬೩ ಲಕ್ಷ ಕಳೆದರೂ ಕೂಡ ೧೩ ಕೋಟಿಯಾಗುತ್ತದೆ. ವರ್ಷಾಂತ್ಯದಲ್ಲಿ ಹೆಚ್ಚು ಸಂಗ್ರಹವಾಗತಕ್ಕಂಥ ಪರಿಪಾಠ ಇದೆ. ಆ ದೃಷ್ಟಿಯಿಂದ ನಾವು ಹೆಚ್ಚು ಭರವಸೆ ಇಟ್ಟುಕೊಂಡಿದ್ದೇವೆ. ಶ್ರೀಮಾನ್ ಘಟ್ಟಪ್ಪನಾಯಕರು ತಮ್ಮ ಊರಿಗೆ ಬಸ್ ಕೊಡುವುದರ ಬಗ್ಗೆ ಹೇಳಿದ್ದಾರೆ. ೨೨ ಬಸ್‌ಗಳು ಅವರ ಊರಿನ ಮೂಲಕ ಹಾದು ಹೋಗುತ್ತವೆ.

ಶ್ರೀ ಎನ್. ಜಿ. ನಾಯಕ್.—ನಮ್ಮ ಊರಿಗೆ ೫ ಕಿಲೋ ಮೀಟರ್ ದೂರದಲ್ಲಿ ಹೋಗುತ್ತಿದೆ.

ಶ್ರೀ ಎಂ. ಪಿ. ಪ್ರಕಾಶ್.—ಇದರ ಬಗ್ಗೆ ಹಿಂದೆ ಎರಡು ಸಲ ಚರ್ಚೆ ಮಾಡಿದ್ದೇವೆ. ಬಳ್ಳಾರಿ ಮಾರ್ಗವಾಗಿ ಬೆಂಗಳೂರಿಗೆ ಬರತಕ್ಕಂಥಾದ್ದು ಎಂಟೂವರೆ ಗಂಟೆಗೆ ಅವರ ಊರಿಗೆ ಹೋಗುತ್ತದೆ. ಬಹಳ ಬಸ್ಸುಗಳು ಆ ಮಾರ್ಗವಾಗಿಯೇ ಬರುತ್ತವೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಆದರೆ ಮಾನ್ಯ ಸದಸ್ಯರು ಕಂಪ್ಲಿ ಬಸ್ಸು ಸಹ ಅಲ್ಲಿಗೆ ಬಂದು ಹೋಗುವಂತೆ ಮಾಡಬೇಕೆಂದು ಕೇಳಿಕೊಂಡಿದ್ದಾರೆ. ಬಳ್ಳಾರಿಗೆ ಅವರ ಸಂಪರ್ಕ ಜಾಸ್ತಿ ಇದೆ, ರಾತ್ರಿ ಕೆಲಸ ಮುಗಿಸಿಕೊಂಡು ಬೆಂಗಳೂರಿಗೆ ಬರುವಂತಹ ಕಂಪ್ಲಿ ಬಸ್ಸಿನ ಅನುಕೂಲವನ್ನು ಕಲ್ಪಿಸಿಕೊಡುವ ಬಗ್ಗೆ ಸಹಾನುಭೂತಿಯಿಂದ, ಮಾಡುತ್ತೇನೆ ಎನ್ನುವ ಭರವಸೆಯಲ್ಲ. ಅದರ ಬಗ್ಗೆ ಸಹಾನುಭೂತಿ ಇದೆ. ನಿಮ್ಮ ಪರವಾಗಿ ಅಧಿಕಾರಿಗಳಿಗೆ ಮನವರಿಕೆ ಮಾಡುತ್ತೇನೆ. ಚಾಮರಾಜನಗರದಲ್ಲಿ ಎ.ಆರ್.ಟಿ.ಒ. ಕಛೇರಿ ಕೊಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆ ಬಗ್ಗೆ ಈಗಾಗಲೇ ನಾನು ಹೇಳಿದ್ದೇನೆ. ಅದರ ಬಗ್ಗೆ ಪ್ರಪೋಸಲ್ ಬಂದಿರುವುದು ನಿಜ. ಚಿಕ್ಕಚಿಕ್ಕ ಪ್ರಾದೇಶಿಕ ಉಪ ಸಾರಿಗೆ ಕಛೇರಿಯನ್ನು ಕೊಡುವ ಬಗ್ಗೆ ತಾಂತ್ರಿಕ ದೃಷ್ಟಿಯಿಂದ ಅದು ನಮ್ಮ ಹೊಣೆಯಾಗಿದೆ. ಆದರೆ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ನಿರ್ಣಯ ತೆಗೆದುಕೊಳ್ಳುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ: ಶ್ರೀಮಾನ್ ಕೆ. ಎಸ್. ಕಾಳಮರೀಗೌಡರು ಸರ್ಕಾರಕ್ಕೆ ಟಾಕ್ಸ್ ಬರುವುದರಿಂದ ಸಹಕಾರಿ ಸಂಘಗಳು ತೆಗೆದುಕೊಂಡಿರುವ ಟ್ರ್ಯಾಕ್ಟರ್‌ಗಳಿಗೆ ಟ್ಯಾಕ್ಸನ್ನು ಪೂರ್ವಾನ್ವಯ ಗೊಳಿಸಬೇಕೆಂದು ಹೇಳಿದ್ದಾರೆ. ಅದು ಅಷ್ಟು ಸಮಂಜಸವಾಗಲಾರದು. ಸಹಕಾರಿ ಸಂಘಗಳಿಗೆ ತೆರಿಗೆ ವಿನಾಯಿತಿಯನ್ನು ಕೊಟ್ಟಿದ್ದೇವೆ. ಅವರಿಗೆ ಪೂರ್ವಾನ್ವಯ ಆಂತ ನಾವು ಕೊಟ್ಟಿಲ್ಲ. ಯಾವಾಗಲೂ ಸರ್ಕಾರಿ ಆಜ್ಞೆ ಎಂದು ಹೊರಡುತ್ತದೋ ಆ ದಿವಸದಿಂದ ಜಾರಿಗೆ ಬರುತ್ತದೆ. ಆದ್ದರಿಂದ ವ್ಯವಸಾಯ ಸೇವಾ ಸಹಕಾರಿ ಸಂಘಗಳಿಗೆ ಪೂರ್ವಾನ್ವಯ ರೀತಿಯಿಂದ ಜಾರಿಗೊಳಿಸಬೇಕೆಂಬುದು ಅಷ್ಟೊಂದು ಸಮಂಜಸವಾಗಬಾರದು. ಬಾಕಿ ಉಳಿದಿರತಕ್ಕ ತೆರಿಗೆಯನ್ನು ದಯಮಾಡಿ ಕೊಡಬೇಕು. ಹಾಸನದಲ್ಲಿ ಪ್ರಾದೇಶಿಕ ಕಛೇರಿ ಆಗುತ್ತದೋ ಅಥವಾ ಇಲ್ಲವೋ ಎಂಬ ಅನುಮಾನವನ್ನು ಮಾನ್ಯ ಸದಸ್ಯರಾದ ಕರೀಗೌಡರು ವ್ಯಕ್ತಮಾಡಿ

ದ್ದಾರೆ. ಆ ಬಗ್ಗೆ ಅವರಿಗೆ ಸಂಶಯ ಬೇಕಿಲ್ಲ. ಅದಕ್ಕಾಗಿ ಈ ವರ್ಷದ ಆಯವ್ಯಯದಲ್ಲಿ ೫೦ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದು, ಅದಕ್ಕಾಗಿ ವಿಶೇಷ ಅಧಿಕಾರಿಯನ್ನೂ ಕೂಡ ಕೊಟ್ಟಿದ್ದೇವೆ. ಆ ಕೆಲಸ ಆಗುತ್ತದೆಂಬ ಭರವಸೆಯನ್ನು ಕೊಡುತ್ತಿದ್ದೇನೆ. ಆಟೋ ರಿಕ್ಷಾವಲ್ಲಿ ೩ ಜನರನ್ನು ಕೂಡಿಸುವ ಬಗ್ಗೆ ಬಹಿರಂಗವಾಗಿ ಜನಗಳಿಂದ ಆ ಬಗ್ಗೆ ಆಕ್ಷೇಪಣೆಗಳೇನಾದರೂ ಇದ್ದರೆ ಅವುಗಳನ್ನು ಸಲ್ಲಿಸತಕ್ಕ ವಿಚಾರಣೆಗೆ ಕರೆದಿದ್ದೇವೆ. ಅದು ನಿರ್ಣಯವಾಗುವ ಹಂತದಲ್ಲಿದೆ ಮಾನ್ಯ ಸದಸ್ಯರು ಈ ಬಗ್ಗೆ ವ್ಯಕ್ತಮಾಡಿರತಕ್ಕ ಅಭಿಪ್ರಾಯಗಳನ್ನು ಹಾಗೂ ಪತ್ರಿಕಾಕರ್ತರೂ ಕೂಡ ಅಗ್ರಲೇಖನಗಳನ್ನು ಬರೆದಿದ್ದಾರೆ. ಅವುಗಳೆಲ್ಲವನ್ನು ಪರಿಗಣಿಸಿ ಸೂಕ್ತವಾದ ನಿರ್ಣಯವನ್ನು ತೆಗೆದುಕೊಳ್ಳುತ್ತೇನೆ. ರಾಮದುರ್ಗಕ್ಕೆ ಡಿಪೋವನ್ನುಕೊಡಬೇಕೆಂದು ಶ್ರೀಮಾನ್ ಕೊಪ್ಪದವರು ಹೇಳಿದ್ದಾರೆ. ಬಹಳ ವರ್ಷದಿಂದ ಆ ಬಗ್ಗೆ ಕೇಳುತ್ತಿದ್ದೇವೆ ಅಂತ ಹೇಳಿದರು. ಸನ್ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಆ ಬಗ್ಗೆ ನನಗೊಂದು ಸೂಚನೆಯನ್ನು ಮಾಡಿದ್ದಾರೆ. ಇಲ್ಲಿ ಬಂದಿರತಕ್ಕಂತಹ ತೊಂದರೆ ಏನೆಂದರೆ ಈ ವರ್ಷ ೩ ಡಿಪೋಗಳನ್ನು ಕೊಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಈಗ ಒಂದು ಸಾವಿರಕ್ಕಿಂತ ಹೆಚ್ಚು ಬಸ್ಸುಗಳು ಇರುವ ಬೆಂಗಳೂರು ನಗರಕ್ಕೆ ಕನಿಷ್ಠ ಎರಡನ್ನಾದರೂ ಕೊಡಬೇಕಾದ ಅನಿವಾರ್ಯ ಇದೆ. ಆ ದೃಷ್ಟಿಯಿಂದ ೭೦-೮೦ ಬಸ್ಸುಗಳು ಇರತಕ್ಕಂತಹ ಕಡೆ ಡಿಪೋಗಳನ್ನು ಕೊಡಬೇಕೆಂದರೆ, ಕನಿಷ್ಟ ೪೦-೫೦ ಲಕ್ಷ ರೂಪಾಯಿಗಳ ಬಂಡವಾಳ ಹೂಡಿಕೆ ಬೇಕಾಗುತ್ತದೆ ನಮಗೆ ಇರತಕ್ಕಂತಹ ಈಗಿನ ಹಣಕಾಸಿನ ಪರಿಸ್ಥಿತಿಯಲ್ಲಿ ಬಹಳ ಕಷ್ಟ ಇದೆ. ಆದರೆ ಆ ಭಾಗದಲ್ಲಿ ಕೊಡುವಂತಹ ಡಿಪೋವನ್ನು ರಾಮದುರ್ಗದಲ್ಲೇ ಕೊಡುವಂತಹ ರೀತಿಯಲ್ಲಿ ಯೋಚನೆ ಮಾಡುತ್ತಿದ್ದೇನೆ. ಈಗ ಕೆಲವೊಂದು ಜನಗಳಿಗೆ ರಿಯಾಯಿತಿಯನ್ನು ಕೊಟ್ಟಿರುವುದರಿಂದ ನಿಗಮಕ್ಕೆ ಹಣಕಾಸಿನ ಪರಿಸ್ಥಿತಿ ಬಹಳ ಕಷ್ಟ ಇದೆ. ಆದರೆ ಈ ಒಂದು ರಿಯಾಯಿತಿಯನ್ನು ಏನು ಕೊಟ್ಟಿದ್ದೇವೆ, ಅದು ಸರ್ಕಾರದಿಂದ ಮರುಪಾವತಿಯಾದ ಪಕ್ಷದಲ್ಲಿ ಬಸ್ ಡಿಪೋಗಳನ್ನು ಮಾಡುವುದಕ್ಕಾಗಿ ಹಾಗೂ ಬಸ್ ನಿಲ್ದಾಣಗಳನ್ನು ಮಾಡುವುದಕ್ಕಾಗಿ ವಿನಿಯೋಗಿಸುತ್ತೇನೆ. ಈ ಬಗ್ಗೆ ಶ್ರೀಮಾನ್ ಮಾಹೇಶ್ವರಪ್ಪನವರು ಕೊಟ್ಟಂತಹ ಸಲಹೆ ಕೂಡ ಪುನರ್ಪರಿಶೀಲನೆಯ ಹಂತದಲ್ಲಿದೆ. ಮತ್ತೆ ರಾಮದುರ್ಗ ವಿಭಾಗಕ್ಕೆ ೧೨ ಬಸ್ಸುಗಳನ್ನು ಕೊಟ್ಟಿದ್ದೇವೆ. ಅದರಲ್ಲಿ ೬ ಹೊಸ ಬಸ್ಸುಗಳನ್ನು ಕೊಟ್ಟಿದ್ದೇವೆ.

ಶ್ರೀ ಎಫ್. ಎ. ಕೊಪ್ಪದ್.—ಈ ವರ್ಷವೇ ಅದು ಆಗುತ್ತದೋ ಅಥವಾ ಇಲ್ಲವೋ ಅದನ್ನಾದರೂ ಹೇಳಿ.

ಶ್ರೀ ಎಂ. ಪಿ. ಪ್ರಕಾಶ್.—ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ. ಕಾಂಗ್ರೆಸ್ (ಐ) ಪಕ್ಷದ ಶಾಸಕರ ಕ್ಷೇತ್ರಕ್ಕೂ ೬ ಹೊಸ ಬಸ್ಸುಗಳನ್ನು ಕೊಟ್ಟಿದ್ದೇವೆ. ಅದೇ ರೀತಿ ಜನತಾ ಪಕ್ಷ ಶಾಸಕರ ಕ್ಷೇತ್ರಕ್ಕೂ ೬ ಹೊಸ ಬಸ್ಸುಗಳನ್ನು ಕೊಟ್ಟಿದ್ದೇವೆ. ಇದರಲ್ಲಿ ತಾರತಮ್ಯ ಮಾಡಿಲ್ಲ ಎಂಬ ಮಾತನ್ನು ಹೇಳುತ್ತೇನೆ. ಮತ್ತೆ ದಾವಣಗೆರೆಗೆ ಸಬ್-ಅರ್ಬನ್ ಸರ್ವಿಸ್ ಕೊಡಬೇಕೆಂದು ಶ್ರೀಮಾನ್ ಪಂಪಾಪತಿಯವರು ಕೇಳುತ್ತಿದ್ದಾರೆ. ಬಹಳ ವರ್ಷಗಳಿಂದ ಅಲ್ಲಿ ಕಾನೂನಿನ ತೊಡಕು ಇರುವುದರಿಂದ, ಎಷ್ಟು ದೂರ ಹೋದರೂ ಕೂಡ ರಾಷ್ಟ್ರೀಕರಣಕ್ಕೆ ಒಳಪಡತಕ್ಕ ಜಿಲ್ಲೆಯಾಗಿರುವುದರಿಂದ, ಅಲ್ಲಿಯ ಖಾಸಗಿಯ ಮಾಲೀಕರು ಆಕ್ಷೇಪಣೆಗಳನ್ನು ಹಾಕುತ್ತಿದ್ದಾರೆ. ಆಕ್ಷೇಪಣೆಗಳನ್ನು ಹಾಕಿಸುವುದಿಲ್ಲವೆಂಬ ಭರವಸೆಯನ್ನು ಮಾನ್ಯ ಸದಸ್ಯರು ಕೊಟ್ಟರೆ, ಅವರು ಹೇಳಿದಂತೆ ಕೆಲಸವನ್ನು ನಾವು ಮಾಡಿ ಕೊಡುತ್ತೇವೆ.

ಶ್ರೀ ಪಂಪಾಪತಿ.—ಅಡೆತಡೆ ಇಲ್ಲದಂತೆ ನಾವು ನೋಡಿಕೊಳ್ಳುತ್ತೇವೆ.

ಶ್ರೀ ಎಂ. ಮಹದೇವ್.—ನನ್ನ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರವನ್ನೇ ಕೊಡಲಿಲ್ಲ,

ಶ್ರೀ ಎಂ. ಪಿ. ಪ್ರಕಾಶ್.—ನನಗೆ ಸಮಯದ ಅಭಾವ ವಿರುವುದರಿಂದ ಕೆಲವೊಮ್ಮೆ ಮಾನ್ಯ ಸದಸ್ಯರು ಕೇಳಿರತಕ್ಕಂತಹ ಪ್ರಶ್ನೆಗಳಿಗೆ ಉತ್ತರ ಕೊಡಲು ಸಾಧ್ಯವಾಗದಿರಬಹುದು. ಎಲ್ಲರಿಗೂ ಉತ್ತರವನ್ನು ಕೊಡಬೇಕೆಂದರೆ ಕಾಲಾವಕಾಶ ಹೆಚ್ಚಿಗೆ ಬೇಕಾಗುತ್ತದೆ. ಅಧ್ಯಕ್ಷರು ಕಾಲದ ಮಿತಿಯನ್ನು ಹಾಕಿರುವುದರಿಂದ, ಅವರಿಗೂ ನಾನು ಗೌರವ ಕೊಡಬೇಕಾಗುತ್ತದೆ. ಇನ್ನೂ ಸ್ವಲ್ಪ ಹೆಚ್ಚು ಸಮಯ ಕೊಡುವುದಾದರೆ ಎಲ್ಲ ಸದಸ್ಯರಿಗೂ ಸಮಾಧಾನವಾಗುವ ರೀತಿಯಲ್ಲಿ ಉತ್ತರವನ್ನು ಕೊಡಬಲ್ಲೆ. ದಾವಣಗೆರೆ ಏರಿಯಾದಲ್ಲಿ ಗ್ರಾಫ್ಟ್ ಸ್ಕೀಂ ಇರುವುದರಿಂದ ಕಾನೂನಿನ ತೊಡಕು ಇದೆ. ಅದನ್ನು ಪರಿಗಣಿಸಿ ನಿರ್ಣಯ ಮಾಡುತ್ತೇನೆ.

ಶ್ರೀ ಪಂಪಾಪತಿ.—ಅದಕ್ಕೆ ಬೇಕಾದ ಎಲ್ಲ ಅನುಕೂಲತೆಗಳನ್ನು ಒದಗಿಸಿಕೊಡುತ್ತೇವೆ.

ಶ್ರೀ ಎಂ.ಪಿ. ಪ್ರಕಾಶ್.—ಟಿ.ಟಿ.ಸಿ. ತರಬೇತಿಯನ್ನು ಪಡೆಯುತ್ತಿರುವಂತಹವರಿಗೂ ಪಾಸು ಗಳನ್ನು ಕೊಡಬೇಕೆಂಬ ಸಲಹೆಯನ್ನು ಶ್ರೀಮಾನ್ ಸೋಮಶೇಖರ್‌ರವರು ಹೇಳಿದರು. ಇದೇ ರೀತಿ ಇನ್ನೂ ಬೇರೆ ಬೇರೆ ರೀತಿಯಲ್ಲಿ ತರಬೇತಿಯನ್ನು ಪಡೆಯುವಂತಹವರಿಗೂ ಪಾಸುಗಳನ್ನು ಕೊಡಬೇಕೆಂಬ ಮನವಿಗಳು ಬಂದಿವೆ. ಅವುಗಳ ಬಗ್ಗೆ ಯೋಚನೆ ಮಾಡಿ ಎಷ್ಟರಮಟ್ಟಿಗೆ ಸಾಧ್ಯ ವಾಗುತ್ತದೆಂಬುದನ್ನು ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆದರೆ ಇದೊಂದು ಯೋಗ್ಯವಾದ ಸಲಹೆ.

ಶ್ರೀ ಬಿ. ಸೋಮಶೇಖರ್.— ಟಿ.ಟಿ.ಸಿ. ತರಬೇತಿಯನ್ನು ಪಡೆಯುವಂತಹವರು ಹೆಚ್ಚಾಗಿ ಹರಿಜನ–ಗಿರಿಜನ ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದವರಾಗಿರುವುದರಿಂದ ಪಾಸುಗಳನ್ನು ಕೊಡ ಬೇಕು.

ಶ್ರೀ ಎಂ.ಪಿ. ಪ್ರಕಾಶ್.—ಬಹಳ ಯೋಗ್ಯವಾದ ಸಲಹೆ. ಮಾಡಬೇಕಾಗಿರತಕ್ಕಂತಹದ್ದು. ಅದಕಾರಣ ಇರುವಂತಹ ಹಣಕಾಸಿನ ಪರಿಸ್ಥಿತಿಯಲ್ಲಿ ಎಷ್ಟರಮಟ್ಟಿನ ಭಾರ ನಮ್ಮ ಮೇಲೆ ಬರುತ್ತ ದೆಂಬುದನ್ನು ಯೋಚನೆ ಮಾಡಿ, ಅವರಿಗೂ ಈ ಪಾಸ್‌ನ ವ್ಯವಸ್ಥೆಯನ್ನು ಮಾಡಿಕೊಡಲು ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ.ಜಿ. ಸತ್ಯನಾರಾಯಣ.—ಶೇಕಡ ೧೮ರಷ್ಟು ಹಣವನ್ನು ಏನು ಈ ಹರಿಜನ–ಗಿರಿಜನರ ಅಭಿವೃದ್ಧಿಗಾಗಿ ಖರ್ಚು ಮಾಡಬೇಕಾಗಿದೆ, ಆ ಹಣವನ್ನೇ ಇವರಿಗಾಗಿ ಖರ್ಚು ಮಾಡಿ.

ಶ್ರೀ ಎಂ. ಪಿ. ಪ್ರಕಾಶ್.—ಶೇಕಡ ೧೮ ಪರ್ಸೆಂಟ್ ನೇಮಕಾತಿಯಲ್ಲಿ ಇಲ್ಲವೆಂಬುದನ್ನು ಮನಗಂಡು ಇತ್ತೀಚೆಗೆ ನೇಮಕ ಮಾಡಿಕೊಂಡಂತಹ ಕ್ಲಾಸ್ (೨) ಹುದ್ದೆಗಳನ್ನು ಹರಿಜನ–ಗಿರಿಜನರಿಗೆ ಕೊಟ್ಟಿದ್ದೇವೆ. ಅದನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕೆಂಬ ಆದೇಶವನ್ನೂ ನೀಡಿದ್ದೇನೆ. ಹೆಲ್ಮೆಟ್ಟನ್ನು ತೆಗೆದುಹಾಕುವ ವಿಚಾರದಲ್ಲಿ ಶ್ರೀಮಾನ್ ರಾಮದೇವ್‌ರವರು ಕೇಳಿದ್ದಾರೆ. ಪ್ರತಿ ವರ್ಷ ಆ ಬಗ್ಗೆ ಅವರು ಪ್ರತಿಪಾದನೆ ಮಾಡುತ್ತಿದ್ದಾರೆ. ಆದರೆ ತಜ್ಞರ ಅಭಿಪ್ರಾಯದಂತೆ ಅದು ಅವಶ್ಯಕ ಎಂಬುದಾಗಿ ಹೇಳುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈಗ ಅವರಿಗೆ ಕಾರು ಇದೆ. ಹೆಲ್ಮೆಟ್ ಉಪಯೋಗ ಮಾಡು ವುದಿಲ್ಲ.

ಶ್ರೀ ಪಿ. ರಾಮದೇವ್.—ಆದರೂ ನಾನೂ ಹಾಗೂ ಶ್ರೀಮಾನ್ ಲಕ್ಷ್ಮೀಸಾಗರ್‌ರವರು ಹೆಲ್ಮೆಟ್ ಅನ್ನು ಉಪಯೋಗ ಮಾಡುತ್ತಿದ್ದೇವೆ.

ಶ್ರೀ ಹನುಮಂತರಾವ್ ದೇಸಾಯಿ.—ಕಾರಿನಲ್ಲಿ ಕೂತಾಗಲೂ ಹೆಲ್ಮೆಟ್ ಹಾಕಿಕೊಂಡೇ ಕೂಡುತ್ತಾರೆ ಅಂತ ಕಾಣುತ್ತೆ.

ಶ್ರೀ ಎಂ. ಮಹದೇವ್.—ಸಾರ್ವಜನಿಕರಿಗೂ ಮತ್ತು ಸಾರಿಗೆ ಸಂಸ್ಥೆಗೂ ಸಾಕಷ್ಟು ಸಂಪರ್ಕ ಇದೆ. ಯಾರೋ ಒಬ್ಬ ಪ್ರಯಾಣಿಕ ತಪ್ಪು ಮಾಡಿದರೆ ಕಾನೂನು ಪ್ರಕಾರ ಆತನ ಮೇಲೆ ಕ್ರಮ ತೆಗೆದುಕೊಳ್ಳಬೇಕು. ವೈಯಕ್ತಿಕವಾಗಿ ದೂರು ಕೊಡುವ ವ್ಯವಸ್ಥೆ ಕೂಡ ಇದೆ. ಒಬ್ಬ ತಪ್ಪು ಮಾಡಿದರೆ ಇಡೀ ಕರ್ನಾಟಕ ರಾಜ್ಯದಲ್ಲಿ ಸಾರಿಗೆ ಸಂಸ್ಥೆಯ ಬಸ್ ಸಂಚಾರವನ್ನು ಸ್ಥಗಿತಗೊಳಿಸು ವುದು ಸರಿಯಲ್ಲ. ಅದರ ಬಗ್ಗೆ ಕಟ್ಟುನಿಟ್ಟಾದ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ.ಪಿ. ಪ್ರಕಾಶ್.—ಬೆಂಗಳೂರು ನಗರದಲ್ಲಿ ಇದು ಆಗುತ್ತಿದೆ. ಅಧಿಕಾರ ವಿಕೇಂದ್ರೀ ಕರಣ ಮಾಡುವ ಸಂದರ್ಭದಲ್ಲಿ ಮಾನ್ಯ ಸದಸ್ಯರು ಕೊಟ್ಟಂತಹ ಸಲಹೆಯನ್ನು ಗಮನದಲ್ಲಿಟ್ಟು ಕೊಳ್ಳುತ್ತೇನೆ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ (ತೋಟಗಾರಿಕೆ ಹಾಗೂ ಹೈನುಗಾರಿಕೆ ಸಚಿವರು).—ಮಾನ್ಯ ಅಧ್ಯಕ್ಷರೇ, ಇದುವರೆಗೆ ೧೭ ಜನ ಸದಸ್ಯರು ಈ ಇಲಾಖೆಗಳ ಬೇಡಿಕೆಗಳ ಬಗ್ಗೆ ಮಾತನಾಡಿದ್ದಾರೆ. ನಾನು ಅವರಿಗೆ ಸಂಕ್ಷಿಪ್ತವಾಗಿ ಕೆಲವೊಂದು ವಿವರಗಳನ್ನು ಒದಗಿಸಿಕೊಡಬಯಸುತ್ತೇನೆ. ತೋಟ ಗಾರಿಕೆ ಇಲಾಖೆಯಲ್ಲಿ ಜಂಟಿ ನಿರ್ದೇಶಕರು, ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು ಇತ್ಯಾದಿ

ಹುದ್ದೆಗಳು ಖಾಲಿ ಇವೆ. ಇದರಲ್ಲಿ ಕೆಲವರ ಬಡ್ತಿ ಪಟ್ಟಿ ತಯಾರಾಗುತ್ತಿದೆ. ಅದರ ಸಲುವಾಗಿ ಕೇಡರ್ ಮತ್ತು ರೆಕ್ರೂಟ್‌ಮೆಂಟ್ ರೂಲ್ಸ್ ಅಮೆಂಡ್‌ಮೆಂಟ್ ಆಗುವುದು ನಿಂತಿದೆ. ಅದು ಆದ ಕೂಡಲೇ ತೋಟಗಾರಿಕೆ ಇಲಾಖೆ ಸೂಕ್ತವಾಗಿ ಎಲ್ಲಾ ಕಡೆ ಕೆಲಸ ಮಾಡುತ್ತದೆ. ಜೊತೆಗೆ ಫಾರಂಗಳು ಆಯಾಯ ಭಾಗದಲ್ಲಿರತಕ್ಕ ಬೆಳೆಗಳನ್ನು ಬೆಳೆಸುವುದಕ್ಕೆ ಅಲ್ಲಿನ ಜನರಿಗೆ ಲಾಭವಾಗಬೇಕೆಂಬ ದೃಷ್ಟಿಯಿಂದ ಕ್ರಮಗಳನ್ನು ಕೈಗೊಳ್ಳುತ್ತೇವೆ. ಕೆಲವು ಕಡೆ ತೋಟಗಾರಿಕೆ ಇಲಾಖೆ ಎಲ್ಲಿದೆ ಎಂದು ಗೊತ್ತಿಲ್ಲವೆಂದು ಕೆಲವು ಸದಸ್ಯರು ಹೇಳಿದ್ದಾರೆ. ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ತೋಟಗಾರಿಕೆ ಇಲಾಖೆ ಬೆಳೆ ಬೆಳೆದುಕೊಂಡರೆ ಅದಕ್ಕೆ ಮಾರ್ಕೆಟಿಂಗ್ ವ್ಯವಸ್ಥೆ ಬೇಕು. ಅದಕ್ಕೋಸ್ಕರ ಇಂಟಿಗ್ರೇಟೆಡ್ ಹಾರ್ಟಿಕಲ್ಚರ್ ಡೆವಲಪ್‌ಮೆಂಟ್ ಯೋಜನೆ ಇದೆ. ಅದು ಈಗ ಕೊನೇ ಹಂತದಲ್ಲಿದೆ. ಅದಾದಮೇಲೆ ಸೂಕ್ತ ಮಾರ್ಕೆಟಿಂಗ್ ವ್ಯವಸ್ಥೆ ಮಾಡುತ್ತೇವೆ. ಸಧ್ಯಕ್ಕೆ ೪೦ ಕೋ-ಆಪರೇಟಿವ್ ಸೊಸೈಟಿಗಳನ್ನು ಫಾರಂ ಮಾಡಿದ್ದೇವೆ. ಯಾವ ಯಾವ ಜಿಲ್ಲೆಗಳಲ್ಲಿ ಎಲ್ಲೆಲ್ಲಿ ಅವಶ್ಯಕತೆ ಇದೆ ಎಂಬುದನ್ನು ನೋಡಿ ಮಾರ್ಕೆಟಿಂಗ್ ಬಗ್ಗೆ ಸೂಕ್ತ ವ್ಯವಸ್ಥೆ ಮಾಡುತ್ತೇವೆ. ಇನ್ನು ಬಳ್ಳಾರಿ ಫಾರಂ ಬಗ್ಗೆ ಹೇಳಿದ್ದಾರೆ. ಅದು ಬೋರನ ಕಣಿವೆ ನೀರನ್ನು ಅವಲಂಬಿಸಿದ್ದರೂ ಇವತ್ತು ಒಣಗಿರುವುದರಿಂದ ತೊಂದರೆಯಾಗಿದೆ ಎಂದು ಹೇಳಿದ್ದಾರೆ. ಅದಕ್ಕೋಸ್ಕರ ಅಲ್ಲಿ ೬ ಬೋರ್‌ವೆಲ್‌ಗಳನ್ನು ಹಾಕಿಸಿದ್ದೇವೆ, ೩ರಲ್ಲಿ ನೀರು ಬಂದಿದೆ. ಅಲ್ಲಿಗೆ ನಾನು ಇನ್ನೂ ಹೋಗಿ ಬಂದಿಲ್ಲ. ಇನ್ನು ಮಾಗಡಿ ತಾಲ್ಲೂಕಿನ ಒಂದು ಫಾರಂ ವಿಚಾರವನ್ನು ಹೇಳಿದ್ದಾರೆ. ಅಲ್ಲಿ ಕೇವಲ ಎರಡು ವರ್ಷದಿಂದ ನೀರಿನ ಕೊರತೆ ಇದ್ದುದರಿಂದ ತೊಂದರೆಯಾಗಿದೆ. ಆದ್ದರಿಂದ ಅಲ್ಲಿ ಕೂಡ ಬೋರ್‌ವೆಲ್ ಹಾಕುವುದಕ್ಕೆ ಪ್ರಯತ್ನ ಮಾಡುತ್ತೇವೆ. ಕೆಲವು ಕಡೆ ತೆಂಗಿನಮರಗಳಿಗೆ ಕರಿ ಹುಳುಗಳ ಬಾಧೆ ಇದೆ ಎಂದು ವರದಿ ಬಂದಿದೆ. ತಕ್ಷಣ ಪರಿಶೀಲಿಸಲು ಒಂದು ತಂಡವನ್ನು ಕಳುಹಿಸಿ ಅದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. ಶ್ರೀ ಬೈರಪ್ಪಾಜಿಯವರು ಕ್ರಮ ತೆಗೆದುಕೊಂಡಿಲ್ಲವೆಂದು ಹೇಳಿದರು. ಆದರೆ ಆ ಬಗ್ಗೆ ನಾವು ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಬಯಸುತ್ತೇನೆ. ಒಟ್ಟಿನಲ್ಲಿ ಈ ಬಗ್ಗೆ ತೀವ್ರವಾದ ಕಾರ್ಯಕ್ರಮ ತೆಗೆದುಕೊಂಡಿದ್ದೇವೆಂದು ಹೇಳುತ್ತೇನೆ.

ಹೈನುಗಾರಿಕೆ ಬಗ್ಗೆ ಹೇಳುವುದಾದರೆ, ಆಪರೇಷನ್ ಫ್ಲಡ್-೨ರಲ್ಲಿ ಇಡೀ ರಾಜ್ಯವನ್ನು ನಾವು ತೆಗೆದುಕೊಂಡಿದ್ದೇವೆ. ಸಧ್ಯಕ್ಕೆ ಆಪರೇಷನ್ ಫ್ಲಡ್-೧ರಲ್ಲಿ ೮ ಜಿಲ್ಲೆಗಳಿದ್ದರೆ ಆಪರೇಷನ್ ಫ್ಲಡ್-೨ರಲ್ಲಿ ಎಲ್ಲಾ ಜಿಲ್ಲೆಗಳನ್ನು ತೆಗೆದುಕೊಂಡಿದ್ದೇವೆ. ಅದರಲ್ಲಿ ಒಟ್ಟು ೧೧ ಯೂನಿಯನ್‌ಗಳು ಆಗುತ್ತವೆ. ಈಗ ೭ ಯೂನಿಯನ್‌ಗಳು ಆಗಿದ್ದು ಇನ್ನೂ ೪ ಯೂನಿಯನ್‌ಗಳು ಆಗಬೇಕಾಗಿದೆ. ಅದರಲ್ಲಿ ಇಡೀ ರಾಜ್ಯದ ವ್ಯಾಪ್ತಿ ಬರುತ್ತದೆ. ಮೊದಲನೇ ಹಂತದಲ್ಲಿ ಕೆಲಸ ಪ್ರಾರಂಭವಾಗುತ್ತಿದೆ. ಇವತ್ತಿನ ದಿವಸ ರಾಜ್ಯ ಸಹಕಾರ ಸಂಘ ನಿಯಮಿತ ಅಸ್ತಿತ್ವಕ್ಕೆ ಬಂದಿವೆ. ೩೧ನೇ ಮಾರ್ಚ್‌ನಿಂದ ಕೆಡಿಡಿಸಿ.ಯ ಎಲ್ಲಾ ಆಸ್ತಿ ಮತ್ತು ಜವಾಬ್ದಾರಿಗಳು ಅದಕ್ಕೆ ವರ್ಗ ಆಗುತ್ತವೆ. ಈ ಸಾರಿ ಮೊದಲನೇ ಫೇಸ್‌ನಲ್ಲಿ ಬೆಂಗಳೂರು, ಹಾಸನ. ಮೈಸೂರು, ತುಮಕೂರು ಇದೆ. ಈ ವರ್ಷ ಬೆಳಗಾಂ, ಧಾರವಾಡ, ಬಿಜಾಪುರ ಮತ್ತು ಗುಲ್ಬರ್ಗವನ್ನು ತೆಗೆದುಕೊಂಡರೆ, ೨ನೇ ವರ್ಷದಲ್ಲಿ ರಾಯಚೂರು, ಶಿವಮೊಗ್ಗ ಮತ್ತು ಸೌತ್ ಕೆನರಾವನ್ನು ತೆಗೆದುಕೊಳ್ಳುತ್ತೇವೆ. ಈ ಪ್ರಕಾರ ರಾಜ್ಯದ ಎಲ್ಲಾ ಕಡೆ ಆಗುತ್ತದೆ. ದಾವಣಗೆರೆ ಮತ್ತಿತರ ಕಡೆ ಸರ್ಕಾರೀ ಡೈರಿಗಳಲ್ಲಿ ಹಾಲಿನ ಪರಿಸ್ಥಿತಿ ಸುಧಾರಿಸುತ್ತದೆಂದು ಹೇಳುತ್ತೇನೆ. ಪಶು ಸಂಗೋಪನೆ ಮತ್ತು ಪಶು ವೈದ್ಯ ಇಲಾಖೆಯ ಬಗ್ಗೆ ಹೇಳುವುದಾದರೆ, ಅಲ್ಲಿ ಬಹಳ ಹುದ್ದೆಗಳು ಖಾಲಿ ಇವೆ. ಅದರಲ್ಲಿ ೬ ಮಂದಿ ಜಂಟಿ ನಿರ್ದೇಶಕರು, ೨ ಜನ ಉಪ ನಿರ್ದೇಶಕರು, ೪೧ ಜನ ಸಹಾಯಕ ನಿರ್ದೇಶಕರು, ೭೯ ಜನ ಪಶು ವೈದ್ಯರು, ಈ ಸಾರಿ ಒಬ್ಬ ಅಡಿಷನಲ್ ಡೈರೆಕ್ಟರ್ ಮತ್ತು ೨೧ ಜನ ಡೆಪ್ಯೂಟಿ ಡೈರೆಕ್ಟರ್ಸ್, ೩೪ ಜನ ಅಸಿಸ್ಟೆಂಟ್ ಡೈರೆಕ್ಟರ್ಸ್ ಮತ್ತು ೧೭೦ ಜನ ಪಶು ವೈದ್ಯರ ಹುದ್ದೆಗಳನ್ನು ತುಂಬಿದ್ದೇವೆ. ಅದಾಗ್ಯೂ ಇಷ್ಟು ಕೊರತೆ ಇದೆ. ಇದರ ಜೊತೆಗೆ ಲೈವ್ ಸಾಕ್ ಇನ್ಸ್‌ಪೆಕ್ಟರ್ಸ್ ಮತ್ತು ಕಾಂಪೌಂಡರ್ಸ್ ಹುದ್ದೆಗಳು ಸಹ ಬಹಳ ಖಾಲಿ ಇವೆ. ಅದಕ್ಕೋಸ್ಕರ ಸರ್ಕಾರ ೧೨ ಪಶು ಪರೀಕ್ಷಕರ ತರಬೇತಿ ಕೇಂದ್ರಗಳನ್ನು ಮತ್ತು ೧೨ ಕಾಂಪೌಂಡರ್ಸ್ ಟ್ರೈನಿಂಗ್ ಸೆಂಟರ್‌ಗಳನ್ನು ತೆಗೆಯಬೇಕೆಂದು ಇದೆ. ಅದಕ್ಕಾಗಿ ಈಗಾಗಲೇ ಸ್ಥಳಗಳನ್ನು ಕೂಡ ಗುರುತಿಸಲಾಗಿದೆ. ಈ ಸಾರಿ ಪಶು ಪರೀಕ್ಷಕರ ತರಬೇತಿ ಮತ್ತು ಕಾಂಪೌಂಡರ್ಸ್ ಟ್ರೈನಿಂಗ್ ಸಲುವಾಗಿ ಆಯಾಯ ಜಿಲ್ಲೆಗಳಲ್ಲಿ ಆಯಾಯ ಭಾಗದ ಜನರನ್ನು ತೆಗೆದುಕೊಳ್ಳಬೇಕು ಮತ್ತು ಗ್ರಾಮಾಂತರ ಜನರಿಗೆ ಪ್ರಾಶಸ್ತ್ಯ ಕೊಡಬೇಕು ಹಾಗೂ ಪ್ರೊಫೆಷನಲ್ ಕೋರ್ಸ್‌ನಲ್ಲಿ ಅಭ್ಯಾಸ ಇದ್ದವರಿಗೆ ಪ್ರಾಶಸ್ತ್ಯ ಕೊಡಬೇಕೆಂದು ಮಾಡಿದ್ದೇವೆ. ಅದು ಸುಧಾರಿಸುವುದಕ್ಕೆ ಒಂದು ವರ್ಷ ಬೇಕಾಗಬಹುದು. ಅಲ್ಲಿಯವರೆಗೆ ಆರ್.ವಿ.ಡಿ. ಗಳನ್ನು ಕೊಡುವುದಕ್ಕಾಗುವುದಿಲ್ಲ. ಸದಸ್ಯರುಗಳನೇಕರು ಎಷ್ಟೋ ಕಡೆ ಆರ್.ವಿ.ಡಿ. ಸೆಂಟರುಗಳು ಇಲ್ಲವೆಂದರು.

ಹೋದಸಾರಿ ೨೦೦ ಸೆಂಟರುಗಳನ್ನು ಕೊಟ್ಟಿದ್ದೇವೆ. ಮತ್ತೆ ಕೊಡಬೇಕೆಂದರೆ ಸಿಬ್ಬಂದಿ ಕೊರತೆ ಇದೆ. ಸಿಬ್ಬಂದಿ ದೊರೆತ ಹಾಗೆ ಹಂತಹಂತವಾಗಿ ಕೊಡುತ್ತೇವೆ. ಇಷ್ಟು ಮಾತ್ರ ಹೇಳಿ. ಬೇಡಿಕೆಗಳಿಗೆ ತಮ್ಮ ಒಪ್ಪಿಗೆ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಂಪಾಪತಿ.—ಫಾರಂಗಳಲ್ಲಿ ಕೆಲಸ ಮಾಡತಕ್ಕವರಿಗೆ ದಿನಗೂಲಿ ಮೇಲೆ ಏನು ಸಂಬಳ ಕೊಡುತ್ತಿದ್ದಾರೆ ಅದು ಬಹಳ ಕಡಿಮೆ. ಅವರಿಗೆ ಕನಿಷ್ಠ ದಿನಕ್ಕೆ ೧೦ ರೂಪಾಯಿ ಆದರೂ ಕೊಟ್ಟರೆ ನಿಮಗೆ ಲಾಭದಾಯಕವಾದ ರೀತಿಯಲ್ಲಿ ಕೆಲಸ ಮಾಡುತ್ತಾರೆ. ಅದನ್ನು ಜಾಗ್ರತೆ ಕೊಡಿಸಿಕೊಡ ತಕ್ಕ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್.—ಅದನ್ನು ಪರಿಶೀಲಿಸುತ್ತೇನೆ.

ಶ್ರೀ ಬಿ. ಬೈರಪ್ಪಾಜಿ.—ಒಂದು ಎಕರೆಯಲ್ಲಿ ೬೦ ತೆಂಗಿನ ಸಸಿಗಳನ್ನು ನೆಡುತ್ತಾರೆ. ಸಾಮಾನ್ಯವಾಗಿ ೫೦ ಕ್ಕಿಂತ ಜಾಸ್ತಿ ಆದರೆ ಸರಿಯಾಗಿ ಫಲ ಬಿಡುವುದಿಲ್ಲ, ಮರ ಮಾತ್ರ ಬೆಳೆಯುತ್ತದೆ.

ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್.—ಕೃಷಿ ವಿಶ್ವವಿದ್ಯಾನಿಲಯದ ಸಂಶೋಧನಾ ವಿಭಾಗದವರು ೨೭ ಅಡಿಗೊಂದು ತೆಂಗಿನ ಮರವನ್ನು ಹಾಕಬಹುದೆಂದು ಹೇಳಿದ್ದಾರೆ. ನಬಾರ್ಡ್‌ನವರು ಕೂಡ ಇದಕ್ಕೆ ಒಪ್ಪಿದ್ದಾರೆ. ಇವರ ಬಗ್ಗೆ ಅವರೂ ಕೂಡ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ ಮತ್ತು ಕೃಷಿ ವಿಶ್ವವಿದ್ಯಾನಿಲಯದ ಸಂಶೋಧನಾ ವಿಭಾಗದವರು ಕೂಡ ಸಂಶೋಧನೆ ಮಾಡಿ ಹೇಳಿದ್ದಾರೆ.

MR. DEPUTY SPEAKER.—The question is :

> "That the respective sums not exceeding the amount provided in the list of Demands inclusive of the sums granted on account be granted to the Government to defray the charges which will come in course of payment during the financial year ending 31st Day of March, 1985 in respect of Demand Nos. 26, 2 and 3"

The motion was adopted and the sums were granted.

(As ordered by the Chair, the Motion of Demands for Grants adopted by the House are reproduced below.)

Demand No. 26 Road Transport

> "That a sum not exceeding Rs. 1,41,33,000 on Revenue Account and Rs. 9,50,00,000 on Capital Account be granted to the Government to defray the charges which will come in course of payment during the financial year ending 31st day of March, 1985 in respect of Road Transport."

Demand No. 2 Horticulture

> "That a sum not exceeding Rs. 8,89,93,000 on Revenue Account be granted to the Government to to defray the charges which will come in course of payment during the financial year ending 31st day of March 1985 in respect of Horticulture."

Demand No. 3 Animal Husbandry and Dairy Development

"That a sum not exceeding Rs. 31,97,70,000 on Revenue Account and Rs. 1,00,00,000 on Capital Account be granted to the Government to defray the charges which will come in course of payment during the financial year ending 31st day of March 1985 in respect of Animal Husbandry and Dairy Development."

MR. DEPUTY SPEAKER.—The House now stands adjourned to meet again tomorrow at 9.00 A.M.

The House adjourned at Eight of the Clock to meet again at Nine of the clock on Thursday, the 8th day of March, 1984.